ಕರ್ನಾಟಕ ಸರ್ಕಾರ

ಪದವಿಪೂರ್ವ ಶಿಕ್ಷಣ ಇಲಾಖೆ

೧೮ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-೫೬೦ ೦೧೨

೨೦೧೪-೨೦೧೫

ಸಾಹಿತ್ಯ ಸ್ಪಂದನ

ಪ್ರಥಮ ಪಿ.ಯು.ಸಿ.

ಐಚ್ಛಿಕ ಕನ್ನಡ ಪಠ್ಯ ಪುಸ್ತಕ

ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.

© *Department of Pre-University Education* 2014-2015.

Revised Edition - 2017

Printed on 80 GSM Maplitho paper

All Rights Are Reserved

No part of this publication may be reproduced, stored in a retrieval system or transmitted, in any form or by any means, electronic, mechanical, photo copying, recording or otherwise without the prior permission of the publisher.

This book is sold subject to the condition that it shall not, by way of trade, be lent, resold, hired out or otherwise disposed of without the publisher's consent, in any form of binding or cover other than that in which it is published.

The correct price of this publication is the price printed on this page/cover page. Any revised price indicated by a rubber stamp or by a sticker or by any other means is incorrect and should be unacceptable.

ನಿರ್ದೇಶಕರ ಸಂದೇಶ

ಆತ್ಮೀಯ ವಿದ್ಯಾರ್ಥಿಗಳೇ,

ಪ್ರತಿ ವಿದ್ಯಾರ್ಥಿಯು ಮಹತ್ತರವಾದ ಕನಸು ಕಾಣಲು ಹಾಗೂ ಆ ಕನಸುಗಳನ್ನು ಸಾಕಾರಗೊಳಿಸಿಕೊಂಡು ಎತ್ತರದ ಸ್ಥಾನಕ್ಕೇರಲು ಮತ್ತು ಜೀವನದ ಸವಾಲುಗಳನ್ನು ಯಶಸ್ವಿಯಾಗಿ ನಿಭಾಯಿಸಲು ಸಮರ್ಥನಾಗುವಂತೆ ಮಾಡಲು ಅಗತ್ಯವಾದ ಎಲ್ಲಾ ಸಾಧನಗಳನ್ನು ಪೂರೈಸಲು ಕರ್ನಾಟಕದ ಪದವಿ ಪೂರ್ವ ಶಿಕ್ಷಣ ಇಲಾಖೆಯು ಶ್ರಮಿಸುತ್ತಿದೆ. ಈ ಹಿನ್ನೆಲೆಯಲ್ಲಿ **"ವ್ಯಕ್ತಿ ತಾನು ಸ್ವಾವಲಂಬಿಯಾಗಲು ಸಮರ್ಥನಾಗುವಂತೆ ಮಾಡುವುದೇ ನಿಜವಾದ ಶಿಕ್ಷಣ"** ಎಂಬ ಸ್ವಾಮಿ ವಿವೇಕಾನಂದರ ಮಾತು ಸೂಕ್ತವಾಗಿದೆ.

ಈ ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿರುವ ವಿಷಯಗಳು ಮುಂದಿನ ಹಂತದ ಅಧ್ಯಯನಕ್ಕೆ ನಿಮ್ಮನ್ನು ಸಜ್ಜುಗೊಳಿಸುವ ಉದ್ದೇಶದಿಂದ ರಚಿಸಲಾಗಿದೆ.

ನಿಮ್ಮ ವಿದ್ಯಾಭ್ಯಾಸದ ಪಯಣವು ಸುಗುಮವಾಗಿ ಸಾಗಿ, ನೀವು ರಾಷ್ಟ್ರದ ಜವಾಬ್ದಾರಿಯುತ ಪ್ರಜೆಯಾಗಿ ಹೊರಹೊಮ್ಮಿ ಸಮಾಜದ ಏಳಿಗೆಗಾಗಿ ಕಾಣಿಕೆಯನ್ನು ಹಿಂತಿರುಗಿಸುವ ಸ್ಥಾನದಲ್ಲಿ ನಿಮ್ಮನ್ನು ನೋಡಲು ಇಚ್ಛಿಸುತ್ತೇನೆ.

ಶುಭಾಶಯಗಳೊಂದಿಗೆ,

ಸಹಿ/-
ಸಿ.ಶಿಖಾ, ಭಾ.ಆ.ಸೇ.,
ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ
ಬೆಂಗಳೂರು

ಅಧ್ಯಕ್ಷರ ನುಡಿ

"ನಿಚ್ಚಂ ಪೊಸತು" ಎಂಬ ಮಾತು ಕಾವ್ಯಕ್ಕಷ್ಟೇ ಮಾತ್ರವಲ್ಲ, ಭಾಷೆಗೂ ಅನ್ವಯಿಸುತ್ತದೆ. ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳಷ್ಟು ಹಿಂದಿನ ಇತಿಹಾಸವಿದ್ದರೂ ಅದು ಇಂದಿಗೂ ಹೊಸತನವನ್ನು ಮೈಗೂಡಿಸಿಕೊಳ್ಳುತ್ತಾ ಬೆಳೆಯುತ್ತಲೇ ಇದೆ. ಈ ಕಾರಣದಿಂದಾಗಿ ಶಿಕ್ಷಣ ಕ್ಷೇತ್ರದಲ್ಲಿ ಕಾಲದಿಂದ ಕಾಲಕ್ಕೆ ಪಠ್ಯಪುಸ್ತಕ ಪರಿಷ್ಕರಣ ಕಾರ್ಯ ನಡೆಯುತ್ತಲೇ ಬಂದಿದ್ದು ಇದೀಗ ೨೦೧೪-೧೫ನೇ ಸಾಲಿಗೆ ನೂತನ ರಾಷ್ಟ್ರೀಯ ಪಠ್ಯಕ್ರಮಕ್ಕನುಗುಣವಾಗಿ ಪಿ.ಯು.ಸಿ. ಪ್ರಥಮ ವರ್ಷದ ಐಚ್ಛಿಕ ಕನ್ನಡ ಪಠ್ಯಪುಸ್ತಕವು ಪರಿಷ್ಕೃತಗೊಂಡು ಪ್ರಕಟವಾಗುತ್ತಿದೆ.

ಆಧುನಿಕ ವಿಜ್ಞಾನ, ತಂತ್ರಜ್ಞಾನ ವಾಯುವೇಗದಲ್ಲಿ ಬೆಳೆಯುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಕನ್ನಡ ಕೇವಲ ಸಾಹಿತ್ಯದ ಅಧ್ಯಯನ ವಸ್ತುವಾಗಿ ಮಾತ್ರ ಉಳಿದಿಲ್ಲ. ಅದಕ್ಕೆ ವ್ಯಾವಹಾರಿಕ, ಸಾಮಾಜಿಕ ಆಯಾಮಗಳು ದೊರೆತು ಹಲವು ನಿಟ್ಟಿನಲ್ಲಿ ತನ್ನನ್ನು ತೆರೆದುಕೊಳ್ಳುತ್ತಿರುವುದರಿಂದ ಪಠ್ಯ ಪರಿಷ್ಕರಣೆಯು ತುಂಬಾ ಜವಾಬ್ದಾರಿಯುತ ಕೆಲಸವಾಗಿದೆ. ಪಿ.ಯು.ಸಿ. ಹಂತದ ವಯೋಮಾನಕ್ಕೆ ಅನುಗುಣವಾಗಿ ಭಾಷೆ, ವಸ್ತು, ಭಾಷಾ ಬಳಕೆಯ ಕೌಶಲಗಳನ್ನು ಅಳವಡಿಸುವುದು. ಮಕ್ಕಳಲ್ಲಿ ಕೋಮು ಸೌಹಾರ್ದತೆ, ರಾಷ್ಟ್ರೀಯ ಐಕ್ಯತೆ, ಲಿಂಗ ತಾರತಮ್ಯ ನಿವಾರಣೆ, ಪರಿಸರ ಪ್ರಜ್ಞೆ, ವೈಜ್ಞಾನಿಕ ಮನೋಭಾವ, ಜೀವನಾನುಭವ, ವೈಚಾರಿಕತೆ, ನಿಸರ್ಗ ಪ್ರೀತಿ, ಅಧ್ಯಾತ್ಮ, ಸಾಮಾಜಿಕ ಸಮಾನತೆ, ಲೋಕಜ್ಞಾನ ಮುಂತಾದವುಗಳನ್ನು ಪ್ರಸ್ತುತ ಪಠ್ಯದಲ್ಲಿ ಅಳವಡಿಸಲಾಗಿದೆ.

೨೦೦೫ರಲ್ಲಿ ರೂಪುಗೊಂಡ ಪಿ.ಯು.ಸಿ. ಪ್ರಥಮ ವರ್ಷದ ಕನ್ನಡ ಐಚ್ಛಿಕ ಪಠ್ಯಪುಸ್ತಕವು ಸಮಗ್ರ ಕರ್ನಾಟಕದ ಆಯ್ದ ಕನ್ನಡ ಅಧ್ಯಾಪಕರ ಪರಿಶೀಲನೆಗೆ ಒಳಪಡಿಸಿ ರೂಪಿಸಲಾಗಿತ್ತು. ಅದೇ ಮಾದರಿಯನ್ನೊಳಗೊಂಡು ಪ್ರಸ್ತುತ ಪಠ್ಯ ಕೂಡ ಕೆಲವು ಹೆಚ್ಚಿನ ಅಂಶಗಳನ್ನು ಒಡಗೂಡಿಸಿಕೊಂಡು ರೂಪಿತವಾಗಿದೆ. ಹೀಗೆ ರೂಪಿಸುವಾಗ ಭಿನ್ನ ಭಿನ್ನ ಪ್ರದೇಶದ, ಪ್ರಾದೇಶಿಕ ವೈಶಿಷ್ಟ್ಯಗಳನ್ನು ಗಮನಿಸಿ ತತ್ಸಂಬಂಧಿ ಕಥೆ, ಕವಿತೆ, ಲಲಿತ ಪ್ರಬಂಧ, ವ್ಯಕ್ತಿ ಚಿತ್ರ, ಆತ್ಮ ಚರಿತ್ರೆ, ಪ್ರವಾಸ ಕಥನ ಇತ್ಯಾದಿಗಳನ್ನು ಅಳವಡಿಸಿಕೊಳ್ಳಲಾಗಿದೆ. ವಿದ್ಯಾರ್ಥಿಗಳಲ್ಲಿ ಸಾಮಾಜಿಕ, ಸಾಂಸ್ಕೃತಿಕ ಅರಿವನ್ನುಂಟುಮಾಡುವ ಆಶಯಗಳಿಗೆ ಆದ್ಯತೆ ನೀಡಲಾಗಿದೆ. ಪಠ್ಯಕ್ರಮದಲ್ಲಿ ಏನನ್ನು ಕಲಿಯಬೇಕು ಅನ್ನುವುದರಷ್ಟೆ ಮುಖ್ಯ ಕಲಿಕೆಯ ಪ್ರಕ್ರಿಯೆ. ಕಲಿತ ವಿಷಯಗಳನ್ನು ವಿದ್ಯಾರ್ಥಿಗಳು ಹೇಗೆ ಪುನಾರಚಿಸುತ್ತಾರೆ, ಅದರೊಡನೆ

ಹೇಗೆ ವ್ಯವಹರಿಸುತ್ತಾರೆ ಮತ್ತು ತಮ್ಮ ಬದುಕಿನ ಜೊತೆಗೆ ಹೇಗೆ ಅನ್ವಯಿಸಿಕೊಳ್ಳುತ್ತಾರೆ ಎಂಬಂತಹ ಶಿಕ್ಷಣವನ್ನು ನೀಡುವುದೂ ಅಷ್ಟೇ ಮುಖ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಬಹುತೇಕ ಆಯ್ದ ಪಾಠಗಳಿಗೆ 'ಚಟುವಟಿಕೆ'ಯ ಮೂಲಕ ಮೇಲ್ಕಾಣಿಸಿದ ಅಂಶಗಳನ್ನು ಅಳವಡಿಸಲು ಪ್ರಯತ್ನಿಸಲಾಗಿದೆ. ಪಾಠದ ಬಗ್ಗೆ ಕುತೂಹಲ, ಚಿಂತನೆ, ಅನ್ವೇಷಣೆ, ಪ್ರಶ್ನಿಸುವುದು, ಚರ್ಚೆ, ಆಶಯ ಮತ್ತು ಆತ್ಮವಿಮರ್ಶೆಗಳ ಮೂಲಕ ಕಲಿಕೆಗೊಂದು ಅರ್ಥ ಬರುತ್ತದೆ. ಈ ನಿಟ್ಟಿನಲ್ಲಿ ಗಮನವಹಿಸಲಾಗಿದೆ.

ಈ ಪಠ್ಯಪುಸ್ತಕಕ್ಕೆ ತಮ್ಮ ಕಥೆ / ಕವನ / ಲೇಖನ ಇತ್ಯಾದಿಗಳನ್ನು ಬಳಸಿ ಕೊಳ್ಳಲು ಒಪ್ಪಿಗೆ ನೀಡಿದ ಲೇಖಕರಿಗೂ, ನಿಧನರಾದ ಲೇಖಕರ ಸಂಬಂಧಿಕರಿಗೂ ನಾವು ಕೃತಜ್ಞರಾಗಿದ್ದೇವೆ.

ಪಠ್ಯ ರಚನೆಯ ಸಂದರ್ಭದಲ್ಲಿ ನಮಗೆ ನಿರಂತರ ಮಾರ್ಗದರ್ಶನ ಮಾಡಿದವರು ಪದವಿಪೂರ್ವ ಶಿಕ್ಷಣ ಇಲಾಖೆಯ ಮಾನ್ಯ ನಿರ್ದೇಶಕರಾದ ಶ್ರೀ ಚಕ್ರವರ್ತಿ ಮೋಹನ ಅವರು ಹಾಗೂ ಸಹ ನಿರ್ದೇಶಕರಾದ ಶ್ರೀಮತಿ ರೋಹಿಣಿಯವರು ಮತ್ತು ಉಪ ನಿರ್ದೇಶಕರಾದ ಶ್ರೀ ಯಲ್ಲಪ್ಪ ದೇಶಾವಂತ ಹಾಗೂ ಸಹಾಯಕ ನಿರ್ದೇಶಕರಾದ ಶ್ರೀ ಅಶೋಕಕುಮಾರ ಮತ್ತು ಶ್ರೀ ಹೊನ್ನಯ್ಯ ಅವರು ಜೊತೆಗೆ ಎಲ್ಲ ಹಂತದಲ್ಲೂ ನಮ್ಮೊಂದಿಗೆ ಸಹಕರಿಸಿದ ಪದವಿಪೂರ್ವ ಶಿಕ್ಷಣ ಇಲಾಖೆಯ ಡಾ. ಎಂ.ಎನ್. ಕಟ್ಟಿಯವರು ಈ ಎಲ್ಲರಿಗೂ ನಮ್ಮ ಕೃತಜ್ಞತೆಗಳು.

ಸಿದ್ಧಪಡಿಸಿದ ಪಠ್ಯವನ್ನು ಕೂಲಂಕಷವಾಗಿ ಪರಿಶೀಲಿಸಿ ಸೂಕ್ತ ಸಲಹೆ, ಸೂಚನೆಗಳನ್ನಿತ್ತು ಈ ಪಠ್ಯಪುಸ್ತಕ ಅರ್ಥಪೂರ್ಣವಾಗಿ ಹೊರಬರಲು ಮಾರ್ಗದರ್ಶನ ಮಾಡಿದವರು ಪಠ್ಯಪುಸ್ತಕ ಪರಿಶೀಲನಾ ಸಮಿತಿಯ ಗೌರವಾನ್ವಿತ ಸದಸ್ಯರಾದ ಡಾ. ಗುರುಲಿಂಗ ಕಾಪಸೆ, ಮಾಜಿ ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಡಾ. ರಾಮೇಗೌಡ (ರಾಗೌ), ವಿಶ್ರಾಂತ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು, ಹಾಗೂ ಡಾ. ಸಬೀಹಾ ಭೂಮಿಗೌಡ, ಕನ್ನಡ ಪ್ರಾಧ್ಯಾಪಕರು, ಮಂಗಳ ಗಂಗೋತ್ರಿ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು ಈ ಎಲ್ಲರಿಗೆ ನಾವು ಕೃತಜ್ಞರಾಗಿದ್ದೇವೆ.

ಪಠ್ಯಪುಸ್ತಕದ ರಚನಾ ಸಮಿತಿಯ ಸಭೆಗಳನ್ನು ಬೇರೆ ಬೇರೆ ಸ್ಥಳಗಳಲ್ಲಿ ಆಯೋಜಿಸಲಾಗಿತ್ತು. ಈ ಸಂದರ್ಭಗಳಲ್ಲಿ ಸರ್ವ ರೀತಿಯ ನೆರವು ನೀಡಿದ ಗದುಗಿನ ಶ್ರೀ ತೋಂಟದಾರ್ಯಮಠದ ಲಿಂಗಾಯತ ಸಂಶೋಧನಾ ಕೇಂದ್ರದ

ಗೌರವಾಧ್ಯಕ್ಷರಾದ ಪೂಜ್ಯ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರಿಗೂ, ಸಂಸ್ಥೆಯ ಎಲ್ಲಾ ಪದಾಧಿಕಾರಿಗಳಿಗೂ, ಬೆಂಗಳೂರಿನ ಬಸವನಗುಡಿಯ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಹಾಗೂ ಸಿಬ್ಬಂದಿ ವರ್ಗಕ್ಕೂ, ಮಹಾರಾಣಿ ಲಕ್ಷ್ಮಿ ಅಮ್ಮಣ್ಣಿ ಕಾಲೇಜು, ಮಲ್ಲೇಶ್ವರಂ, ಬೆಂಗಳೂರಿನ ಪ್ರಾಚಾರ್ಯರು ಮತ್ತು ಸಿಬ್ಬಂದಿಯವರಿಗೂ, ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು, ೧೮ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರಿನ ಪ್ರಾಚಾರ್ಯರು ಹಾಗೂ ಸಿಬ್ಬಂದಿ ವರ್ಗಕ್ಕೂ ಸಂಪಾದಕ ಮಂಡಳಿಯ ಕೃತಜ್ಞತೆಗಳು ಸಲ್ಲುತ್ತವೆ.

ಪಠ್ಯಪುಸ್ತಕವನ್ನು ಸಿದ್ಧಪಡಿಸುವಲ್ಲಿ ಅಕ್ಷರ ಜೋಡಣೆ ಹಾಗೂ ಪುಸ್ತಕ ವಿನ್ಯಾಸ ಮಾಡಿದ ಶ್ರೀ ಜೆ. ಮಹಾದೇವ ಮತ್ತು ಶ್ರೀ ಹೆಚ್. ಗೋವಿಂದರಾಜ ಅವರಿಗೂ ನಮ್ಮ ಕೃತಜ್ಞತೆಗಳು.

– ಚಂದ್ರಶೇಖರ ವಸ್ತ್ರದ
ಅಧ್ಯಕ್ಷರು
ಸಂಪಾದಕ ಸಮಿತಿಯ ಪರವಾಗಿ

–: ಪಠ್ಯಪುಸ್ತಕ ಪರಿಶೀಲನಾ ಸಮಿತಿ :–

ಸಂಪಾದಕ ಮಂಡಳಿ

–: ಅಧ್ಯಕ್ಷರು :–

ಶ್ರೀ ಚಂದ್ರಶೇಖರ ವಸ್ತ್ರದ
ಪ್ರಾಚಾರ್ಯರು
ಸರ್ಕಾರಿ ಪದವಿಪೂರ್ವ ಕಾಲೇಜು, ಗದಗ

–: ಸಂಚಾಲಕರು :–

ಶ್ರೀ ಮೇಟಿ ಮುದಿಯಪ್ಪ
ಪ್ರಾಚಾರ್ಯರು
ಸರ್ಕಾರಿ ಪದವಿಪೂರ್ವ ಕಾಲೇಜು
ಮಲ್ಪೆ, ಉಡುಪಿ ಜಿಲ್ಲೆ

ಶ್ರೀಮತಿ ಎನ್. ನಾಗಲಕ್ಷ್ಮಿ
ಹಿರಿಯ ಕನ್ನಡ ಉಪನ್ಯಾಸಕರು
ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜು
ಬಸವನಗುಡಿ, ಬೆಂಗಳೂರು–೪.

–: ಸದಸ್ಯರುಗಳು :–

ಶ್ರೀ ಎಚ್.ಎಸ್. ಸತ್ಯನಾರಾಯಣ
ಹಿರಿಯ ಕನ್ನಡ ಉಪನ್ಯಾಸಕರು
ಬಾಲಕಿಯರ ಸರ್ಕಾರಿ ಪದವಿಪೂರ್ವ
ಕಾಲೇಜು, ಬಸವನಗುಡಿ, ಬೆಂಗಳೂರು–೦೪.

ಶ್ರೀ ಬಾಳಗೊಣ್ಣನವರ್ ವಿ.ಡಿ.
ಕನ್ನಡ ಉಪನ್ಯಾಸಕರು
ಶ್ರೀನಿವಾಸ ಪದವಿಪೂರ್ವ ಕಾಲೇಜು
ಕೊರಟಗೆರೆ, ತುಮಕೂರು ಜಿಲ್ಲೆ.

ಡಾ॥ ಅರ್ಜುನ ಗೊಳಸಂಗಿ
ಕನ್ನಡ ಉಪನ್ಯಾಸಕರು
ಜಿ.ಸಿ.ಟಿ.ಎಂ. ಪದವಿಪೂರ್ವ ಕಾಲೇಜು
ಹುಲಕೋಟಿ, ಗದಗ ಜಿಲ್ಲೆ.

ಶ್ರೀ ಭೈರಪ್ಪ ಎಸ್.
ಹಿರಿಯ ಕನ್ನಡ ಉಪನ್ಯಾಸಕರು
ಬಾಲಕಿಯರ ಸರ್ಕಾರಿ ಪದವಿಪೂರ್ವ
ಕಾಲೇಜು, ಮಂಡ್ಯ ಜಿಲ್ಲೆ.

ಶ್ರೀ ಪಿ.ಎಂ. ಪಾಟೀಲ
ಕನ್ನಡ ಉಪನ್ಯಾಸಕರು
ಎಸ್.ಎಸ್. ಬಾಲಕಿಯರ ಸಂಜೆ
ಪದವಿಪೂರ್ವ ಕಾಲೇಜು
ಇಂಡಿ, ವಿಜಾಪುರ ಜಿಲ್ಲೆ.

ಶ್ರೀ ಕೆ.ಪಿ. ಹಿರೇಮಠ
ಕನ್ನಡ ಉಪನ್ಯಾಸಕರು
ಶ್ರೀ ಯೋಗಿ ವೇಮನ ಸ್ವತಂತ್ರ ಪದವಿ
ಪೂರ್ವ ಕಾಲೇಜು
ಬೆಳ್ಳಟ್ಟಿ, ಶಿರಟ್ಟಿ, ಗದಗ ಜಿಲ್ಲೆ.

ಡಾ|| ಸೋಮಣ್ಣ
ಕನ್ನಡ ಉಪನ್ಯಾಸಕರು
ವಿಜಯಲಕ್ಷ್ಮಿ ಪದವಿಪೂರ್ವ ಕಾಲೇಜು
ಬಾಳೆಲೆ, ಕೊಡಗು ಜಿಲ್ಲೆ.

ಶ್ರೀಮತಿ ಎಸ್.ಎಲ್. ಸುಲೋಚನ
ಶ್ರೀಮತಿ ಗಿರಿಯಮ್ಮ ಕಾಂತಪ್ಪಶ್ರೇಷ್ಠಿ
ಮಹಿಳಾ ಪದವಿಪೂರ್ವ ಕಾಲೇಜು
ಹರಿಹರ, ದಾವಣಗೆರೆ ಜಿಲ್ಲೆ.

ಶ್ರೀ ಎಂ.ಕೆ. ಬಳ್ಳಾರಿ
ಕನ್ನಡ ಉಪನ್ಯಾಸಕರು
ಎಸ್.ಎಸ್.ಪಿ.ಎ. ಬಾಲಕಿಯರ ಪದವಿಪೂರ್ವ ಕಾಲೇಜು
ಬ್ಯಾಡಗಿ, ಹಾವೇರಿ ಜಿಲ್ಲೆ.

–: ಪರಿಶೀಲನಾ ಸಮಿತಿ ಸದಸ್ಯರು :–

ಡಾ. ಗುರುಲಿಂಗ ಕಾಪಸೆ
ಗೌರೀಶ ನಿಲಯ,
ದುರ್ಗಾದೇವಿ ಕಾಲೋನಿ, ಸಪ್ತಾಪುರ ಕೊನೆಯ ತಿರುವು,
ಧಾರವಾಡ.

ಡಾ. ರಾಮೇಗೌಡ (ರಾಗೌ)
ನಂ. ೧೪೪, ಕಾಳಿದಾಸ ರಸ್ತೆ
ಜಯಲಕ್ಷ್ಮೀಪುರಂ, ಮೈಸೂರು.

ಡಾ. ಸಬೀಹಾ ಭೂಮಿಗೌಡ
ಕನ್ನಡ ಪ್ರಾಧ್ಯಾಪಕರು
ಕನ್ನಡ ಸ್ನಾತಕೋತ್ತರ ವಿಭಾಗ
ಮಂಗಳ ಗಂಗೋತ್ರಿ, ಮಂಗಳೂರು ವಿಶ್ವವಿದ್ಯಾನಿಲಯ,
ಮಂಗಳೂರು.

ಪರಿವಿಡಿ

ಭಾಗ–೧ : ವಚನಗಳು

೧) ಆಚಾರವೆ ಕುಲ, ಅನಾಚಾರವೆ ಹೊಲೆ – ಮಾದಾರ ಚೆನ್ನಯ್ಯ ೨

೨) ನಾದಪ್ರಿಯ ಶಿವನಲ್ಲ – ಬಸವಣ್ಣ ೬

೩) ತನುಕರಗದವರಲ್ಲಿ – ಅಕ್ಕಮಹಾದೇವಿ ೧೦

೪) ಕಠಿಣವಾದುದೆಲ್ಲ ಕಷ್ಟಕರವಲ್ಲ – ಸಿದ್ಧಯ್ಯ ಪುರಾಣಿಕ ೧೪

ಭಾಗ–೨ : ಕೀರ್ತನೆಗಳು

೧) ಏನು ಓದಲೇನು ಫಲ – ಪುರಂದರದಾಸರು ೧೯

೨) ಎರಡು ದಿನದ ಸಂಸಾರ – ಕನಕದಾಸರು ೨೩

೩) ಯಾಕೆ ಮರುಳಾದೆ ಹೀಂಗೆ ಎಲೆ ಮನವೆ – ಹೆಳವನಕಟ್ಟೆ ಗಿರಿಯಮ್ಮ ೨೬

ಭಾಗ–೩ : ಜನಪದ ಹಾಗೂ ತತ್ತ್ವಪದ

೧) ಚಿಕ್ಯಾಗ ಚೆಲುವ ಚಂದ್ರಾಮ – ತ್ರಿಪದಿಗಳು ೩೧

೨) ಬಣ್ಣದ ಗುಬ್ಬ್ಯಾರು ಮಳರಾಜ – ಜನಪದ ಗೀತೆ ೩೬

೩) ಶ್ರೀ ಗುರುವಚನೋಪದೇಶ – ನಿಜಗುಣ ಶಿವಯೋಗಿ ೪೦

ಭಾಗ–೪ : ಹೊಸಗನ್ನಡ ಕಾವ್ಯ

೧) ಮಾವಿನಗೊಲ್ಲೆ – ಮಧುರಚೆನ್ನ ೪೬

೨) ಶ್ರಾವಣ – ಅಂಬಿಕಾತನಯದತ್ತ ೫೦

೩) ರೈತನ ದೃಷ್ಟಿ – ಕುವೆಂಪು ೫೬

೪) ಎಲ್ಲರೊಳಗೊಂದಾಗು – ಡಿ.ವಿ. ಗುಂಡಪ್ಪ ೬೧

೫) ರೈಲ್ವೇ ನಿಲ್ದಾಣದಲ್ಲಿ – ಕೆ.ಎಸ್. ನರಸಿಂಹಸ್ವಾಮಿ ೬೬

೬) ಗಜ಼ಲ್ – ಶಾಂತರಸ ೭೧

೭) ಇಲ್ಲ ಭಾರತ ಬರಿಯ ಕನಸಿನಲ್ಲಿ – ಸಿದ್ಧಲಿಂಗ ಪಟ್ಟಣಶೆಟ್ಟಿ ೭೬
೮) ನನ್ನ ಚಪ್ಪಲಿಗಳಿಗೆ – ಸತೀಶ ಕುಲಕರ್ಣಿ ೮೦
೯) ಅವಳ ಚರಿತ್ರೆ – ಕೆ. ಷರೀಫಾ ೮೫
೧೦) ಕಾಗದದ ದೋಣಿಯಲ್ಲಿ – ಸುಬ್ಬು ಹೊಲೆಯಾರ್ ೮೮

ಭಾಗ–೫ : ಗದ್ಯ

೧) ನಾಲ್ವರ್ ಧೂರ್ತರ್ ಒರ್ವ ಬ್ರಾಹ್ಮಣನಂ ವಂಚಿಸಿದ ಕಥೆ – ದುರ್ಗಸಿಂಹ ೯೪
೨) ರೋಮ್ ನಗರದಲ್ಲಿ – ಕೆ. ಶಿವರಾಮ ಕಾರಂತ ೧೦೦
೩) ಮೈ ಮೇಲೆ ದೇವರು, ದೆವ್ವ ಬರುವುದು! ಏನು?
– ಸಿ.ಆರ್. ಚಂದ್ರಶೇಖರ ೧೧೦
೪) ದಾರಿ ಯಾವುದಯ್ಯಾ ಕಾಲೇಜಿಗೆ ? – ಸ.ಜ. ನಾಗಲೋಟಿಮಠ ೧೧೯
೫) ಕುಬುಸ – ಕುಂ. ವೀರಭದ್ರಪ್ಪ ೧೩೦
೬) ನಂಜನಗೂಡಿನ ತಿರುಮಲಾಂಬ – ವಿಜಯಾ ದಬ್ಬೆ ೧೪೮
೭) ದೋಸೆ ರಾಜಕೀಯ – ವೈದೇಹಿ ೧೫೮

ಭಾಗ–೬ : ಕನ್ನಡ ಭಾಷೆ, ಸಾಹಿತ್ಯದ ಅರ್ಥ, ವಿವರಣೆ, ಸ್ವರೂಪ, ವ್ಯಾಪ್ತಿ, ಪ್ರಯೋಜನ

೧೬೮

ಭಾಗ–೭ : ಅನುಬಂಧಗಳು

ಪ್ರಶ್ನೆ ಪತ್ರಿಕೆಯ ರೂಪು–ರೇಖೆ ಮತ್ತು ಮಾದರಿ ಪ್ರಶ್ನೆ ಪತ್ರಿಕೆ ೧೭೯

ವಚನಸಾಹಿತ್ಯ

"ಕನ್ನಡ ಸಾಹಿತ್ಯದ ಒಂದು ವಿಶಿಷ್ಟವಾದ, ಬಹು ಅಮೂಲ್ಯವಾದ ಭಾಗವೆಂದರೆ ವಚನಸಾಹಿತ್ಯ". ಈ ಬಗೆಯ ಸಾಹಿತ್ಯದ ಉದಾಹರಣೆಗಳು ವಿರಳವಾಗಿ, ಕ್ವಚಿತ್ತಾಗಿ, ಬಿಡಿಬಿಡಿಯಾಗಿ ಇತರೆ ಕೆಲವು ಭಾಷೆಗಳ ಸಾಹಿತ್ಯಗಳಲ್ಲಿ ಸಿಕ್ಕಬಹುದಾದರೂ, ವಚನಗಳು ಸಾಹಿತ್ಯದ ಒಂದು ಪ್ರಕಾರವಾಗಿ ನೇರ್ಪಟ್ಟದ್ದು ಕನ್ನಡದಲ್ಲಿಯೇ ಎಂದು ನಿಸ್ಸಂದೇಹವಾಗಿ ಹೇಳಬಹುದು. ಅಂತೆಯೇ ವಚನಸಾಹಿತ್ಯವು ಕನ್ನಡ ನುಡಿ ವಿಶ್ವ ಸಾಹಿತ್ಯಕ್ಕೆ ಕೊಟ್ಟ ಅಪೂರ್ವ ಕಾಣಿಕೆಯೆಂದು ಕನ್ನಡಿಗರು ಹೆಮ್ಮೆ ಪಡಬಹುದಾಗಿದೆ.

ಸಂಸ್ಕೃತದ ಹಿರಿಮೆ ಸಡಿಲಾಗಿ ಕನ್ನಡದ ಹೆಚ್ಚಳ ಬೆಳೆದುದು ಈ ವಚನ ಸಾಹಿತ್ಯದಿಂದ. ಪದ್ಯದ ವ್ಯಾಮೋಹ ಸರಿದು ಗದ್ಯಕ್ಕೆ ಪುರಸ್ಕಾರ ದೊರೆತುದು ವಚನ ಸಾಹಿತ್ಯದಿಂದಲೇ. ಬಹು ಕಾಲದಿಂದಲೂ ಪಂಡಿತರ ತುತ್ತಾಗಿದ್ದ, ವಿಶಿಷ್ಟ ವರ್ಗದವರ ಸೊತ್ತಾಗಿದ್ದ, ರಾಜ್ಯಲಕ್ಷ್ಮಿಯ ತೊತ್ತಾಗಿದ್ದ ಸರಸ್ವತಿಯ ಸಂಸ್ಕೃತ ಭಂಡಾರವನ್ನು ಕಡೆಗಣಿಸಿ, ತಮ್ಮ ಅನುಭವ ಕಮ್ಮಟದಲ್ಲಿಯೇ ಅಚ್ಚೊತ್ತಿದ ವಚನ ನಾಣ್ಯಗಳನ್ನು ಜನ ಸಾಮಾನ್ಯರಿಗೆಲ್ಲ ಸಲ್ಲುವಂತೆ ಹರಡಿದವರು ವಚನಕಾರರು. "ದೇವವಾಣಿಯು ಜನವಾಣಿಯಾಗುವುದು ಅಸಾಧ್ಯವಾದಾಗ, ಜನವಾಣಿಯನ್ನೇ ದೇವವಾಣಿಯ ಮಟ್ಟಕ್ಕೇರಿಸಿದ ಪವಾಡ ವಚನಕಾರರದು."

ವಚನಸಾಹಿತ್ಯ ಕಾಲವಮಾನದಿಂದ ಬಹು ವಿಸ್ತಾರವಾಗಿದ್ದಂತೆ ಸ್ಥೂಲಮಾನದಿಂದ ವಿಪುಲವೂ ಆಗಿದೆ. ವಚನಕಾರರ ವೈಯಕ್ತಿಕ ಸ್ವಭಾವ, ಅನುಭಾವ ದೃಷ್ಟಿಗಳಗನುಸಾರವಾಗಿ ಈ ಸಾಹಿತ್ಯದಲ್ಲಿ ವೈವಿಧ್ಯವೂ ಬೇಕಾದಷ್ಟಿದೆ. ವಚನ ಸಾಹಿತ್ಯದ ಮೂಲವನ್ನು ಸಂಶೋಧಿಸಲು ಹೊರಟ ಪಂಡಿತರಲ್ಲಿ ಕೆಲವರಿಗೆ ಅದರ ಉಗಮ ಬಸವಣ್ಣನವರಿಗಿಂತಲೂ ಕಿಂಚಿತ್ ಪೂರ್ವದ್ದಾಗಿರಬಹುದೆಂಬ ಸಂದೇಹ ಉಂಟಾಗಿದ್ದರೂ, ಆ ವಾಹಿನಿ ಕಣ್ಣಿಗೆ ಕಾಣುವನಿತು, ಹೆಸರು ಹೊಂದುವನಿತು ವಿಶಾಲವಾದುದು ಬಸವಣ್ಣನವರ ಕಾಲದಲ್ಲಿಯೇ.

ಆಧುನಿಕ ಕನ್ನಡ ಸಾಹಿತ್ಯದಲ್ಲಿಯೂ ವಚನದ ಸಮೃದ್ಧ ಬೆಳೆಯನ್ನು ಕಾಣಬಲ್ಲೆವು. ವಿಚಾರ ವೈವಿಧ್ಯ, ವಿಶಿಷ್ಟ ಸರಳ ಶೈಲಿಯ ರಚನಾಕ್ರಮ, ಅನನ್ಯ ಜೀವನ ಮೌಲ್ಯಗಳನ್ನು ಪ್ರತಿಪಾದಿಸುವ ವಚನಸಾಹಿತ್ಯವು ಸಾರ್ವಕಾಲಿಕ ಮೌಲ್ಯವನ್ನು ಹೊಂದಿದೆ.

ಆಚಾರವೆ ಕುಲ, ಅನಾಚಾರವೆ ಹೊಲೆ

– ಮಾದಾರ ಚೆನ್ನಯ್ಯ

ಕರ್ಮ, ಜ್ಞಾನ, ಕ್ರಿಯೆ, ನಡೆ–ನುಡಿ, ಆಚಾರ–ವಿಚಾರಗಳನ್ನು, ಉಚ್ಚ–ನೀಚ ಜಾತಿಗಳನ್ನು ಕುರಿತು ವಚನಕಾರ ಮಾದಾರ ಚೆನ್ನಯ್ಯನವರು ಮಾರ್ಮಿಕವಾಗಿ ತಿಳಿಸಿದ್ದಾರೆ. ಮಾನವ ನಿರ್ಮಿತ ಜಾತಿ ವ್ಯವಸ್ಥೆಯನ್ನು ಶರಣರು ಧಿಕ್ಕರಿಸುತ್ತಾರೆ. ಶ್ರೇಷ್ಠ ಕುಲದಲ್ಲಿ ಜನಿಸಿದ ಮಾತ್ರಕ್ಕೆ ಅವನು ಶ್ರೇಷ್ಠನಲ್ಲ. ಕೀಳು ಕುಲದಲ್ಲಿ ಜನಿಸಿದ ಮಾತ್ರಕ್ಕೆ ಅವನು ನೀಚನಲ್ಲ. ಶರಣರ ದೃಷ್ಟಿಯಲ್ಲಿ ಎರಡೇ ಜಾತಿ. ಒಂದು, ಒಳ್ಳೆಯ ಆಚಾರ ಉಳ್ಳವನು ಶ್ರೇಷ್ಠ. ಎರಡು, ಕೆಟ್ಟ ನಡತೆಯುಳ್ಳವನು ನೀಚ. ಇದನ್ನುಳಿದು ಶ್ರೇಷ್ಠ ಜಾತಿ–ಕೀಳು ಜಾತಿ ಎಂಬುದು ಇಲ್ಲವೇ ಇಲ್ಲ.

ಕಾಯದ ಸುಳುಹುಳ್ಳನ್ನಕ್ಕ ಕರ್ಮಪೂಜೆ ಬೇಕೆಂಬರು.
ಜೀವ ಸಂಚಾರವುಳ್ಳನ್ನಕ್ಕ ಜ್ಞಾನವನರಿಯಬೇಕೆಂಬರು.
ಜ್ಞಾನ ಧ್ಯಾನಿಸಿ ಕಾಬಲ್ಲ, ಕಾಯದ ಕರ್ಮದಿಂದ ಮುಕ್ತಿಯೋ?
ಜೀವ ಜ್ಞಾನದಿಂದ ಮುಕ್ತಿಯೋ? ಜ್ಞಾನ ಧ್ಯಾನದಿಂದ ಮುಕ್ತಿಯೋ?
ಧ್ಯಾನಿಸಿ ಕಾಲ ಕುರುಹ ಎನಗೊಂದುಬಾರಿ ತೋರಾ.
ಕೈಯುಳ ಕತ್ತಿ ಅಡಿಗೂಂಟಕ್ಕಡಿಯಾಗಬೇಡ,
ಅರಿ ನಿಜಾತ್ಮಾರಾಮರಾಮನಾ. ॥ ೧ ॥

ನಡೆನುಡಿ ಸಿದ್ಧಾಂತವಾದಲ್ಲಿ, ಕುಲ ಹೊಲೆ ಸೂತಕವಿಲ್ಲ,
ನುಡಿ ಲೇಸು, ನಡೆಯಧಮವಾದಲ್ಲಿ,
ಅದು ಬಿಡುಗಡೆಯಿಲ್ಲದ ಹೊಲೆ.
ಕಳವು ಪಾರದ್ವಾರಂಗಳಲ್ಲಿ ಹೊಲಬನರಿಯದೆ,
ಕೆಟ್ಟು ನಡೆವುತ್ತ, ಮತ್ತೆ ಕುಲಜರೆಂಬ ಒಡಲವರುಂಟೆ?
ಆಚಾರವೆ ಕುಲ, ಅನಾಚಾರವೆ ಹೊಲೆ.
ಇಂತೀ ಉಭಯವ ತಿಳಿದರಿಯಬೇಕು.
ಕೈಯುಳ ಕತ್ತಿ ಅಡಿಗೂಂಟಕ್ಕಡಿಯಾಗಬೇಡ,
ಅರಿ ನಿಜಾತ್ಮಾರಾಮರಾಮನಾ. ॥ ೨ ॥

ವೇದ ಶಾಸ್ತ್ರಕ್ಕೆ ಹಾರುವನಾಗಿ,
ವೀರ ವಿತರಣಕ್ಕೆ ಕ್ಷತ್ರಿಯನಾಗಿ,
ಸರ್ವವನಾರೈದು ನೋಡುವಲ್ಲಿ,

ವೈಶ್ಯನಾಗಿ ವ್ಯಾಪಾರದೊಳಗಾಗಿ,
ಕೃಷಿಯ ಮಾಡುವುದಕ್ಕೆ ಶೂದ್ರನಾಗಿ,
ಇಂತೀ ಜಾತಿಗೋತ್ರದೊಳಗಾದ ನೀಚ ಶ್ರೇಷ್ಠವೆಂಬ
ಎರಡು ಕುಲವಲ್ಲದೆ,
ಹೊಲೆ ಹದಿನೆಂಟು ಜಾತಿಯೆಂಬ ಕುಲವಿಲ್ಲ
ಬ್ರಹ್ಮವನರಿದಲ್ಲಿ ಬ್ರಾಹ್ಮಣ.
ಸರ್ವಜೀವಹತ ಕರ್ಮಕ್ಕೊಳಗಾಗಿದ್ದಲ್ಲಿ ಸಮಗಾರ.
ಈ ಉಭಯವನರಿದು ಮರೆಯಲಿಲ್ಲ.
ಕೈಯುಳ ಕತ್ತಿ ಅಡಿಗೊಂಟಕ್ಕಡಿಯಾಗಬೇಡ.
ಅರಿ ನಿಜಾತ್ಮಾರಾಮರಾಮನಾ. ॥ ೩ ॥

❖ ❖ ❖ ❖

ಕವಿ ಪರಿಚಯ : ಬಸವಣ್ಣನವರ ಹಿರಿಯ ಸಮಕಾಲೀನ ವಚನಕಾರರಾದ ಮಾದಾರ ಚೆನ್ನಯ್ಯನವರು ಶಿವಾನುಭವಿಯಾಗಿದ್ದರು. ಮಾದಾರ ಚೆನ್ನಯ್ಯನವರು ಮೂಲತಃ ಚೋಳ ದೇಶದವರು. *'ಕೈಯುಳ ಕತ್ತಿ ಅಡಿಗೂಂಟಕ್ಕಡಿಯಾಗಬೇಡ ಅರಿ ನಿಜಾತ್ಮಾರಾಮರಾಮನಾ'* ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿದ ಇವರನ್ನು ಕುರಿತು ಹರಿಹರನು ರಗಳೆಯೊಂದನ್ನು ಬರೆದಿದ್ದಾನೆ. ಗುಪ್ತಭಕ್ತಿಯ ಮಹೇಶ್ವರರಾಗಿದ್ದ ಚೆನ್ನಯ್ಯನವರು ಕರಿಕಾಲ ಚೋಳನಲ್ಲಿ ಕುದುರೆಗಳಿಗೆ ಹುಲ್ಲು ಹಾಕುವ ಕಾಯಕ ಮಾಡಿ, ನಂತರದಲ್ಲಿ ಕಲ್ಯಾಣದಲ್ಲಿ ಪಾದರಕ್ಷೆ ಹೊಲಿಯುವ ತಮ್ಮ ವೃತ್ತಿಯನ್ನು ಕಾಯಕವನ್ನಾಗಿಸಿಕೊಂಡವರು.

ಶಿವನೊಲುಮೆ ಪಡೆಯಲು ವೃತ್ತಿ, ಜಾತಿ, ಅಂತಸ್ತು ಮುಖ್ಯವಲ್ಲ. ಶಿವಭಕ್ತಿ ಮುಖ್ಯವೆಂಬ ಮಹತ್ವದ ವಿಚಾರಗಳು ಚೆನ್ನಯ್ಯನವರ ಜೀವನದಿಂದ ತಿಳಿದು ಬರುತ್ತವೆ. ಇವರ ವಚನಗಳಲ್ಲಿ ಸಾಮಾಜಿಕ ಕಳಕಳ ಕಂಡುಬರುತ್ತದೆ.

ಶಬ್ದಾರ್ಥ : ಆರಾಮ–ಉದ್ಯಾನವನ ; ರಾಮ–ರಮಿಸುವವನು ; ಕಾಬ–ಕಾಣುವ ; ಕಾಯ–ಶರೀರ ; ಸುಳುಹು–ಕುರುಹು, ಗುರುತು ; ಮುಕ್ತಿ–ಮೋಕ್ಷ ; ಸಿದ್ಧಾಂತ–ತತ್ತ್ವ ; ಸೂತಕ–ಮೈಲಿಗೆ ; ಅಧಮ–ನೀಚ, ಕೆಟ್ಟ, ಹೀನ ; ಪಾರದ್ವಾರ–ವ್ಯಭಿಚಾರ, ಜಾರತನ ; ಹೊಲಬು–ದಾರಿ, ಮಾರ್ಗ ; ಉಭಯ–ಎರಡು; ಲೇಸು–ಒಳ್ಳೆಯ ; ಹಾರುವ–ಬ್ರಾಹ್ಮಣ ; ವೈಶ್ಯ–ವ್ಯಾಪಾರಿ ; ಕರ್ಮ–ಕಾರ್ಯ ;

ಅಡಿ–ತಳ, ಪಾದ, ಅಳತೆ ; ಗೋತ್ರ–ವಂಶ ; ಹತ–ಕೊಲೆ ; ಅಡಿಗೂಂಟ–ಚಪ್ಪಲಿ ಹೊಲಿಗೆಗೆ ಬಳಸುವ ಗೂಟದ ಆಕಾರದ ಸಾಧನ.

ಟಿಪ್ಪಣಿ :

ಪಂಚ ಸೂತಕಗಳು : ಹೆಣ್ಣು ರಜಸ್ವಲೆಯಾದಾಗಿನ 'ರಜಸೂತಕ', ಕುಲದ ಕಾರಣದಿಂದಾಗುವ 'ಕುಲಸೂತಕ', ಜನನದ ಸಂದರ್ಭದ 'ಜನನ ಸೂತಕ', ಸಾವಿನಿಂದುಂಟಾಗುವ 'ಪ್ರೇತಸೂತಕ' ಮತ್ತು ತಿನ್ನುವಾಗ ಎಂಜಲಿನಿಂದಾಗುವ 'ಉಚ್ಛಿಷ್ಠ ಸೂತಕ' – ಈ ಐದು ಬಗೆಯ ಸೂತಕಗಳನ್ನು ಪಂಚಸೂತಕಗಳೆನ್ನುವರು.

ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ :

೧) 'ಜೀವ ಜ್ಞಾನದಿಂದ ಮುಕ್ತಿಯೋ?'

೨) 'ಆಚಾರವೆ ಕುಲ, ಅನಾಚಾರವೇ ಹೊಲೆ.'

ಒಂದು ವಾಕ್ಯದಲ್ಲಿ ಉತ್ತರಿಸಿ :

೧) ಎಲ್ಲಿಯವರೆಗೆ ಕರ್ಮಪೂಜೆ ಬೇಕೆಂಬರು?

೨) ಕುಲ–ಹೊಲೆ ಸೂತಕ ಯಾವಾಗ ಇರುವುದಿಲ್ಲ?

೩) ಬ್ರಾಹ್ಮಣ ಯಾರು?

೪) ಸಮಗಾರ ಎಂದರೆ ಯಾರು?

೫) ಕ್ಷತ್ರಿಯರ ಗುಣ ಯಾವುದು?

ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ :

1) ಮಾದಾರ ಚೆನ್ನಯ್ಯ ಪ್ರಶ್ನಿಸಿರುವ ಮುಕ್ತಿಯ ಮಾರ್ಗಗಳಾವುವು?

2) ಬಿಡುಗಡೆ ಇಲ್ಲದ ಹೊಲೆ ಯಾವುದು?

3) ಈ ವಚನದಲ್ಲಿ ಬಳಕೆಯಾದ ಸಮಗಾರ ವೃತ್ತಿಯ ಉಪಕರಣಗಳಾವುವು?

ವಿವರವಾಗಿ ಉತ್ತರಿಸಿ :

1) ಕುಲ–ಗೋತ್ರ–ಜಾತಿಗಳ ಬಗ್ಗೆ ಮಾದಾರ ಚೆನ್ನಯ್ಯನ ನಿಲುವನ್ನು ಸಂಗ್ರಹಿಸಿ ಬರೆಯಿರಿ.

2) ನಿಜಾತ್ಮಾರಾಮರಾಮನನ್ನು ಅರಿಯುವ ಬಗೆ ಹೇಗೆ? ಮಾದಾರ ಚೆನ್ನಯ್ಯನ ವಚನಗಳ ಹಿನ್ನೆಲೆಯಲ್ಲಿ ವಿವೇಚಿಸಿ.

ಭಾಷಾಭ್ಯಾಸ :

೧) ಇವುಗಳಿಗೆ ನಾನಾರ್ಥ ಪದಗಳನ್ನು ಬರೆಯಿರಿ :

ಅರಿ, ಆರಾಮ, ಕರ್ಮ.

೨) ಇವುಗಳಿಗೆ ಸಮಾನಾರ್ಥ ಪದಗಳನ್ನು ಬರೆಯಿರಿ :

ಕಾಯ, ತಿಳಿ, ಅಧಮ, ಅಡಿ.

೩) ಇವುಗಳಿಗೆ ತತ್ಸಮ-ತದ್ಭವಗಳನ್ನು ಬರೆಯಿರಿ :

ಬ್ರಹ್ಮ, ಆತ್ಮ, ವೀರ.

ಚಟುವಟಿಕೆ :

ಜಾತಿ – ಮತ ಭೇದಭಾವದಿಂದ ರಾಷ್ಟ್ರೀಯತೆಗೆ ಧಕ್ಕೆ ಬರುತ್ತದೆ ಎಂಬುದನ್ನು ಚರ್ಚಿಸಿ.

ಆಕರ ಗ್ರಂಥ :

ಸಮಗ್ರ ವಚನ ಸಂಪುಟ – ೮ – ಸಂಪಾದಕ : ಡಾ. ಬಿ.ಆರ್. ಹಿರೇಮಠ, ಪ್ರಕಾಶಕರು : ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ಹೆಚ್ಚಿನ ಓದು :

೧) ಬಸವ ಕಂಡ ಮಾದಾರ ಚೆನ್ನಯ್ಯ – ಶ್ರೀ ಕುಪೇಂದ್ರ ಪಾಟೀಲ ಪ್ರಕಾಶನ : ಮಾತಂಗ ಪ್ರಕಾಶನ, ಕಲ್ಯಾಣನಗರ, ರಾಜಾಪೂರ, ಶಹಾಬಾದ ರೋಡ್, ಗುಲ್ಬರ್ಗಾ.

೨) ಮಾದಾರ ಚೆನ್ನಯ್ಯ ಬಹುಮುಖಿ ಅಧ್ಯಯನ – ಡಾ. ಶಿವಾನಂದ ಕೆಳಗಿನಮನಿ, ಪ್ರಕಾಶಕರು : ಸಿ.ವಿ.ಜಿ. ಪ್ರಕಾಶನ, ಬೆಂಗಳೂರು.

೩) ಕುಲಕ್ಕೆ ತಿಲಕ ಮಾದಾರ ಚೆನ್ನಯ್ಯ – ಚಂದ್ರಶೇಖರ ವಸ್ತ್ರದ, ಕ್ಷಮಾ ಪ್ರಕಾಶನ, ಗದಗ.

ಗಮನಿಸಿ :

"ನಿಜಾತ್ಮಾರಾಮ ರಾಮನಾ" (ನಿಜ + ಆತ್ಮ + ಆರಾಮ (ಉದ್ಯಾನ) + ರಾಮನ) ಆತ್ಮವೆಂಬ ಉದ್ಯಾನವನದಲ್ಲಿ ರಮಿಸುವನು.

ನಾದಪ್ರಿಯ ಶಿವನಲ್ಲ

– ಬಸವಣ್ಣ

ಬದುಕು ಅಸ್ಥಿರವೆಂಬುದು ಗೊತ್ತಿದ್ದೂ ಕ್ಷಣಿಕ ಸುಖದ ಆಸೆಗಾಗಿ, ಮನುಷ್ಯ ಸಲ್ಲದ ರೀತಿಯಲ್ಲಿ ನಡೆದುಕೊಳ್ಳುತ್ತಾನೆ. ಅಂಥವರು ದೇವರಿಂದ ದೂರ ಉಳಿಯುತ್ತಾರೆ. ಕಾಯುವವರೆ ಕೊಲ್ಲುವ ಕೆಲಸ ಮಾಡಬಾರದು. ಈ ಮಾತು ವ್ಯಕ್ತಿ, ಮನೆ, ಕುಟುಂಬ, ಸಮಾಜ ಹೀಗೆ ಎಲ್ಲದಕ್ಕೂ ಅನ್ವಯವಾಗುತ್ತದೆ. ಬಾಹ್ಯ ಆಚರಣೆಗೆ ಒಲಿಯದ ದೇವರನ್ನು ಭಕ್ತಿಯಿಂದ ಸುಲಭವಾಗಿ ಒಲಿಸಬಹುದು ಎಂಬ ಆಶಯ ಈ ವಚನಗಳಲ್ಲಿದೆ.

ಹಾವಿನ ಬಾಯ ಕಪ್ಪೆ ಹಸಿದು
ಹಾರುವ ನೊಣಕ್ಕೆ ಆಸೆ ಮಾಡುವಂತೆ,
ಶೂಲವನೇರುವ ಕಳ್ಳನು ಹಾಲು ತುಪ್ಪವ ಕುಡಿದು
ಮೇಲೇಸುಕಾಲ ಬದುಕುವನೊ?
ಕೆಡುವೊಡಲ ನಚ್ಚಿ, ಕಡು ಹುಸಿಯನೆ ಹುಸಿದು, ಒಡಲ ಹೊರೆವರ
ಕೂಡಲಸಂಗಮ ದೇವಯ್ಯನೊಲ್ಲ, ಕಾಣಿರಣ್ಣಾ. ॥ ೧ ॥

ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ
ಧರೆ ಹತ್ತಿ ಉರಿದಡೆ ನಿಲಲು ಬಾರದು,
ಏರಿ ನೀರುಂಬಡೆ, ಬೇಲಿ ಕೆಯ್ಯ ಮೇವಡೆ,
ನಾರಿ ತನ್ನ ಮನೆಯಲ್ಲಿ ಕಳುವಡೆ,
ತಾಯಿ ಮೊಲೆವಾಲು ನಂಜಾಗಿ ಕೊಲುವಡೆ,
ಇನ್ನಾರಿಗೆ ದೂರುವೆ ಕೂಡಲ ಸಂಗಮದೇವಾ. ॥ ೨ ॥

ನಾದಪ್ರಿಯ ಶಿವನೆಂಬರು, ನಾದಪ್ರಿಯ ಶಿವನಲ್ಲಯ್ಯಾ.
ವೇದಪ್ರಿಯ ಶಿವನೆಂಬರು, ವೇದಪ್ರಿಯ ಶಿವನಲ್ಲಯ್ಯಾ.
ನಾದವ ನುಡಿಸಿದ ರಾವಳಂಗೆ ಅರೆ ಆಯುಷ್ಯವಾಯಿತ್ತು.
ವೇದವನೋದಿದ ಬ್ರಹ್ಮನ ಶಿರ ಹೋಯಿತ್ತು.
ನಾದಪ್ರಿಯನೂ ಅಲ್ಲ, ವೇದಪ್ರಿಯನೂ ಅಲ್ಲ.
ಭಕ್ತಿಪ್ರಿಯ ನಮ್ಮ ಕೂಡಲ ಸಂಗಮದೇವ. ॥ ೩ ॥

❖ ❖ ❖ ❖

ಕವಿ ಪರಿಚಯ : ೧೨ನೆಯ ಶತಮಾನದ ಸಮಾಜೋ-ಧಾರ್ಮಿಕ ಆಂದೋಲನದ ಕೇಂದ್ರ ವ್ಯಕ್ತಿ ಬಸವಣ್ಣನವರು. ಧಾರ್ಮಿಕ, ಸಾಮಾಜಿಕ ಕ್ಷೇತ್ರಗಳಂತೆ ಸಾಹಿತ್ಯ ಕ್ಷೇತ್ರದಲ್ಲಿಯೂ ಹೊಸ ಯುಗವನ್ನು ತೆರೆದರು. ವರ್ಗ-ವರ್ಣ-ಲಿಂಗ, ವಯೋಭೇದಗಳನ್ನು ತಿರಸ್ಕರಿಸಿ ಸರ್ವ ಸಮಾನತೆಯ ಜೀವದಯಾಪರವಾದ ಸಮಾಜವನ್ನು ಕಟ್ಟಿ ಬೆಳೆಸಿದರು. ಬಿಜಾಪೂರ ಜಿಲ್ಲೆಯ ಬಾಗೇವಾಡಿಯಲ್ಲಿ ಮಾದರಸ ಹಾಗೂ ಮಾದಲಾಂಬಿಕೆ ದಂಪತಿಗಳುದರದಲ್ಲಿ ಜನಿಸಿದ ಬಸವಣ್ಣನವರ ಕ್ರಿಯಾಕ್ಷೇತ್ರ ಬೀದರ ಜಿಲ್ಲೆಯ ಕಲ್ಯಾಣ (ಇಂದಿನ ಬಸವ ಕಲ್ಯಾಣ).

ಪಂಡಿತ ಮಾನ್ಯವಾಗಿದ್ದ ಸಾಹಿತ್ಯವನ್ನು ಪ್ರಜಾ ಮಾನ್ಯಗೊಳಿಸಿದ ಶ್ರೇಯಸ್ಸು ಬಸವಾದಿ ಶರಣರಿಗೆ ಸಲ್ಲುತ್ತದೆ. ವ್ಯಕ್ತಿತ್ವದ ವಿಕಾರ, ಸಾಮಾಜಿಕ ವಿಕೃತಿಗಳನ್ನು ದೂರವಾಗಿಸಿಕೊಂಡು, ಅಂತರಂಗ-ಬಹಿರಂಗಶುದ್ಧಿ ಸಾಧಿಸಬೇಕೆನ್ನುವ ಬಸವಣ್ಣನವರ ವಚನಗಳಲ್ಲಿ ವಿಶ್ವಮಾನವ ಸಂದೇಶವಿದೆ. ಸಾಹಿತ್ಯಕವಾಗಿ, ಸಾಂಸ್ಕೃತಿಕವಾಗಿ, ಆಧ್ಯಾತ್ಮಿಕವಾಗಿ ಬಸವಣ್ಣನವರ ವಚನಗಳಿಗೆ ಕನ್ನಡ ಸಾಹಿತ್ಯದಲ್ಲಿ ವಿಶೇಷ ಸ್ಥಾನವಿದೆ.

ಶಬ್ದಾರ್ಥ : ಶೂಲ-ನೇಣು ; ಮೇಲೇಸು-ಮೇಲೆ ಎಷ್ಟು ; ಧರೆ-ಭೂಮಿ ; ಏರಿ-ಒಡ್ಡು ; ಕೆಯ್ಯ-ಬೆಳೆ, ಪ್ರದೇಶ ; ನಂಜು-ವಿಷ ; ಅರೆ-ಅರ್ಧ ; ರಾವಳ-ರಾವಣ.

ಟಿಪ್ಪಣಿ :

೧) ಬ್ರಹ್ಮಕಪಾಲ : ಪ್ರಪಂಚದ ಸೃಷ್ಟಿಕರ್ತನಾದ ಚತುರ್ಮುಖ ವಿಷ್ಣುವಿನ ನಾಭಿ ಕಮಲದಲ್ಲಿ ಹುಟ್ಟಿದ ಬ್ರಹ್ಮ, ತ್ರಿಮೂರ್ತಿಗಳಲ್ಲಿ ತಾನೇ ಸರ್ವ ಶ್ರೇಷ್ಠನೆಂಬುದಾಗಿ ಮೆರೆದು ವೇದಗಳನ್ನು ನಿಂದಿಸಿ ಮಾತನಾಡಿದನು. ಆಗ ಶಿವನು ಮೈದೋರಿ ಬ್ರಹ್ಮನಿಂದ ತಿರಸ್ಕೃತನಾಗಿ ಕೋಪಗೊಂಡು ಭೈರವನನ್ನು ಸೃಜಿಸಿ ಆತನ ಮೂಲಕ ಬ್ರಹ್ಮನ ಐದನೆಯ ತಲೆಯನ್ನು ಕತ್ತರಿಸಿದನು. ಭೈರವನಿಗೆ ಬ್ರಹ್ಮಹತ್ಯೆ ಪ್ರಾಪ್ತವಾದದ್ದು ಹೀಗೆ. ಬ್ರಹ್ಮಕಪಾಲ, ಭೈರವನ ಕೈಗೆ ಅಂಟಿಕೊಂಡಿತು ನಂತರ ಅನ್ನಪೂರ್ಣೇಶ್ವರಿ ಕೃಪೆಯಿಂದ ಶಾಪ ವಿಮೋಚನೆಯಾಯಿತು.

೨) ರಾವಣ : ಈಗ ನಡೆಯುತ್ತಿರುವ ವೈವಸ್ವತ ಮನ್ವಂತರದಲ್ಲಿ ಬ್ರಹ್ಮಮಾನಸ ಪುತ್ರನಾದ ಪುಲಸ್ತ್ಯ ಮುನಿಯ ಮೊಮ್ಮಗನಾದ ವಿಶ್ರವಸನಿಂದ ಕೈಕಸಿಯೆಂಬಾಕೆಯಲ್ಲಿ ಜನಿಸಿದ ಮೂವರು ಪುತ್ರರಲ್ಲಿ ಹಿರಿಯವ ರಾವಣ. ಪರಮ ಶಿವಭಕ್ತನಾದ ರಾವಣನು ತನ್ನ ನರನಾಡಿಗಳನ್ನೇ ವೀಣೆಯ ತಂತಿಯನ್ನಾಗಿ ಮಾಡಿ ನುಡಿಸಿ ಶಿವನನ್ನು

ಒಲಿಸಿಕೊಂಡನು. ಆದರೆ ಅವನು ಕೂಡ ಪೂರ್ಣಾಯುಷಿಯಾಗದೆ ರಾಮನಿಂದ ಹತನಾದನು.

೩) ವೇದಗಳು : ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ.

ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ :

೧) 'ಕೆಡುವೊಡಲ ನಚ್ಚಿ, ಕಡು ಹುಸಿಯನೆ ಹುಸಿದು.'

೨) 'ಇನ್ನಾರಿಗೆ ದೂರುವೆ.'

೩) 'ನಾದಪ್ರಿಯನೂ ಅಲ್ಲ, ವೇದಪ್ರಿಯನೂ ಅಲ್ಲ.'

ಒಂದು ವಾಕ್ಯದಲ್ಲಿ ಉತ್ತರಿಸಿ :

೧) ಕಪ್ಪೆ ಯಾವುದಕ್ಕೆ ಆಸೆ ಮಾಡಿತು?

೨) ಯಾವುದು ಹತ್ತಿ ಉರಿದರೆ ನಿಲ್ಲಬಹುದು?

೩) ನಾದವ ನುಡಿಸಿದ ರಾವಣನಿಗೆ ಏನಾಯಿತು?

೪) ಭಕ್ತಿಪ್ರಿಯ ಯಾರು?

೫) ವೇದವನೋದಿದ ಬ್ರಹ್ಮನಿಗೆ ಏನಾಯಿತು?

ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ :

೧) ಕೂಡಲಸಂಗಮ ದೇವನು ಯಾರನ್ನು ಬಯಸುವುದಿಲ್ಲ?

೨) ಇನ್ನಾರಿಗೆ ದೂರಲಿ ಎಂದು ಬಸವಣ್ಣ ಯಾವ ಸಂದರ್ಭದಲ್ಲಿ ಮೊರೆಯಿಡುತ್ತಾರೆ?

ವಿವರವಾಗಿ ಉತ್ತರಿಸಿ :

೧) ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ.... ವಚನದ ಹಿನ್ನೆಲೆಯಲ್ಲಿ ಪ್ರಸ್ತುತ ಕೌಟುಂಬಿಕ, ಸಾಮಾಜಿಕ, ರಾಜಕೀಯ ಸ್ಥಿತಿ-ಗತಿಯನ್ನು ವಿವರಿಸಿ.

೨) ಭಕ್ತಿ ಮಾರ್ಗವೆ ಮೋಕ್ಷಕ್ಕೆ ಶ್ರೇಷ್ಠ ಎಂಬುದನ್ನು ಬಸವಣ್ಣನವರ ವಚನಗಳ ಹಿನ್ನೆಲೆಯಲ್ಲಿ ವಿವರಿಸಿ.

ಭಾಷಾಭ್ಯಾಸ:

೧) ಇವುಗಳನ್ನು ಬಿಡಿಸಿ ಬರೆಯಿರಿ :

ಮೇಲೇಸು ; ಕೆಡುವೊಡಲ ; ನೀರುಂಬಡೆ.

೨) ಇವುಗಳಿಗೆ ನಾನಾರ್ಥ ಪದಗಳನ್ನು ಬರೆಯಿರಿ :

ಹತ್ತಿ ; ಹೊರೆ ; ಏರಿ.

೩) ಇವುಗಳಿಗೆ ತತ್ಸಮ-ತದ್ಭವಗಳನ್ನು ಬರೆಯಿರಿ :

ಬ್ರಹ್ಮ ; ಆಯುಷ್ಯ ; ಮೃತ್ಯು ; ನಚ್ಚು ; ಶೂಲ ; ಶಿರ.

ಚಟುವಟಿಕೆ :

"ಅತಿ ಆಸೆ ಗತಿಗೇಡು" – ಈ ಗಾದೆ ಮಾತನ್ನು ವಿಸ್ತರಿಸಿ ಕಥಾರೂಪದಲ್ಲಿ ನಿರೂಪಿಸಿ.

ಆಕರ ಗ್ರಂಥ :

ಸಮಗ್ರ ವಚನ ಸಂಪುಟ ಭಾಗ-೧ ಬಸವಣ್ಣನವರ ವಚನ ಸಂಪುಟ ಸಂಪಾದಕರು : ಡಾ. ಎಂ.ಎಂ. ಕಲಬುರ್ಗಿ – ಪ್ರಕಾಶಕರು : ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

ತನುಕರಗದವರಲ್ಲಿ......

– ಅಕ್ಕಮಹಾದೇವಿ

ಎಂಥ ಕಷ್ಟ–ನಷ್ಟಗಳು ಸಂಭವಿಸಿದರೂ ಮನುಷ್ಯ ತನ್ನ ಮೂಲ ಸಾತ್ವಿಕ ಗುಣಗಳನ್ನು ಕಳೆದುಕೊಳ್ಳಬಾರದು. ಬರುವ ಎಡರು–ತೊಡರುಗಳು ನಮ್ಮ ವ್ಯಕ್ತಿತ್ವವನ್ನು ಪರೀಕ್ಷೆಗೆ ಒಡ್ಡುವುದರಿಂದ ಅವುಗಳನ್ನೆದುರಿಸಿ ನಾವು ಜಯಶಾಲಿಗಳಾಗಬೇಕು. ಪರರಿಗೆ ಪ್ರಯೋಜನವಾಗದ, ಪರಮಾತ್ಮನನ್ನು ಅರಿಯದ ಬದುಕು ಇದ್ದೂ ವ್ಯರ್ಥ. ಬಾಹ್ಯಾಚರಣೆಗಳಿಗಿಂತ ಭಕ್ತಿಭಾವದ ಆರಾಧನೆ ಮುಖ್ಯ ಎಂಬ ಆಶಯ ಅಕ್ಕ ವಚನಗಳಲ್ಲಿ ಅಡಕವಾಗಿದೆ.

ಚಂದನವ ಕಡಿದು ಕೊರೆದು ತೇದಡೆ
ನೊಂದೆನೆಂದು ಕಂಪ ಬಿಟ್ಟಿತ್ತೆ?
ತಂದು ಸುವರ್ಣವ ಕಡಿದೊರೆದಡೆ
ಬೆಂದು ಕಳಂಕ ಹಿಡಿಯಿತ್ತೆ?
ಸಂದುಸಂದು ಕಡಿದ ಕಬ್ಬನು ತಂದು ಗಾಣದಲ್ಲಿಕ್ಕಿ ಅರೆದಡೆ,
ಬೆಂದು ಪಾಕಗುಡದೆ ಸಕ್ಕರೆಯಾಗಿ ನೊಂದನೆಂದು ಸಿಹಿಯ ಬಿಟ್ಟಿತ್ತೆ?
ನಾ ಹಿಂದೆ ಮಾಡಿದ ಹೀನಂಗಳೆಲ್ಲವ ತಂದು ಮುಂದಿಳುಹಲು
ನಿಮಗೇ ಹಾನಿ.
ಎನ್ನ ತಂದೆ ಚೆನ್ನಮಲ್ಲಿಕಾರ್ಜುನಯ್ಯಾ,
ನೀ ಕೊಂದಡೆಯೂ ಶರಣೆಂಬುದ ಮಾಣೆ. ॥ ೧ ॥

ಮರವಿದ್ದು ಫಲವೇನು ನೆಳಲಿಲ್ಲದನ್ನಕ್ಕ?
ಧನವಿದ್ದು ಫಲವೇನು ದಯವಿಲ್ಲದನ್ನಕ್ಕ?
ಹಸುವಿದ್ದು ಫಲವೇನು ಹಯನಿಲ್ಲದನ್ನಕ್ಕ?
ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ?
ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ?
ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ
ಚೆನ್ನಮಲ್ಲಿಕಾರ್ಜುನಾ? ॥ ೨ ॥

ತನು ಕರಗದವರಲ್ಲಿ
ಮಜ್ಜನವನೊಲ್ಲೆಯಯ್ಯಾ ನೀನು.
ಮನಕರಗದವರಲ್ಲಿ

ಪುಷ್ಪವನೊಲ್ಲೆಯಯ್ಯಾ ನೀನು.
ಹದುಳಿಗರಲ್ಲದವರಲ್ಲಿ
ಗಂಧಾಕ್ಷತೆಯನೊಲ್ಲೆಯಯ್ಯಾ ನೀನು.
ಅರಿವು ಕಣ್ದೆರೆಯದವರಲ್ಲಿ
ಆರತಿಯನೊಲ್ಲೆಯಯ್ಯಾ ನೀನು.
ಭಾವ ಶುದ್ಧವಿಲ್ಲದವರಲ್ಲಿ
ಧೂಪವನೊಲ್ಲೆಯಯ್ಯಾ ನೀನು.
ಪರಿಣಾಮಿಗಳಲ್ಲದವರಲ್ಲಿ
ನೈವೇದ್ಯವನೊಲ್ಲೆಯಯ್ಯಾ ನೀನು.
ತ್ರಿಕರಣ ಶುದ್ಧವಿಲ್ಲದವರಲ್ಲಿ
ತಾಂಬೂಲವನೊಲ್ಲೆಯಯ್ಯಾ ನೀನು.
ಹೃದಯಕಮಲ ಅರಳದವರಲ್ಲಿ
ಇರಲೊಲ್ಲೆಯಯ್ಯಾ ನೀನು.
ಎನ್ನಲ್ಲಿ ಏನುಂಟೆಂದು ಕರಸ್ಥಲವನಿಂಬುಗೊಂಡೆ
ಹೇಳಾ ಚೆನ್ನಮಲ್ಲಿಕಾರ್ಜುನಯ್ಯಾ? || ೩ ||

❖ ❖ ❖ ❖

ಕವಿ ಪರಿಚಯ : ಅಕ್ಕಮಹಾದೇವಿ (೧೨ನೇ ಶತಮಾನ) : ವಚನ ಸಾಹಿತ್ಯವೆಂದಾಕ್ಷಣ ಪುರುಷರಲ್ಲಿ ಮೊದಲು ನೆನಪಾಗುವ ಹೆಸರು ಬಸವಣ್ಣನವರದು. ಸ್ತ್ರೀಯರಲ್ಲಿ ನೆನಪಾಗುವ ಹೆಸರು ಅಕ್ಕಮಹಾದೇವಿಯದು. ಕಾವ್ಯಗಳು ಒದಗಿಸುವ ಆಧಾರದ ಮೇರೆಗೆ ಮಹಾದೇವಿಯಕ್ಕನ ಜನ್ಮಸ್ಥಳ ಶಿವಮೊಗ್ಗ ಜಿಲ್ಲೆಯ ಉಡುತಡಿ. ತಂದೆ ನಿರ್ಮಲಶೆಟ್ಟಿ, ತಾಯಿ ಸುಮತಿ. ಮಹಾದೇವಿಯ ಲಾವಣ್ಯಕ್ಕೆ ಮೋಹಿತನಾದ ಕೌಶಿಕ ಒತ್ತಾಯದಿಂದ ಅವಳನ್ನು ಅರಮನೆಗೆ ತುಂಬಿಕೊಂಡ. ತನ್ನ ಆಧ್ಯಾತ್ಮಿಕ ಬದುಕಿಗೆ ಅಡ್ಡಿಬರದಂತೆ ವರ್ತಿಸಬೇಕೆಂದು ಮಹಾದೇವಿ ಷರತ್ತು ಹಾಕಿದಳು. ಆ ಷರತ್ತಿಗೆ ಕೌಶಿಕ ವ್ಯತಿರಿಕ್ತವಾಗಿ ನಡೆದುಕೊಂಡ ಕಾರಣ ಅವಳು ಅರಮನೆಯನ್ನು ತೊರೆದು ಮಲ್ಲಿಕಾರ್ಜುನ ಮೋಹಿತೆಯಾಗಿ ಕೇಶಾಂಬರಿಯಾಗಿ ಅರಮನೆಯಿಂದ ಹೊರಬಿದ್ದಳು.

ತನ್ನ ಜೀವನದ ಉತ್ತರಾರ್ಧದಲ್ಲಿ ಅವಳು ಮಲ್ಲಿಕಾರ್ಜುನನ ವಶವರ್ತಿಯಾಗಿ ಲೋಕವನ್ನೆಲ್ಲ ಸುತ್ತಿದಳು. ನಂತರ ಕಲ್ಯಾಣವನ್ನು ಪ್ರವೇಶಿಸಿದ್ದು ಮುಖ್ಯ ಘಟನೆ. ಅನುಭವ ಮಂಟಪದಲ್ಲಿ ಅವಳು ಎದುರಿಸಿದ ಪ್ರಶ್ನೆ, ಕೊಟ್ಟ ಉತ್ತರಗಳು ಅವಳ ಚಿಂತನೆಯ ಔನ್ನತ್ಯವನ್ನು ಸಾರುತ್ತವೆ.

ಅವಳೇ ಹೇಳಿದಂತೆ 'ನಾಮದಲ್ಲಿ ಹೆಂಗೂಸೆಂಬ ಹೆಸರಾದಡೇನು ಭಾವಿಸಲು ಗಂಡುರೂಪ' ಎಂಬಂತೆ ವ್ಯಕ್ತಿತ್ವವನ್ನು ರೂಪಿಸಿಕೊಂಡಳು. ಮಹಾದೇವಿಯಕ್ಕ ಒಬ್ಬ ಶ್ರೇಷ್ಠ ವಚನಕಾರ್ತಿ. ಶ್ರೇಷ್ಠ ಕವಯತ್ರಿ. ಈಗ ಅವಳ ೪೩೪ ವಚನಗಳು ಲಭ್ಯವಾಗಿವೆ. ಆಕೆಯ ಬರವಣಿಗೆ ಭಾವನಾತ್ಮಕವಾದುದು. ಜೀವನದ ನೋವು ನಲಿವು ಆಧ್ಯಾತ್ಮಿಕ ನಿಲುವು ಅವಳ ಅಭಿವ್ಯಕ್ತಿಯ ವೈಶಿಷ್ಟ್ಯಗಳಾಗಿವೆ. ಮುಂದೆ ಕಲ್ಯಾಣವನ್ನು ಬಿಟ್ಟು ಕದಳಿಗೆ ಹೋದ ಬಳಿಕ ಅವಳ ಜೀವನ ವಿವರಗಳು ಅಷ್ಟಾಗಿ ತಿಳಿದುಬರುವುದಿಲ್ಲ.

ಶಬ್ದಾರ್ಥ : ಚಂದನ–ಶ್ರೀಗಂಧ ; ಕಂಪು–ಪರಿಮಳ ; ಸಂದು–ಬಿರುಕು, ಭೇದ ; ಮಾಣೆ–ಬಿಡೆನು, ಬಿಡುವುದಿಲ್ಲ ; ಪರಿಣಾಮಿ–ಸಂತೃಪ್ತ ; ಅಕ್ಷತೆ–ಅಕ್ಕಿಕಾಳು ; ಮಜ್ಜನ–ಸ್ನಾನ ; ಹದುಳ–ಕ್ಷೇಮ ; ಕರಸ್ಥಲ–ಅಂಗೈ ; ಫಲ–ಪ್ರಯೋಜನ ; ಅಗಲು–ನೈವೇದ್ಯ, ದೂರವಾಗು ; ಬಾನ–ಅನ್ನ.

ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ :

೧) 'ನೀ ಕೊಂದಡೆಯೂ ಶರಣೆಂಬುದ ಮಾಣೆ.'

೨) 'ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ?'

೩) 'ಹೃದಯ ಕಮಲ ಅರಳದವರಲ್ಲಿ ಇರಲೊಲ್ಲೆಯಯ್ಯಾ ನೀನು.'

ಒಂದು ವಾಕ್ಯದಲ್ಲಿ ಉತ್ತರಿಸಿ :

೧) ಚಂದನವ ತೇದಡೆ ಏನಾಗುತ್ತದೆ?

೨) ಧನ ಫಲದಾಯಕವಾಗುವುದು ಯಾವಾಗ?

೩) ಚೆನ್ನಮಲ್ಲಿಕಾರ್ಜುನ ಮನಕರಗದವರಲ್ಲಿ ಯಾವುದನ್ನು ಒಲ್ಲ?

ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ :

೧) ಚಂದನ, ಸುವರ್ಣ ಹಾಗೂ ಕಬ್ಬು ತಮ್ಮ ಮೂಲ ಗುಣಗಳನ್ನು ಹೇಗೆ ತೋರ್ಪಡಿಸುತ್ತವೆ?

೨) ಕಂಪು ಮತ್ತು ಹೊಳಪು ಯಾವ ವಸ್ತುಗಳ ಗುಣಗಳಾಗಿವೆ?

೩) ಮರ ಹಾಗೂ ರೂಪ ಫಲದಾಯಕವೆನ್ನಿಸಿಕೊಳ್ಳುವುದು ಯಾವಾಗ?

೪) ಗಂಧಾಕ್ಷತೆ, ಆರತಿ ಮತ್ತು ಧೂಪ ಚೆನ್ನಮಲ್ಲಿಕಾರ್ಜುನ ಯಾವಾಗ ಒಲ್ಲ?

ವಿವರವಾಗಿ ಉತ್ತರಿಸಿ :

೧) ಎಂಥ ಪರೀಕ್ಷೆ ಒಡ್ಡಿದರೂ ಮನುಷ್ಯ ತನ್ನ ಮೂಲಸತ್ವವನ್ನು ಕಳೆದುಕೊಳ್ಳ ಬಾರದು ಎಂಬ ಆಶಯ ಅಕ್ಕನ ವಚನದಲ್ಲಿ ಹೇಗೆ ವ್ಯಕ್ತವಾಗಿದೆ?

೨) ವಸ್ತುಗಳ ಶ್ರೇಷ್ಠತೆಗೆ ಯಾವ ಯಾವ ಗುಣವಿರಬೇಕೆಂದು ಅಕ್ಕಮಹಾದೇವಿ ಹೇಳಿದ್ದಾಳೆ?

೩) ಆಚರಣೆಗಿಂತ ಭಕ್ತಿ, ಭಾವ ಮುಖ್ಯ ಎಂಬುದು ಅಕ್ಕನ ವಚನದಲ್ಲಿ ಹೇಗೆ ವ್ಯಕ್ತವಾಗಿದೆ?

ಭಾಷಾಭ್ಯಾಸ :

೧) ಇವುಗಳನ್ನು ಬಿಡಿಸಿ ಬರೆಯಿರಿ :

ಕಡಿದೊರೆದಡೆ, ಗಾಣದಲ್ಲಿಕ್ಕಿ, ಮುಂದಿಳುಹಲು, ಶರಣೆಂಬುದ, ಮಜ್ಜನವನೊಲ್ಲೆ, ಗಂಧಾಕ್ಷತೆ, ಕರಸ್ಥಲವನಿಂಬುಗೊಂಡೆ.

೨) ಇವುಗಳಿಗೆ ನಾನಾರ್ಥ ಪದಗಳನ್ನು ಬರೆಯಿರಿ :

ಫಲ, ತಂದೆ, ಅಗಲು, ಅರೆ.

೩) ಇವುಗಳಿಗೆ ಸಮಾನಾರ್ಥ ಪದಗಳನ್ನು ಬರೆಯಿರಿ :

ತನು, ಸುವರ್ಣ, ಮರ, ಧನ, ಪುಷ್ಪ.

೪) ಇವುಗಳಿಗೆ ತತ್ಸಮ-ತದ್ಭವಗಳನ್ನು ಬರೆಯಿರಿ :

ಸಕ್ಕರೆ, ಸ್ಥಲ, ಕಬ್ಬ.

ಚಟುವಟಿಕೆ :

೧) ಹರ ತನ್ನ ಭಕ್ತರ ತಿರಿವಂತೆ ಮಾಡುವ.....ದೇವರ ದಾಸಿಮಯ್ಯನ ವಚನವನ್ನು ಗಮನಿಸಿ.

೨) ೧೨ನೆಯ ಶತಮಾನದ ಇತರ ವಚನಕಾರ್ತಿಯರ ವಚನಗಳನ್ನು ಓದಿಕೊಳ್ಳಿರಿ.

ಆಕರ ಗ್ರಂಥ : ಸಮಗ್ರ ವಚನ ಸಂಪುಟ-೫, ಶಿವಶರಣೆಯರ ವಚನ ಸಂಪುಟ, ಸಂಪಾದಕ : ಡಾ. ವೀರಣ್ಣ ರಾಜೂರ, ಕನ್ನಡ ಪ್ರಾಧ್ಯಾಪಕರು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪ್ರಕಾಶಕರು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ಕಠಿಣವಾದುದೆಲ್ಲ ಕಷ್ಟಕರವಲ್ಲ

– ಸಿದ್ಧಯ್ಯ ಪುರಾಣಿಕ

ಬದುಕಿಗೊಂದು ಗುರಿಬೇಕು – ಗುರಿ ತಲುಪಲು ಸುಲಭದ ತಪ್ಪು ಮಾರ್ಗವನ್ನಾಯ್ದು ಕೊಳ್ಳದೇ, ಕಷ್ಟಕರವಾದರೂ ಸರಿ, ಸರಿಯಾದ ಮಾರ್ಗವನ್ನೇ ಆಯ್ದುಕೊಳ್ಳಬೇಕು. ಅಂತೆಯೇ ವ್ಯಕ್ತಿತ್ವ ವಿಕಾಸಕ್ಕೆ ಪೂರಕವಾಗುವ ಅಂಶಗಳನ್ನು ಬೇರೆ ಬೇರೆ ಮೂಲಗಳಿಂದ ಗ್ರಹಿಸಿ ಅಳವಡಿಸಿಕೊಳ್ಳಬೇಕು. ಪ್ರಕೃತಿಯಿಂದಲೂ ಪಾಠ ಕಲಿಯಬೇಕು, ಬದುಕಿನ ಪೂರ್ಣತೆಗೆ ಈ ಎಲ್ಲವೂ ಪೂರಕವಾಗಿರುತ್ತವೆ.

ಗಾಳ ಬೀಸಿದತ್ತ ಹುಟ್ಟು ಹಾಕಿದರೆ
ಹರಿಗೋಲು ಉಳಿಯಬಹುದಾಗಲಿ ಗುರಿ ನಿಲುಕದಯ್ಯ;
ದಾರಿ ಚೆನ್ನಾಗಿದೆಯೆಂದು ತಪ್ಪು ದಾರಿ ತುಳಿದರೆ
ದಾರಿ ಸಾಗಬಹುದಾಗಲಿ ಊರ ಸೇರಲಾಗದಯ್ಯ!
ಸ್ವತಂತ್ರಧೀರ ಸಿದ್ಧೇಶ್ವರಾ,
ಸುಲಭವಾದುದೆಲ್ಲ ಶುಭಕರವಲ್ಲ,
ಕಠಿನವಾದುದೆಲ್ಲ ಕಷ್ಟಕರವಲ್ಲವಯ್ಯಾ! ॥ ೧ ॥

ವಿಜ್ಞಾನಿಯ ಬುದ್ಧಿ,
ತತ್ತ್ವಜ್ಞಾನಿಯ ಮನ,
ಕವಿಯ ಹೃದಯವ ಕರುಣಿಸಯ್ಯ!
ದುಡಿತದ ಬಟ್ಟಲು,
ತಿಳಿವಿನ ಹಾಲು,
ಒಲವಿನ ಸಕ್ಕರೆಯ ದಯಪಾಲಿಸಯ್ಯ!
ನಯದ ನೌಕೆ,
ನಂಬಿಕೆಯ ಹುಟ್ಟು,
ದಿಟದ ದಿಕ್ಸೂಚಿಯ ಅನುಗ್ರಹಿಸಯ್ಯ!
ಛಲದ ಕುದುರೆ,
ಹದುಳದ ಹಲ್ಲಣ,
ವಿವೇಕದ ಕಡಿವಾಣವ ಕೊಡಯ್ಯ!

ಸ್ವತಂತ್ರಧೀರ ಸಿದ್ಧೇಶ್ವರಾ,
ನನ್ನ ನುಡಿಗೆ ನಿನ್ನ ಅರ್ಥ,
ನಿನ್ನ ಧ್ವನಿಯ ನೀಡಯ್ಯ! ॥ ೨ ॥

ಗುಂಪು ಗುಂಪಾಗಿ ಬೆಳೆದರೂ
ಗುಂಪುಗಾರಿಕೆಯ ಗಾಂಪತನವಿಲ್ಲ
ಗುಂಪು ಮರಗಳಲ್ಲಿ;
ಒಂದರ ಬಾಹು ಇನ್ನೊಂದರ ಹೆಗಲ ಮೇಲೆ,
ಒಂದರ ಹಸ್ತ ಇನ್ನೊಂದರ ಹಸ್ತದಲ್ಲಿ,
ಒಂದರ ನೆರಳು ಇನ್ನೊಂದರ ನೆರಳಿನಲ್ಲಿ.
ಎಲ್ಲ ಸಮರಸ – ಇಲ್ಲ ವಿರಸ!
ನರರಲ್ಲೇಕೆ ಗುಂಪುಗಾರಿಕೆ
ವಿರಸ ವಿರೋಧ ವಿಷಮತೆಗಳು
ಚಿಮ್ಮಿ ಹೊಮ್ಮುತ್ತಿರಬೇಕಯ್ಯಾ–
ಸ್ವತಂತ್ರಧೀರ ಸಿದ್ಧೇಶ್ವರಾ? ॥ ೩ ॥

❖ ❖ ❖ ❖

ಕವಿ ಪರಿಚಯ : 'ಕಾವ್ಯಾನಂದ' ಎಂಬ ಕಾವ್ಯನಾಮದ ಮೂಲಕ ಕನ್ನಡ ನವೋದಯ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಶ್ರೀ ಸಿದ್ಧಯ್ಯ ಪುರಾಣಿಕರು (೧೯೧೮–೧೯೯೪) ಹೊಸಗನ್ನಡ ಗದ್ಯ–ಪದ್ಯ ಸಾಹಿತ್ಯಕ್ಕೆ ಗಮನಾರ್ಹ ಕೊಡುಗೆ ನೀಡಿದ್ದಾರೆ.

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ದ್ಯಾಂಪುರದ ಈ ಕವಿ, ಬಾಲ್ಯದಿಂದಲೇ ತಂದೆಯ ಪುರಾಣ, ಪ್ರವಚನದ ಗರಡಿಯಲ್ಲಿ ಬೆಳೆದು ಶಿವಶರಣರ ಸಂದೇಶಗಳಿಂದ ಪ್ರಭಾವಿತರಾದರು. ಕರ್ನಾಟಕ ಆಡಳಿತ ಸೇವೆ ಸೇರಿದ ಇವರು ಕಂದಾಯ ಇಲಾಖೆಯ ಅಧಿಕಾರಿಗಳಾಗಿ, ಜಿಲ್ಲಾಧಿಕಾರಿಗಳಾಗಿ, ಕಾರ್ಮಿಕ ಇಲಾಖೆಯ ಆಯುಕ್ತರಾಗಿ ಸೇವೆ ಸಲ್ಲಿಸಿದ್ದಾರೆ.

ಕಾವ್ಯ, ನಾಟಕ, ಪ್ರಬಂಧ, ಜೀವನ ಚರಿತ್ರೆ ಮತ್ತು ವಚನ ಹೀಗೆ ಸಾಹಿತ್ಯದ ಹಲವು ಕ್ಷೇತ್ರಗಳಲ್ಲಿ ಸಾಧನೆಗೈದಿದ್ದಾರೆ. ಶ್ರೀಯುತರು ರಚಿಸಿದ *ಶರಣ ಚರಿತಾಮೃತ* ಹೊಸಗನ್ನಡ ಗದ್ಯ ಸಾಹಿತ್ಯಕ್ಕೆ ದೊಡ್ಡ ಕೊಡುಗೆ ಎನಿಸಿದೆ.

ಜಲಪಾತ, ಕರುಣಾ ಶ್ರಾವಣಾ, ಮಾನಸ ಸರೋವರ, ಕಲ್ಲೋಲಮಾಲೆ, ಮೊದಲು ಮಾನವನಾಗು ಇವರ ಪ್ರಮುಖ ಕವನ ಸಂಗ್ರಹಗಳು. *ಭಾರತವೀರ, ರಜತ ರೇಖೆ, ಭಗ್ನನೂಪುರ, ಭ್ರಮರದೂತ* ನಾಟಕ ಸಂಕಲನಗಳು, *ಕಥಾಮಂಜರಿ, ತುಷಾರಹಾರ* ಕಥಾಸಂಕಲನಗಳನ್ನಲ್ಲದೆ *ತ್ರಿಭುವನಮಲ್ಲ* ಎಂಬ ಕಾದಂಬರಿಯನ್ನೂ ಪ್ರಕಟಿಸಿದ್ದಾರೆ. ಅನೇಕ ಅಮೂಲ್ಯ ಕೃತಿಗಳನ್ನು ಸಂಪಾದಿಸಿದ ಶ್ರೇಯಸ್ಸು ಇವರದಾಗಿದೆ. *ವಚನೋದ್ಯಾನ, ವಚನ ನಂದನ* ಮುಂತಾದ ಇತರ ಕೃತಿಗಳು ಪ್ರಸಿದ್ಧವಾಗಿವೆ.

ಇವರ *ವಚನೋದ್ಯಾನ* ಕೃತಿಗೆ ಕಲಕತ್ತೆಯ ಭಾರತೀಯ ಭಾಷಾ ಸಂಸ್ಥಾನ ನೀಡುವ ಅತ್ಯುಚ್ಚ *ಭಿಲ್ವಾರ* ಪ್ರಶಸ್ತಿ ಲಭಿಸಿದೆ. ಇವರ ಹಲವು ಕೃತಿಗಳು ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯಿಂದ ಪುರಸ್ಕೃತವಾಗಿವೆ. ೧೯೮೨ರಲ್ಲಿ ಕಲಬುರ್ಗಿಯಲ್ಲಿ ನಡೆದ ೫೮ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಕನ್ನಡ ಜನತೆಯ ಗೌರವಾದರಗಳಿಗೆ ಪಾತ್ರರಾಗಿದ್ದಾರೆ.

ಶಬ್ದಾರ್ಥ : ಹುಟ್ಟು–ನಾವೆಯನ್ನು ನಡೆಸುವ ಕಟ್ಟಿಗೆಯ ಉಪಕರಣ ; ಹರಿಗೋಲು–ದೋಣಿ, ತೆಪ್ಪ ; ನೌಕೆ–ಹಡಗು ; ದಿಕ್ಸೂಚಿ–ದಿಕ್ಕನ್ನು ಸೂಚಿಸುವ ಸಾಧನ ; ಅನುಗ್ರಹ–ಆಶೀರ್ವಾದ ; ಹದುಳ–ಕ್ಷೇಮ ; ಹಲ್ಲಣ–ಕುದುರೆ ಬೆನ್ನ ಮೇಲೆ ಹಾಕುವ ಜೀನು ; ಕಡಿವಾಣ–ಕುದುರೆ ಬಾಯಿಗೆ ಹತೋಟಿಗೆಂದು ಕಟ್ಟಿದ ಲೋಹದ ತುಂಡು ; ವಿರಸ–ದ್ವೇಷ ; ವಿಷಮ–ಸಮವಿಲ್ಲದ್ದು, ಕ್ಲಿಷ್ಟ ; ಹೊಮ್ಮು–ಹೊರಹಾಕು.

ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ :

೧) 'ಕವಿಯ ಹೃದಯ ಕರುಣಿಸಯ್ಯ!'

೨) 'ಒಂದರ ಬಾಹು ಇನ್ನೊಂದರ ಹೆಗಲ ಮೇಲೆ.'

೩) 'ನರರಲ್ಲೇಕೆ ಗುಂಪುಗಾರಿಕೆ.'

ಒಂದು ವಾಕ್ಯದಲ್ಲಿ ಉತ್ತರಿಸಿ :

೧) ಯಾವುದು ಶುಭಕರವಲ್ಲ?

೨) ಎಂಥ ಕಡಿವಾಣ ಬೇಕು?

೩) ಗುಂಪುಗಾರಿಕೆ ಗಾಂಪತನ ಯಾರಲ್ಲಿ ಇಲ್ಲ?

ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ :

೧) ಗಾಳ ಬೀಸಿದತ್ತ ಹುಟ್ಟು ಹಾಕಿದರೆ ಏನಾಗುತ್ತದೆ?

೨) ಯಾವುದನ್ನು ಕರುಣಿಸೆಂದು ಕವಿ ಕೇಳಿಕೊಳ್ಳುತ್ತಾನೆ?

೩) ನರರಲ್ಲಿ ಯಾವ ಯಾವ ಗುಣಗಳಿವೆ?

ವಿವರವಾಗಿ ಉತ್ತರಿಸಿ :

೧) ದಾರಿ ಹಾಗೂ ಗುರಿಯ ಬಗ್ಗೆ ಸಿದ್ಧಯ್ಯ ಪುರಾಣಿಕರ ಅಭಿಪ್ರಾಯಗಳನ್ನು ವಿವೇಚಿಸಿ.

೨) ಕವಿ ದೇವರಲ್ಲಿ ಸಲ್ಲಿಸುವ ಬೇಡಿಕೆಗಳೇನು?

೩) 'ಸಮರಸವೇ ಜೀವನ' – ಈ ಮಾತನ್ನು ಸಿದ್ಧಯ್ಯ ಪುರಾಣಿಕರ ವಚನದ ಹಿನ್ನೆಲೆಯಲ್ಲಿ ವಿವೇಚಿಸಿ.

ಭಾಷಾಭ್ಯಾಸ :

೧) ಇವುಗಳನ್ನು ಬಿಡಿಸಿ ಬರೆಯಿರಿ :

ದಿಕ್ಸೂಚಿ, ಸೇರಲಾಗದು, ನರರಲ್ಲೇಕೆ, ಹೊಮ್ಮುತ್ತಿರಬೇಕು.

೨) ಇವುಗಳಿಗೆ ನಾನಾರ್ಥ ಪದಗಳನ್ನು ಬರೆಯಿರಿ :

ನರ, ಹುಟ್ಟು, ತಿಳಿ, ಕವಿ.

೩) ಇವುಗಳಿಗೆ ವಿರುದ್ಧಾರ್ಥ ಪದಗಳನ್ನು ಬರೆಯಿರಿ :

ಸುಲಭ, ಶುಭ, ಸಮತೆ, ಸರಸ.

ಚಟುವಟಿಕೆ :

೧) ತಾನು ಹೇಗೆ ಉಪಕಾರಿ ಎಂಬುದನ್ನು ಮರವೇ ಹೇಳಿದಂತೆ ಕಲ್ಪಿಸಿಕೊಂಡು ಒಂದು ಕಥೆ ಅಥವಾ ಕವಿತೆ ಬರೆಯಿರಿ.

೨) ನಿಶ್ಚಿತ ಗುರಿ ಇಟ್ಟುಕೊಂಡು ವಿಜಯಶಾಲಿಯಾದವರ ಕುರಿತು ಪ್ರಬಂಧ ಬರೆಯಿರಿ.

ಆಕರ ಗ್ರಂಥ :

ಡಾ. ಸಿದ್ಧಯ್ಯ ಪುರಾಣಿಕರ ಸಮಗ್ರ ವಚನಗಳು, ಪ್ರಕಾಶಕರು : ಶ್ರೀ ಗಿರಿ ಪ್ರಕಾಶನ, ಶ್ರೀಗಿರಿ, ೮/೫, 'ಎ' ಅಲಿ ಅಸ್ಕರ ರಸ್ತೆ, ಬೆಂಗಳೂರು.
ಮುದ್ರಣ ವರ್ಷ : ೨೦೦೯

ದಾಸಸಾಹಿತ್ಯ

ಭಾರತೀಯ ಸಂಸ್ಕೃತಿಗೆ ಕನ್ನಡ ನಾಡು ಕೊಟ್ಟಿರುವ ಕೊಡುಗೆಗಳಲ್ಲಿ ಹರಿದಾಸರ ಸಾಹಿತ್ಯ ವಿಶಿಷ್ಟವಾದುದು. ಹರಿದಾಸರೆಂದರೆ ಹರಿಯ ಭಕ್ತರು. ಸುಮಾರು ೧೫ನೇ ಶತಮಾನದಲ್ಲಿ ಪ್ರಾರಂಭವಾಗಿರುವ ಈ ಭಕ್ತಿಸಾಹಿತ್ಯಕ್ಕೆ ಮಾರ್ಗದರ್ಶಕವಾದುದು ಭಾಗವತ ಧರ್ಮ. ಎಲ್ಲವೂ ಭಗವಂತನಿಗೆ ಸೇರಿದ್ದು ಎಂದು ಭಾವಿಸುವುದೇ ಈ ಧರ್ಮದ ತಾತ್ಪರ್ಯ.

ಹರಿಯ ದಾಸರೆಂದು ತಮ್ಮನ್ನು ಭಾವಿಸಿಕೊಂಡು ಹರಿಯ ಸೇವೆ, ನಾಮ ಸಂಕೀರ್ತನೆ, ಕ್ಷೇತ್ರ ಪರ್ಯಟನೆಗಳಲ್ಲಿ ಬದುಕನ್ನು ನಡೆಸಿದ ಈ ದಾಸ ಪರಂಪರೆ ನರಹರಿತೀರ್ಥರೆಂಬ ಹರಿಭಕ್ತರಿಂದ ಪ್ರಾರಂಭವಾಯಿತೆಂದು ತಿಳಿದು ಬರುತ್ತದೆ. ಸಾಹಿತ್ಯ ಮತ್ತು ಸಂಗೀತ ಮೇಳೈಸಿದ, ಹರಿಯನ್ನು ಸ್ತುತಿಸುವ *ಕೀರ್ತನೆ* ಎಂಬ ಈ ಪ್ರಕಾರ ತನ್ನ ಸರಳ ಭಾಷೆಯಿಂದ ಜನ ಸಾಮಾನ್ಯರ ಮೆಚ್ಚಿಕೆಗೆ ಪಾತ್ರವಾಯಿತು.

ದಾಸಸಾಹಿತ್ಯವು ಮುಂದೆ ವ್ಯಾಸರಾಯರು, ಪುರಂದರದಾಸರು, ಕನಕದಾಸರು ಮೊದಲಾದ ಭಕ್ತಶ್ರೇಷ್ಠರ ಪರಿಶ್ರಮದಿಂದ ಸಮೃದ್ಧವಾಗಿ ಬೆಳೆಯಿತು. ಜೊತೆಗೆ ನಾಡಿನ ನಾನಾ ಮೂಲೆಗಳಿಂದ ನಾನಾ ವರ್ಗಗಳಿಂದ ಬಂದ ಹರಿದಾಸರು ಈ ಪರಂಪರೆಗೆ ಅಮೂಲ್ಯ ಕೊಡುಗೆಯನ್ನು ನೀಡಿದರು. ಈ ಹರಿನಾಮ ಸಂಕೀರ್ತನೆಗಳು ಗೇಯ ಪ್ರಧಾನವಾಗಿದ್ದು ಪಲ್ಲವಿ, ಅನುಪಲ್ಲವಿ ಮತ್ತು ಚರಣಗಳೆಂಬ ಚೌಕಟ್ಟಿನಲ್ಲಿ ರಚಿತವಾಗಿರುತ್ತವೆ. ಪ್ರತಿಯೊಬ್ಬ ಕೀರ್ತನಕಾರನೂ ಹಾಡಿನ ಕೊನೆಯಲ್ಲಿ ತನ್ನ ಆರಾಧ್ಯ ದೈವದ ಹೆಸರನ್ನು ಅಂಕಿತಗೊಳಿಸಿದ್ದಾನೆ. ಹರಿದಾಸ ಸಾಹಿತ್ಯವು ಕೀರ್ತನೆ, ಸುಳಾದಿ, ಉಗಾಭೋಗ, ಮುಂಡಿಗೆ ಮತ್ತು ಅಷ್ಟಕಗಳೆಂಬ ವಿಭಾಗಗಳನ್ನು ಒಳಗೊಂಡಿದೆ.

ದಾಸಸಾಹಿತ್ಯವನ್ನು ಅತ್ಯಂತ ಶ್ರೀಮಂತವಾಗಿ ಬೆಳೆಸಿದ ಪುರಂದರ ದಾಸರನ್ನು *ಕರ್ನಾಟಕ ಸಂಗೀತ ಪಿತಾಮಹ*ರೆಂದೇ ಗುರುತಿಸಲಾಗುತ್ತದೆ. ಹರಿ ಸ್ತುತಿಯೊಂದಿಗೆ ಸಮಾಜ ಸುಧಾರಣೆಯ ಉದ್ದೇಶವನ್ನು ಹೊಂದಿದ್ದ ದಾಸ ಸಾಹಿತ್ಯವು ಪುರಂದರದಾಸರ, ಕನಕದಾಸರ ಕೀರ್ತನೆಗಳ ಮೂಲಕ ಉಛ್ರಾಯ ಸ್ಥಿತಿಯನ್ನು ತಲುಪಿತು. ಈ ಪ್ರಕಾರದಲ್ಲಿ ಜಾತಿ, ಧರ್ಮ, ವರ್ಗಗಳು ಗೌಣ ; ಮಾನವೀಯತೆಯೇ ಪ್ರಮುಖ.

ಏನು ಓದಲೇನು ಫಲ

– ಪುರಂದರದಾಸರು

ಆಚಾರ ಮಾರ್ಗವು ಸ್ನಾನ, ಯಾತ್ರೆ, ಪೂಜೆ ಮೊದಲಾದ ಬಾಹ್ಯ ಚಟುವಟಿಕೆಗಳಾದರೆ, ಜ್ಞಾನಮಾರ್ಗವು ಆಂತರಿಕ ಕ್ರಿಯೆಯಾಗುತ್ತದೆ. ಅಂದರೆ ಕೇವಲ ಬಾಹ್ಯ ಆಚರಣೆಗಳಿಂದಷ್ಟೆ ಆಧ್ಯಾತ್ಮಿಕ ಸಿದ್ಧಿ ಲಭಿಸದು. ದೈವಾನುಸಂಧಾನದ ಸೂಕ್ಷ್ಮತೆಗಳು ಮತಾಚಾರಗಳಿಗಿಂತ ಸಂಪೂರ್ಣವಾಗಿ ವಿಭಿನ್ನವಾಗಿರುತ್ತವೆ. ಸಾಮಾನ್ಯ ಜನರು ಕೇವಲ ಆಚರಣೆಯ ಮಾರ್ಗದಲ್ಲಿ ನಡೆಯಲು ಪ್ರಯತ್ನಿಸುತ್ತ ಅಂತರಂಗದ ಶುದ್ಧಿಯ ಕಡೆಗೆ ಗಮನ ಕೊಡುವುದಿಲ್ಲ. ಆಗ ಅದು ಕೇವಲ ಡಾಂಭಿಕತನವಾಗುತ್ತದೆ. ಅಂತಹ ಜನರು ಭಗವಂತನ ಅನುಗ್ರಹಕ್ಕೆ ಪಾತ್ರರಾಗುವುದು ಸಾಧ್ಯವಿಲ್ಲ ಎನ್ನುವ ಸತ್ಯದರ್ಶನ ಇಲ್ಲಿದೆ.

ಮಲವ ತೊಳೆಯಬಲ್ಲರಲ್ಲದೆ
ಮನವ ತೊಳೆಯಬಲ್ಲರೆ? ॥ ಪ ॥

ಹಲವು ತೀರ್ಥಂಗಳಲಿ ಮುಳುಗಿ
ಹಲುಬಿದರೆ ಫಲವೇನು? ॥ ಅ॥

ಭೋಗವಿಷಯ ಫಲವನುಂಡು ರಾಗ ಲೋಭದಿಂದ ಮತ್ತ
ನಾಗಿ ಮೆರೆಯುತಿರೆ ಅವನ ಭಾಗ್ಯವಂತನೆಂಬರೆ
ಯೋಗಿಯಂತೆ ಜನರು ಮೆಚ್ಚುವಂತೆ ಹೋಗಿ ನೀರಿನಲ್ಲಿ
ಕಾಗೆಯಂತೆ ಮುಳುಗೆ ಮಾಘಸ್ನಾನ ಫಲವು ಬಾಹೋದೆ ॥ ೧ ॥

ಪರರ ಕೇಡು ಬಯಸಿ ಗುರುಹಿರಿಯರನ್ನು ನಿಂದಿಸುತ್ತ
ಪರಮಸೌಖ್ಯವೆಂದು ಪರಸ್ತ್ರೀಯರನ್ನು ಬಯಸುತ್ತ
ಪರಮನಿಷ್ಠ ಮೌನಿಯಂತೆ ಧರೆಯ ಮೇಲೆ ಡಂಭ ತೋರಿ
ಹರಿವ ನೀರಿನ ತೀರದಿ ಕುಳಿತರೇನು ಬಕ ಧ್ಯಾನದಿ ॥ ೨ ॥

ಕಾಸುವೀಸಕ್ಕಾಗಿ ಹರಿಯದಾಸನೆಂದು ತಿರುಗಿ ತಿರುಗಿ
ದೇಶದೇಶಗಳಲಿ ತೊಳಲಿ ಕಾಶಿಯಾತ್ರೆ ಪೋಗಲು
ಆಶಾಪಾಶ ಬಿಡದೆ ಮನಸು ಹೇಸಿ ವಿಷಯ ಬಯಸುವಂಥ
ವೇಷಧಾರಿಗಳಿಗೆ ಕಾಶಿಯಾತ್ರೆ ಫಲವು ಬಾಹೋದೆ ॥ ೩ ॥

ತಂದೆತಾಯಿ ತಿರಿದು ತಿನಲು ಒಂದು ದಿನ ಕೇಳಲಿಲ್ಲ
ಮಂದಗಮನೆಯರೊಡನೆ ಆನಂದದಿಂದಲಿರುವರು
ತಂದೆ ಸತ್ತಮೇಲೆ ನೂರುಮಂದಿ ವಿಪ್ರರಿಗುಣಿಸಿ ತಮ್ಮ
ತಂದೆ ತೃಪ್ತನಾದನೆಂಬರು ಮಂದಮತಿಯ ಜನಗಳು ॥ ೪ ॥

ಏನು ಓದಲೇನು ಫಲ ಏನು ಕೇಳಲೇನು ಫಲ
ಜ್ಞಾನದಿಂದ ಅಚ್ಯುತನ ಧ್ಯಾನವಿಲ್ಲದವರಿಗೆ
ಮೌನ ನೇಮ ನಿಷ್ಠೆ ಯಾಕೆ ಹೀನಚಿತ್ತನಾದ ಮೇಲೆ
ಶ್ರೀನಿವಾಸ ಪುರಂದರವಿಠ್ಠಲನು ಮೆಚ್ಚುವನೆ ಮರುಳೆ ॥ ೫ ॥

❖ ❖ ❖ ❖

ಕವಿ ಪರಿಚಯ : ಪುರಂದರದಾಸರು (೧೪೮೪-೧೫೬೪) ಸಂಗೀತ ಸಾಹಿತ್ಯ ಕ್ಷೇತ್ರಗಳೆರಡರಲ್ಲೂ ಅಪಾರ ಯಶಸ್ಸನ್ನು ಪಡೆದು ತಮ್ಮ ಬದುಕು ಹಾಗೂ ಕೃತಿಗಳಿಂದ ವಿದ್ವಾಂಸರ ಮತ್ತು ಜನಸಾಮಾನ್ಯರ ಮನ್ನಣೆ ಗಳಿಸಿದ ಹರಿದಾಸ ಸಾಹಿತ್ಯ ಪರಂಪರೆಯ ದಾಸಶ್ರೇಷ್ಠರಲ್ಲೊಬ್ಬರು. ಸಂಗೀತ ಕ್ಷೇತ್ರದಲ್ಲಿ ಇವರ ಸಾಧನೆ, ಸಿದ್ಧಿಗಳ ಫಲವಾಗಿ "ಕರ್ಣಾಟಕ ಸಂಗೀತ ಪಿತಾಮಹ" ಎಂಬ ಬಿರುದಿಗೆ ಪಾತ್ರರಾಗಿದ್ದಾರೆ. ಇವರು ೧೪೮೪ರಲ್ಲಿ ಪುಣೆಯ ಸಮೀಪದ ಪುರಂದರಗಡದಲ್ಲಿ ಜನಿಸಿದರು. ಇವರ ಪೂರ್ವಾಶ್ರಮದ ಹೆಸರು ಶ್ರೀನಿವಾಸನಾಯಕ. ಅಗರ್ಭ ಶ್ರೀಮಂತರಾಗಿದ್ದ ಇವರಿಗೆ ಅರ್ಥಲಾಲಸೆಯೂ, ಜಿಪುಣತನವೂ ಹೆಚ್ಚಾಗಿತ್ತು. ಆದರೆ ಯಾವುದೋ ಒಂದು ಸನ್ನಿವೇಶದಲ್ಲಿ ವೈರಾಗ್ಯ ಮೂಡಿ ತಮ್ಮ ಸಮಸ್ತ ಐಶ್ವರ್ಯವನ್ನು ತ್ಯಾಗ ಮಾಡಿ ಹಂಪೆಗೆ ಬಂದು ವ್ಯಾಸರಾಯರಿಂದ ದೀಕ್ಷೆ ಪಡೆದು ದಾಸರೆಂದರೆ ಪುರಂದರ ದಾಸರಯ್ಯ ಎಂದು ಪ್ರಶಂಸೆಗೆ ಪಾತ್ರರಾದರು. *ಪುರಂದರವಿಠ್ಠಲ* ಎಂಬ ಅಂಕಿತದಲ್ಲಿ ಪುರಂದರದಾಸರು ಅಸಂಖ್ಯಾತ ಕೀರ್ತನೆ, ಸುಳಾದಿ, ಉಗಾಭೋಗಗಳನ್ನು ರಚಿಸಿ ದಾಸಶ್ರೇಷ್ಠರೆನಿಸಿದರು.

ಶಬ್ದಾರ್ಥ : ನಿಂದಿಸು-ದೂಷಿಸು ; ಧರೆ-ಭೂಮಿ ; ವಿಪ್ರ-ಬ್ರಾಹ್ಮಣ; ಹೀನ-ಕೀಳು ; ತಿರಿ-ಭಿಕ್ಷೆ ; ಮಲ-ಕೊಳೆ ; ಹಲುಬು-ಕೊರಗು ; ತೊಳಲು-ಅಲೆದಾಡು; ಮಂದಮತಿ-ಮಂದಬುದ್ಧಿ.

ಟಿಪ್ಪಣಿ :

೧) **ಸುಳಾದಿ** : ಇದು 'ಕೀರ್ತನೆ'ಯ ಒಂದು ಪ್ರಕಾರ. ಸುಳಾದಿಯಲ್ಲಿ ಸಪ್ತತಾಳಗಳೇ ಪ್ರಧಾನ.

೨) **ಮುಂಡಿಗೆ** : ಪೌರಾಣಿಕ ಅಥವಾ ಆಧ್ಯಾತ್ಮಿಕ ವಿಚಾರಗಳನ್ನೊಳಗೊಂಡಿರುತ್ತದೆ. ಗೇಯ ರೂಪದ ಒಡಪಿನಿಂದ ಕೂಡಿರುವ ಪ್ರಕಾರ. ಅಂದರೆ ಗೂಢಾರ್ಥಗಳನ್ನು ಹೊಂದಿರುತ್ತದೆ.

೩) **ಅಷ್ಟಕ** : ಎಂಟು ಸಾಲುಗಳನ್ನು ಹೊಂದಿರುವ ಹಾಡಿನ ಪ್ರಕಾರ.

೪) **ಮಾಘಸ್ನಾನ** : ಮಾಘಮಾಸದಲ್ಲಿ ಪುಣ್ಯದಿನಗಳಲ್ಲಿ ಸ್ನಾನ ಮಾಡಿದರೆ ಸದ್ಗತಿ ದೊರೆಯುತ್ತದೆಂಬ ನಂಬಿಕೆ ಇದೆ.

೫) **ಕಾಶಿಯಾತ್ರೆ** : ಕಾಶಿಯು ಹಿಂದೂಗಳಿಗೆ ಪವಿತ್ರ ಕ್ಷೇತ್ರವೆನಿಸಿದೆ. ಇಲ್ಲಿರುವ ವಿಶ್ವನಾಥನ ದರ್ಶನ ಮಾಡಿ, ದೇವನದಿ ಎನಿಸಿರುವ ಗಂಗೆಯಲ್ಲಿ ಮಿಂದರೆ ಮೋಕ್ಷ ಪ್ರಾಪ್ತಿಯಾಗುತ್ತದೆಂಬ ನಂಬಿಕೆ ಬಹಳ ಹಿಂದಿನಿಂದಲೂ ಇದೆ.

ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ :

೧) 'ವೇಷಧಾರಿಗಳಿಗೆ ಕಾಶಿಯಾತ್ರೆ ಫಲವು ಬಾಹೋದೆ.'

೨) 'ತಂದೆತಾಯಿ ತಿರಿದು ತಿನಲು ಒಂದು ದಿನ ಕೇಳಲಿಲ್ಲ.'

೩) 'ಮೌನ ನೇಮ ನಿಷ್ಠೆ ಯಾಕೆ ಹೀನಚಿತ್ತನಾದ ಮೇಲೆ.'

ಒಂದು ವಾಕ್ಯದಲ್ಲಿ ಉತ್ತರಿಸಿ :

೧) ಕಾಗೆಯಂತೆ ಮುಳುಗುವವರಿಗೆ ಯಾವ ಫಲವು ದೊರೆಯುವುದಿಲ್ಲ?

೨) ಪರರ ಕೇಡನ್ನು ಬಯಸುವವರು ಯಾರನ್ನು ನಿಂದಿಸುತ್ತಾರೆ?

೩) ಕಾಶಿಯಾತ್ರೆಯ ಫಲವು ಯಾರಿಗೆ ಸಿಗುವುದಿಲ್ಲ?

೪) ಮಂದಮತಿಯ ಜನಗಳು ಏನು ಮಾಡುತ್ತಾರೆ?

೫) ಹೀನಚಿತ್ತನಿಗೆ ಯಾವುದು ಬೇಡವಾಗುತ್ತದೆ?

ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ :

೧) ಭಾಗ್ಯವಂತನೆಂದು ಯಾರನ್ನು ಕರೆಯಲಾಗುವುದಿಲ್ಲ?

೨) ಯಾವುದನ್ನು ಬಕಧ್ಯಾನ ಎನ್ನಲಾಗಿದೆ?

೩) ಕಾಸುವೀಸಕ್ಕಾಗಿ ತಿರುಗುವವರು ಏನು ಮಾಡುತ್ತಾರೆ?

ವಿವರವಾಗಿ ಉತ್ತರಿಸಿ :

೧) ಡಾಂಭಿಕ ಜನರ ನಡವಳಿಕೆಯನ್ನು ದಾಸರು ಹೇಗೆ ವಿಡಂಬಿಸಿದ್ದಾರೆ?

೨) ವಿಚಾರವಿಲ್ಲದ ಆಚರಣೆಯು ವ್ಯರ್ಥ ಎಂಬುದನ್ನು ಈ ಕೀರ್ತನೆಯ ಹಿನ್ನೆಲೆಯಲ್ಲಿ ವಿವೇಚಿಸಿ.

ಭಾಷಾಭ್ಯಾಸ :

೧) **ಇವುಗಳಿಗೆ ನಾನಾರ್ಥಗಳನ್ನು ಬರೆಯಿರಿ :**

ರಾಗ, ಹರಿ, ತೊಳೆ.

೨) **ಇವುಗಳಿಗೆ ಸಮಾನಾರ್ಥಗಳನ್ನು ಬರೆಯಿರಿ :**

ಧರೆ, ಯೋಗಿ, ವಿಪ್ರ, ತೀರ್ಥ.

ಚಟುವಟಿಕೆ :

ಡಾಂಭಿಕ ಭಕ್ತಿಯನ್ನು ವಿಡಂಬಿಸುವ ಇತರ ಕೀರ್ತನೆ, ವಚನಗಳನ್ನು ಸಂಗ್ರಹಿಸಿ.

ಆಕರ ಗ್ರಂಥ :

ಪುರಂದರ ಸಾಹಿತ್ಯ ದರ್ಶನ – ಸಂಪುಟ–೩, ಸಮಾಜ ದರ್ಶನ
ಸಂಪಾದಕರು : ವಿದ್ಯಾಲಂಕಾರ ಪ್ರೊ. ಸಾ.ಕೃ. ರಾಮಚಂದ್ರರಾವ್.

ಹೆಚ್ಚಿನ ಓದಿಗೆ :

ಸಾವಿರಾರು ಕೀರ್ತನೆಗಳು – ಪ್ರೊ. ಎ.ವಿ. ನಾವಡ, ಪ್ರೊ. ಗಾಯಿತ್ರಿ ನಾವಡ.

ಎರಡು ದಿನದ ಸಂಸಾರ

– ಕನಕದಾಸರು

ಜೀವನ ಅನಿತ್ಯವಾದುದು. ಮೊದಲು ಮಾನವರು ಬದುಕಿನಲ್ಲಿ ಜ್ಞಾನಿಗಳಾಗಬೇಕು. ನಂತರ ಸದಾಚಾರ, ಸನ್ನಡತೆಗಳನ್ನು ಮೈಗೂಡಿಸಿಕೊಂಡು, ಸ್ವಹಿತಕ್ಕಿಂತಲೂ ಹೆಚ್ಚಾಗಿ ಪರಹಿತ ಚಿಂತನೆಯಲ್ಲಿ ನಡೆದು ಪರಮಾತ್ಮನ ಕೃಪೆಗೆ ಪಾತ್ರರಾಗಬೇಕು ಎಂಬ ಧೋರಣೆಯು ಈ ಕೀರ್ತನೆಯಲ್ಲಿ ವ್ಯಕ್ತವಾಗಿದೆ.

ಏನು ಇಲ್ಲದ ಎರಡು ದಿನದ ಸಂಸಾರ
ಜ್ಞಾನದಲ್ಲಿ ದಾನಧರ್ಮವ ಮಾಡಿರಯ್ಯ ॥ ಪ ॥

ಹಸಿದು ಬಂದವರಿಗೆ ಅಶನವೀಯಲು ಬೇಕು
ಶಿಶುವಿಗೆ ಪಾಲ್ಬೆಣ್ಣೆಯನುಣಿಸಬೇಕು
ಹಸನಾದ ಭೂಮಿಯನ್ನು ಧಾರೆಯೆರೆಯಲು ಬೇಕು
ಹುಸಿಯಾಡದಲೆ ಭಾಷೆ ನಡೆಸಲೇ ಬೇಕು. ॥ ೧ ॥

ಕಳ್ಳತನಗಳ ಮಾಡಿ ಒಡಲ ಹೊರೆಯಲು ಬೇಡ
ಕುಳ್ಳರ್ದ ಸಭೆಯೊಳಗೆ ಕುತ್ಸಿತವು ಬೇಡ
ಒಳ್ಳೆಯವ ನಾನೆಂದು ಬಲು ಹೆಮ್ಮೆಪಡಬೇಡ
ಬಾಳ್ವೆ ಸ್ಥಿರವೆಂದು ನೀ ನಂಬಿ ಕೆಡಬೇಡ. ॥ ೨ ॥

ದೊರೆತನವು ಬಂದಾಗ ಕೆಟ್ಟುದ ನುಡಿಯಬೇಡ
ಸಿರಿ ಬಂದ ಕಾಲಕ್ಕೆ ಬಲು ಮೆರೆಯಬೇಡ
ಸಿರಿವಂತ ಶ್ರೀ ಕಾಗಿನೆಲೆಯಾದಿಕೇಶವನ
ಚರಣ ಕಮಲವ ಸೇರಿ ಸುಖಿಯಾಗು ಮನುಜ. ॥ ೩ ॥

❖ ❖ ❖ ❖

ಕವಿ ಪರಿಚಯ : ವರಕವಿಗಳೂ, ಕೀರ್ತನಕಾರರೂ ಎನಿಸಿಕೊಂಡ ಕನಕದಾಸರು (೧೪೮೫ – ೧೫೮೩) ದಾಸ ಸಾಹಿತ್ಯದ ಸುವರ್ಣಯುಗದ ಪ್ರವರ್ತಕರಲ್ಲಿ ಒಬ್ಬರಾಗಿದ್ದರು. ಹಾವೇರಿ ಜಿಲ್ಲೆಯ 'ಬಾಡ' ಕನಕದಾಸರು ಜನ್ಮ ತಳೆದ ಊರು.

ತಂದೆ ಬೀರಪ್ಪ, ತಾಯಿ ಬಚ್ಚಮ್ಮ. ಇವರು ವಿಜಯನಗರ ಸಾಮ್ರಾಜ್ಯದ ಮಾಂಡಲಿಕರಲ್ಲಿ ಒಬ್ಬರಾಗಿದ್ದು, ಅನಂತರ ಶ್ರೀ ವೆಂಕಟೇಶ್ವರನ ಪ್ರೇರಣೆಯ ಮೇರೆಗೆ ಹರಿದಾಸರಾದರು. ಇವರ ಬಾಲ್ಯನಾಮ ತಿಮ್ಮಪ್ಪನಾಯಕ. ತಮಗೆ ದೊರೆತ ನಿಧಿಯಿಂದ ಕಾಗಿನೆಲೆಯ ನರಸಿಂಹ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದರು. ಬಾಡ ಗ್ರಾಮದಲ್ಲಿದ್ದ ಆದಿಕೇಶವ ಮೂರ್ತಿಯನ್ನು ತಂದು ಇಲ್ಲಿ ಪ್ರತಿಷ್ಠಾಪನೆ ಮಾಡಿದರೆಂದು ತಿಳಿದು ಬರುತ್ತದೆ. ಈ ರೀತಿ ತಿಮ್ಮಪ್ಪನಾಯಕರಾಗಿದ್ದವರು ತಮಗೆ ದೊರೆತ ನಿಧಿಯಿಂದ ದೇವಾಲಯವನ್ನು ಕಟ್ಟಿಸಿ, ಜನರ ಮನ್ನಣೆಯನ್ನು ಗಳಿಸಿ, ಕನಕನಾಯಕನೆಂಬ ಹೆಸರನ್ನು ಪಡೆದು ಕಡೆಗೆ ಕನಕದಾಸರಾಗಿ ಮೆರೆದರು. ಇವರು ತಮ್ಮ ರಚನೆಗಳಲ್ಲಿ ಬಾಡದಾದಿ ಕೇಶವ, ಕಾಗಿನೆಲೆಯಾದಿ ಕೇಶವ ಎಂಬ ಅಂಕಿತಗಳನ್ನು ಬಳಸಿರುತ್ತಾರೆ. ಇವರು ಕೀರ್ತನೆಗಳಲ್ಲದೆ *ನಳಚರಿತ್ರೆ, ಹರಿಭಕ್ತಿಸಾರ, ಮೋಹನ ತರಂಗಿಣಿ, ರಾಮಧಾನ್ಯ ಚರಿತೆ* ಮೊದಲಾದ ಕಾವ್ಯಗಳನ್ನು ಬರೆದರು. ಅಲ್ಲಮನ ಬೆಡಗಿನ ವಚನಗಳಂತೆ ಮುಂಡಿಗೆಗಳನ್ನು ಬರೆದು ದಾಸಸಾಹಿತ್ಯಕ್ಕೆ ವಿಶಿಷ್ಟ ಕೊಡುಗೆ ನೀಡಿದ್ದಾರೆ. ಕನಕದಾಸರ ಕೀರ್ತನೆ ಮತ್ತು ಕಾವ್ಯಗಳಲ್ಲಿ ಬಂಡಾಯದ ದನಿ, ಸಾಮಾಜಿಕ ಕಳಕಳಿ, ವಿಡಂಬನಾ ಚಾತುರ್ಯವನ್ನು ಕಾಣಬಹುದು.

ಶಬ್ದಾರ್ಥ : ಅಶನ–ಅನ್ನ ; ಪುಸಿ–ಸುಳ್ಳು ; ಕುತ್ಸಿತ–ಕೆಟ್ಟ; ಒಡಲು–ಶರೀರ ; ಚರಣ–ಪಾದ.

ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ :

೧) 'ಶಿಶುವಿಗೆ ಪಾಲ್ಬೆಣ್ಣೆಯನುಣಿಸಬೇಕು.'
೨) 'ಬಾಳ್ವೆ ಸ್ಥಿರವೆಂದು ನೀ ನಂಬಿ ಕೆಡಬೇಡ.'
೩) 'ಸಿರಿ ಬಂದ ಕಾಲಕ್ಕೆ ಬಲು ಮೆರೆಯಬೇಡ.'

ಒಂದು ವಾಕ್ಯದಲ್ಲಿ ಉತ್ತರಿಸಿ :

೧) ಕನಕದಾಸರು ಏನನ್ನು ಧಾರೆಯೆರೆಯಬೇಕೆನ್ನುತ್ತಾರೆ?
೨) ಒಡಲನ್ನು ಹೇಗೆ ಹೊರೆಯಬಾರದು?
೩) ತುಂಬಿದ ಸಭೆಯೊಳಗೆ ಯಾವುದು ಇರಬಾರದು?
೪) ಸಿರಿ ಬಂದ ಕಾಲಕ್ಕೆ ಹೇಗಿರಬೇಕು?

ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ :

೧) ಅಶನ ಮತ್ತು ಪಾಲ್ಬೆಣ್ಣೆಯನ್ನು ಯಾರಿಗೆ ನೀಡಬೇಕು?
೨) ಸಿರಿ ಮತ್ತು ದೊರೆತನಗಳು ಬಂದಾಗ ಮನುಷ್ಯನು ಹೇಗಿರಬೇಕು?

ವಿವರವಾಗಿ ಉತ್ತರಿಸಿ :

೧) ಕನಕದಾಸರು ಅನಿತ್ಯವಾದ ಬದುಕನ್ನು ಹೇಗೆ ಸಾರ್ಥಕಪಡಿಸಿ ಕೊಳ್ಳಬೇಕೆನ್ನುತ್ತಾರೆ? ವಿವರಿಸಿ.

೨) ಎರಡು ದಿನದ ಸಂಸಾರ – ಈ ಕೀರ್ತನೆಯ ಆಶಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಭಾಷಾಭ್ಯಾಸ :

೧) ಇವುಗಳಿಗೆ ನಾನಾರ್ಥ ಪದಗಳನ್ನು ಬರೆಯಿರಿ :

ಅರಸು, ಕಾಲ, ಆಡು.

೨) ಇವುಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ :

ಜ್ಞಾನ, ಧರ್ಮ, ಸ್ಥಿರ, ಸಿರಿತನ.

೩) ಈ ಪದಗಳನ್ನು ಬಿಡಿಸಿ ಬರೆಯಿರಿ :

ಅಶನವೀಯಲು, ಪಾಲ್ಬೆಣ್ಣೆ, ಧಾರೆಯೆರೆ.

೪) ತತ್ಸಮ – ತದ್ಭವ ಬರೆಯಿರಿ :

ಘುಸಿ, ಹೊರೆ, ಸಿರಿ

ಚಟುವಟಿಕೆ :

ಅನ್ನವನು ಇಕ್ಕುವುದು, ನನ್ನಿಯನು ನುಡಿಯುವುದು..... ಸರ್ವಜ್ಞನ ವಚನವನ್ನು ಗಮನಿಸಿ.

ಆಕರ ಗ್ರಂಥ : ಕನಕದಾಸರ ಕೀರ್ತನೆಗಳು ಮತ್ತು ಮುಂಡಿಗೆಗಳು.
ಸಂಪಾದಕರು : ಪ್ರೊ. ಸುಧಾಕರ, ಪ್ರಕಾಶಕರು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು. ಪ್ರಥಮ ಮುದ್ರಣ : ೧೯೯೯

ಹೆಚ್ಚಿನ ಓದಿಗೆ :

೧) ಹರಿಭಕ್ತಿ ವಾಹಿನಿ – ಜಿ. ವರದರಾಜರಾವ್.

೨) ಜನಪ್ರಿಯ ಕನಕ ಸಂಪುಟ – ಸಂಪಾದಕರು : ಡಾ. ದೇ. ಜವರೇಗೌಡರು.

ಯಾಕೆ ಮರುಳಾದೆ ಹೀಂಗೆ ಎಲೆ ಮನವೆ

– ಹೆಳವನಕಟ್ಟೆ ಗಿರಿಯಮ್ಮ

ವ್ಯಕ್ತಿಯ ಉನ್ನತಿಗೆ ಅಥವಾ ಪತನಕ್ಕೆ ಮನಸ್ಸೇ ಕಾರಣ. ಚಂಚಲವಾದ ಮನಸ್ಸನ್ನು ನಿಯಂತ್ರಣದಲ್ಲಿಡುವುದು ಬಹಳ ಕಷ್ಟ. ಹೆಣ್ಣು, ಹೊನ್ನು, ಮಣ್ಣಿಗೆ ಮನುಷ್ಯನು ಬೇಗನೆ ವಶವಾಗುವನು. ನಶ್ವರದಲ್ಲೇ ನೆಲೆಸಲಿಚ್ಛಿಸುವ ಮನಸ್ಸನ್ನು ಬದಲಾಯಿಸಿ ಶಾಶ್ವತ ಸುಖ ಕೊಡುವ ಭಕ್ತಿಯಲ್ಲಿ ಸ್ಥಿರಗೊಳಿಸುವುದು ಅವಶ್ಯ.

ಯಾಕೆ ಮರುಳಾದೆ ಹೀಂಗೆ ಎಲೆ ಮನವೆ
ಕಾಕು ಬುದ್ಧಿಯ ಬಿಡು ಬಿಡು ಸುಮ್ಮನೆ ॥ ಪ ॥

ಧನದಾಸೆಯನು ಮರಿ ಮನುಮಥನ
ಬಾಣಕಳುಕದಿರು ತೊಳಲದಿರು
ನೆಲದಾಸೆಗೆ ನೀನದರ
ಅನುವರಿತು ಹರಿಯ ಸ್ಮರಿಸು ಮನವೆ ॥ ೧ ॥

ಅನ್ಯರಾಗುಣ ದೋಷಯೆಣಿಸದಲೆ
ನಿನ್ನಿರವ ನೋಡು ಕಂಡ್ಯಾ ಮನವೆ
ಬಂಣಗಾರಿಕೆಯ ಬರಿದೆ ಔದಂಬ್ರ
ಹಣ್ಣಿನಂತೀ ಕಾಯವು ಮನವೆ ॥ ೨ ॥

ತಮ್ಮ ಬುದ್ಧಿ ತಲೆಗೆ ಸುತ್ತಿ ಸಂಸಾರ
ಭ್ರಮೆಗೊಂಡು ಬಳಲಾದಿರೋ
ಕಮಲಪತ್ರಕ್ಕೆ ಒಳಗಿನ ಜಲದಂತೆ
ನೆಲಕೆ ನಿರ್ಲೇಪನಾಗೋ ಮನವೆ ॥ ೩ ॥

ಈ ದೇಹ ಸ್ಥಿರವಲ್ಲವೊ ಕಾಲನಾ
ಬಾಧೆಗೊಳಗಾಗದಿರೋ ಮನವೆ
ಭೇದ ದುರ್ಗುಣವ ತ್ಯಜಿಸು ನೀ
ಗೇರು ಬೀಜದಂದದಿ ತಿಳಿಯೆ ಮನವೆ ॥ ೪ ॥

ಮಾಡು ಹರಿ ಸೇವೆಯನ್ನು ಮನದಣಿಯೆ
ಬೇಡು ಹರಿಭಕ್ತಿಯನ್ನು
ಕೊಡು ಹೆಳವನಕಟ್ಟೆಯ ವೆಂಕಟನ
ಬೇಡಿ ಮುಕ್ತಿಯನು ಪಡೆಯೊ ಮನವೆ || ೫ ||

❖ ❖ ❖ ❖

ಕವಿ ಪರಿಚಯ : ಹರಿದಾಸ ಪರಂಪರೆಯಲ್ಲಿ ಕೃತಿ ರಚನೆ ಮಾಡಿದ ಮಹಿಳೆಯರಲ್ಲಿ ಹೆಳವನಕಟ್ಟೆ ಗಿರಿಯಮ್ಮನವರ (ಕಾಲ ಸುಮಾರು ಕ್ರಿ.ಶ. ೧೮೦೦) ಸ್ಥಾನ ಬಹು ಉನ್ನತವಾದದ್ದು. ಇವರ ಜನ್ಮಸ್ಥಳ ಹಾವೇರಿ ಜಿಲ್ಲೆಯ ರಾಣೇಬೆನ್ನೂರು. ಇವರಿಗೆ ಮಲೆಬೆನ್ನೂರಿನ ತಿಪ್ಪರಸನೊಂದಿಗೆ ವಿವಾಹ ನಡೆಯಿತು. ಬಾಲ್ಯದಿಂದಲೂ ದೇವರಲ್ಲಿ ವಿಶೇಷ ಭಕ್ತಿಯಿದ್ದ ಗಿರಿಯಮ್ಮನವರಿಗೆ ಮಲೆಬೆನ್ನೂರಿಗೆ ಸಮೀಪದ ಹೆಳವನಕಟ್ಟೆಯ ರಂಗನಾಥನೇ ಆರಾಧ್ಯದೈವ. ಗೋಪಾಲದಾಸರ ಪ್ರೇರಣೆಯಿಂದ ಹಲವಾರು ಕೀರ್ತನೆಗಳನ್ನು ರಚಿಸಿದ್ದಾರೆ. *ಚಂದ್ರಹಾಸನ ಕಥೆ, ಉದ್ದಾಲಕನ ಕಥೆ, ಕೃಷ್ಣ ಕೊರವಂಜಿ, ಬ್ರಹ್ಮ ಕೊರವಂಜಿ, ಲವಕುಶರ ಕಾಳಗ* ಮುಂತಾದವುಗಳು ಇವರ ಪ್ರಮುಖ ಕೃತಿಗಳು.

ಶಬ್ದಾರ್ಥ : ಕಾಕು–ಕೊಂಕುಮಾತು, ಭಾವೋದ್ರೇಕದ ಸ್ವರ ; ಮರಿ–ಮರೆತು, ಕೂಸು ; ಮನುಮಥ–ಮನ್ಮಥ–ಕಾಮ; ಅಳುಕು–ಹಿಂಜರಿಕೆ ; ತೊಳಲು–ಕಷ್ಟಪಡು ; ಬಂಣಗಾರಿಕೆ–ತೋರಿಕೆ ; ಔದಂಬ್ರ ಹಣ್ಣು–ಅತ್ತಿ ಹಣ್ಣು ; ಕಾಯ–ದೇಹ ; ಕಾಲ–ಯಮ, ಸಮಯ.

ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ :

೧) 'ಮನುಮಥನ ಬಾಣಕಳುಕದಿರು.'
೨) 'ಔದಂಬ್ರ ಹಣ್ಣಿನಂತೀ ಕಾಯವು.'
೩) 'ಕಮಲಪತ್ರಕ್ಕೆ ಒಳಗಿನ ಜಲದಂತೆ.'
೪) 'ಭೇದ ದುರ್ಗುಣವ ತ್ಯಜಿಸು.'

ಒಂದು ವಾಕ್ಯದಲ್ಲಿ ಉತ್ತರಿಸಿ :

೧) ಕಾಕು ಬುದ್ಧಿಯನ್ನು ಬಿಡುವಂತೆ ಯಾರಿಗೆ ಹೇಳಲಾಗಿದೆ?
೨) ಏನನ್ನು ಮರೆಯಬೇಕು?

೩) ಮನಸ್ಸು ಹೇಗಿರಬೇಕು?

೪) ಯಾವುದು ಸ್ಥಿರವಲ್ಲ?

ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ :

೧) ಮನಸ್ಸಿನ ತೊಳಲಾಟಕ್ಕೆ ಕಾರಣವಾದ ಸಂಗತಿಗಳಾವುವು?

೨) ಸಂಸಾರದಲ್ಲಿ ಮನಸ್ಸು ನೆಲೆಯಾಗಿರಬೇಕಾದ ಬಗೆ ಹೇಗೆ?

೩) ದೇಹದಲ್ಲಿ ಮನಸ್ಸು ಇರಬೇಕಾದ ರೀತಿಯನ್ನು ತಿಳಿಸಿ.

೪) ಮನಸ್ಸು ಮಾಡಬೇಕಾದುದೇನು? ಬೇಡಬೇಕಾದುದು ಏನು?

ವಿವರವಾಗಿ ಉತ್ತರಿಸಿ :

೧) ಗಿರಿಯಮ್ಮ ಚಿತ್ರಿಸಿರುವ ಮನೋವೈಪರೀತ್ಯಗಳನ್ನು ವಿವರಿಸಿ.

೨) ಮಾಗಿದ ಮನಸ್ಸು ಇರಬೇಕಾದ ಬಗೆ ಇಲ್ಲಿ ಹೇಗೆ ವ್ಯಕ್ತವಾಗಿದೆ?

ಭಾಷಾಭ್ಯಾಸ :

೧) ಇವುಗಳಿಗೆ ನಾನಾರ್ಥ ಪದಗಳನ್ನು ಬರೆಯಿರಿ : ಮರಿ, ಕಾಲ, ಪತ್ರ.

೨) ಇವುಗಳಿಗೆ ವಿರುದ್ಧಾರ್ಥ ಪದಗಳನ್ನು ಬರೆಯಿರಿ : ಸ್ಥಿರ, ಗುಣ, ಭೇದ.

೩) ಇವುಗಳಿಗೆ ತತ್ಸಮ-ತದ್ಭವಗಳನ್ನು ಬರೆಯಿರಿ : ಆಸೆ, ಭಕ್ತಿ, ಮುಕ್ತಿ.

ಚಟುವಟಿಕೆ : ೧) ನಿಮ್ಮ ಮನಸ್ಸನ್ನು ಚಂಚಲಗೊಳಿಸುವ ಸಂಗತಿಗಳಾವುವು ಎಂಬುದರ ಕುರಿತು ಪ್ರಬಂಧ ಬರೆಯಿರಿ.

೨) ಮನಸ್ಸನ್ನು ಕುರಿತ ವಚನಕಾರರ ವಚನಗಳನ್ನು ಸಂಗ್ರಹಿಸಿ.

೩) ಹೆಳವನಕಟ್ಟೆ ಗಿರಿಯಮ್ಮನ ಹಾಡುಗಳನ್ನು ಅಭ್ಯಸಿಸಿ.

ಆಕರ ಗ್ರಂಥ :

ಸಮಗ್ರ ದಾಸ ಸಾಹಿತ್ಯ-ಹೆಳವನಕಟ್ಟೆ ಗಿರಿಯಮ್ಮನ ಕೀರ್ತನೆಗಳು.
ಸಂಪಾದಕಿ : ಲೀಲಾವತಿ ಎಸ್. ರಾವ್ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ಜನಪದ ಸಾಹಿತ್ಯ

ಜನಪದ ಸಾಹಿತ್ಯ ಕನ್ನಡ ಸಾಹಿತ್ಯದ ತಾಯಿ ಬೇರು. ಬೇಟಗೇರಿ ಕಋುಷ್ಣಶರ್ಮರು ಹೇಳುವ ಹಾಗೆ ಜನವಾಣಿ ಮಳೆ, ಕವಿವಾಣಿ ಹೊಳೆ ಇದು ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಸಾಗಿ ಬರುವ ಕಂಠಸ್ಥ ಸಾಹಿತ್ಯವಾಗಿದೆ. ಮೌಖಿಕ ಪರಂಪರೆಯ ಜನಪದ ಸಾಹಿತ್ಯ, ಸಾಮೂಹಿಕ ಸೃಷ್ಟಿ. ಪ್ರಸರಣಗುಣ ಜನಪದ ಸಾಹಿತ್ಯದ ಜೀವಾಳ. ಜನಪದ ಸಾಹಿತ್ಯ ಮನುಷ್ಯ ಬೆಳೆದಂತೆಲ್ಲ ಅನಕ್ಷರಸ್ತರ ಪರಿಧಿಯಲ್ಲಿಯೇ ಬೆಳೆದು, ಅವರ ನಾಲಗೆಯ ಮೇಲೆ ಜೀವಂತವಾಗಿ ಉಳಿದು ಬಂದಿರುವ ಸಾಹಿತ್ಯ.

ಜನಪದ ಸಾಹಿತ್ಯದ ವ್ಯಾಪ್ತಿ ಸಾಗರದಷ್ಟು ಆಳ. ಆಕಾಶದಷ್ಟು ಅಗಲವಾದುದು. ಜನಪದರು ಜೀವನದ ಒಲವು-ಚೆಲುವುಗಳಿಗೆ, ಸೋಲು-ಗೆಲುವು, ನೋವು-ನಲಿವುಗಳಿಗೆ ಎದೆಯೊಡ್ಡಿ, ಜೀವನದ ಒಟ್ಟು ಕ್ರಿಯೆಗಳ ಪಾಡನ್ನು ಹಾಡಾಗಿಸಿದ್ದಾರೆ. ಜನಪದ ಸಾಹಿತ್ಯದ ಬಹುಪಾಲನ್ನು ಪದ್ಯ ಪ್ರಕಾರವೇ ಆಕ್ರಮಿಸಿಕೊಂಡಿದೆ.

ಜನಪದ ಪದ್ಯ ಸಾಹಿತ್ಯವನ್ನು ಗಂಡಸರ ಹಾಡು, ಹೆಂಗಸರ ಹಾಡು, ಮಕ್ಕಳ ಹಾಡುಗಳೆಂದು ಗುರುತಿಸಬಹುದು. ಇವುಗಳಲ್ಲಿ ಹಂತಿ, ಗೀಗಿ, ಹೋಳಿ, ಲಾವಣಿ, ಮೋಹರಂ, ಕೋಲಾಟ, ಡೊಳ್ಳಿನ ಹಾಡುಗಳು, ಸೋಬಾನೆ ಪದಗಳು, ಬೀಸುವ, ಕುಟ್ಟುವ ಹಾಡು, ಶಿಶು ಪ್ರಾಸಗಳೆಂದು ವಿಭಜಿಸಬಹುದಾಗಿದೆ. ಆಧುನಿಕ ಯುಗದಲ್ಲಿ ಮೂಲ ಸ್ವರೂಪ ಕಳೆದುಕೊಂಡು ಕಣ್ಮರೆಯಾಗುತ್ತಿರುವ ಜನಪದ ಸಾಹಿತ್ಯ, ಸಂಸ್ಕೃತಿ, ಕಲೆ, ಕ್ರೀಡೆಗಳನ್ನು ಉಳಿಸಿ ದೇಶೀಯತೆಯನ್ನು ಮೆರೆಯುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ.

ತತ್ತ್ವಪದ

ತತ್ತ್ವಪದಗಳೆಂದರೆ ಕೇವಲ ಯಾವುದೇ ಒಂದು ಮತ-ಪಂಥದ ತತ್ತ್ವಗಳನ್ನು ಪ್ರತಿಪಾದಿಸುವ ರಚನೆ ಮಾತ್ರವಲ್ಲ, ಅನುಭಾವದ ನಿಗೂಢತೆಯ ಜೊತೆಗೆ ತಮ್ಮ ಕಾಲದ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ, ರಾಜಕೀಯ ಬದುಕಿನ ಚಿತ್ರಗಳಿಗೆ ಸ್ಪಂದಿಸಿದ ಸಾಹಿತ್ಯಕ ರಚನೆಯಾಗಿವೆ. ಶಿಷ್ಟಸಾಹಿತ್ಯದಂತೆ ಕೇವಲ ಸಮಾಜದ ಮೇಲ್ವರ್ಗದವರ ಓದಿಗೆ ಸೀಮಿತವಾಗದೆ ಭಾರತೀಯ ಸಂಸ್ಕೃತಿಯ ಅತ್ಯಂತ ವಿಶಿಷ್ಟ ಅಭಿವ್ಯಕ್ತಿ ರೂಪವಾದ ಮೌಖಿಕ ಮಾಧ್ಯಮದ ಅನುಪಮ ಸಾಧ್ಯತೆಗಳನ್ನು

ಪರಿಣಾಮಕಾರಿಯಾಗಿ ದುಡಿಸಿಕೊಂಡ ರಚನೆಗಳವು. ತತ್ತ್ವಪದಗಳು ಜನಸಾಮಾನ್ಯರಿಗೆ ಬದುಕಿನ ರೀತಿ-ನೀತಿಗಳನ್ನು ಹೇಳಿಕೊಟ್ಟಿವೆ ; ಆಧ್ಯಾತ್ಮಿಕ ಅರ್ಥವನ್ನು ತಿಳಿಸಿಕೊಟ್ಟಿವೆ ; ನೈತಿಕ ಮಾರ್ಗದರ್ಶನ ನೀಡಿವೆ. ಬುದ್ಧಿಗೆ ತುಷ್ಟಿಯನ್ನು, ಭಾವಕ್ಕೆ ಪುಷ್ಟಿಯನ್ನು ಒದಗಿಸಿವೆ. ಪಾಶ್ಚಾತ್ಯ ಸಂಸ್ಕೃತಿಯ ಮೋಹಕ್ಕೆ ಒಳಗಾಗುವುದಕ್ಕಿಂತ ಪೂರ್ವದಲ್ಲಿ ನಮ್ಮ ದೇಶಿ ಸಂಸ್ಕೃತಿ ಹೇಗಿತ್ತು? ಎಂಬುದನ್ನು ಈ ತತ್ತ್ವಪದಗಳಿಂದ ಗುರುತಿಸಬಹುದು. ಪಶ್ಚಿಮದ ಗಾಳಿಗೆ ಸಮರ್ಥವಾಗಿ ಎದೆಯೊಡ್ಡಿ ನಿಂತು ಅದನ್ನೂ ಜೀರ್ಣಿಸಿಕೊಂಡು ಬೆಳೆವ ಅಚ್ಚರಿಯನ್ನು ತತ್ತ್ವಪದಗಳಲ್ಲಿ ಕಾಣಬಹುದು. ಗೇಯ ರಚನೆಯಾಗಿರುವ ತತ್ತ್ವಪದಗಳು ಇಂದಿಗೂ ನಮ್ಮ ಹಳ್ಳಿಗಳಲ್ಲಿ ಭಜನಾ ಮೇಳಗಳ ಮೂಲಕ ಸಾಮೂಹಿಕವಾಗಿಯೂ, ಏಕತಾರಿ, ತಂಬೂರಿಗಳೊಂದಿಗೆ ಹಾಡುವುದರ ಮೂಲಕ ವೈಯಕ್ತಿಕ ನೆಲೆಯಲ್ಲಿಯೂ ಜೀವಂತವಾಗಿವೆ. ಎಲ್ಲ ಜಾತಿಯ ಜನರಿಗೆ ಅನ್ವಯವಾಗುವ ಈ ತತ್ತ್ವಪದಗಳಿಗೆ ಕನ್ನಡ ಸಾಹಿತ್ಯದಲ್ಲಿ ವಿಶೇಷ ಸ್ಥಾನವಿದೆ.

ಚಿಕ್ಯಾಗ ಚೆಲುವ ಚಂದ್ರಾಮ!

– ಜನಪದ ತ್ರಿಪದಿಗಳು

'ಜನವಾಣಿ ಬೇರು–ಕವಿವಾಣಿ ಹೂವು' ಎಂಬ ಶ್ರೀ ಬಿ.ಎಂ. ಶ್ರೀಕಂಠಯ್ಯನವರ ಉಕ್ತಿಯಂತೆ ಜನಪದ ಸಾಹಿತ್ಯವು ಜನವಾಣಿಯಂತೆ ಬೆಳೆದು ಜನಪದರ ಬದುಕಿನಲ್ಲಿ ಬೆಳಕಾಗಿ ಮೂಡಿಬಂದಿದೆ. ಹೆಣ್ಣಿನ ಬದುಕಿಗೆ ಕೈಗನ್ನಡಿಯಂತೆ ಸೃಷ್ಟಿಯಾದ ಜನಪದ ತ್ರಿಪದಿಗಳಲ್ಲಿ ತಾಯಿಯ ವಾತ್ಸಲ್ಯಭಾವ, ತವರು ಮನೆಯ ವ್ಯಾಮೋಹ, ಪತಿ–ಪತ್ನಿಯರ ಪ್ರೇಮ, ತಾಯಿ–ಮಗುವಿನ ಆತ್ಮೀಯ ಸಂಬಂಧ, ಪ್ರಕೃತಿ ವರ್ಣನೆ, ದೈವಭಕ್ತಿ, ಸಂಸ್ಕೃತಿ–ಸಂಪ್ರದಾಯ ಹೀಗೆ ಏನೆಲ್ಲವನ್ನೂ ಕಾಣಬಹುದು.

ತಂದೀಯ ನೆನೆದರ ತಂಗೂಳ ಬಿಸಿಯಾಯ್ತು
ಗಂಗಾ–ದೇವಿ ನನ್ನ ಹಡೆದವ್ವ । ನೆನೆದರ
ಮಾಸೀದ ತಲೆಯು ಮಡಿಯಾಯ್ತು ॥ ॥ ೧ ॥

ತಾಯವ್ವನ ಬೈಬ್ಯಾಡ ತಿಳಗೇಡಿ ನನ ತಮ್ಮ
ಭಾಳ ದಿನದಾಕಿ ಹಡೆದವ್ವಗ । ಬೈದರ
ಭಾಳ ಮರುಗ್ಯಾಳ ಮನದಾಗ ॥ ॥ ೨ ॥

ಕಲ್ಲು ಕೊಟ್ಟವ್ವಗ ಎಲ್ಲ ಭಾಗ್ಯವು ಇರಲಿ
ಪಲ್ಲಕ್ಕಿ ಇರಲಿ ಪದವಿರಲಿ । ಹಡೆದವ್ವಗ
ನೆಲ್ಲ ಬಾನಿರುವ ಮನಿಯಿರಲಿ ॥ ॥ ೩ ॥

ಕಾಡಿಗ್ಹಚ್ಚಿದ ಕಣ್ಣು ತೀಡಿ ಮಾಡಿದ ಹುಬ್ಬು
ಮಾವೀನ ಹೋಳು ನಿನ ಕಣ್ಣು । ಕಂದಯ್ಯ
ಮಾವ ಬಣ್ಣೀಸಿ ಕರದಾನ ॥ ॥ ೪ ॥

ಕಂದನ ಕಿರಿಕಿರಿ ಇಂದೇನು ಹೇಳಲಿ
ಬಿಂದೀಗಿ ಹಾಲ ಸುರವಂದ । ಚೆಂಚೀಯ
ಚೆಂದ್ರಮನ ತಂದು ನಿಲಿಸೆಂದ ॥ ॥ ೫ ॥

ಅಡಗೀಯ ಮನಿಯಾಗ ಮಡದೀಯ ಸುಳುವಿಲ್ಲ
ಅಡಗಿ ಬಾಯೀಗಿ ರುಚಿಯಿಲ್ಲ । ಹಡೆದವ್ವ
ಮಡದಿ ಹೋಗ್ಯಾಳ ತವರೀಗಿ ॥ ॥ ೬ ॥

ಕಮಲದ ಹೂ ನಿನ್ನ ಕಾಣದೆ ಇರಲಾರೆ
ಮಲ್ಲೀಗೆ ಮಾಯೆ ಬಿಡಲಾರೆ । ಕೇದಿಗೆ
ಗರಿ ನಿನ್ನನಗಲಿ ಇರಲಾರೆ ॥ ॥ ೭ ॥

ಅಂಜೀಕಿ ತೋರಿದರ ಅಂಜುವರ ಮಗಳಲ್ಲ
ಮುಂಜಾನದಾಗ ಹುಲಿಕರಡಿ । ತೋರಿದರ
ಅಂಜಿ ತಿರುಗುವರ ಸೊಸಿಯಲ್ಲ ॥ ॥ ೮ ॥

ತನ್ನಂಗ ನೋಡಿದರ ಭಿನ್ನಿಲ್ಲ ಭೇದಿಲ್ಲ
ತನ್ನಂಗ ತನ್ನ ಮಗಳಂಗ । ನೋಡಿದರ
ಕಣ್ಣ ಮುಂದಾದ ಕೈಲಾಸ ॥ ॥ ೯ ॥

ಹೆಣ್ಣೀನ ಜನುಮಾಕ ಅಣ್ಣಾತಮ್ಮರು ಬೇಕ
ಬೆನ್ನ ಕಟ್ಟುವರು ಸಭೆಯೊಳಗ । ಸಾವಿರ
ಹೊನ್ನ ಕಟ್ಟುವರು ಉಡಿಯೊಳಗ ॥ ॥ ೧೦ ॥

ಗಿಡದಾಗ ಗಿಡ ಚೆಲುವ ಮಾವಿನ ಗಿಡ ಚೆಲುವ
ಹಕ್ಕಿಪಕ್ಯಾsಗ ಗಿಣಿ ಚೆಲುವ । ಮ್ಯಾಲೀನ
ಚಿಕ್ಕ್ಯಾಗ ಚೆಲುವ ಚಂದ್ರಾಮ ॥ ॥ ೧೧ ॥

ಬಂಗಾರ ಬಳಯುಟ್ಟು ಬೈಬ್ಯಾಡ ಬಡವರಿಗೆ
ಬಂಗಾರ ನಿನಗ ಸ್ಥಿರವಲ್ಲ । ಮದ್ಯಾಣ
ಬಿಸಿಲು ಹೊಳ್ಳುವುದು ತಡವಲ್ಲ ॥ ॥ ೧೨ ॥

ಹೆಣ್ಣು ಮಕ್ಕಳ ಬೇಡಿ ಎಣ್ಣಿ ಹೋಳಗೆ ಮಾಡಿ
ಬನ್ನೀಯ ಮರಕ ಎಡಿ ಮಾಡಿ ಬೇಡಿಕೊಂಡೆ
ಸನ್ನೇಸಿ ಶಿವ ತಾ ಕೊಡಲಿಲ್ಲ ॥ ॥ ೧೩ ॥

ಹಟ್ಟಿಲಾರೆಮ್ಮೆ ಕೊಟ್ಟಿಗೇಲಿ ಮೂರೆಮ್ಮೆ
ಕೊಟ್ಟಾರೆ ಕೊಡಿರೊ ನನಗೊಂದ । ಅಣ್ಣಯ್ಯ
ಹುಟ್ಟಲಿಲ್ಲವೆ ನಾನು ಮನೆಯಾಗೆ ॥ ॥ ೧೪ ॥

❖ ❖ ❖ ❖

ತ್ರಿಪದಿ : ಕನ್ನಡ ಸಾಹಿತ್ಯದ ವಿವಿಧ ಛಂದೋ ಪ್ರಕಾರಗಳಲ್ಲಿ ತ್ರಿಪದಿಗೆ ಅಗ್ರಸ್ಥಾನವಿದೆ. ಸುಮಾರು ಕ್ರಿ.ಶ. ೭೦೦ರಲ್ಲಿದ್ದ ಬಾದಾಮಿ ಶಾಸನದಲ್ಲಿ ಕನ್ನಡದ ಮೊಟ್ಟಮೊದಲ ತ್ರಿಪದಿ ನಮಗೆ ಲಭ್ಯವಾಗಿದೆ. ನಾಗವರ್ಮನು ತನ್ನ *'ಛಂದೋಂಬುಧಿ'*ಯಲ್ಲಿ ತ್ರಿಪದಿಯ ಲಕ್ಷಣವನ್ನು ಹೇಳಿದ್ದಾನೆ. ತ್ರಿಪದಿಯು ಮೂರು ಪಾದಗಳನ್ನು ಒಳಗೊಂಡಿದ್ದು ಒಟ್ಟು ೧೧ ಗಣಗಳಿಂದ ಕೂಡಿರುತ್ತದೆ. ಅಂಶಗಣ ಹಾಗೂ ಮಾತ್ರಾಗಣಗಳೆರಡರಲ್ಲೂ ತ್ರಿಪದಿಯನ್ನು ಕಾಣಬಹುದು. ಇದು ಅಂಶಗಣವೇ ಪ್ರಧಾನ ಛಂದಸ್ಸಿರುವ ಹಾಡುಗಬ್ಬವಾಗಿದ್ದು, ಹಾಡುವಾಗ ಮೊದಲ ಎರಡು ಪಾದಗಳಲ್ಲಿಯ ಏಳು ಗಣಗಳವರೆಗೆ ಒಂದು ಘಟಕವನ್ನಾಗಿ ಹಾಡಿ, ಅನಂತರ ಎಂಟನೆಯ ಗಣದೊಂದಿಗೆ ಅದರ ಹಿಂದಿನ ಮೂರು ಗಣಗಳನ್ನು ಸೇರಿಸಿಕೊಂಡು ಪುನರಾವೃತ್ತಿ ಸಮೇತ ನಾಲ್ಕನೆಯ ಪಾದವನ್ನು ಹಾಡಬೇಕು. ಆದಿಪ್ರಾಸವನ್ನು ಒಳಗೊಂಡಿದ್ದು ಮೊದಲ ಪಾದದಲ್ಲಿ ಒಳಪ್ರಾಸವಿರುತ್ತದೆ. ತ್ರಿಪದಿಯನ್ನು ತ್ರಿವಿಧಿ, ತಿವಿಧಿ, ತಿವದಿ ಎಂಬ ಹೆಸರುಗಳಿಂದಲೂ ಕರೆಯುವುದುಂಟು.

ಜನಪದ ಸಾಹಿತ್ಯದಲ್ಲಿ ತ್ರಿಪದಿಗಳ ಭಾವಗಳು ರಮ್ಯಾಭಿವ್ಯಕ್ತಿಗೆ ಅನುಗುಣವಾಗಿ ಹೊರಹೊಮ್ಮಿವೆ. ಅಪಾರವಾದ ಲೋಕಾನುಭವ ಹೊಂದಿದ ಜನಪದರು ತಮ್ಮ ದುಡಿಮೆಯ ಸಮಯದಲ್ಲಾಗಲಿ, ಶುಭಕಾರ್ಯಗಳಲ್ಲಾಗಲಿ, ಜಾತ್ರೆ–ಉತ್ಸವಗಳಲ್ಲಾಗಲಿ ಸಾಹಿತ್ಯಕ ಅರಿವಿಲ್ಲದೇ ಮನೋರಂಜನೆಗಾಗಿ ರಚಿಸಿದ ಹಾಡು, ಕುಣಿತ, ಆಚರಣೆಗಳೇ ಜನಪದ ಸಾಹಿತ್ಯವಾಗಿ ಹೊರಹೊಮ್ಮಿವೆ. ಹೀಗೆ ಹುಟ್ಟಿಕೊಂಡ ಜನಪದ ಗೀತೆ ಪ್ರಕಾರಗಳು ಜನಪದರ ಬದುಕಿಗೆ ಕೈಗನ್ನಡಿಯಂತಿವೆ. ಹೆಣ್ಣಿನ ಬದುಕಿನ ಮೌಲ್ಯಗಳನ್ನು ಬಿಂಬಿಸುವಲ್ಲಿ ಜನಪದ ತ್ರಿಪದಿಗಳು ಅಗ್ರಸ್ಥಾನವನ್ನು ಪಡೆದಿವೆ.

ಶಬ್ದಾರ್ಥ : ತಂಗೂಳ–ತಂಪಾದ+ಕೂಳ್, ತಂಪಾದ ಆಹಾರ ; ಮಾಸು–ಮಲಿನವಾಗು; ಅಂಗ–ದೇಹ ; ಬೆನ್ನಕಟ್ಟು–ಬೆಂಬಲವಾಗು, ನೆರವಿಗೆ ನಿಲ್ಲು ; ಸುಳವು–ಸುಳಿದಾಟ, ಸೂಚನೆ; ಹೊಳ್ಳು–ಹೊರಳು; ಎಡಿ–ನೈವೇದ್ಯ

ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ :

೧) 'ನೆಲ್ಲ ಬಾನಿರುವ ಮನಿಯಿರಲಿ.'

೨) 'ಮಲ್ಲೀಗೆ ಮಾಯೆ ಬಿಡಲಾರೆ.'

೩) 'ಅಂಜಿ ತಿರುಗುವರ ಸೊಸೆಯಲ್ಲ.'

೪) 'ಬಂಗಾರ ನಿನಗೆ ಸ್ಥಿರವಲ್ಲ.'

೫) 'ಬೆನ್ನು ಕಟ್ಟುವರು ಸಭೆಯೊಳಗ.'

೬) 'ಹುಟ್ಟಲಿಲ್ಲವೆ ನಾನು ಮನೆಯಾಗೆ.'

ಒಂದು ವಾಕ್ಯದಲ್ಲಿ ಉತ್ತರಿಸಿ :

೧) ಯಾರ ನೆನಪಿನಿಂದ ತಂಗಳು ಬಿಸಿಯಾಗುತ್ತದೆ?

೨) ಹಡೆದವ್ವ ಮರುಗುವುದು ಯಾವಾಗ?

೩) ತಾಯಿಯು ಮಗುವಿನ ಕಣ್ಣುಗಳನ್ನು ಯಾವುದಕ್ಕೆ ಹೋಲಿಸಿದ್ದಾಳೆ?

೪) ಹೆಣ್ಣಿನ ಜನ್ಮಕ್ಕೆ ಯಾರು ಇರಬೇಕೆಂದು ಗರತಿ ಬಯಸುತ್ತಾಳೆ?

೫) ಬಿಂದಿಗೆ ಹಾಲನ್ನು ಬಯಸಿದವರಾರು?

೬) ಯಾವುದು ಸ್ಥಿರವಲ್ಲವೆಂದು ಗರತಿ ಹೇಳಿದ್ದಾಳೆ?

ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ :

೧) ಅಕ್ಕ ತನ್ನ ತಮ್ಮನಿಗೆ ಹೇಳಿದ ತಿಳಿವಳಿಕೆ ಯಾವುದು?

೨) ತಾಯಿಯು ತನ್ನ ಮಗುವಿನ ಅಂದವನ್ನು ಹೇಗೆ ಬಣ್ಣಿಸಿದ್ದಾಳೆ?

೩) ಮಡದಿ ತವರಿಗೆ ಹೋದಾಗ ಪತಿಯ ಭಾವವೇನು?

೪) ಕಣ್ಣ ಮುಂದೆ ಕೈಲಾಸ ಕಾಣುವುದು ಯಾವಾಗ?

೫) ಗರತಿಯು ಬಣ್ಣಿಸಿರುವ ಪ್ರಕೃತಿಯ ಚೆಲುವು ಎಂತಹುದು?

೬) ಅಣ್ಣ–ತಮ್ಮಂದಿರ ಬಗ್ಗೆ ಗರತಿಯು ಹೊಂದಿದ ಉದಾತ್ತ ನಿಲುವೇನು?

೭) ಜನಪದರು ಹೆಣ್ಣುಮಗುವಿನ ಜನನಕ್ಕಾಗಿ ಹಂಬಲಿಸುವ ಬಗೆ ಹೇಗೆ?

೮) ತಂಗಿಯು ತವರು ಮನೆಯ ಹಕ್ಕೊತ್ತಾಯವನ್ನು ಹೇಗೆ ಸ್ಥಾಪಿಸುತ್ತಾಳೆ?

ವಿವರವಾಗಿ ಉತ್ತರಿಸಿ :

೧) ಜನಪದ ತ್ರಿಪದಿಯಲ್ಲಿ ತಾಯಿ–ಮಗುವಿನ ವಾತ್ಸಲ್ಯಭಾವ ಹೇಗೆ ಮೂಡಿಬಂದಿದೆ? ವಿವರಿಸಿ.

೨) ಗರತಿಯ ಹಾಡಿನಲ್ಲಿ ಮೂಡಿ ಬಂದಿರುವ ಕೌಟುಂಬಿಕ ಚಿತ್ರಣವನ್ನು ಸಂಗ್ರಹಿಸಿ ಬರೆಯಿರಿ.

ಭಾಷಾಭ್ಯಾಸ :

೧) ಈ ಶಬ್ದಗಳಿಗೆ ಗ್ರಾಂಥಿಕ ರೂಪಗಳನ್ನು ಬರೆಯಿರಿ :

ಭಾಳ, ಮರುಗ್ಯಾಳ, ಮನದಾಗ, ಚೆಂಜೀಯ, ಹೋಗ್ಯಾಳ, ಜನುಮ, ಚಿಕ್ಕ್ಯಾಗ, ಹೊಳ್ಳು, ಸನ್ನೇಸಿ.

೨) ಈ ಶಬ್ದಗಳಿಗೆ ಸಮಾನಾರ್ಥ ಪದಗಳನ್ನು ಬರೆಯಿರಿ :

ತಲೆ, ಚಂದ್ರ, ಹೊನ್ನು, ಮಡಿ, ಕಮಲ, ಮಡದಿ, ತಾಯಿ, ಕಣ್ಣು.

೩) ಈ ಶಬ್ದಗಳಿಗೆ ತತ್ಸಮ-ತದ್ಭವಗಳನ್ನು ಬರೆಯಿರಿ :

ಜನ್ಮ, ಚಂದ್ರ, ಕೇತಕಿ, ಪಕ್ಷಿ, ಮಲ್ಲಿಕಾ, ವರ್ಣ, ಸ್ಥಿರ.

೪) ಈ ಪದಗಳನ್ನು ಬಿಡಿಸಿ ಬರೆಯಿರಿ :

ಮಡಿಯಾಯ್ತು, ಹಡೆದವ್ವ, ನಿನ್ನನಗಲಿ, ಸಭೆಯೊಳಗೆ, ಬಳಯುಟ್ಟು, ಕಾಡಿಗ್ಗಚ್ಚಿದ.

ಚಟುವಟಿಕೆ :

೧) ನಿಮ್ಮ ಪ್ರದೇಶದ ಜನಪದ ತ್ರಿಪದಿಗಳನ್ನು ಸಂಗ್ರಹಿಸಿ.

೨) ಜನಪದ ತ್ರಿಪದಿಗಳನ್ನು ಪ್ರಾಸಬದ್ಧವಾಗಿ ಹಾಡುವುದನ್ನು ರೂಢಿಸಿಕೊಳ್ಳಿ.

ಆಕರ ಗ್ರಂಥ :

ಗರತಿಯ ಹಾಡು – ಸಂಪಾದಕರು– ಹಲಸಂಗಿಯ ಚನ್ನಮಲ್ಲಪ್ಪ, ಲಿಂಗಪ್ಪ, ರೇವಪ್ಪ ಮೊದಲಾದ ಗೆಳೆಯರು.
(ಬಿ.ಎಂ.ಶ್ರೀ., ಬೇಂದ್ರೆ, ಮಾಸ್ತಿ, ಸಿಂಪಿ ಲಿಂಗಣ್ಣ)

ಹೆಚ್ಚಿನ ಓದು :

೧) ಜನಪದ ತ್ರಿಪದಿ – ಸಂಪಾದಕರು : ಶಾಂತಾದೇವಿ ಇಮ್ರಾಪೂರ

೨) ಉತ್ತರ ಕರ್ನಾಟಕದ ಜಾನಪದ ಗೀತೆಗಳು
ಸಂಪಾದಕರು : ಡಾ. ಬಿ.ಎಸ್. ಗದ್ದಿಮಠರವರ ಸಂಗ್ರಹ.

ಬಣ್ಣದ ಗುಬ್ಬ್ಯಾರು ಮಳಿರಾಜ

– ಜನಪದ

ಮಳೆಯೇ ಇಳೆಗೆ ಜೀವ. ರೈತರು ಮಳೆಯನ್ನೆ ಆಶ್ರಯಿಸಿ ಬದುಕುತ್ತಾರೆ. ಮಳೆ ಸಕಾಲಕ್ಕೆ ಬರದೆ ಹೋದರೆ, ಒಕ್ಕುವ ಒಕ್ಕಲಿಗರ ಬಿಕ್ಕಲು ಆರಂಭವಾಗುತ್ತದೆ. 'ಉತ್ತರಿ ಹತ್ತಿ ಬಿತ್ತರಿ', 'ಆದ್ರ ಹಸ್ತ, ಆಗದಿದ್ರ ರೈತ ಆದ ಅಸ್ತವ್ಯಸ್ತ' ಎಂಬ ಮಾತುಗಳು ಮಳೆ–ಬೆಳೆ–ರೈತನ ಸಂಬಂಧವನ್ನು ಸೂಚಿಸುತ್ತವೆ. ಸ್ವಾತಿ ಮಳೆ ಒಂದು ಹನಿಯೂ ಆಗದೇ ಇರುವ ಸಂದರ್ಭದಲ್ಲಿ ಬರ ಬಿದ್ದಾಗ ನಂತರ ಅತಿವೃಷ್ಟಿಯಾದಾಗ ಬದುಕು ಎಂಥಹ ದುರಂತಕ್ಕೀಡಾಗುತ್ತದೆ ಎಂಬ ಚಿತ್ರಣ ಈ ಜನಪದ ಹಾಡಿನಲ್ಲಿದೆ.

ಬಣ್ಣದ ಗುಬ್ಬ್ಯಾರು ಮಳಿರಾಜಾ। ಅವರು।
ಮಣ್ಣಾಗಿ ಹೋದರು ಮಳಿರಾಜಾ॥
ಬಣ್ಣದ ಗುಬ್ಬ್ಯಾರು ಮಣ್ಣಾಗಿ ಹೋದರು
ಅನ್ಯದ ದಿನ ಬಂದು ಮಳಿರಾಜಾ ॥ ೧ ॥

ಒಕ್ಕಲಗೇರ್‍ಯಾಗ ಮಳಿರಾಜಾ। ಅವರು।
ಮಕ್ಕಳ ಮಾರ್‍ಯಾರ ಮಳಿರಾಜಾ॥
ಮಕ್ಕಳ ಮಾರಿs ರೊಕ್ಕಾ ಹಿಡಕೊಂಡು
ಭತ್ತಂತs ತಿರಗ್ಯಾರ ಮಳಿರಾಜಾ ॥ ೨ ॥

ಸೊಲಗಿ ಹಿಟ್ಟಿನ್ಯಾಗ ಮಳಿರಾಜಾ। ಅವರು।
ಸುಣ್ಣನ್ನು ಕೂಡಿಸ್ಯಾರ ಮಳಿರಾಜಾ॥
ಹಸ್ತು ಬಂದಕೇರಿ ಗಪಗಪ ತಿಂದು
ಒದ್ದಾಡಿ ಸತ್ತಾರ ಮಳಿರಾಜಾ ॥ ೩ ॥

ಗಿದ್ದನ ಅಕ್ಕ್ಯಾಗ ಮಳಿರಾಜಾ। ಅವರು।
ಅಷುವನ್ನು ಕೂಡಿಸ್ಯಾರ ಮಳಿರಾಜಾ॥
ಸಣ್ಣ ಕೂಸಿಗಿ ಮನ್ನಿಸಿ ಉಣಿಸ್ಯಾರ
ಕಣ್ಣನ್ನೆ ಮುಚ್ಚ್ಯಾವ ಮಳಿರಾಜಾ ॥ ೪ ॥

ಗಂಡುಳ್ಳ ಬಾಲ್ಯಾರು ಮಳಿರಾಜಾ। ಅವರು
ಭಿಕ್ಷಾಕ ಹೊರಟಾರ ಮಳಿರಾಜಾ॥
ಗಂಡುಳ್ಳ ಬಾಲ್ಯಾರು ಭಿಕ್ಷಾಕ ಹೋದರು
ಅನ್ಯದ ದಿನ ಬಂದು ಮಳಿರಾಜಾ ॥ ೫ ॥

ಸ್ವಾತಿsಯ ಮಳಿ ಬಂದು ಮಳಿರಾಜಾ। ಸುತ್ತ।
ದೇಶಾಕ ಆಗ್ಯಾದ ಮಳಿರಾಜಾ॥
ಹಳ್ಳಕೊಳ್ಳ ಹೆಣ ಹರಿದಾಡಿ ಹೋದವು
ಯಾವಾಗ ಬಂದೆಪ್ಪಾ ಮಳಿರಾಜಾ. ॥ ೬ ॥

❖ ❖ ❖ ❖

ಕಾವ್ಯ ಪರಿಚಯ : ಇದೊಂದು ಜನಪದ ಗೀತೆ. ಜನಪದ ಹಾಡುಗಳು ಏಕ ವ್ಯಕ್ತಿ ರಚನೆಗಳಲ್ಲ. ಇವು ಸಾಮೂಹಿಕ ಸೃಷ್ಟಿ. ಇವು ವ್ಯಷ್ಟಿಯಲ್ಲಿ ಆರಂಭವಾಗಿ ಸಮಷ್ಠಿಯಲ್ಲಿ ಪೂರ್ಣಗೊಳ್ಳುತ್ತವೆ. ಇದು ಕಂಠಸ್ತ ಪರಂಪರೆಯ ಸಾಹಿತ್ಯ. ಜನಪದ ಪದ್ಯ ಸಾಹಿತ್ಯದಲ್ಲಿ ದಟ್ಟವಾದ ಜೀವನಾನುಭವವಿದೆ. ಹಸನಾದ ಬಾಳಿಗೆ ಬೇಕಾದ ಅನ್ನವಿದೆ ; ಜೊನ್ನವಿದೆ. ಸಂಪ್ರದಾಯ, ಆಚರಣೆ ಹಾಗೂ ಬದುಕಿನ ಪಾಡು ಇಲ್ಲಿ ಹಾಡಾಗಿ ಹರಳುಗಟ್ಟಿದೆ.

ಶಬ್ದಾರ್ಥ : ಬಣ್ಣದ ಗುಬ್ಬ್ಯಾರು–ಘೋಷಾ ಪದ್ಧತಿಯ ಹೆಣ್ಣು ಮಕ್ಕಳು, ಅಂಗಿಯ ಮೇಲೆ ಬಣ್ಣದ ಗುಂಡಿಯಿರುವವರು, ಅನುಕೂಲಸ್ಥರು ; ಸೊಲಗಿ–ಅಳತೆಯ ಮಾಪನ; ಗಿದ್ದನ–ಸೊಲಗಿಯಲ್ಲಿ ಕಾಲು ಭಾಗ ; ಅಪು–ಅಫೀಮು, ಮತ್ತೇರುವ ವಸ್ತು ; ಬಂದಕೇರಿ –ಬಂದ ನಂತರ.

ಸೂಚನೆ : 'ಅವರು' ಎನ್ನುವುದು ಮೂರನೆಯ ಪದ್ಯದಲ್ಲಿ ವರ್ತಕರನ್ನೂ, ನಾಲ್ಕನೆಯ ಪದ್ಯದಲ್ಲಿ ತಂದೆ–ತಾಯಿಗಳನ್ನು ಸೂಚಿಸುತ್ತದೆ.

ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ :

೧) 'ಮಕ್ಕಳ ಮಾರ್‍ಯಾರ ಮಳಿರಾಜಾ.'
೨) 'ಸುಣ್ಣನ್ನು ಕೂಡಿಸ್ಯಾರ ಮಳಿರಾಜಾ.'
೩) 'ಸಣ್ಣ ಕೂಸಿಗಿ ಮನ್ನಿಸಿ ಉಣಿಸ್ಯಾರ.'
೪) 'ಗಂಡುಳ್ಳ ಬಾಲ್ಯಾರು ಭಿಕ್ಷಾಕ ಹೋದರು.'

ಒಂದು ವಾಕ್ಯದಲ್ಲಿ ಉತ್ತರಿಸಿ :

೧) ಒಕ್ಕಲಗೇರಿಯಲ್ಲಿ ಜನರು ಏನು ಮಾಡಿದರು?
೨) ಸೊಲಗಿ ಹಿಟ್ಟಿನಲ್ಲಿ ಏನನ್ನು ಕೂಡಿಸಿ ತಿನಿಸುತ್ತಾರೆ?

೩) ಭಿಕ್ಷಕ್ಕೆ ಹೋದವರು ಯಾರು?
೪) ಮಳೆ ಬಾರದಿದ್ದಾಗ ವರ್ತಕರು ಏನು ಮಾಡಿದರು?

ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ :

೧) ಹಳ್ಳ-ಕೊಳ್ಳದಲ್ಲಿ ಹೆಣಗಳು ಯಾವಾಗ ಹರಿದಾಡಿ ಹೋದವು?
೨) ಸಣ್ಣ ಮಕ್ಕಳು ಕಣ್ಣನ್ನು ಮುಚ್ಚಲು ಕಾರಣವೇನು?
೩) ಬಣ್ಣದ ಗುಬ್ಬ್ಯಾರು ಮಣ್ಣಾಗಿ ಹೋಗಲು ಕಾರಣವೇನು?

ವಿವರವಾಗಿ ಉತ್ತರಿಸಿ :

೧) ಒಕ್ಕಲಿಗರು ಎದುರಿಸಿದ ಬರಗಾಲದ ಭೀಕರ ಪರಿಸ್ಥಿತಿಯನ್ನು ವಿವರಿಸಿ.
೨) 'ಬಣ್ಣದ ಗುಬ್ಬ್ಯಾರು ಮಳರಾಜಾ' ಹಾಡಿನಲ್ಲಿ ಬರಗಾಲದ ಭೀಕರತೆಯ ವಿವಿಧ ಮುಖಗಳು ಹೇಗೆ ಮೂಡಿ ಬಂದಿವೆ? ವಿವರಿಸಿ.

ಭಾಷಾಭ್ಯಾಸ :

೧) ಈ ಶಬ್ದಗಳಿಗೆ ಗ್ರಾಂಥಿಕ ರೂಪಗಳನ್ನು ಬರೆಯಿರಿ :

ಅನ್ಯದ, ಮಾರ್‍ಯಾರ, ಹಿಟ್ಟಿನ್ಯಾಗ, ಕೂಡಿಸ್ಯಾರ, ಮುಚ್ಚ್ಯಾವ, ಭಿಕ್ಷಾಕ, ಉಣಿಸ್ಯಾರ.

೨) ಕೆಳಗಿನ ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ :

ಮಣ್ಣಾಗಿ ಹೋಗು, ಕಣ್ಣು ಮುಚ್ಚು.

೩) ಈ ಶಬ್ದಗಳ ತತ್ಸಮ-ತದ್ಭವಗಳನ್ನು ಬರೆಯಿರಿ :

ಬಣ್ಣ, ರಾಜ, ಭಿಕ್ಷೆ.

ಚಟುವಟಿಕೆ :

ನೀವು ಕಂಡ ಬರಗಾಲದ ರೈತನ ಬವಣೆಯನ್ನು ಕಥಾ ರೂಪದಲ್ಲಿ ಚಿತ್ರಿಸಿ.

ಆಕರ ಗ್ರಂಥ :

ಮಲ್ಲಿಗೆ ದಂಡೆ – ಸಂ : ಕಾಪಸೆ ರೇವಪ್ಪ ; ಪ್ರ : ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು. ಮುದ್ರಣ ವರ್ಷ : ೧೯೯೪.

ಹೆಚ್ಚಿನ ಓದು :

೧) ಬರಕ್ಕೆ ಸಂಬಂಧಿಸಿದ ಜನಪದ ಗೀತೆಗಳು

೨) ಯು.ಆರ್. ಅನಂತ ಮೂರ್ತಿಯವರ ಸಣ್ಣಕಥೆ 'ಬರ'

೩) ಬರದ ಹಾಡು – ಜನಪದ ದುಃಖಾಂತ ಕಥನ ಗೀತೆ. (ಮಲ್ಲಿಗೆ ದಂಡೆ)

ಶ್ರೀಗುರು ವಚನೋಪದೇಶ

– ನಿಜಗುಣ ಶಿವಯೋಗಿಗಳು

> 'ಗುರುವಿಗಿಂತ ಅಧಿಕವಾದುದು ಯಾವುದು ಇಲ್ಲ', 'ಹರ ಮುನಿದರೂ ಗುರು ಕಾಯ್ವನು' ಎಂಬ ಉಕ್ತಿಗಳು ಗುರುವಿನ ಮಹಿಮೆಯನ್ನು ಸಾರುತ್ತವೆ. ಏನನ್ನು ಮಾಡಬೇಕು ಹಾಗೂ ಏನನ್ನು ಮಾಡಬಾರದು ಎಂಬುದನ್ನು ತಿಳಿಸುವುದರ ಮೂಲಕ ಗುರು ಪರಿಪೂರ್ಣ ವ್ಯಕ್ತಿತ್ವ ನಿರ್ಮಾಣಕ್ಕೆ ಕಾರಣನಾಗುತ್ತಾನೆ. ಕೆಟ್ಟ ಕೆಲಸ, ಪರನಿಂದೆ, ಸ್ವೇಚ್ಛಾಚಾರ, ಕಾಮ, ಮೋಹ, ಮದ, ಹುಸಿ ಇವುಗಳಿಂದ ದೂರವಿದ್ದು, ಪುಣ್ಯಕಾರ್ಯ, ದೈವಭಕ್ತಿ, ಸಜ್ಜನ ಸಹವಾಸ, ಜೀವಕಾರುಣ್ಯ, ಅನಾಥ ರಕ್ಷಣೆ, ಆತ್ಮಸ್ಥೈರ್ಯ, ಧರ್ಮನಿಷ್ಠೆಗಳನ್ನು ಅಳವಡಿಸಿ ಕೊಳ್ಳಲು ಗುರು ಮಾರ್ಗದರ್ಶನ ತೋರಿ ಅನುಗ್ರಹಿಸುತ್ತಾನೆ. ಈ ಎಲ್ಲಕ್ಕೆ ಕಳಶಪ್ರಾಯವಾಗಿ"ಆರು ನಾನೆಂದು ವಿಚಾರಿಸು" ಎಂದು ಹೇಳುವ ಮೂಲಕ ಆತ್ಮಶೋಧದ ಮಾರ್ಗ ತೋರಿಸುತ್ತಾನೆ. ನರ, ಹರನಾಗುವ ದಿವ್ಯಪಥ ಈ ತತ್ತ್ವಪದದಲ್ಲಿ ನಿಹಿತವಾಗಿದೆ.

ಶ್ರೀ ಗುರುವಚನೋಪದೇಶವನಾಲಿಸಿ
ದಾಗಳಹುದು ನರರಿಗೆ ಮುಕುತಿ. ॥ ಪ ॥

ದುರಿತ ಕರ್ಮವನೊಲ್ಲದಿರು ಪುಣ್ಯವನೆ ಮಾಡು
ಹರನಡಿವಿಡಿ ಶಾಂತರೊಡನಾಡು
ಕರುಣವಿರಲಿ ಜೀವರೊಳು ನೀತಿವಿದನಾಗು
ಪೊರೆ ಪೊರ್ದಿದರನೆಂದು ಬೆಸಸುವ. ॥ ೧ ॥

ನಿಂದಿಸಿ ನುಡಿಯದಿರಾರನು ಮನಸಿಗೆ
ಬಂದಂತೆ ನಡೆಯದಿರಿಹದಲ್ಲಿ
ಕುಂದುವಡೆಯದಿರು ಕಾಮಾದಿಗಳ ಜಯಿ
ಸೆಂದು ಕೈವಿಡಿದನುಗ್ರಹಿಸುವ. ॥ ೨ ॥

ಭವಮಾಲೆಗಲಸು ಪುಸಿಯದಿರೆಡರು ಬಂದು
ಕವಿಯಲಂಜದಿರು ಸಂಪದದೊಳು
ತವೆ ಮದವಳದಿರು ತತ್ತ್ವಸಂತತಿಯನು
ವಿವರಿಸಿ ನೋಡೆಂದು ತಿಳುಪುವ. ॥ ೩ ॥

ಬಳಸದಿರದ್ವೈತವನು ಬಾಹ್ಯದೊಳು ನಿ
ನ್ನೊಳಗೇಕೋ ಭಾವನೆಯೊಡಗೂಡು

ತಿಳಿದು ಸಮಯನಿಷ್ಠೆಗಲಿ ವೇದವಿಧಭಕ್ತಿ
ಗಳನಗಲದಿರೆಂದುಸುರುವ. || ೪ ||

ಆರು ನಾನೆಂದು ವಿಚಾರಿಸು ವಿಷಮ ಸಂ
ಸಾರವಿದನು ಕನಸೆಂದರಿ
ಮಾರಮರ್ದನ ಶಂಭುಲಿಂಗವನೊಲಿಸಿ ಗಂ
ಭೀರ ಸುಖದೊಳಿರೆಂದರುಪುವ. || ೫ ||

❖ ❖ ❖ ❖

ಕವಿಪರಿಚಯ : ನಿಜಗುಣ ಶಿವಯೋಗಿ (ಕ್ರಿ.ಶ. ಸುಮಾರು ೧೫೦೦). ನಿಜಗುಣ ಶಿವಯೋಗಿ ಇಂದಿನ ಚಾಮರಾಜನಗರ ಜಿಲ್ಲೆಯ ಕೊಳ್ಳೆಗಾಲ ತಾಲ್ಲೂಕಿನ ಚೆಲುಕವಾಡಿಯ ಸುತ್ತಮುತ್ತಲಿನ ಪ್ರಾಂತ್ಯದ ಅರಸರಾಗಿದ್ದರೆಂದೂ, ಸಂಸಾರದಲ್ಲಿ ವಿರಕ್ತಿ ತಾಳಿ, ಆಧ್ಯಾತ್ಮಿಕ ಸೆಳೆತಕ್ಕೊಳಗಾಗಿ ವಿರಾಗಿಗಳಾದರೆಂದೂ ಶಂಭುಲಿಂಗನ ಬೆಟ್ಟದಲ್ಲಿ ತಪೋಜೀವನ ನಡೆಸಿದರೆಂದೂ ಪ್ರತೀತಿಯಿದೆ. *ಅನುಭವಸಾರ, ಕೈವಲ್ಯ ಪದ್ಧತಿ, ಪಾರಮರ್ಥ ಗೀತೆ, ಪರಮಾರ್ಥ ಪ್ರಕಾಶಿಕೆ, ವಿವೇಕ-ಚಿಂತಾಮಣಿ* ಹಾಗೂ *ಪರಮಾನುಭವ ಬೋಧೆ* ಇವರ ಪ್ರಮುಖ ಕೃತಿಗಳಾಗಿದ್ದು *'ಷಟ್‌ಶಾಸ್ತ್ರ'*ಗಳೆಂದು ಪ್ರಸಿದ್ಧಿಯನ್ನು ಪಡೆದಿವೆ. *ವಿವೇಕ ಚಿಂತಾಮಣಿ* ಕೃತಿಯು ಸಂಸ್ಕೃತ ಹಾಗೂ ಮರಾಠಿ ಭಾಷೆಗೆ ಅನುವಾದಗೊಂಡ ಕೃತಿಯಾಗಿದೆ. 'ಶಂಭುಲಿಂಗ' ಇವರ ಅಂಕಿತನಾಮ.

ಶಬ್ದಾರ್ಥ : ದುರಿತ-ಪಾಪ ; ಕರ್ಮ-ಕೆಲಸ ; ಪೊರೆ-ರಕ್ಷಿಸು ; ಪೊರೆ ಪೊರ್ದಿದರನು- ಆಶ್ರಯ ಕೇಳಿ ಬಂದವರನ್ನು ರಕ್ಷಿಸು ; ಬೆಸಸು-ತಿಳಿಸು ; ಇಹ-ಈ ಲೋಕ ; ಕುಂದುವಡೆ-ಕಳಂಕಿತನಾಗು ; ಭವ-ಹುಟ್ಟು ; ಎಡರು-ಕಷ್ಟ ; ತವೆ-ಹೆಚ್ಚಾಗಿ, ಚೆನ್ನಾಗಿ; ಅದ್ವೈತ-ಎರಡು ಅಲ್ಲದ್ದು, ನಾನು, ಪರಬ್ರಹ್ಮ ಬೇರೆಯಲ್ಲ ಒಂದೇ ಎಂಬ ಸೋಹಂಭಾವ; ಸಮಯ-ಧರ್ಮ.

ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ :

೧) 'ಕಾಮಾದಿಗಳ ಜಯಿಸೆಂದು ಕೈವಿಡಿದನುಗ್ರಹಿಸುವ.'

೨) 'ಬಳಸದಿರದ್ವೈತವನು ಬಾಹ್ಯದಲಿ.'

೩) 'ಆರು ನಾನೆಂದು ವಿಚಾರಿಸು.'

ಒಂದು ವಾಕ್ಯದಲ್ಲಿ ಉತ್ತರಿಸಿ :

೧) ನರರಿಗೆ ಮುಕುತಿ ದೊರೆಯುವುದು ಯಾವಾಗ?

೨) ಯಾರ ಜೊತೆ ಒಡನಾಟವಿರಬೇಕು?

೩) ಯಾವಾಗ ಅಂಜಬಾರದು?

೪) ಯಾವುದನ್ನು ಜಯಿಸಬೇಕು?

೫) ಬಾಹ್ಯದಲ್ಲಿ ಏನನ್ನು ಬಳಸಬಾರದು?

೬) ವಿಷಮ ಸಂಸಾರವನ್ನು ಏನೆಂದು ಅರಿಯಬೇಕು?

ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ :

೧) ಭಗವಂತನ ಅನುಗ್ರಹಕ್ಕೆ ಪಾತ್ರನಾಗುವಲ್ಲಿ ನಡೆ-ನುಡಿಗಳು ಹೇಗಿರಬೇಕು?

೨) ಶಿಷ್ಯನಿಗೆ ಯಾವ ಗುಣಗಳನ್ನು ತ್ಯಜಿಸಲು ಗುರು ಹೇಳುತ್ತಾರೆ?

೩) ಬದುಕಿನಲ್ಲಿ ಯಾವ ತತ್ತ್ವಗಳನ್ನು ಅಳವಡಿಸಿಕೊಳ್ಳಲು ಗುರು ಶಿಷ್ಯನಿಗೆ ಉಪದೇಶಿಸುತ್ತಾರೆ?

ವಿವರವಾಗಿ ಉತ್ತರಿಸಿ :

೧) ನರರು ಮುಕ್ತಿ ಪಡೆಯಲು ಯಾವ ಯಾವ ಮಾರ್ಗಗಳನ್ನು ಅನುಸರಿಸಬೇಕೆಂದು ನಿಜಗುಣ ಶಿವಯೋಗಿಯವರು ಹೇಳಿದ್ದಾರೆ?

೨) ನಿಜಗುಣ ಶಿವಯೋಗಿಯವರ ತತ್ತ್ವಪದದಲ್ಲಿ ವ್ಯಕ್ತವಾದ ತಾತ್ವಿಕ ಅಂಶಗಳನ್ನು ಕ್ರೋಢೀಕರಿಸಿ ಬರೆಯಿರಿ.

ಭಾಷಾಭ್ಯಾಸ :

೧) ಈ ಪದಗಳಿಗೆ ತತ್ಸಮ-ತದ್ಭವಗಳನ್ನು ಬರೆಯಿರಿ :

ಶ್ರೀ, ಮುಕ್ತಿ, ಭಕ್ತಿ, ಸುಖ.

೨) ಈ ಪದಗಳಿಗೆ ನಾನಾರ್ಥ ಪದಗಳನ್ನು ಬರೆಯಿರಿ :

ಪೊರೆ, ಅಡಿ, ಕವಿ, ಆರು, ಅಳ, ಸಮಯ.

೩) ಈ ಪದಗಳಿಗೆ ಸಮಾನಾರ್ಥ ಪದಗಳನ್ನು ಬರೆಯಿರಿ :

ನರ, ಹರ, ಭವ, ಮಾಲೆ, ಮಾರ.

೪) ಈ ಪದಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ :

ಪಾಪ, ಸಮ, ಇಹ, ಸುಖ, ಜಯ.

ಚಟುವಟಿಕೆ :

೧) ನೀವು ಕೇಳಿದ ಭಜನಾ ಪದಗಳಲ್ಲಿ ತತ್ತ್ವಪದಗಳನ್ನು ಆಯ್ಕೆ ಮಾಡಿ ಸಂಗ್ರಹಿಸಿರಿ.

೨) ಬಾಲ ಲೀಲಾ ಮಹಾಂತ ಶಿವಯೋಗಿಯ ಹರಪೂಜೆ, ಗುರುಸೇವೆ, ವರಪುಣ್ಯವಿಲ್ಲದೆ........ ತತ್ತ್ವಪದದೊಂದಿಗೆ ಹೋಲಿಸಿ ನೋಡಿ.

ಆಕರ ಗ್ರಂಥ :

ನಿಜಗುಣ ಶಿವಯೋಗಿ (ಮುತ್ತಿನ ಮಾಲೆ)
ಸಂಪಾದಕರು : ಡಾ. ಎಲ್. ಬಸವರಾಜು
ಪ್ರಕಾಶಕರು : ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

ಹೆಚ್ಚಿನ ಓದು :

೧) ಸುಬೋಧಸಾರ – ಮುಪ್ಪಿನ ಷಡಕ್ಷರಿ.

೨) ಕೈವಲ್ಯ ದರ್ಪಣ – ಬಾಲಲೀಲಾ ಮಹಾಂತ ಶಿವಯೋಗಿ.

೩) ಕೈವಲ್ಯ ನವನೀತ – ಚಿದಾನಂದ ಅವಧೂತ.

ಆಧುನಿಕ ಕನ್ನಡ ಕಾವ್ಯ

ಕಾವ್ಯ ನಿರ್ಮಿತಿ ಸಾಹಿತ್ಯ ಪರಂಪರೆಯ ಹಿನ್ನೆಲೆಯಲ್ಲಿ ನಡೆವ ಕ್ರಿಯೆ. ಈ ಪರಂಪರೆಯ ವಿವಿಧ ಕಾಲಮಾನಗಳಲ್ಲಿ ತಮ್ಮ ಅಭಿವ್ಯಕ್ತಿಯನ್ನು ಕಂಡುಕೊಳ್ಳುವ ಕವಿಗಳು ತಾವು ನೆಲೆ ನಿಂತ ಪರಂಪರೆಗೆ ಯಾವ ಬಗೆಯ ಪ್ರತಿಕ್ರಿಯೆಗಳನ್ನು ತೋರುವರೆನ್ನುವುದು ಅವರ ಕಾವ್ಯ ಕಲ್ಪನೆಯಲ್ಲಿ ಬಹುಮುಖ್ಯವಾದ ಸಂಗತಿ. ಸುಮಾರು ಒಂದೂವರೆ ಸಾವಿರ ವರ್ಷದವಧಿಯೊಳಗೆ, ಬಹುಮಟ್ಟಿಗೆ ಸಂಸ್ಕೃತ, ಪ್ರಾಕೃತ ಸಾಹಿತ್ಯ ಪರಂಪರೆಯ ಮತ್ತು ತನ್ನ ಪ್ರಾದೇಶಿಕ ಸಾಹಿತ್ಯ ಪರಂಪರೆಯ ಪ್ರಜ್ಞೆ ಮತ್ತು ಹಿನ್ನೆಲೆಯಲ್ಲಿ ತನ್ನ ವೈಶಿಷ್ಟ್ಯ ಹಾಗೂ ಸ್ವೋಪಜ್ಞತೆಗಳನ್ನು ಕಾಯ್ದುಕೊಂಡ ಕನ್ನಡ ಕಾವ್ಯವು, ಹತ್ತೊಂಭತ್ತನೆಯ ಶತಮಾನದ ಹೊತ್ತಿಗೆ , ಭಾರತೀಯ ಪುನರುಜ್ಜೀವನದ ಪರಿಣಾಮವಾಗಿ, ಪಶ್ಚಿಮದ ಪ್ರೇರಣೆ ಪ್ರಭಾವಗಳಿಂದ ಪಡೆದುಕೊಂಡ ಮರುಹುಟ್ಟಿನ ಸಂದರ್ಭದಲ್ಲಿ, ತನ್ನ ಅದುವರೆಗಿನ ಕಥನ ಪರಂಪರೆಯಿಂದ ವ್ಯಕ್ತಿನಿಷ್ಠ ಕಾವ್ಯಾಭಿವ್ಯಕ್ತಿಯ ಕಡೆಗೆ ಹೊರಳಿದ್ದು ಕನ್ನಡ ಕವಿಗಳ ಕಾವ್ಯ ಕಲ್ಪನೆಯಲ್ಲಿ ಕಂಡು ಬರುವ ಬಹುಮುಖ್ಯವಾದ ಬದಲಾವಣೆಯಾಗಿದೆ.

ಭಾರತೀಯ ಪುನರುಜ್ಜೀವನದ ಪರಿಣಾಮವಾಗಿ "ನವೋದಯ" ಗಳಿಸಿಕೊಂಡ ಹೊಸ ತಿಳಿವಿನಲ್ಲಿ ಅದು ಪರಂಪರೆಯ ಬಗ್ಗೆ ತೋರಿದ ಪ್ರತಿಕ್ರಿಯೆ ತುಂಬ ಆರೋಗ್ಯಕರವಾದುದಾಗಿದೆ. ಅದರ ಪರಂಪರೆಯ ಚೌಕಟ್ಟು ಒಂದು ಬಗೆಯ ಜಾಗತಿಕವೆನ್ನಬಹುದಾದ ವಿಸ್ತಾರವನ್ನು ಪಡೆದುಕೊಂಡಿತೆಂಬುದು ಒಂದು ವಿಶೇಷ ಸಂಗತಿಯಾಗಿದೆ. ಕಾವ್ಯದ ಮುಖೇನ ಪೂರ್ವ, ಪಶ್ಚಿಮ, ಪ್ರಾಚೀನ, ನವೀನ, ಸಾಂಪ್ರದಾಯಿಕ ಮತ್ತು ಪಾರಂಪರಿಕ ಎಲ್ಲವುಗಳ ಮಿಲನವನ್ನು ಕಾಣುವಂತಾಯಿತು. ನವೋದಯದ ಸಂದರ್ಭದಲ್ಲಿ ರೂಪುಗೊಂಡ ಪ್ರಭುತ್ವ ವಿರೋಧಿ ಧೋರಣೆ ಹಾಗೂ ಸ್ವಾತಂತ್ರ್ಯದ ಹಂಬಲಗಳು, ಮುಂದೆ ಇಡೀ ಆಧುನಿಕ ಸಾಹಿತ್ಯದ ಇತರ ಚಳುವಳಿಗಳ ಸಂದರ್ಭದ ಕಾವ್ಯದ ಆಶಯಗಳೂ ಆಗಿವೆ. ಇದು ಸ್ವಾತಂತ್ರ್ಯವು ತಂದುಕೊಟ್ಟ ಪ್ರಜಾಪ್ರಭುತ್ವದ ಪರಿಸರದಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳನ್ನೇ ಅಪಮೌಲ್ಯಗೊಳಿಸುವ ಪ್ರಸ್ತುತ ರಾಜಕೀಯವನ್ನು ಹಾಗೂ ಆ ಮೂಲಕ ರೂಪುಗೊಂಡ ವ್ಯವಸ್ಥೆಯನ್ನು ಪ್ರತಿಭಟಿಸುವ "ನವ್ಯಕಾವ್ಯ"ದ ಪ್ರತಿಕ್ರಿಯೆಗಳಲ್ಲಿ ಸ್ಫುಟವಾಗಿ ಕಾಣಿಸಿಕೊಳ್ಳುತ್ತದೆ. ಇನ್ನು ದಲಿತ ಬಂಡಾಯ ಸಂದರ್ಭದ "ಕಾವ್ಯ ಕಲ್ಪನೆ" ಕೂಡ ಶೋಷಕ ಶಕ್ತಿಗಳ

ವಿರುದ್ಧ ಎತ್ತಿದ ಪ್ರತಿಭಟನೆಯ ದನಿಯಾಗಿದೆ. ಅಲ್ಲದೆ ದೇವರು, ಧರ್ಮ ಹಾಗೂ ಧಾರ್ಮಿಕ ಸಂಸ್ಥೆಗಳ ಬಗೆಗೆ ನವೋದಯ ಕಾವ್ಯ ತೋರಿದ ಪ್ರತಿಕ್ರಿಯೆಗಳು ಪ್ರಗತಿಶೀಲ ಮತ್ತು ಬಂಡಾಯ ಸಾಹಿತ್ಯ ಸಂದರ್ಭದಲ್ಲಿ ಪ್ರತಿಭಟನೆಯ ದನಿಯಾಗಿ ಕಾಣಿಸಿಕೊಂಡಿದೆ.

ಹೊಸಗನ್ನಡ ಕಾವ್ಯದ ಎಲ್ಲ ಪ್ರಮುಖ ಸಾಹಿತ್ಯ ಚಳುವಳಿಗಳೂ, ತಮ್ಮ ಹಿಂದಿನ ಸಾಂಸ್ಕೃತಿಕ ಹಾಗೂ ಸಾಹಿತ್ಯಕ ಪರಂಪರೆಗೆ ತಮ್ಮ ಪ್ರತಿಕ್ರಿಯೆಗಳನ್ನು ದಾಖಲು ಮಾಡುತ್ತಲೇ ತಮ್ಮ ತಮ್ಮ ಕಾವ್ಯ ಕಲ್ಪನೆಗಳನ್ನು ಅನಾವರಣಗೊಳಿಸಿವೆ. ಈ ಕಾವ್ಯ ಕಲ್ಪನೆಯ ಹಿಂದೆ ಭಾರತೀಯ ಚಿಂತನೆಗಳಿರುವಂತೆಯೇ, ಕಾಲದಿಂದ ಕಾಲಕ್ಕೆ ಸಾಹಿತ್ಯವು ಜಗತ್ತಿನ ವಿದ್ಯಮಾನಗಳಿಂದ ಪಡೆದುಕೊಂಡ ರಾಜಕೀಯ, ಸಾಮಾಜಿಕ, ಮನಸ್‌ಶಾಸ್ತ್ರೀಯ ಆಲೋಚನೆಗಳಿವೆ. ಇದರಿಂದಾಗಿ, ಈ ಹೊತ್ತಿನ ಕವಿಗಳ ಕಾವ್ಯ ಕಲ್ಪನೆಯನ್ನು ತೀರಾ ವಿಶಿಷ್ಟವಾದ ರೀತಿಯಲ್ಲಿ ನಿರೂಪಿಸಲಾಗಿದೆ. ಆಧುನಿಕ ಕಾವ್ಯ ಸಾಗಿಬಂದ ಹೆಜ್ಜೆಯ ಗುರುತುಗಳ ಪ್ರಾತಿನಿಧಿಕ ದಾಖಲೆಯಾಗಿ ಪ್ರಸ್ತುತ ಪಠ್ಯದಲ್ಲಿರುವ ಕವಿತೆಗಳು ಶೋಭಿಸುತ್ತಿವೆ.

ಮಾವಿನಗೊಲ್ಲೆ

– ಮಧುರಚೆನ್ನ

ಅನುಭಾವ ಎಂಬುದು ಅಂತರಂಗದ ರತ್ನ ಎನ್ನುತ್ತಾನೆ ಚೆನ್ನಬಸವಣ್ಣ. ಅನುಭಾವ ಎನ್ನುವುದು ಯಾವುದೇ ಒಂದು ಧರ್ಮಕ್ಕೆ ಸೀಮಿತವಾದುದಲ್ಲ. ಅನುಭಾವಿಯ ದೃಷ್ಟಿಯಲ್ಲಿ ಲೋಕದ ಜೀವರಾಶಿಗಳೆಲ್ಲ ಭಗವಂತನ ಸೃಷ್ಟಿ. ಆಧ್ಯಾತ್ಮಿಕ ಪಿಪಾಸೆಯಿಂದ ಪ್ರೇರಿತರಾದ ಅನುಭಾವಿಗಳು ಭಗವಂತನನ್ನು ಅನ್ವೇಷಿಸುತ್ತಾ, ಸಕಲ ಸೃಷ್ಟಿಯಲ್ಲಿ ಭಗವತ್ಸ್ವರೂಪವನ್ನು ಕಾಣುತ್ತಾರೆ. ಕಾಲ ದೇಶಾತೀತವಾದ ಸತ್ಯವನ್ನು ಈ ಕವಿತೆಯಲ್ಲಿ ಕಾಣಬಹುದು. ಅಲ್ಲಮಪ್ರಭು, ಅಕ್ಕಮಹಾದೇವಿ, ನಿಜಗುಣಶಿವಯೋಗಿ ಮುಂತಾದ ಅನುಭಾವಿ ಪರಂಪರೆಯನ್ನು ಮೈಗೂಡಿಸಿಕೊಂಡ ನವೋದಯ ಕವಿ ಮಧುರಚೆನ್ನರ ದೃಷ್ಟಿಯಲ್ಲಿ ಹಿರಿದು–ಕಿರಿದು, ಜಡ–ಚೇತನ, ಒಳಿತು–ಕೆಡುಕು ಈ ಎಲ್ಲವೂ ಒಂದೇ ವೃಕ್ಷದ ಕಾಯಿಗಳು. ಸರ್ವ ಜೀವ ಪ್ರೀತಿಯ ಕಾಣ್ಕೆಯನ್ನು ಕವಿ ಇಲ್ಲಿ ಕಾಣಿಸಿದ್ದಾರೆ.

ನಾವು! ದೇವನ ದೇಟಿನ ಕಾಯಿಗಳು
ಎಲ್ಲಾ! ಒಂದೇ ದೇಟಿನ ಮಾವುಗಳು

ಎಲ್ಲಾ ಪ್ರಾಣಿಗಳು
ಎಲ್ಲಾ ವಸ್ತುಗಳು
ಎಲ್ಲಾ ಎಲ್ಲಾs ಎಲ್ಲಾss
ಎಲ್ಲಾs! ಒಂದೇ ದೇಟಿನ ಮಾವುಗಳು
ನಾವು! ದೇವನ ದೇಟಿನ ಕಾಯಿಗಳು

ಒಂದೋ ಬಲು ಹಿರಿದು
ಒಂದೋ ಅತಿ ಕಿರಿದು
ಚಿಕ್ಕದು ದೊಡ್ಡದು ಎಲ್ಲಾ
ಎಲ್ಲಾs! ಒಂದೇ ದೇಟಿನ ಮಾವುಗಳು
ನಾವು! ದೇವನ ದೇಟಿನ ಕಾಯಿಗಳು

ಒಂದೋ ಸವಿ ಹಣ್ಣು
ಒಂದೋ ಹುಳ ಹೀಚು
ಹಣ್ಣು ಹೀಚು ಎಲ್ಲಾ
ಎಲ್ಲಾs! ಒಂದೇ ದೇಟಿನ ಮಾವುಗಳು
ನಾವು! ದೇವನ ದೇಟಿನ ಕಾಯಿಗಳು

ಸಂಪ್ರೀತಿಯ ಸುರರು
ರೊಚ್ಚಿನ ರಕ್ಕಸರು
ಎಲ್ಲಾ ಎಲ್ಲಾs ಎಲ್ಲಾss
ಎಲ್ಲಾs! ಒಂದೇ ದೇಟಿನ ಮಾವುಗಳು
ನಾವು! ದೇವನ ದೇಟಿನ ಕಾಯಿಗಳು

❖ ❖ ❖ ❖

ಕವಿ ಪರಿಚಯ : ಮಧುರಚೆನ್ನರು (ಗಲಗಲಿ ಚೆನ್ನಮಲ್ಲಪ್ಪ ಸಿದ್ಧಲಿಂಗಪ್ಪ – ೧೯೦೩–೧೯೫೩) ಕನ್ನಡದ ಅನುಭಾವ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ನವೋದಯ ಸಾಹಿತ್ಯದ ಮೊದಲಿಗರಲ್ಲಿ ಒಬ್ಬರು. ವಿಜಾಪೂರ ಜಿಲ್ಲೆಯ ಇಂಡಿ ತಾಲ್ಲೂಕಿನ ಹಲಸಂಗಿ ಗ್ರಾಮದವರಾದ ಮಧುರಚೆನ್ನರು ಅನನ್ಯ ಅನುಭಾವಿಗಳು. ಕಾವ್ಯ, ಭಾಷಾಶಾಸ್ತ್ರ, ಅನುವಾದ, ಸಂಶೋಧನೆ, ಜಾನಪದ ಸಂಗ್ರಹ ಮುಂತಾದ ಕ್ಷೇತ್ರಗಳಲ್ಲಿ ಕೃಷಿ ಮಾಡಿದ್ದಾರೆ. ಧಾರವಾಡದ ಗೆಳೆಯರ ಗುಂಪಿಗೆ – ಆತ್ಮೀಯ ಗೆಳೆಯ, ಹಲಸಂಗಿಯ ಬಾಲ್ಯದ ಗೆಳೆಯರಿಗೆ – ಮಾರ್ಗದರ್ಶಕ. ಹೀಗೆ ಹತ್ತು ಹಲವು ಆಯಾಮಗಳಲ್ಲಿ ಅವರ ವ್ಯಕ್ತಿತ್ವ ವಿಕಾಸಗೊಂಡಿದೆ. ಉತ್ತರ ಕರ್ನಾಟಕದಲ್ಲಿ ಅರವಿಂದ ಮಂಡಲವನ್ನು ಪ್ರಚಾರಕ್ಕೆ ತಂದ ಸಾಧನೆ ಮಧುರಚೆನ್ನರದು. *ಪೂರ್ವರಂಗ, ಕಾಳರಾತ್ರಿ ಬೆಳಗು, ಆತ್ಮಸಂಶೋಧನೆ* ಇವು ಅವರ ಆತ್ಮಕಥೆಗಳು. ಇತ್ತೀಚೆಗೆ ಅವರ *ಬಿಡಿ ಬರಹಗಳ* ಸಂಗ್ರಹವನ್ನು ಕನ್ನಡ ವಿಶ್ವವಿದ್ಯಾಲಯವು ಪ್ರಕಟಿಸಿದೆ. ಪ್ರಸ್ತುತ ಕವಿತೆಯನ್ನು ಅವರ *'ನನ್ನನಲ್ಲ'* ಕವನ ಸಂಗ್ರಹದಿಂದ ಆಯ್ಕೆ ಮಾಡಿದೆ.

ಶಬ್ದಾರ್ಥ : ದೇಟು–ಕೊಂಬೆ ; ಹೀಚು–ಮಿಡಿಗಾಯಿ ; ಸುರರು–ದೇವತೆಗಳು ; ರಕ್ಕಸರು–ದಾನವರು ; ಗೊಲ್ಲೆ–ಗೊಂಚಲು.

ಟಿಪ್ಪಣಿ :

೧) ಅನುಭವ : ಮನುಷ್ಯನಿಗೆ ಪಂಚೇಂದ್ರಿಯಗಳ ಮೂಲಕ ದೊರೆಯುವ ಜ್ಞಾನವನ್ನು 'ಅನುಭವ' ಎನ್ನುವೆವು. ಲೌಕಿಕದಲ್ಲಿ ನಮಗೆ ಸಿಗುವ ಸಕಲ ಜ್ಞಾನವೂ ಇಂದ್ರೀಯಗಳ ಮುಖೇನವೇ ಲಭ್ಯವಾಗುವುದನ್ನು ತಿಳಿಯಬಹುದು.

೨) ಅನುಭಾವ : ಅಧ್ಯಾತ್ಮಕ್ಕೆ ಸಂಬಂಧಿಸಿದ ನಡೆಯನ್ನು 'ಅನುಭಾವ' ಎನ್ನುವರು. ಇಂದ್ರಿಯಾತೀತವಾದ ಆತ್ಮಾನುಭವವೇ 'ಅನುಭಾವ'.

ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ :

೧) 'ಒಂದೋ ಬಲು ಹಿರಿದು.'

೨) 'ಸಂಪ್ರೀತಿಯ ಸುರರು.'

೩) 'ಎಲ್ಲಾ ! ಒಂದೇ ದೇಟಿನ ಮಾವುಗಳು.'

ಒಂದು ವಾಕ್ಯದಲ್ಲಿ ಉತ್ತರಿಸಿ :

೧) ನಾವು ಯಾರ ದೇಟಿನ ಕಾಯಿಗಳು?

೨) ರೊಚ್ಚಿನವರು ಯಾರು?

೩) ಸುರರ ಗುಣ ಯಾವುದು?

ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ :

೧) ಮಾವಿನ ಕಾಯಿಗಳಲ್ಲಿರುವ ಭೇದ ಯಾವುದು?

೨) ದೇವನ ದೇಟಿನ ಕಾಯಿಗಳಲ್ಲಿರುವ ವ್ಯತ್ಯಾಸ ಯಾವುದು?

ವಿವರವಾಗಿ ಉತ್ತರಿಸಿ :

೧) "ಮಾವಿನಗೊಲ್ಲೆ" ಕವಿತೆಯ ಆಶಯವೇನು?

೨) ಮಾವಿನ ಗಿಡದ ಮೂಲಕ ಕವಿ ಸೃಷ್ಟಿಯ ವೈವಿಧ್ಯತೆಯನ್ನು ಹೇಗೆ ವಿವರಿಸಿದ್ದಾರೆ?

ಭಾಷಾಭ್ಯಾಸ :

೧) ಇವುಗಳಿಗೆ ಸಮಾನಾರ್ಥಗಳನ್ನು ಬರೆಯಿರಿ :

ಸವಿ, ರೊಚ್ಚು, ಪ್ರೀತಿ

೨) ಇವುಗಳಿಗೆ ತತ್ಸಮ-ತದ್ಭವ ಬರೆಯಿರಿ :

ಪ್ರಾಣಿ, ರಕ್ಕಸ, ಸುರ.

ಚಟುವಟಿಕೆ :

೧) ಅರವಿಂದರ ಅಧ್ಯಾತ್ಮ ವಿಚಾರಗಳನ್ನು ಸಂಗ್ರಹಿಸಿರಿ.

೨) ನವೋದಯ ಸಾಹಿತ್ಯದಲ್ಲಿರುವ ಅನುಭಾವಿ ಕವಿಗಳನ್ನು ಪರಿಚಯಿಸಿಕೊಳ್ಳಿರಿ.

೩) ಎಲ್ಲಾ, ಎಲ್ಲಾ, ಎಲ್ಲಾ ಶಬ್ದ ಪುನರಾವರ್ತಿತವಾದುದನ್ನು ಗಮನಿಸಿ. ಕಿರಿದು-ಹಿರಿದು ಶಬ್ದಗಳ ಅರ್ಥ ವ್ಯಾಪಕತೆಯನ್ನು ಗುರುತಿಸಿ.

ಆಕರ ಗ್ರಂಥ :

"ನನ್ನ ನಲ್ಲ"- ಮಧುರಚೆನ್ನ, ಪ್ರಕಾಶಕರು : ಚೆನ್ನಬಸವ ಪ್ರಕಾಶನ, ಹಲಸಂಗಿ, ತಾ|| ವಿಜಾಪೂರ, ಮುದ್ರಣ ವರ್ಷ : ೩೧, ಜುಲೈ ೧೯೭೩.

ಹೆಚ್ಚಿನ ಓದು :

೧) ಮಧುರಚೆನ್ನ - ಜೀವನ ಹಾಗೂ ಕೃತಿಗಳು; ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨) ಮಧುರಚೆನ್ನ - ಡಾ. ಗುರುಲಿಂಗ ಕಾಪಸೆ, ಸಾಹಿತ್ಯ ಅಕಾಡೆಮಿ, ದಿಲ್ಲಿ.

೩) ಮಧುರಚೆನ್ನರ ಬಗ್ಗೆ ಬೇಂದ್ರೆಯವರ 'ಚೆನ್ನ', 'ಚೆನ್ನಲಿಂಗ' ಎಂಬ ಕವಿತೆಗಳನ್ನು ಗಮನಿಸಿ.

೪) ಆತ್ಮಶೋಧ - ಸಂಪಾದಕರು : ಡಾ. ಗುರುಲಿಂಗ ಕಾಪಸೆ ಪ್ರಕಾಶಕರು : ಚನ್ನಬಸವ ಪ್ರಕಾಶನ, ಹಲಸಂಗಿ, ಜಿಲ್ಲಾ ವಿಜಾಪುರ.

ಶ್ರಾವಣ

– ಅಂಬಿಕಾತನಯದತ್ತ

ಅಗಾಧವಾದ ಪ್ರಕೃತಿ ಮತ್ತು ಅನಂತವಾದ ಕಾಲಗಳ ಯಾವುದೇ ನಿರ್ದಿಷ್ಟ ಕ್ಷಣದಲ್ಲಿ ನಿಂತಿರುವ ಮನುಷ್ಯ ಪ್ರಕೃತಿಯೊಂದಿಗೆ ನಾನಾ ನೆಲೆಗಳ ಸಂಬಂಧವನ್ನು ಹೊಂದಿದ್ದಾನೆ. ನಿಸರ್ಗದ ಚೆಲುವನ್ನು ಆರಾಧಿಸುವ, ಅದನ್ನು ದೈವವೆಂದು ಪೂಜಿಸುವ, ಅದರ ಮೇಲೆ ಒಡೆತನ ಸ್ಥಾಪಿಸುವ ಆತ ಅದರ ಸಮತೋಲನವನ್ನು ಹಾಳು ಮಾಡುವಲ್ಲೂ ನಿರತನಾಗಿದ್ದಾನೆ. ಪ್ರಕೃತಿಯೊಂದಿಗಿನ ಮಾನವ ಕೋಟಿಯ ಸಂಬಂಧ ಹೇಗಿರುತ್ತದೆಂಬುದರ ಮೇಲೆ ಇಂದಿನ ಉಳಿಯುವಿಕೆ ಮತ್ತು ನಾಳಿನ ಬೆಳೆಯುವಿಕೆಗಳು ನಿಂತಿವೆ. ಬೇಂದ್ರೆಯವರ ಪ್ರಸ್ತುತ ಕವಿತೆಯು ಮನುಷ್ಯ ಮತ್ತು ನಿಸರ್ಗದ ಸಂಬಂಧದ ವಿಶಿಷ್ಟ ಬಂಧವನ್ನು ಪ್ರತಿಪಾದಿಸಿದೆ.

"ಪ್ರಕೃತಿ" ಎಂದರೆ ಕೇವಲ ಜಡ ಮಾತ್ರವಲ್ಲ, ಅದು ಚೇತನ ; ಅದರೊಡನೆ ತಾದ್ಯಾತ್ಮ ಹೊಂದಬೇಕು. ಇದು ಸಂವಾದ ನೆಲೆಯಲ್ಲೂ ಸಾಧ್ಯ ಎಂಬುದರ ದರ್ಶನ ನಮಗಾಗುತ್ತದೆ ಎಂಬುದನ್ನು ಇಲ್ಲಿ ಶ್ರುತಪಡಿಸಲಾಗಿದೆ. ಪ್ರಕೃತಿಯನ್ನು ವ್ಯಕ್ತೀಕರಣಗೊಳಿಸುವ ಹೊಸ ಬಗೆಯ ಪ್ರಯೋಗವು 'ಉಪಭೋಗದ' ಪ್ರವೃತ್ತಿಯನ್ನು ನಿರಾಕರಿಸುತ್ತದೆ. ಪ್ರಕೃತಿ, ನೆಲ, ಮುಗಿಲುಗಳ ಚೈತನ್ಯ ಸ್ವರೂಪ ಇಲ್ಲಿ ಗೋಚರವಾಗುತ್ತಿದ್ದು ಜಗತ್ತನ್ನು ವಿಶ್ವ ಕುಟುಂಬಿಯಾಗಿಸುವ ಕವಿಯ ಉದಾತ್ತ ಆಶಯ ಇಲ್ಲಿ ಅನಾವರಣಗೊಂಡಿದೆ.

ಅಗೋ ಅಲ್ಲಿ ದೂರದಲ್ಲಿ
ನೆಲದ ಮುಗಿಲ ಮಗ್ಗುಲಲ್ಲಿ
ಹಸಿರಿನ ಹಸುಗೂಸದೊಂದು
ಆಗ ಈಗ ಹೊರಳುತಿಹುದು
ಏನೊ ಎಂತೊ ಒರಲುತಿಹುದು
ಆಃ ಹಸಿರ ಒಳಗೆ ಹೊರಗೆ
ನೀರ ಬೆಳಕ ತುಣುಕು ಮಿಣುಕು.
ಅಲ್ಲಿನಿಂದ ಬಂದೆಯಾ!
ಕುಣಿವ ಮಣಿವ ಹೆಡೆಯ ಹಾವುಗಳನು ಹಿಡಿದು ತಂದೆಯಾ?

– ೨ –

ಏಕೆ ಬಂದೆ? ಏನು ತಂದೆ?
ಹೇಳೊ ಹೇಳು ಶ್ರಾವಣಾ
ನೀನು ಬಂದ ಕಾರಣಾ.

– ೩ –

ಪಡುವ ದಿಕ್ಕಿನಿಂದ ಹರಿವ
ಗಾಳಿ ಕುದುರೆಯನ್ನು ಏರಿ
ಪರ್ಜನ್ಯ ಗೀತವನ್ನು
ಹಾಽಡುತ್ತ ಬಂದಿತು.

– ೪ –

ಬನದ ಮರದ ಮೇಳವೆಲ್ಲ
ಸೋಽ ಎಂದು ಎಂದಿತು.
ಬಿದಿರ ಕೊಳಲ ನುಡಿಸಿತು.
ಮಲೆಯ ಹೆಳಲ ಮುಡಿಸಿತು;
ಬಳ್ಳಿಮಾಡ ಬಾಗಿಸಿತ್ತು
ಗಿಡಗಳ ತಲೆದೂಗಿಸಿತ್ತು;
ಮರದ ಹನಿಯ ಮಣಿಗಳನ್ನು
ಅತ್ತ ಇತ್ತ ತೂರುತಾ
ಹಸಿರು ಮುರಿವ ತೊಂಗಲನ್ನು
ಕೆಳಗೆ ಮೇಲೆ ತೂಗುತಾ
ಬರುವ ನಿನ್ನ ಅಂದ ಚೆಂದ
ಸೂಸು ಸೊಗಸು ಆನಂದ.

– ೫ –

ಗುಳ್ಳಗಂಜಿ ತೊಡವ ತೊಟ್ಟು
ಹಾವಸೆಯಾ ಉಡುಪನುಟ್ಟು
ನಗುವ ತುಟಿಯ ನನೆದ ಎವೆಯ
ತರಳ ನೀನು ಶ್ರಾವಣಾ.
ಅಳು ನಗಲು ತಡವೆ ಇಲ್ಲ
ಇದುವು ನಿನಗೆ ಆಟವೆಲ್ಲ
ಬಾರೊ ದಿವ್ಯ ಚಾರಣಾ
ತುಂಟ ಹುಡುಗ ಶ್ರಾವಣಾ.

– ೬ –

ನೀನು ನಡೆದು ಬಂದ ಮಾಸ
ಹೆಣ್ಗೆ ತವರುಮನೆಯ ವಾಸ
ಬರಿಯ ಆಟ, ಬರಿಯ ಹಾಸ
ಮಧುಮಾಸಕು ಹಿರಿದದು
ಮಧುರ ಮಾಸ ಸರಿಯದು.

– ೭ –

ಮೋಡಗವಿದ ಕಣ್ಣಿನವನು
ಮುದಿಯ ತಂದೆ ಮುಗಿಲ ರಾಯ
ನಿನ್ನನ್ನೆ ಬಯಸಿದಾ
ಕಣ್ಣು ಕೆನ್ನೆ ತೊಯ್ಸಿದಾ.
ಬಿಸಿಲ ಹಣ್ಣು ತಿಂದು ಹೊತ್ತು
ಹೆತ್ತ ನಿನ್ನ ಭೂಮಿತಾಯಿ
ಪಾಪ, ನಿನ್ನ ನೆನಸಿತು
ಎದೆಯ ಸೆರಗ ನೆನಸಿತು!
ಅಂತೆ ಬಂದೆ ಬಾರಣಾ
ಬಾರೊ ಮಗುವೆ ಶ್ರಾವಣಾ!

❖ ❖ ❖ ❖

ಕವಿ ಪರಿಚಯ : ‘ಅಂಬಿಕಾತನಯದತ್ತ’ ಎಂಬುದು ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರ ಕಾವ್ಯನಾಮ. (ಜನನ ೧೮೯೬ – ಮರಣ ೧೯೮೧) ಶಿಕ್ಷಕರಾಗಿ ವೃತ್ತಿ ಜೀವನವನ್ನಾರಂಭಿಸಿದ ಶ್ರೀಯುತರು ಸೊಲ್ಲಾಪುರದ ಡಿ.ಎ.ವಿ. ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದರು. *ಗೆಳೆಯರ ಗುಂಪಿನ* ಮೂಲಕ ಸಾಹಿತಿಗಳನ್ನು ಸಂಘಟಿಸಿದ ಕೀರ್ತಿಗೆ ಬೇಂದ್ರೆ ಭಾಜನರು. *ಸಖೀಗೀತ, ಗರಿ, ಕೃಷ್ಣಕುಮಾರಿ, ಬಾ ಹತ್ತರ, ನಾದಲೀಲೆ, ನಾಕುತಂತಿ, ಗಂಗಾವತರಣ, ಅರಳು–ಮರಳು, ಉಯ್ಯಾಲೆ* ಮುಂತಾದ ಇಪ್ಪತ್ತಾರು ಕವಿತಾ ಸಂಕಲನಗಳು, *ಜಾತ್ರೆ, ಸಾಯೋ ಆಟ* ಮುಂತಾದ ನಾಟಕಗಳು, *ಸಾಹಿತ್ಯದ ವಿರಾಟ್ ಸ್ವರೂಪ* ಎಂಬ ವಿಚಾರ–ವಿಮರ್ಶಾ ಸಂಕಲನಗಳಲ್ಲದೆ ಪ್ರಬಂಧ, ಸಣ್ಣಕಥೆ, ಅಣಕವಾಡು, ನಗೆಬರಹ, ಅನುವಾದ ಮುಂತಾದ ಪ್ರಕಾರಗಳಲ್ಲಿ ಬೇಂದ್ರೆ ಕೃಷಿ ಮಾಡಿದ್ದಾರೆ.

ಶ್ರೀಯುತರ *'ನಾಕುತಂತಿ'* ಸಂಕಲನಕ್ಕೆ ಭಾರತೀಯ ಜ್ಞಾನಪೀಠ ಪ್ರಶಸ್ತಿ, *'ಅರಳು-ಮರಳು'* ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ದೊರೆತಿವೆ. ಅಲ್ಲದೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಫೆಲೋ ಗೌರವ, ಪದ್ಮಶ್ರೀ ಪುರಸ್ಕಾರ, ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳ ಗೌರವ ಡಾಕ್ಟರೇಟ್ ಮುಂತಾದ ಉನ್ನತ ಪ್ರಶಸ್ತಿ ಪುರಸ್ಕಾರಗಳಿಗೆ ಬೇಂದ್ರೆಯವರು ಪಾತ್ರರಾಗಿದ್ದಾರೆ. ೧೯೪೩ರಲ್ಲಿ ಶಿವಮೊಗ್ಗದಲ್ಲಿ ಜರುಗಿದ ಅಖಿಲ ಭಾರತ ೨೭ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನದ ಗೌರವವೂ ಇವರಿಗೆ ಸಂದಿದೆ. ಕನ್ನಡದ ಶ್ರೇಷ್ಠ ಕವಿಗಳಲ್ಲಿ ಮುಂಚೂಣಿಯಲ್ಲಿರುವ ಬೇಂದ್ರೆಯವರನ್ನು *ಶ್ರಾವಣದ ಕವಿ* ಎಂದೇ ಕರೆಯುವುದು ವಾಡಿಕೆ. ಪ್ರಸ್ತುತ *ಶ್ರಾವಣ* ಕವಿತೆಯಲ್ಲಿ ಪ್ರಕೃತಿಯ ವ್ಯಕ್ತಿತ್ವವನ್ನು ವರ್ಣಿಸಿ, ಅದರೊಂದಿಗೆ ಆಪ್ತವಾಗಿ ಸಂವಾದಿಸುವ ಅನನ್ಯವೆನ್ನಿಸುವ ಬೇಂದ್ರೆ ಶೈಲಿಯನ್ನು ಗಮನಿಸಬಹುದು. ಗಟ್ಟಿಯಾಗಿ, ಲಯಬದ್ಧವಾಗಿ ಓದಿದಾಗ ಉಂಟಾಗುವ ಶಾಬ್ದಿಕ ಪರಿಣಾಮ ಗಮನಿಸಬೇಕು.

ಶಬ್ದಾರ್ಥ : ಹಸುಗೂಸು-ಎಳೆಯ ಮಗು ; ಒರಲು-ಕೂಗಾಡು ; ತುಣುಕು-ತುಂಡು; ಮಿಣುಕು-ಮಿಂಚು ; ಮಣಿವೆ-ನಮಸ್ಕರಿಸುವೆ ; ಪಡುವ-ಪಡುವಣ ದಿಕ್ಕು, ಪಶ್ಚಿಮ ದಿಕ್ಕು ; ಹರಿ-ಪ್ರವಹಿಸು ; ಪರ್ಜನ್ಯ-ಮಳೆ, ಇಂದ್ರ ; ಬನ-ವನ ; ಮೇಳ-ಗುಂಪು; ಮಲೆ-ಬೆಟ್ಟ ; ಹೆಳಲು-ಜಡೆ ; ತೊಡವು-ಆಭರಣ ; ಬಳ್ಳಿ ಮಾಡ-ಲತಾ ಮಂಟಪ ; ತೊಂಗಲು-ಗೊಂಚಲು ; ಸೂಸು-ಬೀರು, ಹರಡು ; ಗುಳ್ಳಗಂಜಿ -ಗುಲಗಂಜಿ ; ಹಾವಸೆ-ಪಾಚಿ ; ಎವೆ-ರೆಪ್ಪೆ ; ತರಳ-ತರುಣ, ಚಿಕ್ಕವ ; ಹಾಸ- ನಗೆ ; ಮಾಸ-ತಿಂಗಳು ; ಚಾರಣ-ಗಂಧರ್ವ, ತಿರುಗಾಟ.

ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ :

೧) 'ಏನೊ ಎಂತೊ ಒರಲುತಿಹುದು.'

೨) 'ಹೇಳೊ ಹೇಳು ಶ್ರಾವಣಾ, ನೀನು ಬಂದ ಕಾರಣ.'

೩) 'ಮಲೆಯ ಹೆಳಲ ಮುಡಿಸಿತು.'

೪) 'ಅಳಲು ನಗಲು ತಡವೆ ಇಲ್ಲ.'

೫) 'ಮೋಡಗವಿದ ಕಣ್ಣಿನವನು.'

ಒಂದು ವಾಕ್ಯದಲ್ಲಿ ಉತ್ತರಿಸಿ :

೧) ನೆಲದ ಮುಗಿಲ ಮಗ್ಗುಲಲ್ಲಿ ಒರಲುತ್ತಿರುವುದು ಯಾರು?

೨) ಪರ್ಜನ್ಯಗೀತವನ್ನು ಹಾಡುತ್ತಾ ಬಂದವರು ಯಾರು?

೩) ಶ್ರಾವಣ ಯಾವ ಉಡುಪನ್ನುಟ್ಟು ಬಂದಿತು?
೪) ಕವಿ 'ತುಂಟ ಹುಡುಗ' ಎಂದು ಯಾರನ್ನು ಕರೆದಿದ್ದಾರೆ?
೫) ಬನದ ಮರದ ಮೇಳ ಹೇಗೆ ಶಬ್ದ ಮಾಡಿತು?

ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ :

೧) ಹಸಿರ ಒಳಗಿಂದ ಹಸುಗೂಸು ಬಂದ ಬಗೆ ಹೇಗೆ?
೨) ಶ್ರಾವಣ ಬಂದ ಬಗೆಯನ್ನು ತಿಳಿಸಿ.
೩) ಶ್ರಾವಣ ಬರುವಾಗಿನ ಅಂದ ಚೆಂದ ಯಾವುದು?
೪) ತರಳ ಶ್ರಾವಣನ ರೂಪ ಹೇಗಿದ್ದಿತು?
೫) ಭೂತಾಯಿ ಶ್ರಾವಣನನ್ನು ಸ್ವಾಗತಿಸಿದ್ದು ಹೇಗೆ?

ವಿವರವಾಗಿ ಉತ್ತರಿಸಿ :

೧) ಶ್ರಾವಣ ಕವಿತೆಯಲ್ಲಿ ವ್ಯಕ್ತವಾದ ನಿಸರ್ಗ ವೈಭವವನ್ನು ಚಿತ್ರಿಸಿ.
೨) ಶ್ರಾವಣದ ಆಗಮನದಿಂದ ಇಳೆಯಲ್ಲಾದ ಬದಲಾವಣೆಗಳನ್ನು ಚಿತ್ರಿಸಿ.

ಭಾಷಾಭ್ಯಾಸ :

೧) ಇವುಗಳಿಗೆ ನಾನಾರ್ಥಗಳನ್ನು ಬರೆಯಿರಿ :

ತಂದೆ, ಮಲೆ, ಕವಿ, ಮಣಿ.

೨) ಇವುಗಳಿಗೆ ಸಮನಾರ್ಥಗಳನ್ನು ಬರೆಯಿರಿ :

ನೆಲ, ನೀರು, ಹಾವು, ಕುದುರೆ, ತಂದೆ.

೩) ಇವುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿರಿ :

ಗಾಳಿ ಕುದುರೆ, ಪರ್ಜನ್ಯ ಗೀತ, ಬಿಸಿಲ ಹಣ್ಣು, ಯಶಸ್ಸಿನ ಶಿಖರ, ತಲೆದೂಗು.

ವ್ಯಾಕರಣ ವಿಶೇಷ :

೧) "ಅಲ್ಲಿನಿಂದ ಬಂದೆಯಾ !" ಎಂಬುದು ಪ್ರಶ್ನೆಯಂತೆ ತೋರುತ್ತಿದ್ದರೂ, ವಾಕ್ಯದ ಕೊನೆಯಲ್ಲಿ ಪ್ರಶ್ನಾರ್ಥಕ ಚಿಹ್ನೆಯ ಬದಲಿಗೆ ಉದ್ಗಾರ ಚಿಹ್ನೆ ಇದೆ. ಕವಿ ಈ ವಾಕ್ಯವನ್ನು ಪ್ರಶ್ನೆಯಾಗಿ, ಉದ್ಗಾರವಾಗಿ ಬಳಸಿದ್ದಾರೆ. ಪ್ರಶ್ನೆಯಂತೆ ಕಂಡರೂ ಪ್ರಶ್ನಿಸುವ ಉದ್ದೇಶವಿಲ್ಲದ ಕೆಲವು ವಾಕ್ಯಗಳನ್ನು ಬರೆಯಿರಿ.

ಉದಾಹರಣೆ : 'ನಿನ್ನ ತಲೆಯಲ್ಲಿ ಏನು ತುಂಬಿದೆ?'

೨) ‘ನುಡಿಸಿತು’, ‘ಮುಡಿಸಿತು’, ‘ಬಾಗಿಸಿತ್ತು’, ‘ತೂಗಿಸಿತ್ತು’. ಇಲ್ಲಿ ಇತು ಮತ್ತು ಇತ್ತು ಎಂದು ಅಂತ್ಯವಾಗುವ ಈ ಕ್ರಿಯಾಪದಗಳ ನಡುವಿನ ವ್ಯತ್ಯಾಸವನ್ನು ಗಮನಿಸಿ. ಮೊದಲನೆಯದು ಕ್ರಿಯೆಯ ಬಗೆಗೆ ಮಾಹಿತಿ ನೀಡಿದರೆ, ಎರಡನೆಯದು ಕರ್ತೃವಿನ ಮೇಲೆ ಒತ್ತನ್ನು ಹಾಕುತ್ತದೆ. ಇಂತಹ ಪ್ರಯೋಗಗಳ ಇನ್ನೂ ಹಲವು ಮಾದರಿಗಳಿವೆ.

ಉದಾಹರಣೆಗೆ : ನೋಡಿದೆ – ನೋಡಿದ್ದೆ ; ಕೇಳಿದೆ – ಕೇಳಿದ್ದೆ.
ಇವು ಅರ್ಥದಲ್ಲಿ ಉಂಟು ಮಾಡುವ ವ್ಯತ್ಯಾಸವನ್ನು ಗುರುತಿಸಿ.

ಚಟುವಟಿಕೆ : ೧) ‘ಮಳೆ’ಯ ಬಗೆಗಿನ ಇತರ ಕವಿಗಳ ರಚನೆಗಳನ್ನು ಸಂಗ್ರಹಿಸಿ.

೨) ಮಳೆರಾಯನೊಂದಿಗಿನ ನಿಮ್ಮ ಕಾಲ್ಪನಿಕ ಸಂಭಾಷಣೆಯೊಂದನ್ನು ರಚಿಸಿ.

೩) ಅತಿವೃಷ್ಟಿ, ಅನಾವೃಷ್ಟಿಗಳ ಬಗ್ಗೆ ಪ್ರಬಂಧವನ್ನು ರಚಿಸಿ.

೪) ಶ್ರಾವಣ ಮಾಸದ ವಿಶೇಷತೆಯನ್ನು ಬಣ್ಣಿಸಿ.

೫) “ಹಸಿರಿನ ಹಸುಗೂಸು” ಎಂಬ ವಿಶೇಷ ಪ್ರಯೋಗವನ್ನು ಗಮನಿಸಿ.

೬) “ಅಗೋ ಅಲ್ಲಿ ದೂರದಲ್ಲಿ..........” ಇಲ್ಲಿ ‘ಅಗೋ’ ಎಂಬ ಸೂಚಕದ ಪರಿಣಾಮವನ್ನು ಗಮನಿಸಿ. ನಮ್ಮ ಬಳಕೆಯ ಮಾತಿನ ಇಂತಹ ಸೂಚಕಗಳನ್ನು ಪಟ್ಟಿ ಮಾಡಿ.

ಆಕರ ಗ್ರಂಥ :

‘ಶ್ರಾವಣ’ ಎಂಬ ಪ್ರಸ್ತುತ ಕವಿತೆಯನ್ನು ದ.ರಾ. ಬೇಂದ್ರೆಯವರ ಸಮಗ್ರ ಕಾವ್ಯ, ಸಂಪುಟ ೪ ರಿಂದ ಆಯ್ದುಕೊಳ್ಳಲಾಗಿದೆ. (ಔದುಂಬರಗಾಥೆ, ಪುಟ–೨೫೨) ಸಂಪಾದಕರು : ಡಾ. ವಾಮನಬೇಂದ್ರೆ – ಪ್ರಕಟಣೆ : ವರಕವಿ ಡಾ. ದ.ರಾ. ಬೇಂದ್ರೆ ಸಂಶೋಧನಾ ಸಂಸ್ಥೆ, “ವಿಶ್ವಶ್ರಮ ಚೇತನ”, ಗೋಕುಲ ರಸ್ತೆ, ಹುಬ್ಬಳ್ಳಿ–೫೮೦ ೦೩೦.

ರೈತನ ದೃಷ್ಟಿ

– ಕುವೆಂಪು

ಅನ್ನದಾತನಾದ ರೈತನ ಬವಣೆ ಅನಾದಿ ಕಾಲದಿಂದಲೂ ನಿರಂತರವಾಗಿ ಸಾಗಿ ಬಂದಿದೆ. ದೇಶದ ಬೆನ್ನೆಲುಬಾದ ರೈತನನ್ನು ಆಳುವ ವರ್ಗ ಅಲಕ್ಷಿಸಿದೆ. ಯಾರ ಆಡಳಿತದ ಅವಧಿಯಲ್ಲೂ ಅವನ ಕಡುಕಷ್ಟದ ಬದುಕು ಬದಲಾಗಲೇ ಇಲ್ಲ. ಬಹುಬಗೆಯ ಶೋಷಣೆ ರೈತನ ಬದುಕನ್ನು ಮುಕ್ಕಾಗಿಸಿದೆ. ಪ್ರಭುತ್ವವಿರಲಿ, ಪ್ರಜಾಪ್ರಭುತ್ವವಿರಲಿ ರೈತನ ಜೀವನದಲ್ಲಿ ಯಾವ ಬದಲಾವಣೆಯನ್ನೂ ತರಲಿಲ್ಲ. ಉಳಿದೆಲ್ಲ ವರ್ಗದ ಜನರು ರೈತನ ಶ್ರಮದ ಫಲವನ್ನು ಅನುಭವಿಸಿ, ಸುಖಿಗಳೆನಿಸಿದರು. ರೈತನ ಕಷ್ಟಗಳನ್ನು ಕಡೆಗಣಿಸಿದರು. ಯಾವ ಭರವಸೆಗಳೂ ರೈತನ ಕಣ್ಣೀರನ್ನು ಒರೆಸುವಲ್ಲಿ ಸಫಲವಾಗಿಲ್ಲ. ಉಳಿದೆಲ್ಲರ ಭೋಗಕ್ಕೆ ರೈತನ ಬದುಕು ಹರಕೆಯ ಕುರಿಯಂತಾಗಿದೆ. ತನ್ನ ಶ್ರಮದ ಫಲವನ್ನು ಇತರರು ಅನುಭವಿಸಿ ಸಂತೋಷಿಸುವುದನ್ನು ಕಣ್ಣು ಬಾಯಿ ಬಿಟ್ಟು ನೋಡುತ್ತಿರುವ ರೈತನ ಬವಣೆಯನ್ನು ಕುವೆಂಪು ಅವರು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ದುಡಿವ ವರ್ಗದ ಶ್ರಮವನ್ನು ಪಡೆಯುವ ವರ್ಗ ಅನುಭವಿಸಿ ಸುಖಿಸುವ ತಾರತಮ್ಯವನ್ನು ಕವಿ ವಿಷಾದದಿಂದ ಚಿತ್ರಿಸಿದ್ದಾರೆ. ನೇಗಿಲಯೋಗಿಯ ಬದುಕು ಹಸನಾಗಬೇಕೆಂಬ ಆಶಯ ಇಲ್ಲಿದೆ.

ಕರಿಯರದೊ ಬಿಳಿಯರದೊ ಯಾರದಾದರೆ ಏನು?
ಸಾಮ್ರಾಜ್ಯವಾವಗಂ ಸುಲಿಗೆ ರೈತರಿಗೆ
ವಿಜಯನಗರವೊ? ಮೊಗಲರಾಳ್ವಿಕೆಯೊ? ಇಂಗ್ಲಿಷರೊ?
ಎಲ್ಲರೂ ಜಿಗಣೆಗಳೆ ನನ್ನ ನೆತ್ತರಿಗೆ!

ಕತ್ತಿ ಪರದೇಶಿಯಾದರೆ ಮಾತ್ರ ನೋವೆ?
ನಮ್ಮವರೆ ಹದಹಾಕಿ ತಿವಿದರದು ಹೂವೆ?
ಸೋಮಾರಿಗಳಗೆ ಸುಖಿಗಳಗೆ ರಸಿಕರಿಗಲ್ತೆ
ಸಾಮ್ರಾಜ್ಯವೆಂಬುದದು ಕಾಮಧೇನು.

ನೃಪ ಎಂಬ ಹೆಸರೊಡನೆ ಮುಡಿಯೊಂದನಾಂತೊಡನೆ
ಕಳ್ಳರೊಡೆಯನು ಕೃಪೆಯ ಮೂರ್ತಿಯೇನು?
ತಿಂದುಂಡು ಮೆರೆವವರ ಮೆರವಣಿಗೆಗಾನು
ಬಾಯ್ದೆರೆದು ನೋಳ್ಪ ಬೆಪ್ಪಾಗಬೇಕೇನು?

ಹರಕೆ ಯಾರದೊ? ಹಬ್ಬವಾರಿಗೋ? ಅದಾವಗಂ
ಸಾಮ್ರಾಜ್ಯ ಕಾಳಗಾನಲ್ತೆ ಕುರಿ ಕೊಲೆಗೆ?

ಕುಯ್ಗುರಿಯನೆಂತಂತೆ ಸಾವು ಬದುಕಿನ ನಡುವೆ
ಕರುಣೆ ಗರಗಸದಿಂದೆ ಸೀಳುವರು ಬೆಲೆಗೆ.

ಸಾಕೆನಗೆ, ಸಾಕಯ್ಯ, ಸಾಮ್ರಾಜ್ಯ ಪೂಜೆ;
ಸಿಡಿಮುದ್ದಿನಕ್ಷತೆಗೆ ಗುಂಡು ಚರೆ ಲಾಜೆ!
ನೇಗಿಲಿನ ಮೇಲಾಣೆ! ಬಸವಗಳ ಮೇಲಾಣೆ!
ನೆತ್ತರಿಲ್ಲದೆ ಸುಕ್ಕಿ ಸೊರಗಿದೆನ್ನಾಣೆ!

ಸಾಮ್ರಾಜ್ಯ ಶೂರ್ಪನಖಿ ಮೋಹಿನಿಯ ರೂಪಕ್ಕೆ
ಮರುಳಾಗೆನೆಂದಿಗೂ, ಸೀತೆ ಮೇಲಾಣೆ!
ಬಡತನದ ಗೊಬ್ಬರವನನುದಿನಂ ಹೀರಿ
ಹಿಡಿಸದೋ ಸಾಮ್ರಾಜ್ಯ ಸಿರಿಯ ಕಸ್ತೂರಿ!

❖ ❖ ❖ ❖

ಕವಿ ಪರಿಚಯ : ಬಹುಶ್ರುತತ್ವ ಪ್ರತಿಭೆಯ ಕವಿ ಕುವೆಂಪು ಕನ್ನಡ ಕಾವ್ಯಾರಾಮದ ಕೋಗಿಲೆ ಎನಿಸಿದವರು. ಡಾ. ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ (ಜನನ ೨೯ನೇ ಡಿಸೆಂಬರ್ ೧೯೦೪ – ಮರಣ ೧೦ನೇ ನವೆಂಬರ್ ೧೯೯೪) ಅವರ ಸಾಹಿತ್ಯ ಕೃಷಿ ಹಲವು ಕವಲುಗಳಲ್ಲಿ ಹಬ್ಬಿ ನಿಂತಿದೆ. *ಪಕ್ಷಿಕಾಶಿ, ಕೊಳಲು, ಅಗ್ನಿಹಂಸ, ಅನುತ್ತರಾ, ನವಿಲು, ಪ್ರೇಮಕಾಶ್ಮೀರ, ಚಂದ್ರಮಂಚಕೆ ಬಾ ಚಕೋರಿ* ಮುಂತಾದ ಕವಿತಾ ಸಂಕಲನಗಳು; *ಬೆರಳ್ ಗೆ ಕೊರಳ್, ನನ್ನ ಗೋಪಾಲ, ಯಮನ ಸೋಲು, ಸ್ಮಶಾನ ಕುರುಕ್ಷೇತ್ರಂ, ಮಹಾರಾತ್ರಿ, ಜಲಗಾರ* ಮುಂತಾದ ನಾಟಕಗಳು ; *ದ್ರೌಪದಿಯ ಶ್ರೀಮುಡಿ, ರಸೋವೈಸಃ, ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ* ಮುಂತಾದ ವಿಮರ್ಶೆ–ವಿಚಾರ ಕೃತಿಗಳು ; *ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು* ಎಂಬ ಕಾದಂಬರಿಗಳಲ್ಲದೆ *ಶ್ರೀರಾಮಾಯಣ ದರ್ಶನಂ* ಎಂಬ ಮಹಾಕಾವ್ಯ ಸೇರಿದಂತೆ ಹಲವಾರು ಕೃತಿಗಳನ್ನು ಕುವೆಂಪು ಕನ್ನಡಕ್ಕೆ ನೀಡಿದ್ದಾರೆ.

ಮೈಸೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರೂ, ಕುಲಪತಿಗಳೂ ಆಗಿದ್ದ ಕುವೆಂಪು ಅವರಿಗೆ ಸಂದ ಗೌರವ–ಪುರಸ್ಕಾರಗಳು ಹಲವು. ಭಾರತೀಯ ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪದ್ಮವಿಭೂಷಣ ಪ್ರಶಸ್ತಿ, ಪಂಪಪ್ರಶಸ್ತಿ, ಕರ್ನಾಟಕ ರತ್ನ ಪ್ರಶಸ್ತಿ ಮುಂತಾದ ಗೌರವಗಳು ಅವರಿಗೆ ಸಂದಿವೆ. ೧೯೫೭ರಲ್ಲಿ ಧಾರವಾಡದಲ್ಲಿ ಜರುಗಿದ ೩೯ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯು ಗೌರವ ಇವರಿಗೆ ಸಂದಿದೆ. ತಮ್ಮ ಪ್ರಖರ ವಿಚಾರಧಾರೆಯಿಂದ ಕನ್ನಡ ನಾಡಿನ ಸಾಂಸ್ಕೃತಿಕ ಜೀವನವನ್ನು ಅಪಾರವಾಗಿ ಪ್ರಭಾವಿಸಿದ ಕವಿ ಇವರು.

ಶಬ್ದಾರ್ಥ : ಕರಿ–ಕಪ್ಪು, ಆನೆ, ಎಣ್ಣೆಯಲ್ಲಿ ಬೇಯಿಸು ; ಸುಲಿಗೆ–ಶೋಷಣೆ ; ಜಿಗಣೆ–ರಕ್ತ ಹೀರುವ ಜೀವಿ, ಇಂಬಳ ; ನೆತ್ತರು–ರಕ್ತ ; ತಿವಿ–ಚುಚ್ಚು, ಇರಿ ; ನೃಪ–ರಾಜ ; ಮುಡಿ–ಕೇಶ, ಕೂದಲು ; ಕೃಪೆ–ಕರುಣೆ ; ನೋಳ್ಪ–ನೋಡುವ ; ಬೆಪ್ಪು–ದಡ್ಡ ; ಆವಗಂ–ಯಾವಾಗಲೂ ; ಕುಯ್ಗುರಿ–ಕುಯ್ಯಲು ತಂದ ಕುರಿ ; ಸೀಳು–ಎರಡು ಭಾಗ ಮಾಡು, ಕತ್ತರಿಸು ; ಅಕ್ಷತೆ–ಅಕ್ಕಿಯ ಕಾಳು ; ಚರೆ–ಕೋವಿಯ ಮದ್ದು ; ಲಾಜೆ–ಅರಳು, ಭತ್ತದ ಅರಳು; ಸುಕ್ಕಿ–ಒಣಗಿ ; ಮೋಹಿನಿ–ದೇವಲೋಕದ ಸುಂದರಿ ; ಅನುದಿನಂ–ಪ್ರತಿನಿತ್ಯ ; ಸಿರಿ–ಶ್ರೀ, ಲಕ್ಷ್ಮಿ ; ಕಸ್ತೂರಿ–ಒಂದು ಬಗೆಯ ಸುಗಂಧ ದ್ರವ್ಯ ; ಮರುಳು–ಭ್ರಮಿತ, ಭೂತ.

ಟಿಪ್ಪಣಿ :

1) ಕಾಮಧೇನು : ದೇವಲೋಕದಲ್ಲಿ ಇರುವ ಹಸು. ದೇವತೆಗಳಿಗೆ ಸಂತೃಪ್ತಿಯಾಗಿ ಹಾಲನ್ನು ಕೊಡುವ ಗೋವು ಕೇಳಿದ್ದೆಲ್ಲವನ್ನೂ ಕೊಡುತ್ತದೆ ಎಂಬ ನಂಬಿಕೆ ಪುರಾಣದಲ್ಲಿ ಕಾಣುತ್ತೇವೆ.

2) ಶೂರ್ಪನಖಿ : ರಾಮಾಯಣದಲ್ಲಿ ಬರುವ ಒಂದು ಪಾತ್ರ. ರಾವಣನ ತಂಗಿ. ವನವಾಸದಲ್ಲಿದ್ದ ರಾಮ–ಸೀತೆ, ಲಕ್ಷ್ಮಣರ ಮುಂದೆ ವೇಷಾಂತರದಲ್ಲಿ ಬಂದು ವಂಚಿಸಲೆತ್ನಿಸಿ, ಅಪಮಾನಕ್ಕೊಳಗಾಗುತ್ತಾಳೆ. ಸೀತೆಯ ಅಪಹರಣಕ್ಕೆ ನೆಪವಾಗುತ್ತಾಳೆ.

ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ :

೧) 'ಸಾಮ್ರಾಜ್ಯವಾವಗಂ ಸುಲಿಗೆ ರೈತರಿಗೆ.'

೨) 'ನಮ್ಮವರೆ ಹದಹಾಕಿ ತಿವಿದರದು ಹೂವೆ?'

೩) 'ಬಾಯ್ದೆರೆದು ನೋಳ್ಪ ಬೆಪ್ಪಾಗಬೇಕೇನು?'

೪) 'ಸಾಮ್ರಾಜ್ಯ ಕಾಳಗಾನಲ್ತೆ ಕುರಿ ಕೊಲೆಗೆ?'

೫) 'ಸಾಕೆನಗೆ, ಸಾಕಯ್ಯ, ಸಾಮ್ರಾಜ್ಯ ಪೂಜೆ.'

ಒಂದೊಂದು ವಾಕ್ಯದಲ್ಲಿ ಉತ್ತರಿಸಿ :

೧) ಸುಲಿಗೆಗೆ ಒಳಗಾಗುವವರು ಯಾರು?

೨) ಸಾಮ್ರಾಜ್ಯವೆಂಬುದು ಯಾರ ಪಾಲಿಗೆ ಕಾಮಧೇನು?

೩) ಕಳ್ಳರೊಡೆಯನು ಯಾರು?

೪) ಸಾಮ್ರಾಜ್ಯ ಕಾಳಗೆ ಬಲಿಯಾಗುವ ಕುರಿ ಯಾರು?

೫) ಕುಯ್ಲುಗರಿಯನ್ನು ಯಾವುದರಿಂದ ಸೀಳುವರು?

೬) ಬಡತನದ ಗೊಬ್ಬರವನ್ನು ಹೀರಿ ಮೆರೆದವರು ಯಾರು?

ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ :

೧) ಯಾರನ್ನು ಜಿಗಣೆಗಳಿಗೆ ಹೋಲಿಸಲಾಗಿದೆ?

೨) ತಿಂದುಂಡು ಮೆರೆದವರು ಯಾರು ಯಾರು?

೩) ಕರುಣೆಯ ಗರಗಸ ಯಾವ ಬಗೆಯದು?

೪) ರೈತನು ಯಾರಿಗೆ ಮರುಳಾಗೆನೆಂದಿದ್ದಾನೆ?

ವಿವರವಾಗಿ ಉತ್ತರಿಸಿ :

೧) ರೈತನನ್ನು ಸಾಮ್ರಾಜ್ಯ ಕಾಳಗೆ ಕೊಡುವ ಬಲಿ ಎಂದು ಏಕೆ ಹೇಳಲಾಗಿದೆ?

೨) 'ರೈತನ ದೃಷ್ಟಿ' ಕವಿತೆಯಲ್ಲಿ ವ್ಯಕ್ತವಾಗಿರುವ ಆಶಯಗಳೇನು?

೩) ಸಾಮ್ರಾಜ್ಯಪೂಜೆ ಸಾಕು, ರೈತನ ಉದ್ಧಾರವಾಗಬೇಕು ಎಂಬ ವಿಚಾರಧಾರೆ ಕವಿತೆಯಲ್ಲಿ ಹೇಗೆ ಮೂಡಿಬಂದಿದೆ?

ಭಾಷಾಭ್ಯಾಸ :

೧) ಇವುಗಳಿಗೆ ನಾನಾರ್ಥ ಪದಗಳನ್ನು ಬರೆಯಿರಿ :

ಕರಿ ; ಮುಡಿ ; ಮರುಳು

೨) ಇವುಗಳಿಗೆ ವಿರುದ್ಧಾರ್ಥ ಪದಗಳನ್ನು ಬರೆಯಿರಿ :

ಸುಖ ; ಸಾವು ; ಪರದೇಶಿ.

೩) ಇವುಗಳಿಗೆ ಸಮಾನಾರ್ಥ ಪದಗಳನ್ನು ಬರೆಯಿರಿ :

ನೆತ್ತರು ; ನೃಪ ; ಲಕ್ಷ್ಮೀ.

೪) ಇವುಗಳಿಗೆ ತತ್ಸಮ-ತದ್ಭವ ಬರೆಯಿರಿ :

ಹಬ್ಬ ; ಸಿರಿ ; ಮೂರ್ತಿ ; ಕಸ್ತೂರಿ ; ಆಣೆ ; ಬಸವ.

ಚಟುವಟಿಕೆ :

೧) ಕುವೆಂಪು ಅವರ 'ನೇಗಿಲಯೋಗಿ' ಕವಿತೆಯನ್ನು ಅಭ್ಯಾಸ ಮಾಡಿ.

೨) ರೈತರ ಬಗ್ಗೆ ಪ್ರಕಟವಾಗಿರುವ ಕನ್ನಡ ಕವಿಗಳ ರಚನೆಗಳನ್ನು ಸಂಗ್ರಹಿಸಿ.

೩) ಬೇಂದ್ರೆಯವರ 'ಭೂಮಿತಾಯಿಯ ಚೊಚ್ಚಿಲ ಮಗ' ಕವಿತೆಯನ್ನು ಅಭ್ಯಸಿಸಿ.

೪) ಹಂಪಿ ಕನ್ನಡ ವಿಶ್ವವಿದ್ಯಾನಿಲಯದವರು ಪ್ರಕಟಿಸಿರುವ 'ಕುವೆಂಪು ಸಮಗ್ರ ಕಾವ್ಯ' ಸಂಪುಟಗಳನ್ನು ಅಭ್ಯಸಿಸಿ.

ಆಕರ ಗ್ರಂಥ :

'ಕೋಗಿಲೆ ಮತ್ತು ಸೋವಿಯಟ್ ರಷ್ಯಾ' – ಕುವೆಂಪು, ಪ್ರ : ಉದಯರವಿ ಪ್ರಕಾಶನ, ವಾಣಿವಿಲಾಸಪುರಂ, ಮೈಸೂರು–೫೭೦ ೦೦೨.

ಎಲ್ಲರೊಳಗೊಂದಾಗು

– ಡಿ.ವಿ.ಜಿ.

ಸಂಕೀರ್ಣ ಬದುಕಿನ ನಾನಾ ಸಂಗತಿಗಳನ್ನು ಕಗ್ಗದ ಮುಕ್ತಕಗಳು ಒಳಗೊಂಡಿವೆ. ಇಲ್ಲಿ ಸಾಂಪ್ರದಾಯಕ ಪರಿಕಲ್ಪನೆಗಳು ಕವಿಯ ವೈಚಾರಿಕತೆಯ ಪರಿಣಾಮದಿಂದಾಗಿ ಹೊಸ ಅರ್ಥವನ್ನು ಪಡೆದುಕೊಳ್ಳುತ್ತವೆ. ಪ್ರಸ್ತುತ ಮುಕ್ತಕಗಳಲ್ಲಿ ಸಾಹಿತ್ಯ, ವಿದ್ಯೆ, ಸಾಂಘಿಕ ಜೀವನ, ಜೀವನಸತ್ವ ಮುಂತಾದವುಗಳನ್ನು ವಿಶ್ಲೇಷಿಸುವ ಪರಿ ಮನೋಜ್ಞವಾಗಿದೆ. ಒಟ್ಟಿನಲ್ಲಿ ಮನುಷ್ಯ ಜೀವನ್ಮುಖಿಯಾಗಿ, ಜೀವನೋತ್ಸಾಹದಿಂದ ಮುನ್ನಡೆದಾಗ ಮಾತ್ರ ವ್ಯಕ್ತಿತ್ವದ ಉನ್ನತಿ, ಸಮಾಜದ ಉನ್ನತಿ ಸಾಧ್ಯ ಎಂಬ ನೀತಿಯನ್ನು ಇಲ್ಲಿನ ರಚನೆಗಳು ಒಳಗೊಂಡಿವೆ.

ಇಳೆಯಿಂದ ಮೊಳಕೆಯೊಗೆವಂದು ತಮಟೆಗಳಿಲ್ಲ ।
ಫಲಮಾಗುವಂದು ತುತ್ತೂರಿ ದನಿಯಿಲ್ಲ ॥
ಬೆಳಕೀವ ಸೂರ್ಯಚಂದ್ರರದೊಂದು ಸದ್ದಿಲ್ಲ ।
ಹೊಲಿ ನಿನ್ನ ತುಟಿಗಳನು – ಮಂಕುತಿಮ್ಮ ॥ ॥ ೧ ॥

ಹುಲ್ಲಾಗು ಬೆಟ್ಟದಡಿ ಮನೆಗೆ ಮಲ್ಲಿಗೆಯಾಗು ।
ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ ॥
ಬೆಲ್ಲ ಸಕ್ಕರೆಯಾಗು ದೀನದುರ್ಬಲರಿಂಗೆ ।
ಎಲ್ಲರೊಳಗೊಂದಾಗು – ಮಂಕುತಿಮ್ಮ ॥ ॥ ೨ ॥

ಜಟ್ಟಿ ಕಾಳಗದಿ ಗೆಲ್ಲದೊಡೆ ಗರಡಿಯ ಸಾಮು ।
ಪಟ್ಟು ವರಸೆಗಳೆಲ್ಲ ವಿಫಲವೆನ್ನುವೆಯೇಂ? ॥
ಮುಟ್ಟಿ ನೋಡವನ ಮೈಕಟ್ಟು ಕಬ್ಬಿಣದ ಗಟ್ಟಿ ।
ಗಟ್ಟಿತನ ಗರಡಿ ಫಲ – ಮಂಕುತಿಮ್ಮ ॥ ॥ ೩ ॥

ಅನುಭವದ ಪಾಲೊಳು ವಿಚಾರ ಮಂಥನವಾಗೆ ।
ಜನಿಯಿಕ್ಕುಂ ಜ್ಞಾನನವನೀತವದೆ ಸುಖದಂ ॥
ಗಿಣಿಯೋದು ಪುಸ್ತಕಜ್ಞಾನ ; ನಿನ್ನನುಭವವೇ ।
ನಿನಗೆ ಧರುಮದ ದೀಪ – ಮಂಕುತಿಮ್ಮ ॥ ॥ ೪ ॥

ಇರುವ ಕೆಲಸವ ಮಾಡು ಕಿರಿದೆನದೆ ಮನವಿಟ್ಟು ।
ದೊರೆತುದ ಹಸಾದವೆಂದುಣ್ಣು ಗೊಣಗಿಡದೆ ॥

ಧರಿಸು ಲೋಕದ ಭರವ ಪರಮಾರ್ಥವನು ಬಿಡದೆ ।
ಹೊರಡು ಕರೆ ಬರಲಳದೆ – ಮಂಕುತಿಮ್ಮ. ॥ ೫ ॥

ಗ್ರೀಸಿನಾ ಕಬ್ಬಗಳನೋದುವರು ದೆಹಲಿಯಲಿ ।
ಕಾಶಿಯಾ ಶಾಸ್ತ್ರಗಳನಾಕ್ಸ್‌ಫರ್ಡಿನವರು ॥
ದೇಶಕಾಲ ವಿಭಾಗ ಮನದ ರಾಜ್ಯದೊಳರದು ।
ಶ್ವಾಸವದು ಬೊಮ್ಮನದು – ಮಂಕುತಿಮ್ಮ ॥ ॥ ೬ ॥

❖ ❖ ❖ ❖

ಕವಿ ಪರಿಚಯ : ಡಿ.ವಿ.ಜಿ. ಎಂದೇ ಖ್ಯಾತರಾದ ಡಾ. ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪನವರು ಮಾರ್ಚ್ ೧೭, ೧೮೮೭ರಂದು ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿ ಜನಿಸಿದರು. ತಾಯಿಯ ಹೆಸರು ಅಲಮೇಲಮ್ಮ. ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಗುಂಡಪ್ಪನವರು ಬದುಕಿನ ಪರೀಕ್ಷೆಯಲ್ಲಿ ಪ್ರಥಮ ರ‍್ಯಾಂಕ್ ಗಳಿಸಿ ಲೋಕ ವಿಖ್ಯಾತರಾದವರು. ಬಡತನದ ಬೇಗೆಯಲ್ಲಿ ಬೇಯುತ್ತಲೇ ಬದುಕು ಪ್ರಾರಂಭಿಸಿದ ಇವರ ವೃತ್ತಿ ಜೀವನ ಪ್ರಾರಂಭವಾದದ್ದು ಮುಳಬಾಗಿಲಿನಲ್ಲಿ ಶಾಲಾ ಅಧ್ಯಾಪಕರಾಗಿ. ಕೆಲ ಕಾಲ ಸಣ್ಣ ಕಾರ್ಖಾನೆಯೊಂದರಲ್ಲಿ ಗುಮಾಸ್ತರಾಗಿಯೂ ಸೇವೆ ಸಲ್ಲಿಸಿದ ಶ್ರೀಯುತರು ನಂತರ *'ಸೂರ್ಯೋದಯ ಪ್ರಕಾಶಿಕಾ'* ಎಂಬ ಪತ್ರಿಕೆಗೆ ವರದಿಗಾರರಾಗಿ ಸೇರುವ ಮೂಲಕ ಪತ್ರಿಕಾ ರಂಗಕ್ಕೆ ಕಾಲಿಟ್ಟರು. ೧೯೧೨ರಲ್ಲಿ *'ಕರ್ನಾಟಕ'* ಎಂಬ ಪತ್ರಿಕೆಯ ಸಂಪಾದಕರಾಗಿ ತಮ್ಮ ನಿರ್ಭೀತ, ಸತ್ಯಪರ ಬರವಣಿಗೆಯಿಂದ ಜನರ ಪ್ರೀತಿಗೆ ಪಾತ್ರರಾದರು. ಕನ್ನಡ ಸಾಹಿತ್ಯ ಪರಿಷತ್ತಿನ ಬೆಳವಣಿಗೆಯಲ್ಲಿ ಡಿ.ವಿ.ಜಿ.ಯವರ ಶ್ರಮ ಅಪಾರವಾದುದು. ಅವರು ಹುಟ್ಟು ಹಾಕಿದ *'ಗೋಖಲೆ ಸಾರ್ವಜನಿಕ ಸಂಸ್ಥೆ'* ಡಿ.ವಿ.ಜಿ.ಯವರ ಸಾರ್ವಜನಿಕ ಸೇವಾಸಕ್ತಿಯ ಫಲಶ್ರುತಿ. ಬಹುಶ್ರುತ ಪ್ರತಿಭೆಯ ಶ್ರೀಯುತರು ಸಾಹಿತ್ಯ, ಪತ್ರಿಕೋದ್ಯಮ ಹಾಗೂ ಸಾರ್ವಜನಿಕ ಕ್ಷೇತ್ರಗಳಲ್ಲಿ ಸಲ್ಲಿಸಿದ ಸೇವೆ ಅನನ್ಯವಾದುದು.

'ಮಂಕುತಿಮ್ಮನ ಕಗ್ಗ', 'ಮರುಳ ಮುನಿಯನ ಕಗ್ಗ', 'ಶ್ರೀಮದ್ಭಗವದ್ಗೀತಾ ತಾತ್ಪರ್ಯ', 'ಬಾಳಿಗೊಂದು ನಂಬಿಕೆ', 'ದೇವರು', 'ಅಂತಃಪುರ ಗೀತೆಗಳು', 'ವನಸುಮ', 'ವಸಂತ ಕುಸುಮಾಂಜಲಿ', 'ನಿವೇದನ', 'ಉಮರನ ಒಸಗೆ', 'ಜ್ಞಾಪಕ ಚಿತ್ರಶಾಲೆ' (ಏಳು ಸಂಪುಟಗಳು) – ಇತ್ಯಾದಿ ಕೃತಿಗಳನ್ನು ಕನ್ನಡ ಸಾಹಿತ್ಯ ಲೋಕಕ್ಕೆ

ನೀಡಿರುವ ಡಿ.ವಿ.ಜಿ.ಯವರಿಗೆ 'ಜೀವನ ಧರ್ಮಯೋಗ' ಅಥವಾ *'ಶ್ರೀಮದ್ಭಗವದ್ಗೀತಾ'* ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ಲಭಿಸಿದೆ. ೧೯೩೨ರಲ್ಲಿ ಮಡಿಕೇರಿಯಲ್ಲಿ ಜರುಗಿದ ೧೮ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಯ ಗೌರವ ಹಾಗೂ ಮೈಸೂರು ವಿ.ವಿ.ಯ ಗೌರವ ಡಾಕ್ಟರೇಟ್ ಪದವಿ ಇವರಿಗೆ ಸಂದಿವೆ. ಶ್ರೀಯುತರು ೭ನೇ ಅಕ್ಟೋಬರ್ ೧೯೭೨ರಂದು ನಿಧನರಾದರು.

'ಕನ್ನಡದ ಭಗವದ್ಗೀತೆ' ಎಂದೇ ಜನಮನ್ನಣೆ ಪಡೆದಿರುವ *'ಮಂಕುತಿಮ್ಮನ ಕಗ್ಗ'*ವು ಪಕ್ವಚೇತನವೊಂದರ ನುಡಿಕಾಣಿ. ನಾಲ್ಕು ನಾಲ್ಕು ಪಾದಗಳ ೯೪೫ ಪದ್ಯಗಳಿರುವ 'ಕಗ್ಗ'ದ ವ್ಯಾಪ್ತಿ ಬಹು ವಿಶಾಲವಾದುದು. ವಿಜ್ಞಾನ, ಇತಿಹಾಸ, ಪುರಾಣ, ಶಾಸ್ತ್ರ ವಿಚಾರಗಳೊಂದಿಗೆ ಬದುಕಿನಿಂದಾಯ್ದ ಜೀವಂತ ಪ್ರತಿಮೆಗಳಿಂದ ಕಿಕ್ಕಿರಿದ ಈ ನುಡಿಗಡಣ ಬದುಕಿಗೆ ಒಂದು ನಂಬಿಕೆ ಭರವಸೆಯನ್ನು ಒದಗಿಸುತ್ತವೆ. ಇಲ್ಲಿನ ಪ್ರತಿ ಪದ್ಯವೂ ಓದುಗರಲ್ಲಿ ಮಿಂಚಿನ ಸಂಚಲನವನ್ನುಂಟು ಮಾಡಿದರೂ ಬೆಳಕು ಮಾತ್ರ ಮಿಂಚಿನಂತೆ ಮಿನುಗಿ ಮರೆಯಾಗದೆ ನಿರಂತರವಾಗಿ ಬದುಕನ್ನು ಬೆಳಗುತ್ತಲೇ ಇರುತ್ತದೆ. ಮಂಕುತಿಮ್ಮನ ಕಗ್ಗದಿಂದಾಗಿ ಡಿ.ವಿ.ಜಿ. ಕನ್ನಡದ ಸರ್ವಜ್ಞ, ತೆಲುಗಿನ ವೇಮನ, ತಮಿಳಿನ ತಿರುವಳ್‌ವರ್ ಸಾಲಿನಲ್ಲಿ ನಿಲ್ಲುವಂತಾಗಿದೆ. ಕಗ್ಗದ ಕಲ್ಪನಾರಮ್ಯತೆ, ದೃಷ್ಟಾಂತ ನಿಬಿಡತೆ, ಜೀವನಾನುಭವ, ಗಾಂಭಿರ್ಯ, ಸೌಂದರ್ಯ, ರಸಿಕತೆ, ಅನನ್ಯ ಅವಿಸ್ಮರಣೀಯ.

ಶಬ್ದಾರ್ಥ : ಇಳೆ–ಭೂಮಿ ; ಸಾಮು–ಅಂಗಸಾಧನೆ ; ಒಗೆ–ತೋರು ; ಜನಿಯಿಕ್ಕುಂ–ಜನಿಸುವುದು ; ನವನೀತ–ಬೆಣ್ಣೆ ; ಹಸಾದ–ಪ್ರಸಾದ ; ಪರಮಾರ್ಥ–ಅಧ್ಯಾತ್ಮ ; ಕಬ್ಬ–ಕಾವ್ಯ ; ಮಂಥನ–ಕಡೆಯುವಿಕೆ, ವಿಚಾರ ಮಾಡು.

ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ :

೧) 'ಹೊಲಿ ನಿನ್ನ ತುಟಿಗಳನು.'

೨) 'ಎಲ್ಲರೊಳಗೊಂದಾಗು.'

೩) 'ಗಟ್ಟಿತನ ಗರಡಿ ಫಲ.'

೪) 'ನಿನ್ನನುಭವವೆ ನಿನಗೆ ಧರುಮದ ದೀಪ.'

೫) 'ದೊರೆತುದ ಹಸಾದವೆಂದುಣ್ಣು.'

೬) 'ಶ್ವಾಸವದು ಬೊಮ್ಮನದು.'

ಒಂದೊಂದು ವಾಕ್ಯದಲ್ಲಿ ಉತ್ತರಿಸಿ :

೧) ತುತ್ತೂರಿಯ ದನಿ ಯಾವಾಗ ಇಲ್ಲ?

೨) ಯಾವುದರಲ್ಲಿ ಸವಿ-ಸೊಗವಿಲ್ಲ? ವಿಧಿ ಎಂಥ ಮಳೆ ಸುರಿಸಬಹುದು?

೩) ಗಟ್ಟಿತನ ಯಾವುದರ ಫಲ?

೪) 'ಧರುಮದ ದೀಪ' ಯಾವುದು?

೫) ಕೆಲಸವನ್ನು ಹೇಗೆ ಮಾಡಬೇಕು?

೬) ಕಾಶಿಯ ಶಾಸ್ತ್ರಗಳನ್ನು ಅಧ್ಯಯನ ಮಾಡುವವರಾರು?

೭) 'ಶ್ವಾಸ' ಯಾರದು?

ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ :

೧) ತುತ್ತೂರಿ-ತಮಟೆಗಳ ಧ್ವನಿ ಯಾವಾಗ ಇರುವುದಿಲ್ಲ?

೨) ಯಾವ ತೆರನಾಗಿ ಎಲ್ಲರೊಳಗೊಂದಾಗಬೇಕು?

೩) ಗರಡಿಯ ಪ್ರಯೋಜನಗಳೇನು?

೪) ಧರ್ಮದ ದಾರಿದೀಪ ಯಾವುದು?

೫) ಕೆಲಸ ಮತ್ತು ಪ್ರತಿಫಲಗಳ ವಿಚಾರದಲ್ಲಿ ಹೇಗಿರಬೇಕು?

೬) 'ಸಾಹಿತ್ಯ ಎಲ್ಲರದು' ಎಂಬುದನ್ನು ಹೇಗೆ ನಿರೂಪಿಸಲಾಗಿದೆ?

ವಿವರವಾಗಿ ಉತ್ತರಿಸಿ :

೧) ಮಂಕುತಿಮ್ಮನ ಕಗ್ಗದಲ್ಲಿ ವ್ಯಕ್ತವಾಗಿರುವ ಸಕಾರಾತ್ಮಕ ಧೋರಣೆಗಳನ್ನು ಸಂಗ್ರಹಿಸಿ ಬರೆಯಿರಿ.

೨) ಆತ್ಮಕಲ್ಯಾಣ ಹಾಗೂ ಸಮಾಜಕಲ್ಯಾಣಗಳನ್ನು ಸಾಧಿಸಲು ಕವಿ ಸೂಚಿಸಿರುವ ಮಾರ್ಗವನ್ನು ಪದ್ಯದ ಹಿನ್ನೆಲೆಯಲ್ಲಿ ಚರ್ಚಿಸಿ.

೩) ಪದ್ಯದಲ್ಲಿ ವ್ಯಕ್ತವಾಗಿರುವ ಲೋಕನೀತಿಯನ್ನು ಉದಾಹರಣೆಗೊಂದಿಗೆ ವಿವರಿಸಿ.

ಭಾಷಾಭ್ಯಾಸ :

೧) ಇವುಗಳ ತತ್ಸಮ-ತದ್ಭವಗಳನ್ನು ಬರೆಯಿರಿ :
ಚಂದ್ರ, ವಿಧಿ, ಪುಸ್ತಕ, ಧರುಮ, ಹಸಾದ, ಕಬ್ಬ.

೨) ಈ ಪದಗಳ ಸಮಾನಾರ್ಥ ಪದಗಳನ್ನು ಬರೆಯಿರಿ :
ಇಳೆ, ಸೂರ್ಯ, ಚಂದ್ರ, ವಿಧಿ.

೩) ಈ ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ :
ಒಗೆ, ನವ, ಪಾಲು, ಪರ.

೪) ಇವುಗಳನ್ನು ಬಿಡಿಸಿ ಬರೆಯಿರಿ :
ಮೊಳಕೆಯೊಗೆ, ಹುಲ್ಲಾಗು, ಫಲಮಾಗುವಂದು, ಹೆಬ್ಬದುಕು, ಒಬ್ಬನೂಟ, ಪಾಲೊಳು.

೫) ಗಿಣಿಯೋದು, ಧರುಮದೀಪ, ಗರಡಿಫಲ – ಈ ಪ್ರಯೋಗಗಳ ವಿಶೇಷತೆಯನ್ನು ಗಮನಿಸಿ, ವಾಕ್ಯದಲ್ಲಿ ಪ್ರಯೋಗಿಸಿ.

ಚಟುವಟಿಕೆ :

೧) 'ಮಂಕುತಿಮ್ಮನ ಕಗ್ಗ' ವನ್ನಾಧರಿಸಿ ವ್ಯಕ್ತಿತ್ವ ವಿಕಸನದ ಬಗ್ಗೆ ಒಂದು ಪ್ರಬಂಧ ಬರೆಯಿರಿ.

೨) ನಿಮ್ಮ ಅನುಭವಗಳನ್ನು ಚೌಪದಿ ರೂಪದಲ್ಲಿ ಬರೆದು ಉಪನ್ಯಾಸಕರಿಗೆ ತೋರಿಸಿ ಮಾರ್ಗದರ್ಶನ ಪಡೆಯಿರಿ.

ಆಕರ ಗ್ರಂಥ :

ಡಿ.ವಿ.ಜಿ. ಕೃತಿ ಶ್ರೇಣಿ : ಸಂಪುಟ–೬, ಕಾವ್ಯ–೧
ಸಂಪಾದಕರು : ಡಾ. ಹಾ.ಮಾ. ನಾಯಕ
ಪ್ರಕಾಶಕರು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ನೃಪತುಂಗರಸ್ತೆ, ಬೆಂಗಳೂರು.

ಹೆಚ್ಚಿನ ಓದು :

೧) ಮರುಳ ಮುನಿಯನ ಕಗ್ಗ – ಡಿ.ವಿ.ಜಿ.

೨) ಸರ್ವಜ್ಞನ ವಚನಗಳು.

ರೈಲ್ವೇ ನಿಲ್ದಾಣದಲ್ಲಿ

– ಕೆ.ಎಸ್. ನರಸಿಂಹಸ್ವಾಮಿ

ಬಾಣಂತನಕ್ಕೆಂದು ತವರಿಗೆ ಬಂದ ಮಗಳು ಗಂಡನ ಮನೆಗೆ ಹಿಂದಿರುಗುವ ಸಂದರ್ಭ ತಾಯಿ–ಮಗಳಿಬ್ಬರ ಮನಮಿಡಿಯುವಂತಹದ್ದು. ಮಗಳನ್ನು–ಮೊಮ್ಮಗುವನ್ನು ಮನೆಯಿಂದ ಕಳಿಸಬೇಕಲ್ಲ ಎಂಬ ಕಳವಳ ತಾಯಿಯದಾದರೆ, ಬಿಟ್ಟು ಹೊರಡಬೇಕಾದ ದುಃಖ ಮಗಳದ್ದು. ಜಾನಪದರು ಅದನ್ನು 'ತಿಟ್ಹತ್ತಿ ತಿರುಗಿ' ತವರನ್ನು ನೋಡುತ್ತಾ ಸಾಗುವ ಹೆಣ್ಣಿನ ಅಳಲಿನ ಮೂಲಕ ವ್ಯಕ್ತಪಡಿಸಿದ್ದಾರೆ. ಸಂಬಂಧಗಳು ಅತ್ಯಂತ ಕೃತಕವೆನ್ನಿಸುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ರೈಲ್ವೇ ನಿಲ್ದಾಣದಲ್ಲಿ ನಡೆಯುವ ತಾಯಿ–ಮಗಳ ಪ್ರಶ್ನೋತ್ತರವು ಕರುಳಿನ ಬಾಂಧವ್ಯವನ್ನು ಸೆರೆಹಿಡಿದಿದೆ. ಕಕ್ಕುಲಾತಿ–ಕರ್ತವ್ಯಗಳ ನಡುವಿನ ಹೊಯ್ದಾಟಗಳನ್ನು ಸಂಘರ್ಷದ ನೆಲೆಯಲ್ಲಿ ಈ ಕವಿತೆ ಹಿಡಿದಿಟ್ಟಿದೆ. ಇಲ್ಲಿನ ಸಣ್ಣಸಣ್ಣ ಪಂಕ್ತಿಗಳಲ್ಲಿ ಒಂದೊಂದು ಪ್ರಶ್ನೆ–ಉತ್ತರದಿಂದ ಸಂದರ್ಭ ಸ್ಪಷ್ಟವಾಗುತ್ತದೆ. ಸನ್ನಿವೇಶ ಕಣ್ಣಿಗೆ ಕಟ್ಟುವುದು ಮಾತ್ರವಲ್ಲ, ಎರಡು ಅಂತಃಕರಣಗಳು ಜೊತೆಯಾಗಿ ಅರಳುತ್ತ ಹೋಗುತ್ತದೆ. ಸ್ಪಷ್ಟವಾದ ಆವರಣದಲ್ಲಿ ನೇರವಾಗಿ ತಮ್ಮ ಭಾವಗಳನ್ನು ಹೇಳಿಕೊಳ್ಳದೆಯೆ, ಸಾಮಾನ್ಯ ಭಾಷೆಯ ನೆರವಿಲ್ಲದೆಯೇ ಎರಡು ಅಂತಃಕರಣಗಳು ಪ್ರಕಟಗೊಳ್ಳುತ್ತವೆ. ಭಾಷೆಯ ವಿಶಿಷ್ಟ ಪ್ರಯೋಗಕ್ಕೆ ಈ ಕವಿತೆ ನಿದರ್ಶನವಾಗಿದೆ.

'ಎಲ್ಲಿದ್ದೀಯೇ ಮೀನಾ?'
ಇಲ್ಲೇ ಇದ್ದೇನಮ್ಮ.
'ತೊಟ್ಟಿಲು, ಪೆಟ್ಟಿಗೆ, ಹಾಸಿಗೆ?'
ಇಲ್ಲೇ ಇವೆಯಮ್ಮ.

'ಏನನ್ನೋ ಮರೆತಂತಿದೆ?'
ಮರೆಯುವುದೇ, ಹೇಗೆ?
'ಏನನ್ನೋ ನೆನೆವಂತಿದೆ?'
ನಾನಿರುವುದೆ ಹಾಗೆ.

'ಬಿಸಿನೀರಿದೆಯೇ ಮೀನಾ,
ಮಗುವಿನ ಹಾಲಿನ ಪುಡಿಗೆ?'
ಬೇಕಾದಷ್ಟಿದೆಯಮ್ಮ –
(ಕಣ್ಣಲ್ಲೂ ಜತೆಗೆ).

'ಮಗುವನು ಹಿಡಿಯೇ ಹೀಗೆ,
ಕಪ್ಪಿಡುವೆನು ಹಣೆಗೆ–
ಮೈ ಬಿಸಿಯಾಗಿದೆಯಲ್ಲೆ
ಹೊರಡುವ ಸಮಯಕ್ಕೆ!'

ಘಂಟೆಯ ಹೊಡೆತಕೆ, ಸಿಳ್ಳಗೆ,
ಬೀಸಿದ ಬಾವುಟಕೆ
ನಡುಗುತ್ತಿದೆ ಬಂಡಿಯ ಮೈ
ದೀಪದ ಬೆದರಿಕೆಗೆ.

ಕಿಟಕಿಯ ಜತೆಗೂ ಬರುವುದು
ಬೇಡಮ್ಮ, ಹೋಗು.
ಇಲ್ಲಿಂದಲೆ ಕೈಮುಗಿಯುವೆ–
ನಲ್ಲಿಂದಲೆ ಹರಸು.

ಕಂಬಿಗಳುದ್ದಕು ಹಬ್ಬಿತು
ಎಂಜಿನ್ನಿನ ಕೂಗು;
'ಎಲ್ಲಿದ್ದೀಯೇ ಮೀನಾ,
ಎಲ್ಲಿದ್ದೀಯೇ?'

ಕಿಡಿಗಳು ಹೊರಳುವ ಹೊಗೆಯಲಿ
ಹೆಗ್ಗಾಲಿಗಳುರುಳು;
ಇಲ್ಲೇ ಇದ್ದೇನಮ್ಮ,
ಇಲ್ಲೇ ಇದ್ದೇನೆ.

'ಕಿಟಕಿಯ ಮುಚ್ಚಿಕೋ ಮೀನಾ,
ಕಿಡಿ ಬೀಳುವುದೊಳಗೆ,' –
ಕಿಟಕಿಯ ಮುಚ್ಚಿದೆನಮ್ಮ,
ಕಿಡಿ ಬೀಳದ ಹಾಗೆ.

❖ ❖ ❖ ❖

ಕವಿ ಪರಿಚಯ : 'ಮೈಸೂರು ಮಲ್ಲಿಗೆ'ಯ ಕಂಪನ್ನು ನಾಡಿನಾದ್ಯಂತ ಪಸರಿಸಿದ ಕವಿ ಎಂದೇ ಚಿರಪರಿಚಿತರಾಗಿರುವ ಕೆ.ಎಸ್. ನರಸಿಂಹಸ್ವಾಮಿ ಅವರು ಜನವರಿ

೨೬, ೧೯೧೫ರಂದು ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆ ತಾಲ್ಲೂಕಿನ ಕಿಕ್ಕೇರಿಯಲ್ಲಿ ಜನಿಸಿದರು. ಇವರ ತಂದೆ ಸುಬ್ಬರಾಯರು ; ತಾಯಿ ಹೊಸಹೊಳಲು ನಾಗಮ್ಮ ; ಇವರ ಪತ್ನಿ ಶ್ರೀಮತಿ ವೆಂಕಮ್ಮ. *ಮೈಸೂರು ಮಲ್ಲಿಗೆ, ಐರಾವತ, ದೀಪದ ಮಲ್ಲಿ, ಉಂಗುರ, ಇರುವಂತಿಗೆ, ಶಿಲಾಲತೆ, ತೆರೆದ ಬಾಗಿಲು, ನವಪಲ್ಲವ, ಮನೆಯಿಂದ ಮನೆಗೆ, ಉಪವನ, ದಮಯಂತಿ* ಮುಂತಾದ ಕವಿತಾ ಸಂಗ್ರಹಗಳನ್ನು ಕೆ.ಎಸ್. ನರಸಿಂಹಸ್ವಾಮಿಯವರು ಪ್ರಕಟಿಸಿದ್ದಾರೆ. *ಮಲ್ಲಿಗೆಯ ಮಾಲೆ* ಎಂಬ ಹೆಸರಿನಲ್ಲಿ ಇವರ ಸಮಗ್ರ ಕವಿತೆಗಳು ಪ್ರಕಟಗೊಂಡಿವೆ. ಅನುವಾದದಲ್ಲೂ ಕೃಷಿ ಮಾಡಿರುವ ಕೆ.ಎಸ್.ನ. *ಮೋಹನಮಾಲೆ, ನನ್ನ ಕನಸಿನ ಭಾರತ, ಪ್ರಪಂಚದ ಬಾಲ್ಯದಲ್ಲಿ, ಮೀಡಿಯಾ, ರಾಣಿಯ ಗಿಳಿ ಮತ್ತು ರಾಜನ ಮಂಗ* ಮುಂತಾದ ಕೃತಿಗಳನ್ನು ಪ್ರಕಟಿಸಿದ್ದಾರೆ.

೧೯೯೦ರಲ್ಲಿ ಮೈಸೂರಿನಲ್ಲಿ ಜರುಗಿದ ೬೦ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಕೆ.ಎಸ್. ನರಸಿಂಹಸ್ವಾಮಿಯವರಿಗೆ *ತೆರೆದ ಬಾಗಿಲು* ಕೃತಿಗಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ದೊರೆತಿದೆ. ಅಲ್ಲದೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ ಮುಂತಾದ ಪುರಸ್ಕಾರಗಳು ಸಂದಿವೆ. ಶ್ರೀಯುತರು ೨೮ನೇ ಡಿಸೆಂಬರ್ ೨೦೦೩ರಂದು ನಿಧನರಾದರು.

ಶಬ್ದಾರ್ಥ : ನೆನೆ–ಯೋಚಿಸು ; ಕಪ್ಪು–ಕಾಡಿಗೆ ; ಬಂಡಿ–ರೈಲುಗಾಡಿ ; ಬೆದರಿಕೆ–ಹೆದರಿಕೆ ; ಹರಸು–ಆಶೀರ್ವದಿಸು ; ಕಂಬಿ–ರೈಲ್ವೇ ಹಳಿ.

ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ :

೧) ‘ಏನನ್ನೋ ಮರೆತಂತಿದೆ?’

೨) ‘ಬಿಸಿನೀರಿದೆಯೇ ಮೀನಾ, ಮಗುವಿನ ಹಾಲಿನ ಪುಡಿಗೆ?’

೩) ‘ಮೈ ಬಿಸಿಯಾಗಿದೆಯಲ್ಲೆ, ಹೊರಡುವ ಸಮಯಕ್ಕೆ.’

೪) ‘ಇಲ್ಲಿಂದಲೇ ಕೈಮುಗಿಯುವೆನಲ್ಲಿಂದಲೇ ಹರಸು.’

೫) ‘ಕಿಟಕಿಯ ಮುಚ್ಚಿದೆನಮ್ಮ ಕಿಡಿ ಬೀಳದ ಹಾಗೆ.’

ಒಂದೊಂದು ವಾಕ್ಯದಲ್ಲಿ ಉತ್ತರಿಸಿ :

೧) ಎಲ್ಲಿದ್ದೀಯೇ ಎಂದು ಯಾರು ಯಾರನ್ನು ಕೇಳಿದರು?

೨) ‘ನಾನಿರುವುದೇ ಹಾಗೆ’ ಎಂದುತ್ತರಿಸಿದವರು ಯಾರು?

೩) ತಾಯಿ ಮಗುವಿನ ಹಣೆಗೆ ಏನಿಡುವೆನೆಂದಳು?

೪) ಬಂಡಿಯ ಮೈ ನಡುಗಿದ್ದೇಕೆ?

೫) ಕಿಟಕಿಯ ಜತೆಗೂ ಬರುವುದು ಬೇಡವೆಂದು ಮಗಳು ಹೇಳಿದ್ದು ಯಾರಿಗೆ?

೬) ಎಂಜಿನ್ನಿನ ಕೂಗು ಹೇಗೆ ಕೇಳಿಸಿತು?

೭) ಕಿಟಕಿ ಮುಚ್ಚಿಕೊಳ್ಳಲು ತಾಯಿ ಹೇಳಿದ್ದೇಕೆ?

ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ :

೧) 'ಬಿಸಿ ನೀರಿದೆಯೇ' ಎಂಬ ತಾಯಿಯ ಪ್ರಶ್ನೆಗೆ ಮಗಳ ಉತ್ತರವೇನು?

೨) ಬಂಡಿಯ ಮೈ ನಡುಗಲು ಕಾರಣವೇನು?

೩) 'ಕಿಟಕಿಯ ಜತೆಗೆ ಬರುವುದು' ಎಂದರರ್ಥವೇನು?

ವಿವರವಾಗಿ ಉತ್ತರಿಸಿ :

೧) ತಾಯಿಯ ಆತಂಕ, ವೇದನೆ ಕವಿತೆಯಲ್ಲಿ ಹೇಗೆ ವ್ಯಕ್ತವಾಗಿದೆ?

೨) ಮಗಳು ತಾಯಿಗೆ ಕೊಡುವ ಉತ್ತರದ ಸ್ವಾರಸ್ಯವೇನು?

೩) ತಾಯಿ-ಮಗಳ ಅಂತಃಕರಣ ಕವಿತೆಯಲ್ಲಿ ಹೇಗೆ ಅನಾವರಣಗೊಂಡಿದೆ?

ಭಾಷಾಭ್ಯಾಸ :

೧) ಇವುಗಳನ್ನು ಬಿಡಿಸಿ ಬರೆಯಿರಿ :

ಹೆಗ್ಗಾಲಿಗಳುರುಳು, ಕಂಬಿಗಳುದ್ದಕ್ಕು.

೨) ಇವುಗಳ ನಾನಾರ್ಥಗಳನ್ನು ಬರೆಯಿರಿ :

ನೆನೆ, ಹಿಡಿ, ಬೇಡ, ಮರೆ, ಕಪ್ಪು.

ಚಟುವಟಿಕೆ :

೧) ಈ ಕವಿತೆಯ ಜೊತೆಗೆ 'ತೊಟ್ಟಿಲ ಹೊತ್ಕೊಂಡು' ಎಂಬ ಜಾನಪದ ತ್ರಿಪದಿಯನ್ನು ಹೋಲಿಸಿ ನೋಡಿ.

೨) ನರಸಿಂಹಸ್ವಾಮಿಯವರ ಕಾವ್ಯವನ್ನು ಕುರಿತ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರ 'ಇಹದ ಪರಿಮಳದ ಹಾದಿ' ಮಹಾಪ್ರಬಂಧವನ್ನು ಗಮನಿಸಿ.

೩) ನರಸಿಂಹಸ್ವಾಮಿಯವರ ವಾತ್ಸಲ್ಯ ಗೀತೆಗಳನ್ನು ಅಭ್ಯಸಿಸಿ.

೩) ರೈಲ್ವೇ ನಿಲ್ದಾಣದಲ್ಲಿ ನೀವು ಕಂಡ ದೃಶ್ಯಗಳನ್ನು ಕುರಿತು ಪ್ರಬಂಧ ರಚಿಸಿ.

೪) ಕವಿತೆಯಲ್ಲಿ ಬಂದಿರುವ ಪ್ರಶ್ನಾರ್ಥ ಪದಗಳನ್ನು ಪಟ್ಟಿ ಮಾಡಿ.

೫) ಈ ಕವಿತೆಯಲ್ಲಿ ಬಂದಿರುವ ಅನ್ಯದೇಶ್ಯ ಪದಗಳನ್ನು ಪಟ್ಟಿ ಮಾಡಿ.

ಆಕರ ಗ್ರಂಥ :

ತೆರೆದ ಬಾಗಿಲು – ಕೆ.ಎಸ್. ನರಸಿಂಹಸ್ವಾಮಿ, ಪ್ರ : ಲಿಪಿ ಪ್ರಕಾಶನ,
ಬೆಂಗಳೂರು–೫೬೦ ೦೦೪.

ಹೆಚ್ಚಿನ ಓದು :

'ಮಲ್ಲಿಗೆಯ ಮಾಲೆ' – ಕೆ.ಎಸ್. ನರಸಿಂಹಸ್ವಾಮಿ ಅವರ ಸಮಗ್ರ ಕವಿತೆ.

ಗಝಲ್

– ಶಾಂತರಸ

ಮನುಷ್ಯ ಪ್ರಯತ್ನಕ್ಕೆ ಮೀರಿದುದು ಯಾವುದೂ ಇಲ್ಲ. ನಮ್ಮ ಸಾಮರ್ಥ್ಯದ ಅರಿವು ನಮಗುಂಟಾದರೆ ಏನನ್ನಾದರೂ ಸಾಧಿಸಬಹುದು. ಆಕಾಶದ ನಕ್ಷತ್ರಗಳನ್ನು ತಂದು ರಂಗೋಲಿ ಹಾಕಬಹುದು. ನೆಲದ ಮರೆಯ ಸಂಪತ್ತನ್ನು ಅಗೆದು ತೆಗೆದು ನವ ಜಗತ್ತನ್ನು ನಿರ್ಮಿಸಬಹುದು. ನಮಗೊಂದು ವೀರ ಪರಂಪರೆ ಇದೆ, ಸುಭದ್ರ ಸಂಸ್ಕಾರವಿದೆ, ಫಲವತ್ತಾದ ಭೂಮಿ ಇದೆ. ಬೇಕಾಗಿರುವುದು ಒಳ ಹೊರಗಿನ ಒಕ್ಕಲು ಮಾತ್ರ. ಹೊಸ ಪಂಥಾಹ್ವಾನವನ್ನು ಸ್ವೀಕರಿಸಿ ತನು–ಮನಗಳಿಂದ ಶ್ರಮಿಸಿದರೆ ಉಜ್ವಲ ಭವಿಷ್ಯ ನಮ್ಮದಾಗುತ್ತದೆ.

ಜಿಗಿದು ಹೋದವು ತಾರೆ ಎಂದೋ ನೀಲಾಂಬರದ ಅಂಗಳಕೆ
ಯಾರು ತರುವರು ಮರಳ ಈ ನೆಲಕೆ ರಂಗೋಲಿ ಹಾಕಲಿಕೆ

ಕಾದು ಕುಳಿತಿದೆ ನೆಲದ ಮರೆಯಲಿ ನಮ್ಮತನದ ನಿಧಾನವು
ಅಗೆದು ತೆಗೆಯಿರಿ ಚಿಮ್ಮಿ ಹಂಚಿರಿ ವಿಶ್ವ ನವ ನಿರ್ಮಾಣಕೆ

ಬಂಧಿಯಾಗಿವೆ ಕನಸು ನಮ್ಮವರ ಹಾಳುಕೋಟೆಗಳಲ್ಲಿ
ಮುಕ್ತಗೊಳಿಸಿರಿ ಬೇಗ ಜೀವನವು ಚಿಗುರೊಡೆದು ಬೆಳೆಯಲಿಕೆ

ಪಂಪಸಾಗರ ಬಸವಸಾಗರ ಕಾರಂಜಾ ತೆರೆಗಳಲಿ
ಹೊಸತು ಕಾವ್ಯವ ಬರೆಯಬೇಕಿದೆ ಬದುಕು ಬಣ್ಣವೇರಲಿಕೆ

ಲೋಕ ಮೆಚ್ಚಿದ ವೀರ ಪರಂಪರೆಯಿದೆ, ಗ್ಲಾನಿ ಏಕೆ ಏನೋ
ಉಗ್ರರೆ ಚದುರರೆ ಮೈಮನ ಒಡ್ಡಿರಿ ಹೊಸ ಹೊಸ ಆಹ್ವಾನಕೆ

ಭೂಮಿಯಿಹುದು ಶಕ್ತಿಯಿಹುದು ಯಾಕೆ ಯಾಕೆ ಹೊಟ್ಟೆ ಸುಡುವುದು
ಸಮತೆ ಬೇಕು ನ್ಯಾಯ ಬೇಕು ಇಳಿಯಬೇಕು ಉಗ್ರ ಹೋರಾಟಕೆ

❖ ❖ ❖ ❖

ಕವಿ ಪರಿಚಯ : ಶಾಂತರಸ (ಜನನ : ೦೭–೦೫–೧೯೨೪ ಮರಣ : ೧೩–೦೪–೨೦೦೮) ಹೆಸರಿನಿಂದ ಕನ್ನಡ ಸಾಹಿತ್ಯ ಲೋಕಕ್ಕೆ ಚಿರಪರಿಚಿತರಾದ ಶ್ರೀ ಶಾಂತಯ್ಯ ಹಿರೇಮಠ ಅವರು ರಾಯಚೂರು ಜಿಲ್ಲೆಯ ಹೆಂಬೆರಾಳುವಿನಲ್ಲಿ ಜನಿಸಿದರು. ತಂದೆ ಚನ್ನಬಸವಯ್ಯ, ತಾಯಿ ಸಿದ್ಧಲಿಂಗಮ್ಮ. ನವೋದಯ ಮೊದಲುಗೊಂಡು

ಬಂಡಾಯದವರೆಗೆ ಕನ್ನಡ ಸಾಹಿತ್ಯ ಭೂಮಿಯಲ್ಲಿ ಫಲವತ್ತಾದ ಬೆಳೆ ಬೆಳೆದ ಶಾಂತರಸರು ಕಲ್ಯಾಣ ಕರ್ನಾಟಕದ ಜೀವಧ್ವನಿ ಎನಿಸಿದ್ದಾರೆ. *ಮಾನಸಗಳ್ಳಿ, ಬಯಲುಸೀಮೆಯ ಬಿಸಿಲು, ಗಜ಼ಲ್ ಮತ್ತು ಬಿಡಿ ದ್ವಿಪದಿ* ಇವರ ಪ್ರಮುಖ ಕಾವ್ಯ ಕೃತಿಗಳು. *ಬಡೇಸಾಬು ಪುರಾಣ, ನಾಯಿ ಮತ್ತು ಪಿಂಚಣಿ, ಉರಿವ ಬದುಕು* ಇವರ ಪ್ರಮುಖ ಕಥಾ ಸಂಕಲನಗಳು. *ಸಣ್ಣಗೌಡಶಾನಿ* ಕಾದಂಬರಿಯನ್ನು ಬರೆದ ಶಾಂತರಸರು ಗೀತರೂಪಕ, ನಾಟಕ, ಜೀವನ ಚರಿತ್ರೆಗಳನ್ನೂ ರಚಿಸಿದ್ದಾರೆ. ಇದಲ್ಲದೇ ಏಳು ಗ್ರಂಥ ಸಂಪಾದನಾ ಕೃತಿಗಳನ್ನೂ, ಏಳು ಸಂಪಾದಿತ ಕೃತಿಗಳನ್ನೂ, ಐದು ಸಂಶೋಧನ ಕೃತಿಗಳನ್ನೂ ಪ್ರಕಟಿಸಿದ್ದಾರೆ. *ಮಿರ್ಜಾ ರುಸ್ವಾ* ಅವರ *ಉಮರಾವ್ ಜಾನ್ ಅದಾ* ಕೃತಿಯನ್ನು ಹಾಗೂ *ಅಮೃತಾ ಪ್ರೀತಂ* ಅವರ ಕಥೆಗಳನ್ನು ಕನ್ನಡಕ್ಕೆ ಸೊಗಸಾಗಿ ಅನುವಾದಿಸಿದ್ದಾರೆ.

ಫಾರ್ಸಿ ಮೂಲದ ಗಜ಼ಲ್ ಸಾಹಿತ್ಯ ಉರ್ದು ಭಾಷೆಯಲ್ಲಿ ಅತ್ಯಂತ ಶ್ರೀಮಂತವಾಗಿ ಬೆಳೆದಿದೆ. ಇಂತಹ ಗಜ಼ಲ್ ಅನ್ನು ಅತ್ಯಂತ ಸಮರ್ಥವಾಗಿ ಕನ್ನಡಕ್ಕೆ ಒಗ್ಗಿಸಿಕೊಂಡ ಶ್ರೀ ಶಾಂತರಸರು ಕನ್ನಡ ಗಜಲ್ ಸಾಹಿತ್ಯದ ಆದ್ಯಪುರುಷ–ರೆಂದೆನಿಸಿದ್ದಾರಲ್ಲದೇ ಗಜ಼ಲ್ ಗಾರುಡಿಗರೆಂದೇ ಪ್ರಸಿದ್ಧರಾಗಿದ್ದಾರೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿಯ ಫೆಲೋಷಿಪ್ ಮುಂತಾದ ಪ್ರಶಸ್ತಿಗಳಿಂದ ಪುರಸ್ಕೃತರಾದ ಶಾಂತರಸರಿಗೆ ಗುಲಬರ್ಗಾ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ಹಾಗೂ ಹಂಪಿ ಕನ್ನಡ ವಿಶ್ವವಿದ್ಯಾಲಯ *ನಾಡೋಜ* ಪ್ರಶಸ್ತಿ ನೀಡಿ ಗೌರವಿಸಿವೆ. ೨೦೦೬ರಲ್ಲಿ ಬೀದರದಲ್ಲಿ ಜರುಗಿದ ೭೨ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನದ ಗೌರವವೂ ಇವರಿಗೆ ಸಂದಿದೆ.

ಗಜ಼ಲ್

ಜಗತ್ತಿನ ಕಾವ್ಯದಲ್ಲಿ ಗಜ಼ಲಿಗೆ ವಿಶಿಷ್ಟ ಸ್ಥಾನವಿದೆ. ಗಜ಼ಲ್ ಉರ್ದು ಕಾವ್ಯದ ಕೆನೆ. ಗಜ಼ಲ್ ಎಂಬುದು ಅರಬ್ಬಿ ಶಬ್ದ. "ಹೆಂಗಸರೊಡನೆ ಮಾತನಾಡುವುದು, ಸಂಭಾಷಿಸುವುದು, ಪ್ರೇಮ ಮೋಹ ಅನುರಾಗ ವ್ಯಕ್ತಪಡಿಸುವುದು" ಎಂದು ಇದರ ಅರ್ಥ. ಗಜ಼ಲ್ ಅರಬ್ಬಿ ಶಬ್ದವಾದರೂ ಕಾವ್ಯ ಪ್ರಕಾರವಾಗಿ ಬೆಳೆದದ್ದು ಇರಾನ್ ದೇಶದ ಫಾರ್ಸಿ ಭಾಷೆಯಲ್ಲಿ.

ಅರಬ್ಬರ *ಕಸೀದ್* ಎಂಬ ಕಾವ್ಯ ಪ್ರಕಾರ ಅತ್ಯಂತ ಪ್ರಸಿದ್ಧವಾದುದು. ವ್ಯಕ್ತಿ ಪ್ರಶಂಸೆ, ಧೀರರ ಹೊಗಳಿಕೆ, ದಾರ್ಶನಿಕತೆ ಇತ್ಯಾದಿ ವಿಷಯಗಳನ್ನು *ಕಸೀದ್* ಒಳಗೊಂಡಿರುತ್ತದೆ. *ಕಸೀದ್‌ದ* ಪೀಠಿಕಾ ದ್ವಿಪದಿಗಳು (ಇದಕ್ಕೆ ತಷಬೀಬ್ ಎನ್ನುತ್ತಾರೆ)

ಪ್ರೀತಿ–ಪ್ರೇಮ ಭಾವಾಭಿವ್ಯಕ್ತಿಯನ್ನು ಒಳಗೊಂಡಿರುತ್ತವೆ. ವಸಂತ, ತಂಗಾಳಿ, ಯೌವನ, ಮಧುಮತ್ತತೆ, ಶೃಂಗಾರಗಳನ್ನೊಳಗೊಂಡ ಪೀಠಿಕೆಯ ಷೇರ್ (ದ್ವಿಪದಿ)ಗಳನ್ನೇ ಎತ್ತಿ ಬೇರೆ ಮಾಡಿ ಅವುಗಳಿಗೆ *ಗಜ಼ಲ್* ಎಂದು ಹೆಸರಿಡಲಾಯಿತು. ಗಜ಼ಲಿನ ಪ್ರಾರಂಭಿಕ ದ್ವಿಪದಿಗೆ *ಮತ್ಲಾ* ಎನ್ನುತ್ತಾರೆ. *ಕಸೀದ್‌ನ* ಪೀಠಿಕಾ ದ್ವಿಪದಿಗಳಿಗೂ ಗಜ಼ಲಿನ ಪ್ರಾರಂಭಿಕ ದ್ವಿಪದಿಗಳಿಗೂ ತುಂಬಾ ಸಾಮ್ಯವಿದೆ.

ಗಜ಼ಲ್ ಫಾರ್ಸಿ ಭಾಷೆಯಿಂದ ಉರ್ದು ಭಾಷೆಗೆ ಬಂದಿತಾದರೂ ಫಾರ್ಸಿಯ ಯಥಾವತ್ ಅನುಕರಣವಾಗಲಿಲ್ಲ. ತನ್ನದೇ ಆದ ವೈಶಿಷ್ಟ್ಯ, ವ್ಯಕ್ತಿತ್ವಗಳನ್ನು ಬೆಳೆಸಿಕೊಂಡು ಹಿಂದೂಸ್ತಾನದ ಸಂಸ್ಕೃತಿಯ ಉಜ್ವಲ ಪ್ರತೀಕವಾಯಿತು.

ಮತ್ಲಾ (ಗಜ಼ಲಿನ ಮೊದಲ ದ್ವಿಪದಿ), ಕಾಫಿಯ (ಮತ್ಲಾದ ಎರಡೂ ಚರಣ ಹಾಗೂ ಇನ್ನುಳಿದ ದ್ವಿಪದಿಯಲ್ಲಿ ಬರುವ ಪ್ರಾಸ), ರದೀಫ್ (ಇದು ಕೂಡ ಒಂದು ಪ್ರಾಸ, ಅಕ್ಷರ ಪೂರ್ಣಾರ್ಥವುಳ್ಳ ಶಬ್ದ. ಕಾಫಿಯಾದ ಬಳಿಕ ನಿಶ್ಚಿತವಾಗಿ ಬರುವುದಕ್ಕೆ ರದೀಫ್ ಎನ್ನುತ್ತಾರೆ. ರದೀಫ್ ಇಲ್ಲದ ಗಜ಼ಲ್‌ಗಳೂ ಇವೆ) ಮಖ್ತ (ಗಜ಼ಲಿನ ಕೊನೆಯ ದ್ವಿಪದಿ. ಕವಿ ತನ್ನ ಕಾವ್ಯನಾಮವನ್ನು ಇಲ್ಲಿ ಹೇಳಿಕೊಂಡಿರುತ್ತಾನಾದರೂ ಇದು ಕಡ್ಡಾಯವಲ್ಲ) ಈ ರಾಚನಿಕ ವಿನ್ಯಾಸ ಗಜ಼ಲ್ ಕಾವ್ಯದ್ದು.

ಸೂಫಿ ಕಾವ್ಯದಲ್ಲಿ ಗಜ಼ಲ್‌ಗೆ ಉನ್ನತ ಸ್ಥಾನವಿದೆ. ದೈವಿಕ ಪ್ರೀತಿಯ ಅಭಿವ್ಯಕ್ತಿ ಮಾಧ್ಯಮವಾಗಿ ಗಜ಼ಲ್ ಅತ್ಯಂತ ಸಮರ್ಥವಾಗಿ ಬಳಕೆಯಾಗಿದೆ. ಅನುರಕ್ತ ಮೂಲದ ಅನುಭಾವಿ ಕಾವ್ಯವಾಗಿರುವ ಗಜ಼ಲ್‌ನಲ್ಲಿ ಪ್ರೇಮ ಕೇವಲ ಅಮೂರ್ತ ತತ್ತ್ವವಲ್ಲ. ಕಣಕಣದಲ್ಲೂ ಮಿಡಿಯುವ ದಿವ್ಯಾನುಭವ. ಕನ್ನಡಕ್ಕೆ ಅಪರೂಪವೆನಿಸಿದ ಈ ಛಂದೋರೂಪವನ್ನು ಪರಿಚಯಿಸಲೋಸುಗ ಪ್ರಥಮ ಬಾರಿಗೆ ಪಿ.ಯು.ಸಿ. ಐಚ್ಛಿಕ ಪಠ್ಯಕ್ಕೆ ಇದನ್ನು ಬಳಸಿಕೊಳ್ಳಲಾಗಿದೆ.

ಶಬ್ದಾರ್ಥ : ತಾರೆ–ನಕ್ಷತ್ರ ; ಅಂಬರ–ಆಕಾಶ, ಬಟ್ಟೆ ; ನಿಧಾನ–ಹೂತಿಟ್ಟ ಸಂಪತ್ತು, ಸಾವಕಾಶ ; ಬಂಧಿ–ಸೆರೆಯಾಳು ; ತೆರೆ–ಅಲೆ ; ಗ್ಲಾನಿ–ಮಂಕು, ಕತ್ತಲೆ ; ಚದುರ–ಜಾಣ.

ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ :

೧) 'ಬಂಧಿಯಾಗಿವೆ ಕನಸು ನಮ್ಮವರ ಹಾಳು ಕೋಟೆಗಳಲ್ಲಿ.'

೨) 'ಹೊಸತು ಕಾವ್ಯವ ಬರೆಯಬೇಕಿದೆ ಬದುಕು ಬಣ್ಣವೇರಲಿಕೆ.'

೩) 'ಉಗ್ರರೆ ಚದುರರೆ ಮೈಮನ ಒಡ್ಡಿರಿ ಹೊಸ ಆಹ್ವಾನಕೆ.'

ಒಂದು ವಾಕ್ಯದಲ್ಲಿ ಉತ್ತರಿಸಿ :

೧) ತಾರೆಗಳು ಎಲ್ಲಿ ಜಿಗಿದು ಹೋಗಿವೆ?

೨) ವಿಶ್ವ ನವ ನಿರ್ಮಾಣಕ್ಕೆ ಏನನ್ನು ಅಗೆದು ತೆಗೆಯಬೇಕು?

೩) ಕನಸುಗಳು ಎಲ್ಲಿ ಬಂಧಿಯಾಗಿವೆ?

೪) ಬದುಕು ಬಣ್ಣವೇರಲಿಕೆ ಏನು ಮಾಡಬೇಕಿದೆ?

೫) ಹೊಸ ಆಹ್ವಾನಕ್ಕೆ ಏನನ್ನು ಒಡ್ಡಬೇಕು?

ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ :

೧) ಜೀವನ ಚಿಗುರೊಡೆದು ಬೆಳೆಯಲು ಏನು ಮಾಡಬೇಕು?

೨) ಹೊಸ ಕಾವ್ಯವನ್ನು ಬರೆಯಬೇಕಾದುದು ಎಲ್ಲಿ? ಏಕೆ?

೩) ತಾರೆಗಳು ಎಲ್ಲಿ ಹೋಗಿವೆ? ಅವುಗಳನ್ನು ಮರಳಿ ತಂದು ಏನು ಮಾಡಬೇಕು?

ವಿವರವಾಗಿ ಉತ್ತರಿಸಿ :

೧) ವಿಶ್ವದ ನವ ನಿರ್ಮಾಣಕ್ಕಾಗಿ ನಾವು ಮಾಡಬೇಕಾಗಿರುವುದೇನು?

೨) ಹೊಸ ಆಹ್ವಾನಕ್ಕೆ ಒಡ್ಡಿಕೊಳ್ಳಲು ಕವಿ ಹೇಗೆ ನಮ್ಮನ್ನು ಪ್ರೇರೇಪಿಸುತ್ತಾರೆ?

೩) ಗಜಲ್‌ದಲ್ಲಿ ವ್ಯಕ್ತವಾದ ಸಕಾರಾತ್ಮಕ ಧೋರಣೆಯನ್ನು ಸಂಗ್ರಹಿಸಿ ಬರೆಯಿರಿ.

ಭಾಷಾಭ್ಯಾಸ :

೧) ಇವುಗಳನ್ನು ಬಿಡಿಸಿ ಬರೆಯಿರಿ :

ನೀಲಾಂಬರ, ಚಿಗುರೊಡೆದು, ಬಣ್ಣವೇರಲಿಕೆ, ಭೂಮಿಯಿಹುದು.

೨) ಇವುಗಳಿಗೆ ನಾನಾರ್ಥ ಪದಗಳನ್ನು ಬರೆಯಿರಿ :

ಅಂಬರ, ಅಗೆ, ಒಡ್ಡು, ತೆರೆ.

೩) ಇವುಗಳಿಗೆ ಸಮಾನಾರ್ಥ ಪದಗಳನ್ನು ಬರೆಯಿರಿ :

ತಾರೆ, ಅಂಬರ, ನೆಲ, ಜೀವನ, ಲೋಕ, ಭೂಮಿ.

೪) ಇವುಗಳನ್ನು ವಾಕ್ಯದಲ್ಲಿ ಪ್ರಯೋಗಿಸಿ :

ಬಣ್ಣವೇರು, ಹೊಟ್ಟೆಸುಡು, ಮೈಯೊಡ್ಡು, ಚಿಗುರೊಡೆ.

ಚಟುವಟಿಕೆ :

೧) ನೀವು ಕೇಳಿದ ಗಜ಼ಲ್‌ಗೂ ಈ ಗಜ಼ಲ್‌ಗೂ ಇರುವ ವ್ಯತ್ಯಾಸವನ್ನು ಗಮನಿಸಿ.

೨) ನೆಲದ ಮರೆಯ ನಿಧಾನದಂತೆ ತಿಲದ ಮರೆಯ ತೈಲದಂತೆ – ವಚನವನ್ನು ಗಮನಿಸಿ.

ಆಕರ ಗ್ರಂಥ :

ಗಜ಼ಲ್ ಮತ್ತು ಬಿಡಿ ದ್ವಿಪದಿ – ಶಾಂತರಸ
ಪ್ರಕಟಣೆ : ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು. ಮುದ್ರಣ ವರ್ಷ : ೨೦೦೪.

ಹೆಚ್ಚಿನ ಓದು :

೧) ೪೨ ಗಜ಼ಲ್‌ಗಳು – ಎಚ್.ಎಸ್. ಮುಕ್ತಾಯಕ್ಕ

೨) ೩೫ ಗಜಲ್‌ಗಳು ಮತ್ತು ೪೫ ಹೈಕುಗಳು – ಸಿದ್ಧರಾಮ ಹಿರೇಮಠ ಚಾಮರಸ ಪ್ರಕಾಶನ, ಮೈಸೂರು – ಮುದ್ರಣ ವರ್ಷ : ೨೦೧೦.

೩) ಮೌನ–ಚಿದಾನಂದ ಸಾಲಿ, ಅಭಿನವ ಪ್ರಕಾಶನ, ಬೆಂಗಳೂರು–೨೦೦೬

೪) ಮುಳ್ಳಿನ ಬಾಯಲ್ಲಿ ಹೂ ನಾಲಗೆ–ಶ್ರೀ ಜಂಬಣ್ಣ ಅಮರಚಿಂತ, ಸುಮುಖ ಪ್ರಕಾಶನ, ಬೆಂಗಳೂರು.

ಇಲ್ಲ ಭಾರತ ಬರಿಯ ಕನಸಿನಲ್ಲಿ

– ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ

ನಮ್ಮ ದೇಶ ಬಲಿಷ್ಠವಾಗಬೇಕು, ಸಂಪದ್ಭರಿತವಾಗಬೇಕು, ಸರ್ವ ಜನಾಂಗದ ಶಾಂತಿಯ ತೋಟವಾಗಬೇಕು, ನೆಮ್ಮದಿಯ ತಾಣವಾಗಬೇಕು ಎಂಬ ಆಶಯ ಕೇವಲ ಕನಸಿನ ಮಾತಾಗಬಾರದು; ನನಸಾಗಬೇಕು. ಹಾಗಾಗಬೇಕಾದರೆ ನಾವು ಕ್ರಿಯಾಶೀಲರಾಗಬೇಕು. ಬದುಕಿನಿಂದ ಪಾಠ ಕಲಿಯುತ್ತಾ, ನಮ್ಮನ್ನು ನಾವೇ ಶೋಧಿಸಿಕೊಳ್ಳುತ್ತಾ ಪ್ರಾಮಾಣಿಕ ನಡೆ–ನುಡಿಗಳನ್ನು ಅಳವಡಿಸಿಕೊಳ್ಳುತ್ತಾ ಸ್ವಾರ್ಥ ಮರೆತು ದೇಶಕ್ಕಾಗಿ ದುಡಿಯಬೇಕು. ಬರುವ ಎಡರು ತೊಡರುಗಳನ್ನು ಧೈರ್ಯದಿಂದ ಎದುರಿಸುತ್ತಾ ಮುನ್ನುಗ್ಗಬೇಕು. ಅಂದಾಗ ಮಾತ್ರ ಸುಂದರ ಭಾರತ ಸಾಕಾರಗೊಳ್ಳುತ್ತದೆ. ಅದನ್ನುಳಿದು, ಆಡಂಬರದ ಮಾತು, ಬೂಟಾಟಿಕೆಯ ನಡೆ–ನುಡಿ, ಅಧಿಕಾರದ ಆಮಿಷ, ಮೋಸ–ವಂಚನೆಗಳಿಗೆ ಪಕ್ಕಾಗಿ ಸ್ವಾರ್ಥ ಸಾಧಕರಾದರೆ ದೇಶ ಬರಿಯ ಕನಸಿನ ಮಾತಾಗುತ್ತದೆ. ಸುಭದ್ರ–ಸುಂದರ ದೇಶ ಕಟ್ಟಬಯಸುವ ಯುವ ಜನತೆ ಸಕಾರಾತ್ಮಕ ಧೋರಣೆ ಬೆಳೆಸಿಕೊಂಡು ಕ್ರಿಯಾಶೀಲರಾಗಬೇಕೆಂಬ ಕರೆ ಇಲ್ಲಿದೆ.

ಬಂಧುಗಳೆ, ಸಾಕಿನ್ನು ಇಷ್ಟು ದಿನ ಕಳೆದದ್ದು
ಮುಳ್ಳು–ಮೋಸಗಳನ್ನೇ ಸುತ್ತಲೂ ಬೆಳೆದದ್ದು
ಇಲ್ಲ ಭಾರತ ಬರಿಯ ಕನಸಿನಲ್ಲಿ

ಈ ದೇಶ ನಿತ್ಯವೂ ನಲಿದು ಉಸಿರಾಡುವುದು
ಪ್ರಕೃತಿ ನಳನಳಸುತ್ತ ತೊನೆದು ಹಸಿರಾಗುವುದು
ನಿಮ್ಮ ವ್ಯವಹಾರದಲಿ ಮನಸಿನಲ್ಲಿ

ಬರಿಯ ಹುಲು ಮಾತಿನಲಿ ವಚನಗಳ ಸೂಸಿದರೆ
ವೇಷದಾವೇಶಗಳ ವಾಸನೆಯ ಪೂಸಿದರೆ
ಜನತೆ ನಂಬುವುದೆಂದು ಭಾವಿಸಿದಿರಾ?

ಭರತ ಮಾತೆಯ ಮಾತು ಮಾತಿನಲಿ ಬಂಧಿಸುತ
ಅಧಿಕಾರದಾಮಿಷದಿ ಕಂಡವರ ವಂದಿಸುತ
ನಡೆಯುವುದೆ ನಡೆಯೆಂದು ಆಶಿಸಿದಿರಾ?

ಸಂಜೆ ಮುಂಜಾವಿನಲಿ ವಂಚನೆಯ ಸಂಚಿನಲಿ
ಮುಳುಗುತ್ತ ತೇಲುತ್ತ ಆಯುಷ್ಯದಂಚಿನಲಿ
ಸತ್ಯ, ಪ್ರಾಮಾಣಿಕತೆ ಬೋಧಿಸುವಿರಾ?

ಬದುಕು ಕಲಿಸುವ ಪಾಠಗಳನಾಚೆ ತೂರುತ್ತ
ಸುಮ್ಮನೇ ಎಲ್ಲರನು ಎಂದಿಗೂ ದೂರುತ್ತ
ಸಾಗಿರುವ ನಿಮ್ಮನ್ನೆ ಶೋಧಿಸುವಿರಾ?

ಉಪದೇಶ ಉಪವಾಸ ನಾಡ ಕಟ್ಟುವುದಿಲ್ಲ
ಪ್ರೀತಿಯಿಲ್ಲದ ನಡತೆ ಎದೆಯ ತಟ್ಟುವುದಿಲ್ಲ
ನಿಜದ ಮಾತನು ನೀವು ಅರಿತಿಲ್ಲವೆ?

ಕಲ್ಲು ಮುಳ್ಳನು ತುಳಿದ ದುಡಿಮೆ ಪ್ರಗತಿಯ ಅನ್ನ
ಸಹನೆ ಸಂತೋಷಗಳೆ ಆಗ ಲಭಿಸುವ ಚಿನ್ನ
ಸ್ವಾರ್ಥ ಸಂಕೋಚಗಳ ಮರೆತಿಲ್ಲವೆ?

ಮುಳ್ಳು ಮೋಸಗಳನ್ನೆ ಸುತ್ತಲೂ ಬೆಳೆದದ್ದು
ಬಂಧುಗಳೆ, ಸಾಕಿನ್ನು ಇಷ್ಟು ದಿನ ಕಳೆದದ್ದು
ಇಲ್ಲ ಭಾರತ ಬರಿಯ ಕನಸಿನಲ್ಲಿ.

❖ ❖ ❖ ❖

ಕವಿ ಪರಿಚಯ : ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ (೩ನೇ ಮಾರ್ಚ್ ೧೯೩೯) ಧಾರವಾಡ ಜಿಲ್ಲೆಯ ಯಾದವಾಡದಲ್ಲಿ ಜನಿಸಿದರು. ಇವರ ತಂದೆಯ ಹೆಸರು ಬಸೆಟ್ಟೆಪ್ಪ, ತಾಯಿ ಗಿರಿಜಮ್ಮ. *'ಚಹಾದ ಜೋಡಿ ಚೂಡಾದ್ಹಾಂಗ....'* ಅಂಕಣದ ಮೂಲಕ ಕನ್ನಡ ನಾಡಿನ ಮನೆಮಾತಾಗಿರುವ ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿಯವರು ಮೂಲತಃ ಕವಿ. ಕಥೆ, ವಿಮರ್ಶೆ, ಅಂಕಣ ಇತ್ಯಾದಿ ಸಾಹಿತ್ಯ ಪ್ರಕಾರಗಳಲ್ಲಿ ಕೃಷಿ ಮಾಡಿರುವ ಶ್ರೀಯುತರು ಹಿಂದಿಯಿಂದ ಅನೇಕ ಮೌಲಿಕ ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ಅರುವತ್ತಕ್ಕಿಂತ ಹೆಚ್ಚು ಕನ್ನಡ ಪುಸ್ತಕಗಳನ್ನು ಹತ್ತಕ್ಕಿಂತ ಹೆಚ್ಚು ಹಿಂದಿ ಪುಸ್ತಕಗಳನ್ನು ರಚಿಸಿದ ಶ್ರೀಯುತರು *ಸಂಕ್ರಮಣ* ಸಾಹಿತ್ಯಕ ಪತ್ರಿಕೆಯ ಸಂಪಾದಕ ತ್ರಯರಲ್ಲೊಬ್ಬರಾಗಿದ್ದರು. *ನೀನಾ, ಔರಂಗಜೇಬ, ಪರದೇಸಿ ಹಾಡುಗಳು, ಅಯಸ್ಕಾಂತ, ಇಷ್ಟು ಹೇಳಿದ ಮೇಲೆ, ಅಪರಂಪಾರ, ನಿನ್ನ ಮರೆಯುವ ಮಾತು* – ಪ್ರಮುಖ ಕವನ ಸಂಕಲನಗಳು. *ಮಾವ, ಹಕ್ಕಿಗಳು* – ಕಥಾ ಸಂಕಲನಗಳು, *ಅನುಶೀಲನ, ರಂಗಾಯಣ, ಪರಿಭಾವನ, ವಿವೇಚನ* ಮುಂತಾದವುಗಳು ವಿಮರ್ಶಾ ಕೃತಿಗಳು. *ಆಷಾಢದ ಒಂದು ದಿನ, ಅಂಧಯುಗ, ಶಸ್ತ್ರ ಸಂತಾನ* ಮುಂತಾದ ಅನುವಾದಿತ ನಾಟಕಗಳಲ್ಲದೆ *ಹದ್ದು ಮೀರಿದ ಹಾದಿ* ನಾಟಕವನ್ನು ಹಿಂದಿಗೆ *'ಸೀಮಾ ಪಾರ'* ಎಂಬ ಹೆಸರಿನಲ್ಲಿ ಅನುವಾದಿಸುವ ಮೂಲಕ ಕನ್ನಡ–ಹಿಂದಿ ಸಾಹಿತ್ಯದ ಸಂಪರ್ಕ ಸೇತುವೆಯಾಗಿದ್ದಾರೆ.

ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಫೆಲೋಶಿಫ್, ವರ್ಧಮಾನ ಪ್ರಶಸ್ತಿ ಇತ್ಯಾದಿ ಹತ್ತು ಹಲವು ಪ್ರಶಸ್ತಿಗಳಿಂದ ಪುರಸ್ಕೃತರಾದ ಡಾ. ಸಿದ್ಧಲಿಂಗ ಪಟ್ಟಣ ಶೆಟ್ಟಿಯವರು ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯಕಾರಿ ಮಂಡಲಿಯ ಸದಸ್ಯ ಹಾಗೂ ಕನ್ನಡ ಸಲಹಾ ಮಂಡಳಿಯ ಸಂಚಾಲಕರಾಗಿ ಸಲ್ಲಿಸಿದ ಸೇವೆ ಮನನೀಯವಾಗಿದೆ.

ಶಬ್ದಾರ್ಥ : ತೊನೆ–ತೂಗಾಡು ; ಹುಲುಮಾತು–ಕ್ಷುಲ್ಲಕ ಮಾತು ; ಮೂಸು–ಸವರು; ಆಮಿಷ–ಲಂಚ, ಆಸೆ ; ವಂಚನೆ–ಮೋಸ ; ಶೋಧಿಸು–ಪರೀಕ್ಷಿಸು ; ಅಂಚು–ತುದಿ.

ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ :

೧) 'ಸತ್ಯ, ಪ್ರಾಮಾಣಿಕತೆ ಬೋಧಿಸುವಿರಾ?'

೨) 'ಸಾಗಿರುವ ನಿಮ್ಮನ್ನೆ ಶೋಧಿಸುವಿರಾ?'

೩) 'ಸ್ವಾರ್ಥ, ಸಂಕೋಚಗಳ ಮರೆತಿಲ್ಲವೆ?'

ಒಂದು ವಾಕ್ಯದಲ್ಲಿ ಉತ್ತರಿಸಿ :

೧) ಯಾವುದು ನಾಡನ್ನು ಕಟ್ಟುವುದಿಲ್ಲ?

೨) ಎದೆಯನ್ನು ಯಾವುದು ತಟ್ಟುವುದಿಲ್ಲ?

೩) ಪ್ರಗತಿಯ ಅನ್ನ ಯಾವುದು?

೪) ಸಂಜೆ ಹಾಗೂ ಮುಂಜಾವುಗಳನ್ನು ಹೇಗೆ ಕಳೆದಿದ್ದೇವೆ?

ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ :

೧) ಜನತೆ ಏನನ್ನು ನಂಬುವುದಿಲ್ಲ?

೨) ನಿಜದ ಮಾತು ಯಾವುದು?

೩) ಅನ್ನ ಹಾಗೂ ಚಿನ್ನ ಯಾವುದು?

ವಿವರವಾಗಿ ಉತ್ತರಿಸಿ :

೧) ಭವ್ಯ ಭಾರತದ ಕನಸು ನನಸಾಗುವುದು ಹೇಗೆ?

೨) ಬಲಿಷ್ಠ ರಾಷ್ಟ್ರವನ್ನು ಕಟ್ಟಬೇಕಾದರೆ ನಾವು ಏನು ಮಾಡಬೇಕು?

ಭಾಷಾಭ್ಯಾಸ :

೧) ಇವುಗಳನ್ನು ಬಿಡಿಸಿ ಬರೆಯಿರಿ :

ವೇಷದಾವೇಶ, ಅಧಿಕಾರದಾಮಿಷ, ಆಯುಷ್ಯದಂಚು.

೨) ಇವುಗಳಿಗೆ ಸಮಾನಾರ್ಥ ಪದಗಳನ್ನು ಬರೆಯಿರಿ :

ಮಾತು, ದುಡಿಮೆ, ಪ್ರಕೃತಿ.

೩) ಇವುಗಳಿಗೆ ತತ್ಸಮ-ತದ್ಭವ ಬರೆಯಿರಿ :

ಸಂಜೆ, ಆಯುಷ್ಯ, ಪ್ರೀತಿ, ಸಂತೋಷ.

ಚಟುವಟಿಕೆ : ೧) ಕನ್ನಡ ನಾಡಿನ ನವ ನಿರ್ಮಾಣದ ಬಗ್ಗೆ ನೀವೇ ಒಂದು ಕವಿತೆ ಬರೆಯಿರಿ.

೨) ಎಂ. ಗೋಪಾಲಕೃಷ್ಣ ಅಡಿಗರ *ಕಟ್ಟುವೆವು ನಾವು ಹೊಸ ನಾಡೊಂದನು* ಕವಿತೆಯೊಡನೆ ಈ ಕವಿತೆಯನ್ನು ಹೋಲಿಸಿರಿ.

೩) *'ಮನಸ್ಸಿನೊಳಗ ಮಂಡಿಗಿ ತಿಂದ್ರ ಗೋಧಿ ಲೆಕ್ಕ ಕೊಡೋರ್‍ಯಾರು'* ಈ ಗಾದೆ ಮಾತಿನ ಆಶಯ ಗ್ರಹಿಸಿರಿ.

ಆಕರ ಗ್ರಂಥ :

ಪಟ್ಟಣಶೆಟ್ಟರ ಸಮಗ್ರ ಕಾವ್ಯ – ಪ್ರಕಾಶಕರು : ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಮಠ, ಗದಗ.

ನನ್ನ ಚಪ್ಪಲಿಗಳಿಗೆ

– ಸತೀಶ ಕುಲಕರ್ಣಿ

> ಸಮಾಜದಲ್ಲಿ ತುಳಿತಕ್ಕೆ ಒಳಗಾದ ಜನತೆಯ ಸ್ಥಿತಿಗತಿಗಳ ಸಂಕೇತವಾಗಿ ಈ ಕವಿತೆ ಮೂಡಿ ಬಂದಿದೆ. ಗುಡಿ–ಗೋಪುರದ ಮುಂದೆ ಚಪ್ಪಲಿಗಳನ್ನು ಹೊರಗೆ ಬಿಡುವಂತೆ ಸಮಾಜದ ಕೆಳವರ್ಗದವರು ಎನಿಸಿಕೊಂಡವರನ್ನು ಊರ ಹೊರಗಿಡಲಾಗಿದೆ. ದಿನವೆಲ್ಲ ತುಳಿಯುವ ಚಪ್ಪಲಿಗಳನ್ನು ಪಯಣ ಮುಗಿದ ಬಳಿಕ ನಿರ್ಲಕ್ಷಿಸುವಂತೆ, ನಿರಂತರವಾಗಿ ದುಡಿದು ಅನ್ನ ನೀಡುವ ಶ್ರಮಿಕ ವರ್ಗದವರನ್ನು ಕಡೆಗಣಿಸಲಾಗಿದೆ. ನಮಗೆ ರಕ್ಷಣೆ ಕೊಡುವ ವಸ್ತುವಿಗೆ, ದುಡಿಮೆಯ ಮೂಲಕ ಅನ್ನ ಆಹಾರ ನೀಡುವ ಶ್ರಮಿಕ ವರ್ಗದವರಿಗೆ ಯಾವತ್ತೂ ಗೌರವ ಸಲ್ಲಿಸಬೇಕು, ಅವರಿಗೆ ಋಣಿಯಾಗಿರಬೇಕು ಎಂಬುದನ್ನು ಈ ಕವಿತೆ ಧ್ವನಿಸುತ್ತದೆ. ಲೋಕವು ಕಾಲಿಗೆ ಹಾಕಿಕೊಂಡು ತುಳಿದಾಡುವ ಅಲಕ್ಷಿತ ಜೀವ ಮತ್ತು ಜೀವನಗಳನ್ನು ತಮ್ಮ ಹೃದಯಕ್ಕೆ ಒಪ್ಪಿಕೊಳ್ಳುವ ಮಾನವೀಯ ತುಡಿತ ಇಲ್ಲಿ ಮಡುಗಟ್ಟಿದೆ.

ಇಷ್ಟು ಭಾರಹೊತ್ತು, ಇಷ್ಟು ದೂರತಂದ
ಈ ಚಪ್ಪಲಿಗಳಿಗೆ, ನನ್ನ ವಂದನೆಗಳು.

ತಲೆಯ ಯೋಚನೆಗಳ, ಕಣ್ಣ ನೋಟಗಳ
ಕಿವಿಯ ನೂರು ಮಾತುಗಳ
ಎಂದೂ ಕೇಳದೆ, ಕಾಣದೆ
ನೆಲನೆಕ್ಕಿ ಬದುಕಿದ ನಿಮ್ಮ ರೀತಿಗೆ
ಪ್ರೀತಿಯ ಅಭಿನಂದನೆಗಳು.

ಹೊರಬಿಟ್ಟು ನಿಮ್ಮನು,
ನೂರು ಕಾರುಬಾರು ಮಾಡಿದಾಗ,
ಯಾಕೆಂದು, ಏನೆಂದು, ಎಂದೂ ಕೇಳದೆ,
ಮತ್ತೆ ಹೊತ್ತು ನಡೆವ ನಿಮ್ಮ
ಹೆಗಲುಗಳಿಗೆ ಜನುಮ ಜನುಮದ ನಮನಗಳು.

ದೊಡ್ಡವರು ಬಂದಾಗ, ಸಣ್ಣವರು ನಿಂತಾಗ,
ನೆಲಮಣೆಯ ಮೇಲೆ ನಿಂತ,
ನನ್ನ ಮೌನ ಸಂಗಾತಿಗಳೆ,
ನಿಮಗಿದೋ ಸಾವಿರದ ಶರಣು.

ಮುಳ್ಳು ಹಾದಿಯಲಿ, ಕಲ್ಲು ದಾರಿಯಲಿ
ಹೊಲಸು ಹೇಸಿಗೆ ತುಳಿದರೂ
ನಸು ನಕ್ಕು, ತುಸು ಬೇಸರವೂ ತೋರದ
ನನ್ನ ಕಾಲುಮರಿಗಳೆ, ನಿಮಗೆ ನಾನು ಸರಿಯೆ?

ಕಣ್ಣುಗಳು ಕಿತ್ತಾಗ,
ಬಗಲು ಬದಿಗಳು ಹರಿದಾಗ,
ಎದೆಗೆ ಮುಳ್ಳುಗಳು ನೆಟ್ಟಾಗ
ಅಳದೆ ನಗದೆ ಏನನ್ನೂ ಹೇಳದೆ
ಮೋಚಿ ಮೊಳೆಗೆ ಮತ್ತೆ ಮೊಳೆತು
ಬೆನ್ನಟ್ಟಿ ಓಡಿ ಬಂದ, ಬಡಮೋಚಿಯಾ ಜೋಡಿ ಮಕ್ಕಳೆ,
ನಿಮಗೆ ನಾ ಕೈಮುಗಿವೆ.

ಪುರಾಣದಲ್ಲೊಮ್ಮೆ, ತಲೆ ಮೇಲೆ ಹೊತ್ತ
ಭರತನನ್ನು ಮಾತ್ರ ನಾ ಕಂಡೆ,
ಕಾಡ ಕುಮಾರ, ನಾಡಿಗೆ ಮರಳ ಬರುವ ತನಕ
ಸಿಂಹಾಸನದ ಮೇಲೆ ಕೂತ ಮೌನಕೂಸುಗಳೆ,
ನಿಮಗಿದೋ ನನ್ನ ಪ್ರಣಾಮ.

ಕಾಲದ ವಿಡಂಬನೆಯ ನೋಡಿ,
ಸಭಾ ಮಧ್ಯ ನೀವು ಹಾರಿ ಬಂದರೆ,
ಅವಮಾನ ಎಂಬರು ಮಾನಗೇಡಿಗಳು,
ನೀವು ಬೀದಿಗೆ ಬಿದ್ದರೆ, ನಾವೇ ಇರುವುದಿಲ್ಲ.
ಓ ನನ್ನ ಅರಿವಿನಾ ದೇವರುಗಳೆ.

ಗುಡಿಗುಮ್ಮಟ, ಮಸಿದಿ ಮಂದಿರ,
ಚರ್ಚು ಆವರಣದೊಳಗೆ
ಸಹಬಾಳ್ವೆಮಾಡುವ ಮರಿ ಪಾರಿವಾಳಗಳೆ,
ಹೊರಗೆಲ್ಲ ನೀವು, ಒಳಗೆಲ್ಲ ನಾವು,
ನಮ್ಮ ಪ್ರಾರ್ಥನೆಯ ನೀವೆಂದು ಕೇಳಿಲ್ಲ,
ಓ ನನ್ನ ಮೌನ ತಪಸ್ವಿಗಳೆ,
ನಿಮಗಿದೋ ತಲೆಬಾಗಿ ನಮಿಸುವೆ.

❖ ❖ ❖ ❖

ಕವಿ ಪರಿಚಯ : ಸತೀಶ ಕುಲಕರ್ಣಿ (ಜನನ ೧೯೫೧) ಧಾರವಾಡದಲ್ಲಿ ಜನಿಸಿದರು. ತಂದೆ ನೀಲಕಂಠರಾವ್, ತಾಯಿ ಲೀಲಾವತಿ. ವಿದ್ಯುಚ್ಛಕ್ತಿ ಇಲಾಖೆಯಲ್ಲಿ ನೌಕರರಾಗಿ ಸೇವೆ ಸಲ್ಲಿಸಿ, ಇದೀಗ ನಿವೃತ್ತರಾಗಿ ಹಾವೇರಿಯಲ್ಲಿ ನೆಲೆಸಿದ್ದಾರೆ. ವಿದ್ಯಾರ್ಥಿ ದೆಸೆಯಲ್ಲಿಯೇ ಕಾವ್ಯ ಕ್ಷೇತ್ರವನ್ನು ಪ್ರವೇಶಿಸಿದ ಸತೀಶ ಕುಲಕರ್ಣಿ ತಮ್ಮ ಸ್ವತಂತ್ರ ಸಂಗ್ರಹ *'ಒಡಲಾಳದ ಕಿಚ್ಚು'* (೧೯೮೦) ಪ್ರಕಟಿಸುವ ಮೊದಲೇ ತಮ್ಮ ನಿಡುಗಾಲದ ಗೆಳೆಯ ಡಾ. ಸರಜೂ ಕಾಟ್ಕರ್ ಜೊತೆ ಸೇರಿ ೧೯೭೩ರಲ್ಲಿಯೇ *'ಬೆಂಕಿ ಬೇರು'* ಎಂಬ ಸಂಕಲನವನ್ನು ಪಿ.ಸಿ. ಜಾಬೀನ್ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಪ್ರಕಟಿಸಿದ್ದರು. ಬಳಿಕ *ನೆಲದ ನೆರಳು, ವಿಷಾದ ಯೋಗ, ಗಾಂಧೀ ಗಿಡ* ಹಾಗೂ *ಕಂಪನಿ ಸವಾಲ್* ಮುಂತಾದ ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಸಾಹಿತ್ಯ ಕೃಷಿಯೊಂದಿಗೆ ರಂಗಭೂಮಿಯಲ್ಲೂ ತೊಡಗಿಸಿಕೊಂಡು ಸಾಧನೆಗೈದಿರುವ ಕುಲಕರ್ಣಿ ಅವರಿಗೆ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ (೨೦೧೧), ಧಾರವಾಡ ವಿದ್ಯಾವರ್ಧಕ ಸಂಘದ ಪ್ರಶಸ್ತಿ (೧೯೮೦)ಗಳು ಲಭಿಸಿವೆ.

ಶಬ್ದಾರ್ಥ : ನೆಲಮಣಿ–ಹಲಗೆ ; ಕಾಲುಮರಿ–ಚಪ್ಪಲಿ ; ಬಗಲು–ಕಂಕಳು, ಮಗ್ಗಲು; ಮೋಚಿ–ಚಮ್ಮಾರ, ಚಪ್ಪಲಿ ಹೊಲಿಯುವವ ; ವಿಡಂಬನೆ–ಅಣಕ ; ಕಾಡು ಕುಮಾರ–ವನವಾಸಕ್ಕೆ ತೆರಳಿದ ರಾಮ.

ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ :

೧) 'ಬಡ ಮೋಚಿಯಾ ಜೋಡಿ ಮಕ್ಕಳೇ.'

೨) 'ಸಿಂಹಾಸನದ ಮೇಲೆ ಕೂತ ಮೌನ ಕೂಸುಗಳೆ!'

೩) 'ನೀವು ಬೀದಿಗೆ ಬಿದ್ದರೆ, ನಾವೆ ಇರುವುದಿಲ್ಲ.'

ಒಂದು ವಾಕ್ಯದಲ್ಲಿ ಉತ್ತರಿಸಿ :

೧) ಕವಿ ಚಪ್ಪಲಿಗೆ ಏನನ್ನು ಸಲ್ಲಿಸುತ್ತಾರೆ?

೨) ನೆಲನೆಕ್ಕಿ ಬದುಕಿದುದು ಯಾವುದು?

೩) ಕವಿ ಚಪ್ಪಲಿಯನ್ನು ಯಾರ ಮಕ್ಕಳೆಂದು ಕರೆದಿದ್ದಾರೆ?

೪) ಚಪ್ಪಲಿಯನ್ನು ತಲೆಯ ಮೇಲೆ ಹೊತ್ತವರು ಯಾರು?

೫) ಮಾನಗೇಡಿಗಳು ಯಾವುದನ್ನು ಅವಮಾನ ಎಂಬರು?

ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ :

೧) ಚಪ್ಪಲಿ ಕಾಣದಿರುವುದು, ಕೇಳದಿರುವುದು ಯಾವುದು?

೨) ಕವಿ ಯಾರನ್ನು ಮೌನ ಸಂಗಾತಿಗಳು ಎಂದು ಕರೆದಿದ್ದಾರೆ? ಏಕೆ?

೩) ಚಪ್ಪಲಿ ತುಳಿಯುವ ದಾರಿ ಯಾವುದು?

೪) ಮಾನಗೇಡಿಗಳು ಎಂದರೆ ಯಾರು?

ವಿವರವಾಗಿ ಉತ್ತರಿಸಿ :

೧) 'ನನ್ನ ಚಪ್ಪಲಿಗಳಿಗೆ' ಕವನದಲ್ಲಿ ಸಂಕೇತಿಕವಾಗಿ ವ್ಯಕ್ತವಾದ ತುಳಿತಕ್ಕೊಳಗಾದವರ ಸ್ಥಿತಿ-ಗತಿಗಳನ್ನು ವಿಶ್ಲೇಷಿಸಿರಿ.

೨) 'ಚಪ್ಪಲಿ' ಪ್ರತಿಮೆಯ ಮೂಲಕ ಮೂಡಿ ಬಂದಿರುವ ಬಂಡಾಯ ಸಂವೇದನೆಯನ್ನು ಚಿತ್ರಿಸಿ.

ಭಾಷಾಭ್ಯಾಸ :

೧) ಇವುಗಳಿಗೆ ತತ್ಸಮ-ತದ್ಭವ ಬರೆಯಿರಿ :

ಸಾವಿರ, ಜನುಮ, ಕುಮಾರ.

೨) ಇವುಗಳಿಗೆ ನಾನಾರ್ಥ ಪದಗಳನ್ನು ಬರೆಯಿರಿ :

ಸರಿ, ಹೊತ್ತು, ಸಾವಿರದ.

೩) ಇವುಗಳನ್ನು ವಾಕ್ಯದಲ್ಲಿ ಬಳಸಿ :

ಬೆನ್ನಟ್ಟು, ನಮಸ್ಕರಿಸು.

ಚಟುವಟಿಕೆ : ೧) ಮೂಡ್ನಾಕೂಡು ಚಿನ್ನಸ್ವಾಮಿ ಅವರ 'ಚಪ್ಪಲಿಗಳು ಮತ್ತು ನಾನು' ಪದ್ಯದೊಂದಿಗೆ ಈ ಪದ್ಯದಲ್ಲಿ ಬಂದಿರುವ ಚಪ್ಪಲಿಗಳ ಸಾಂಕೇತಿಯತೆಯನ್ನು ಚರ್ಚಿಸಿ.

೨) ಜಿ.ಎಸ್. ಶಿವರುದ್ರಪ್ಪನವರ-'ಕಸಪೊರಕೆ' ಕವಿತೆಯನ್ನು ಗಮನಿಸಿ.

ಆಕರ ಗ್ರಂಥ : 'ಶತಮಾನದ ಕಾವ್ಯ' – ಸಂ : ಡಾ. ಕೆ. ಷರೀಫ಼ಾ, ಪ್ರ : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಹೆಚ್ಚಿನ ಓದು : ೧) 'ಸತೀಶ ಸಮಗ್ರ ಕವಿತೆಗಳು' – ಸತೀಶ ಕುಲಕರ್ಣಿ, ಲೋಹಿಯಾ ಪ್ರಕಾಶನ, ಬಳ್ಳಾರಿ.

೨) 'ಬಂಡಾಯ ಕಾವ್ಯ' – ಸಂ : ಬರಗೂರು ರಾಮಚಂದ್ರಪ್ಪ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ಅವಳ ಚರಿತ್ರೆ

– ಕೆ. ಷರೀಫಾ

ಜಗತ್ತಿನ ಸಂಸ್ಕೃತಿಗೆ ಮಹಿಳೆ ಅಮೂಲ್ಯ ಕೊಡುಗೆ ನೀಡಿದ್ದಾಳೆ. ಪ್ರಪಂಚದ ನಾಗರಿಕತೆ ಹಾಗೂ ಸಂಸ್ಕೃತಿಯ ಮೇಲೆ ಅವಳ ಹೆಜ್ಜೆ ಹಾದಿ ದಟ್ಟವಾಗಿದೆ. ಆದರೆ ಚರಿತ್ರೆಯಲ್ಲಿ ದಾಖಲಾಗಿರುವುದು ಕಡಿಮೆ. ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಚರಿತ್ರೆ ಉದ್ದಕ್ಕೂ ಮಹಿಳೆಯನ್ನು ನಿರ್ಲಕ್ಷಿಸಲಾಗಿದೆ. ಪುರುಷರಷ್ಟೇ ಮಹಿಳೆ ಸಾಧನೆಗೈದಿದ್ದರೂ ಸಹ ಆಕೆಗೆ ಸಿಗಬೇಕಾದ ಮಾನ್ಯತೆ ಸಿಕ್ಕಿಲ್ಲ. ಅವಳನ್ನು ಅವಳ ಪಾಡಿಗೆ ಬಿಟ್ಟರೆ ಹೊಸ ಚರಿತ್ರೆಯನ್ನು ರಚಿಸುವ ಸಾಮರ್ಥ್ಯ ಅವಳಲ್ಲಿದೆ ಎಂದು ಹೇಳುವ ಕವಯಿತ್ರಿಯ ಧ್ವನಿಯಲ್ಲಿ ಆಕ್ರೋಶವಿಲ್ಲ, ಹತಾಶೆಯೂ ಇಲ್ಲ. ಬದಲಿಗೆ ತಣ್ಣನೆಯ ನಿವೇದನೆ ಇದೆ.

ಪ್ರೀತಿಯಿಂದ ಕಟ್ಟಿದ
ಅವಳ ನಾಗರಿಕತೆಗಳ ಮೇಲೆ
ಕಾಣುತ್ತಿದೆ ನಿಮ್ಮದೇ ಕ್ರೂರ ಮುದ್ರೆ
ಅವಳೇ ಕಟ್ಟಿದ ಸಂಸ್ಕೃತಿಗಳ ಮೇಲೆ
ಇರಲಿ ಬಿಡಿ ಅವಳದೇ ಮುದ್ರೆ
ನಿಲ್ಲಿಸಲಿ ಬಿಡಿ ಅವಳದೇ ಸೌಧ
ತೋರಿಸಲಿ ಬಿಡಿ
ಲೋಕಕ್ಕೆ ಹೊಸ ಸೂರ್ಯೋದಯ
ಕೇಳಲಿ ಬಿಡಿ ಹೊಸ ಸುಪ್ರಭಾತ
ರಚಿಸಲಿ ಬಿಡಿ ಅವಳದೇ ಇತಿಹಾಸ
ಅವನ ಚರಿತ್ರೆಯಲ್ಲಿ ಅವಳು
ಮೂಡಿ ಬಂದಿದ್ದು ಸಾಕು
ಬೇಕಲ್ಲವೇ ಅವಳದೇ ಇತಿಹಾಸ?
ಯುಗಯುಗಗಳಿಂದ ಅವಳು ಸಂಗಾತಿ
ನಡೆದೇ ಬಂದಳು ನೋಡಿ
ನಿಮ್ಮ ಜೊತೆಗಾತಿ

ಅವಳಿಲ್ಲದ ನಿಮ್ಮ ಚರಿತ್ರೆ
ಪೂರ್ಣವಾಗುವುದಾದರೂ ಎಂತು?
ಅದಕ್ಕೆ ....
ನಿಮ್ಮ ಚರಿತ್ರೆಯಲ್ಲಿ

ಅವಳು ಮೂಡಿದ್ದು ಸಾಕು
ಹೊಸ ಚರಿತ್ರೆ ರಚಿಸುವ ಕೈ,
ಬುದ್ಧಿ ಭಾವಗಳೆಲ್ಲವೂ
ಅವಳವೇ ಆಗಿರಲಿ ಸಾಕು.

❖ ❖ ❖ ❖

ಕವಯಿತ್ರಿ ಪರಿಚಯ : ಡಾ. ಕೆ. ಷರೀಫಾ (ಜನನ ೧೯೫೭) ಅವರು ಗುಲಬರ್ಗಾದಲ್ಲಿ ಜನಿಸಿದರು. ತಂದೆ ಬಾಬುಮಿಯ್ಯ, ತಾಯಿ ಪುತಲಿಬೇಗಂ. ಮೈಸೂರು ಮುಕ್ತ ವಿಶ್ವವಿದ್ಯಾನಿಲಯದಿಂದ ಕನ್ನಡದಲ್ಲಿ ಎಂ.ಎ. ಪದವಿ ಗಳಿಸಿದ ಇವರು *ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮುಸ್ಲೀಂ ಮಹಿಳಾ ಸಂವೇದನೆ* ಎಂಬ ವಿಷಯದ ಬಗ್ಗೆ ಸಂಶೋಧನೆ ನಡೆಸಿ ಹಂಪಿ ಕನ್ನಡ ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿ ಪಡೆದುಕೊಂಡಿದ್ದಾರೆ. ಕೃಷಿ ಮಾರಾಟ ಇಲಾಖೆಯಲ್ಲಿ ಹಿರಿಯ ಲೆಕ್ಕಪರಿಶೋಧಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಬಿಡುಗಡೆಯ ಕವಿತೆಗಳು, ನೂರೇನಳ ಅಂತರಂಗ, ಪಾಂಚಾಲಿ, ಮುಮ್ತಾಜ್‌ಳ ಮಹಲು, ಬುರ್ಖಾ ಪ್ಯಾರಡೈಸ್ ಎಂಬ ಕವನ ಸಂಕಲನಗಳು ; *ಬಂಡಾಯ ಮುಸ್ಲೀಂ ಸಂವೇದನೆ, ಮಹಿಳೆ ಮತ್ತು ಸಮಾಜ* ಮೊದಲಾದ ವಿಮರ್ಶಾ ಕೃತಿಗಳನ್ನು ಪ್ರಕಟಿಸಿದ್ದಾರೆ. ಅತ್ತಿಮಬ್ಬೆ ಸಾಹಿತ್ಯ ಪ್ರಶಸ್ತಿ, ಮಂಗಳಾ ಕಲಾ ವೇದಿಕೆ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ಇವರಿಗೆ ಸಂದಿವೆ. ಪ್ರಸ್ತುತ ಕವಿತೆಯನ್ನು *'ಬುರ್ಖಾ ಪ್ಯಾರಡೈಸ್'* ಕೃತಿಯಿಂದ ಆಯ್ದುಕೊಳ್ಳಲಾಗಿದೆ.

ಶಬ್ದಾರ್ಥ : ಮುದ್ರೆ–ಗುರುತು ; ಸೌಧ–ಮಹಲು ; ಸುಪ್ರಭಾತ–ಬೆಳಗು.

ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ :

೧) 'ಇರಲಿ ಬಿಡಿ ಅವಳದೇ ಮುದ್ರೆ.'
೨) 'ಯುಗ ಯುಗಗಳಿಂದ ಅವಳು ಸಂಗಾತಿ.'
೩) 'ಬುದ್ಧಿ ಭಾವಗಳೆಲ್ಲವೂ ಅವಳವೇ ಆಗಿರಲಿ!'

ಒಂದು ವಾಕ್ಯದಲ್ಲಿ ಉತ್ತರಿಸಿ :

೧) ಪ್ರೀತಿಯಿಂದ ಕಟ್ಟಿದುದು ಯಾವುದು?
೨) ನಾಗರಿಕತೆಗಳನ್ನು ಕಟ್ಟುವವರು ಯಾರೆಂದು ಕವಯಿತ್ರಿ ಹೇಳುತ್ತಾರೆ?
೩) ಹೊಸ ಸೂರ್ಯೋದಯವನ್ನು ಯಾರು ತೋರಿಸಬೇಕು?
೪) ಮಹಿಳೆ ಏನನ್ನು ರಚಿಸಬೇಕಾಗಿದೆ?
೫) ಜೊತೆಗಾತಿ ಎಂದಿನಿಂದ ಸಂಗಾತಿಯಾಗಿದ್ದಾಳೆ?

ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ :

೧) ಕ್ರೂರ ಮುದ್ರೆ ಎಲ್ಲೆಲ್ಲಿ ಕಾಣುತ್ತಿದೆ?

೨) ಹೊಸ ಚರಿತ್ರೆ ರಚಿಸಲು ಯಾವ ಅಂಶಗಳು ಬೇಕು?

ವಿವರವಾಗಿ ಉತ್ತರಿಸಿ :

೧) ಚರಿತ್ರೆಯಲ್ಲಿ ದಾಖಲಾಗಲು ಹಂಬಲಿಸುವ ಮಹಿಳೆಯ ಬಯಕೆಗಳು ಯಾವುವು?

೨) ಮಹಿಳೆಯ ಮೇಲಿನ ಪುರುಷನ ಯಜಮಾನಿಕೆ ಪ್ರವೃತ್ತಿಯನ್ನು ಕವಯಿತ್ರಿ ಹೇಗೆ ನಿರೂಪಿಸಿದ್ದಾರೆ? ಚಿತ್ರಿಸಿ.

ಭಾಷಾಭ್ಯಾಸ :

೧) ಇವುಗಳಿಗೆ ತದ್ಭವ ಬರೆಯಿರಿ :

ಯುಗ, ಪ್ರೀತಿ.

೨) ಇವುಗಳನ್ನು ಬಿಡಿಸಿ ಬರೆಯಿರಿ :

ಸೂರ್ಯೋದಯ, ಅವಳಲ್ಲದ, ಪೂರ್ಣವಾಗು, ಪ್ರೀತಿಯಿಂದ.

೩) ಇವುಗಳಿಗೆ ನಾನಾರ್ಥ ಪದಗಳನ್ನು ಬರೆಯಿರಿ :

ಸಾಕು, ಮುದ್ರೆ, ಭಾವ.

ಚಟುವಟಿಕೆ : ೧) 'ಅಮ್ಮಾ' – ಎಚ್.ಎಸ್. ಮುಕ್ತಾಯಕ್ಕ, 'ಅಕ್ಕನಿಗೆ' – ಎಸ್. ಮಾಲತಿ, 'ನಾನು ಅಮೃತಮತಿಯಲ್ಲ' – ಕಮಲಾ ಹಂಪನಾ ಈ ಕವಿತೆಗಳೊಂದಿಗೆ 'ಅವಳ ಚರಿತ್ರೆ' ಕವಿತೆಯನ್ನು ತೌಲನಿಕವಾಗಿ ಚರ್ಚಿಸಿ.

೨) ಸ್ತ್ರೀ ಸ್ವಾತಂತ್ರ್ಯದ ಬಗ್ಗೆ ಪ್ರಬಂಧ ರಚಿಸಿ.

ಆಕರ ಗ್ರಂಥ : 'ಬುರ್ಖಾ ಪ್ಯಾರಡೈಸ್' – ಸಿ.ವಿ.ಜಿ. ಪ್ರಕಾಶನ, ಬೆಂಗಳೂರು.

ಹೆಚ್ಚಿನ ಓದು : ೧) ಶತಮಾನದ ಕಾವ್ಯ – ಸಂಪಾದಕರು : ಡಾ. ಕೆ. ಷರೀಫಾ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨) ಮಹಿಳಾ ವರ್ಷದಲ್ಲಿ ಅವ್ವನಿಗೊಂದು ಪತ್ರ– ಶಶಿಕಲಾ ವೀರಯ್ಯಸ್ವಾಮಿ.

೩) ಮರಳುಗಾಡಿನ ಕುಸುಮ : ಶ್ರೀಮತಿ ಭಾರತಿ ಮೋಹನ ಕೋಟಿ

ಕಾಗದದ ದೋಣಿಯಲ್ಲಿ

– ಸುಬ್ಬು ಹೊಲೆಯಾರ್

ನೊಂದವರ ನೋವು ಧಾರಾಕಾರವಾಗಿ ಸುರಿಯುವ ಮಳೆಯ ರೂಪಕವಾಗಿ ಇಲ್ಲಿ ಮೂಡಿಬಂದಿದೆ. ಕವಿ ದಲಿತರ ಮತ್ತು ಬಡವರ ಬದುಕು ಮಳೆಯಲ್ಲಿ ತೊಯ್ದು, ಅದನ್ನೇ ಬೇಲಿಯ ಮೇಲೆ ಒಣಗಲು ಹಾಕಿರುವ ಸ್ಥಿತಿಯ ಬಗ್ಗೆ ಚಿತ್ರಣ ನೀಡಿದ್ದಾರೆ. ಜೀವ ಜಲದ ಮೇಲೆ ತೇಲಿ ಹೋಗುವ ಕಾಗದದ ದೋಣಿ ದಲಿತರ, ಬಡವರ ಜೀವನದ ಸಾಂಕೇತಿಕ ರೂಪವಾಗಿದೆ. ಇದು ಬೀಸುವ ಬಿರುಗಾಳಿ, ನೆರೆಹಾವಳಿ, ಬೀಳುವ ಸಿಡಿಲಿಗೆ ಸಿಲುಕದೆ ದಡ ಸೇರಬೇಕೆಂಬುದು ಕವಿತೆಯ ಆಶಯವಾಗಿದೆ. ದಲಿತರ ಗುಡಿಸಲುಗಳಿಗೆ ಬೆಂಕಿ ಇಡುವ ಕೈ, ಕಣ್ಣು, ಮನಸ್ಸುಗಳು ಮಲ್ಲಿಗೆಯಾಗಲಿ ಎಂಬ ಸದಾಶಯವಿದೆ. ಮಳೆಯಲ್ಲಿ ತೊಯ್ದ ಬಡವರ, ನೊಂದವರ ಕಣ್ಣೀರು ಯಾರಿಗೂ ಕಾಣುವುದಿಲ್ಲ. ಪ್ರಕೃತಿ ಮತ್ತು ತಳವರ್ಗಗಳ ನಡುವಿನ ಅವಿನಾಭಾವ ಸಂಬಂಧವನ್ನು ಈ ಕವಿತೆ ಚಿತ್ರಿಸುತ್ತದೆ.

ನೋಡುತ್ತಲೇ ಇದ್ದೇನೆ ಮುತ್ತಿನ ಸರ
ಇಳೆ ಬಿಟ್ಟಂತೆ, ಸುರಿವ ಮಳೆಯನ್ನ;
ಹಿಡಿಯಲು ಹೋಗಿ ಹಿಡಿ ಬಿಚ್ಚಿ ನೋಡಿದ್ದೇನೆ
ಒದ್ದೆ ಅಂಗೈಯನ್ನ.
ಹಿಂಡಿ ಹಿಪ್ಪೇ ಮಾಡಿ ಹರವಿ ಹಾಕಿದ್ದೇನೆ
ಬೇಲಿಯ ಮೇಲೆ ನೆಂದ ಬಟ್ಟೆಗಳನ್ನ.
ಮುದ್ದೆಯಾಗಿದ್ದೇನೆ,
ಉಡಿದುಕೊಂಡ ಕರುಳು ಗಡ ಗಡ ನಡುಗಿ
ಉಡುಗಿ ಹೋಗಿದ್ದೇನೆ. ನೆತ್ತಿಯ ನೀರು ಗಂಟಲಲ್ಲಿಳಿದು
ನರಳಿದ್ದೇನೆ ಕತ್ತಲೆ ಕರಗುವಂತೆ ನಾಯಿ ಮರಿಯಾಗಿ

ಹುಯ್ಯುತ್ತಲೆ ಇರುವ ಮಳೆಯನ್ನ
ನೋಡುತ್ತಲೆ ಇದ್ದೇನೆ. ಮಳೆಯಲ್ಲಿ ಮಳೆಯಾಗಿ
ನನ್ನ ದುಃಖ ದುಮ್ಮಾನಗಳ ಪಟ್ಟಿ ಮಾಡುತ್ತ
ಮಳೆ ಸಾಲು ಎಣಿಸುತ್ತ, ಕಿವಿಯೊಳಗೆ ನೀರಿಳಿದು
ಲೋಕ ಮುಚ್ಚಿ ಹೋದ ಸದ್ದಾಗಿ ನಾನು ಕೂಗಿದ್ದು
ಯಾರಿಗೂ ಕೇಳದಂತಾಗಿ ಮರೆತು ಹೋಗಿದ್ದೇನೆ.
ಗೊತ್ತಿಲ್ಲ ನನಗೆ–ಹರಿಯಬಿಟ್ಟ ದೋಣಿಗಳೆಲ್ಲ

ದಡ ಸೇರಿವೆಯೆಂದು; ನಾನಿಟ್ಟ ಗುಲಗಂಜಿ
ಕೂಡ ಅಲೆಯ ರೆಪ್ಪೆಯ ಮೇಲೆ
ತೇಲಿ ತೀರ ಸೇರಿದ್ದರೆ, ವಂದಿಸುವೆ ಮಹಾನದಿಗೆ.

ಹತ್ತಿ ಕೊಳ್ಳುವುದಿಲ್ಲ ಗುಡಿಸಲುಗಳಿಗೆ ಬೆಂಕಿ
ಇಟ್ಟವರ ಕೈ.
ಕಣ್ಣು ಮನಸ್ಸು ಮಲ್ಲಿಗೆಯಾಗಲಿ,
ಒಳಗಿದ್ದವರ ಜೀವ ಉಳಿಯಲಿ–
ಪ್ರಾರ್ಥಿಸುವೆ. ಹುಯ್ಯುತ್ತಿರಲಿ ಮಳೆ ನಿರಂತರ;
ನಿಲ್ಲದಿರು ಮುತ್ತಿನ ಮಳೆಯೇ, ಹರಿಯುತ್ತಿರಲಿ ಹುಚ್ಚು
ಹೊಳೆ. ನೆರೆಯಲಿ ಮಹಾಪೂರ
ಅಲ್ಲಿ ನಡೆಸುವೆ ನನ್ನ ಪುಟ್ಟ ಕಾಗದದ ದೋಣಿಯನ್ನ
ತೋರಿಸುವೆ ಆಕಾಶ ತುಂಬಿರುವ ನಕ್ಷತ್ರಗಳನ್ನ.

❖ ❖ ❖ ❖

ಕವಿ ಪರಿಚಯ : ***ಸುಬ್ಬು ಹೊಲೆಯಾರ್*** ಕಾವ್ಯನಾಮದ ಕವಿಯ ಪೂರ್ಣ ಹೆಸರು ಹೆತ್ತೂರು ಕೊಮರಯ್ಯ ಸುಬ್ಬಯ್ಯ (೧೯೬೩). ತಂದೆ ಕೊಮರಯ್ಯ, ತಾಯಿ ತಿಪ್ಪಮ್ಮ. ***'ಡಿಪ್ಲೊಮಾ ಇನ್ ಡ್ರಾಮಾ'*** ಪದವೀಧರರಾದ ಇವರು ಅನೇಕ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಬೆಂಗಳೂರಿನ ದೂರದರ್ಶನ ಕೇಂದ್ರದಲ್ಲಿ ಕರ್ತವ್ಯ ಅಧಿಕಾರಿಯಾಗಿರುವ ಸುಬ್ಬು ಹೊಲೆಯಾರ್ ಕನ್ನಡ ದಲಿತ ಸಾಹಿತ್ಯದ ಪ್ರಮುಖ ಕವಿಗಳಲ್ಲಿ ಒಬ್ಬರು. ಅನೇಕ ರಾಜ್ಯ ಮಟ್ಟದ ಸಮ್ಮೇಳನಗಳಲ್ಲಿ ಕವಿತಾ ವಾಚನ ಮಾಡಿದ್ದಾರೆ. ***'ಸೂಜಿ ಗಾತ್ರದ ಕೊಳವೆಯಿಂದ ಮನುಷ್ಯನೊಬ್ಬನ ಹಾಡು'*** ಇದು ಇವರ ಪ್ರಥಮ ಕವನ ಸಂಕಲನ. ಈ ಕೃತಿಗೆ ಡಾ. ಜಿ.ಎಸ್.ಎಸ್. ಕಾವ್ಯ ಪ್ರಶಸ್ತಿ, ದಿನಕರ ದೇಸಾಯಿ ಪ್ರಶಸ್ತಿ, ಅತ್ತಿಮಬ್ಬೆ ಪ್ರತಿಷ್ಠಾನ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡಮಿಯ ಪ್ರಶಸ್ತಿಗಳು ಸಂದಿವೆ.

ಶಬ್ದಾರ್ಥ : ಒದ್ದೆ–ತೋಯ್ದ ; ನೆಂದ–ನೆನೆದ ; ಹರವು–ಹರಡು ; ಉಡುಗು–ಕುಗ್ಗು; ದುಮ್ಮಾನ–ಮನಸ್ಸಿನ ಉಮ್ಮಳ ; ಹುಯ್ಯು–ಸುರಿ.

ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ :

೧) 'ಹಿಂಡಿ ಹಿಪ್ಪೇ ಮಾಡಿ ಹರವಿ ಹಾಕಿದ್ದೇನೆ.'

೨) 'ನರಳಿದ್ದೇನೆ ಕತ್ತಲೆ ಕರಗುವಂತೆ.'

೩) 'ಕಣ್ಣು ಮನಸು ಮಲ್ಲಿಗೆಯಾಗಲಿ.'

ಒಂದು ವಾಕ್ಯದಲ್ಲಿ ಉತ್ತರಿಸಿ :

೧) ಮುತ್ತಿನ ಸರ ಇಳಿಬಿಟ್ಟಂತೆ ಸುರಿಯುವುದು ಯಾವುದು?

೨) ಕವಿ ಬೇಲಿಯ ಮೇಲೆ ಏನನ್ನು ಹರವಿ ಹಾಕಿದ್ದಾರೆ?

೩) ಹರಿಯ ಬಿಟ್ಟ ದೋಣಿಗಳು ಏನಾಗಿವೆ?

೪) ಮಹಾಪೂರದಲ್ಲಿ ಕವಿ ಏನನ್ನು ನಡೆಸುವೆ ಎನ್ನುತ್ತಾರೆ?

೫) ಯಾರ ಕೈ, ಕಣ್ಣು, ಮನಸ್ಸು ಮಲ್ಲಿಗೆಯಾಗಬೇಕು?

ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ :

೧) ಕವಿ ಉಡುಗಿ ಹೋಗಲು ಕಾರಣವೇನು?

೨) ಮಹಾನದಿಗೆ ಕವಿ ವಂದಿಸಲು ಕಾರಣವೇನು?

ವಿವರವಾಗಿ ಉತ್ತರಿಸಿ :

೧) ಮಳೆ ನಿರಂತರ ಹುಯ್ಯಲಿ ಎಂದು ಕವಿ ಹೇಳಲು ಕಾರಣಗಳೇನು?

೨) ದಲಿತರ ಬದುಕಿನ ಬವಣೆಯನ್ನು ಮಳೆ ಪ್ರತಿಮೆಯ ಮೂಲಕ ಹೇಗೆ ಚಿತ್ರಿಸಲಾಗಿದೆ?

ಭಾಷಾಭ್ಯಾಸ :

೧) ಇವುಗಳಿಗೆ ನಾನಾರ್ಥ ಬರೆಯಿರಿ :

ಹೊಳೆ, ಅಲೆ, ಬಟ್ಟೆ, ಹರಿ, ನೆನೆ.

೨) ಇವುಗಳಿಗೆ ತತ್ಸಮ-ತದ್ಭವ ಬರೆಯಿರಿ :

ಆಕಾಶ, ಸುಖ, ದಡ.

ಚಟುವಟಿಕೆ :

೧) ಯು.ಆರ್. ಅನಂತಮೂರ್ತಿ ಅವರ *'ಮತ್ತೆ ಮಳೆ ಹೊಯ್ಯುತಿದೆ'* ಹಾಗೂ ಕೆ.ಎಸ್. ನಿಸಾರ್ ಅಹಮದ್ ಅವರ *'ಸಂಜೆ ಐದರ ಮಳೆ'* ಕವಿತೆಗಳೊಂದಿಗೆ ಹೋಲಿಸಿರಿ.

೨) ಮಳೆಯಲ್ಲಿ ತೊಯ್ದ ನಿಮ್ಮ ಅನುಭವ ಬರೆಯಿರಿ.

ಆಕರ ಗ್ರಂಥ :

'ಸೂಜಿ ಗಾತ್ರದ ಕೊಳವೆಯಿಂದ ಮನುಷ್ಯನೊಬ್ಬನ ಹಾಡು' – ದ್ರಾವಿಡ ಪಬ್ಲಿಕೇಶನ್, ಮೈಸೂರು – ಮುದ್ರಣ ವರ್ಷ : ೨೦೦೩.

ಹೆಚ್ಚಿನ ಓದು :

೧) ಬೇಂದ್ರೆಯವರ *'ಮಳೆ ಬರುವ ಕಾಲಕ್ಕ'* ಪದ್ಯ.

೨) ಡಾ. ಮೂಡ್ನಾಕೂಡು ಚಿನ್ನಸ್ವಾಮಿಯವರ *'ಮತ್ತೆ ಮಳೆ ಬರುವ ಮುನ್ನ'* ಕವನ ಸಂಕಲನ.

೩) ಚೆನ್ನವೀರ ಕಣವಿಯವರ 'ಧಾರವಾಡದಲ್ಲಿ ಮಳೆಗಾಲ' ಕವಿತೆ.

ಆಧುನಿಕ ಗದ್ಯ ಸಾಹಿತ್ಯ

ನಮ್ಮ ಸಾಹಿತ್ಯ ಪರಂಪರೆಯು ಆಧುನಿಕ ಕಾಲದಲ್ಲಿ ಪಡೆದುಕೊಂಡ ಹರಹು ಅತ್ಯಂತ ವಿಸ್ತೃತವಾದುದು. ಪದ್ಯ ಸಾಹಿತ್ಯವು ಗದ್ಯದ ಅಭಿವ್ಯಕ್ತಿಯ ನೆಲೆಯ ಕವಲನ್ನು ಪಡೆದು ಸಣ್ಣ ಕತೆ, ಕಾದಂಬರಿ, ನಾಟಕ, ಪ್ರಬಂಧ, ಪ್ರವಾಸ ಕಥನ, ಜೀವನ ಚರಿತ್ರೆ, ವಿಮರ್ಶೆ ಮುಂತಾದ ಬಗೆಯ ಧಾರೆಗಳಲ್ಲಿ ಸಮೃದ್ಧವಾಗಿ ಬೆಳೆಯಿತು. ಹಿಂದೆಂದೂ ಕಾಣದ ಅಪೂರ್ವ, ಅನನ್ಯ ಶಕ್ತಿಯನ್ನು ಪಡೆದುಕೊಂಡಿತು. ವಿಶೇಷವಾಗಿ ಕಥನ ಸಾಹಿತ್ಯ ಗದ್ಯದಲ್ಲಿ ಬೆಳೆದ ಬಗೆ ವಿಶಿಷ್ಟವಾದುದು. ಕನ್ನಡ ಕಥನ ಸಾಹಿತ್ಯ ಗದ್ಯವನ್ನು ಬಳಸುವ ಪರಂಪರೆಯೂ ದೀರ್ಘವಾದುದೇ. ವಿವರಣೆಗೆ, ನಿರೂಪಣೆಗೆ, ವರ್ಣನೆಗೆ ಗದ್ಯದ ಅನಿವಾರ್ಯತೆ ಸೃಷ್ಟಿಯಾಯಿತು. ಇಪ್ಪತ್ತನೇ ಶತಮಾನದ ಆರಂಭದಲ್ಲಿ ಸೃಷ್ಟಿಯಾದ ಕಥನ ಸಾಹಿತ್ಯದಲ್ಲಿ ಆಯಾ ಪ್ರಾದೇಶಿಕ ಭಾಷೆಯ ಗದ್ಯದ ಪ್ರಭೇದಗಳು ಬಳಕೆಗೊಂಡವು. ಆನಂತರ ಭಾಷೆಯನ್ನು ಎಚ್ಚರದಿಂದ ಬಳಸುವ ಪರಿಪಾಠ ಮೊದಲಾಯಿತು. ಗುಲ್ವಾಡಿ ವೆಂಕಟರಾಯರು, ಎಂ.ಎಸ್. ಪುಟ್ಟಣ್ಣನವರು ತಮ್ಮ ಗದ್ಯ ಸಾಹಿತ್ಯದ ಅಭಿವ್ಯಕ್ತಿಗೆ ಒಂದು ಪ್ರಬಲ ಶೈಲಿಯನ್ನು ನಿರ್ಮಿಸಿಕೊಂಡರು. ಇದೇ ಸಂದರ್ಭದಲ್ಲಿ ಮಾಸ್ತಿ, ಕುವೆಂಪು ಮುಂತಾದ ಲೇಖಕರು ಗದ್ಯಕ್ಕೆ ಸಾಂಪ್ರದಾಯಕ ಪ್ರಮಾಣೀಕರಣವನ್ನು ತುಂಬಲು ಕಾರಣರಾದರು. ಪಾತ್ರಗಳ ಸಂಭಾಷಣೆಯ ಭಾಷೆ, ನಿರೂಪಕನ ಭಾಷೆ, ಹಾಗೂ ಸನ್ನಿವೇಶ ನಿರ್ಮಾಣದ ಭಾಷೆಯನ್ನು ಬಳಸುವ ಪದ್ಧತಿಯನ್ನು ನವೋದಯದ ಪ್ರಮುಖ ಗದ್ಯ ಲೇಖಕರಲ್ಲಿ ಕಾಣಬಹುದಾಗಿದೆ. ಸಾಂಪ್ರದಾಯಕ ಗದ್ಯ ಕಥನದ ಚೌಕಟ್ಟನ್ನು ಮೀರಿ ಆಧುನಿಕ ಶೈಲಿಯ ಕೃತಿಗಳ ನಿರ್ಮಾಣದ ಕಡೆಗೆ ಅವರ ತುಡಿತವಿರುವುದನ್ನು ಮನಗಾಣಬಹುದು. ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ ಈ ಎಲ್ಲ ಸಾಹಿತ್ಯ ಘಟ್ಟಗಳಲ್ಲಿ ಆಧುನಿಕ ಗದ್ಯ ಸಾಹಿತ್ಯವು ಪುಷ್ಟಿಗೊಳ್ಳುತ್ತಾ ಸಾಗಿ ಬಂದಿದೆ.

ಆಧುನಿಕ ಗದ್ಯ *'ಮನುಷ್ಯ'* ಕೇಂದ್ರಿತವಾದುದು. ಯಾವುದೇ ಸಾಹಿತ್ಯ ಕೃತಿಯ ಅಸ್ತಿತ್ವದ ಪರಿಧಿಯೊಳಗೇ ಮಾನವನ ಮನಸ್ಸು, ಅವನ ಜೀವನ ಕ್ರಮ, ನೋವು-ನಲಿವು ವ್ಯವಹರಿಸುತ್ತವೆ. ಆಧುನಿಕ ಗದ್ಯ ಸಂದರ್ಭದ ಸಾಹಿತ್ಯ ಕೃತಿಗಳು ತಮ್ಮ ಅಸ್ತಿತ್ವದೊಳಗೆ ವಸ್ತು ಬೇರೆ, ಭಾಷೆ ಬೇರೆ, ಸ್ವರೂಪ ಬೇರೆ, ಪಾತ್ರ ಬೇರೆ ಎಂದು ವರ್ಗೀಕರಿಸಿಕೊಳ್ಳದೆ ವಸ್ತು, ಭಾಷೆ, ತಂತ್ರ ಇವುಗಳೊಡನೆ ಸಾತತ್ಯವನ್ನು ಸಾಧಿಸಿವೆ. ಆ ವಸ್ತುವಿನ ಸ್ವರೂಪ ಹಾಗೂ ಅದರ ಬಲಿಷ್ಠತೆಗೆ ಅನುಗುಣವಾಗಿಯೇ ಅದರ ಭಾಷೆ, ಶೈಲಿ, ತಂತ್ರ, ಪ್ರತಿಮೆ, ರೂಪಕ ಎಲ್ಲವೂ

ರೂಪುಗೊಳ್ಳುತ್ತಾ ಬಂದಿವೆ. ಒಂದು ಸಾಹಿತ್ಯ ಕೃತಿಯ ಅಧ್ಯಯನವೆಂದರೆ ಸಮಾಜವೊಂದರ ಒಟ್ಟು ಸಂಸ್ಕೃತಿಯ ಬಹುಮುಖಿ ಅಧ್ಯಯನವೆಂದು, ಲೇಖಕ ಕಟ್ಟಿದ ಅಖಂಡ ಬದುಕಿನ ಪರಿಪ್ರೇಕ್ಷ್ಯದ ಅಧ್ಯಯನವೆಂದು ತಿಳಿಯುವ, ತಿಳಿಯಬೇಕಾದ ಸಂದರ್ಭದಲ್ಲಿಂದು ನಾವಿದ್ದೇವೆ.

ಆಧುನಿಕ ಗದ್ಯ ಸಾಹಿತ್ಯದ ವಿವಿಧ ಪ್ರಕಾರದ ಕೆಲವು ಮಾದರಿಗಳಾಗಿ ಸಣ್ಣಕತೆ, ಲಲಿತ ಪ್ರಬಂಧ, ವ್ಯಕ್ತಿ ಚಿತ್ರ, ಜೀವನ ಚರಿತ್ರೆ, ಪ್ರವಾಸ ಕಥನ, ವಿಚಾರ ಸಾಹಿತ್ಯದ ತುಣುಕುಗಳನ್ನು ಸಾಹಿತ್ಯದ ವಿದ್ಯಾರ್ಥಿಗಳಿಗೆ ಪರಿಚಯಿಸುವ ಆಶಯವುಳ್ಳ ಮಾದರಿಗಳಲ್ಲಿವೆ. ಕನ್ನಡ ಗದ್ಯದ ಆರಂಭಿಕ ನಡೆಯ ಪ್ರತೀಕವೆಂಬಂತೆ ಪಂಚತಂತ್ರದ ಕತೆಯೂ ಇದೆ. ಈ ಮುಖೇನ ಅಖಂಡ ಸಾಹಿತ್ಯ ಧಾರೆಗೆ ವಿದ್ಯಾರ್ಥಿಗಳು ತಮ್ಮನ್ನು ತಾವು ತೆರೆದುಕೊಳ್ಳಬೇಕಿದೆ. ಸಮಕಾಲೀನ ಗದ್ಯ ಪಡೆದುಕೊಂಡಿರುವ ವಿಭಿನ್ನ ಸಂವೇದನೆಗಳನ್ನು ಅರಿತುಕೊಳ್ಳಬೇಕಾಗಿದೆ.

ನಾಲ್ವರ್ ಧೂರ್ತರ್ ಒರ್ವ ಬ್ರಾಹ್ಮಣನಂ ವಂಚಿಸಿದ ಕಥೆ

– ದುರ್ಗಸಿಂಹ

ಶಕ್ತಿವಂತರೂ, ಉಪಾಯಗಾರರೂ ಆದ ದುರ್ಜನರು ಒಟ್ಟುಗೂಡಿ ಯಾರನ್ನೇ ಆದರೂ ವಂಚಿಸಬಲ್ಲರು. ಇಂಥವರ ಪ್ರಚೋದನೆಗಳಿಗೆ ಒಳಗಾದ ವ್ಯಕ್ತಿಯು, ತನ್ನಲ್ಲೇ ಅಂತರ್ಗತವಾಗಿರುವ ಸತ್ಯವನ್ನು ಮರೆತರೆ ಅದು ಆತ್ಮಘಾತುಕತನವಾಗುತ್ತದೆ ಎಂಬ ಸತ್ಯವನ್ನು ಪ್ರತಿಪಾದಿಸುವ ಈ ಕಥೆಯು ಮನೋರಂಜಕ ಮತ್ತು ಮನೋವೈಜ್ಞಾನಿಕವಾಗಿದೆ.

ಹಣ ಮತ್ತು ಅಧಿಕಾರದ ಮೇಲಾಟದಲ್ಲಿ ದುರ್ಜನರೇ ಸಫಲರಾದರೆ, ಸಾಮಾನ್ಯರ ಸ್ಥಿತಿ–ಗತಿಗಳೇನಾಗಬಹುದು ಎಂಬ ಆತಂಕದ ಸನ್ನಿವೇಶದಲ್ಲಿ ಪ್ರಸಕ್ತ ಕಥೆಯು ಹೆಚ್ಚು ಪ್ರಸ್ತುತ ಎನಿಸುತ್ತದೆ.

ಒಬ್ಬ ಶ್ರೋತ್ರಿಯನಪ್ಪ ಪಾರ್ವಂ ಯಜ್ಞನಿಮಿತ್ತಂ ಒಂದಾಡಂ ಬೇಱೂರಿಂ ಮಾಱುಗೊಂಡು ಪೆಗಲೊಳಕ್ಕಿ ಪೋಪನಂ ನಾಲ್ವರ್ ಧೂರ್ತರ್ ಕಂಡು–ನಾವೀ ಬೆಳ್ಳನನಾಳವಾಡಿಕೊಂಡೀಯಾಡಂ ನಾಯಂ ಮಾಡಿ ತಿಂಬಂ ಬನ್ನಿಮೆಂದು, ಮುಂದೆ ಪರಿದೋರೊರ್ವರೆ ಮಾರ್ಬಟ್ಟೆಯೊಳ್ ಬರ್ಪಂತಾಗಿ ಬರುತ್ತುಂ, ಮುನ್ನಮೊರ್ವಂ ಬಂದೆಲೆ ಪಾರ್ವ! ನೀನಪ್ಪೊಡೆ ದುರ್ವಾಸನ ಸಮಾನನಪ್ಪ ಬ್ರಾಹ್ಮಣಂ, ನೀನೀ ಶ್ವಾನನೇನಿಮಿತ್ತಂ ಪೊತ್ತು ಪೋದಪೆಯೆಂದು ನುಡಿದು ಪೋದಂ; ಆ ಭಟ್ಟನೀ ದುಷ್ಟಂಗೆ ಮಱುಮಾತುಗೊಟ್ಟೊಡೇನಪ್ಪುದೆಂದುಸಿರದೆ ನಡೆವುದುಂ; ಮತ್ತೊರ್ವನಿದಿರೆ ಬಂದೆಲೆ ಭಟ್ಟರೇ! ಬ್ರಾಹ್ಮಣಂ ನಾಯಂ ಮುಟ್ಟಲಾಗದೆಂಬರದು ಕೆಟ್ಟು ಪೊತ್ತುಕೊಂಡು ಪೋದಪೆ, ನೀವೆತ್ತಾನುಂ ಮರುಳ್ಗೊಂಡಿರೋ ಮರುಳಕ್ಕಿ ಅಟ್ಟುದನುಂಡಿರೋ ಪೇೞಿ ವಲ್ಲದಾಗಳ್ ನೀನೆತ್ತಲೀ ಚಂಡಾಲಕರ್ಮದೊಳ್ ತೊಡರ್ದು ಇಂತು ಭ್ರಷ್ಟಾಚಾರನಾದೆ, ನಿನ್ನಂ ಮುಟ್ಟಲಾಗದೆಂದವಂ ಕೞಿದು ಪೋಪುದುಂ; ಭಟ್ಟಂಗೆ ಭ್ರಾಂತಿ ಪುಟ್ಟಿ ನಿಂದು ಪೆಗಲೊಳರ್ದ ಛಾಗಲಮಂ ಭೂಭಾಗದೊಳೞಿಪಿ,

ಶ್ರವಣಶಿರಃಪುಚ್ಛಾಸ್ಯಾ
ದ್ಯವಯವಮಂ ಮುಟ್ಟಿ ನೋಡಿ ನಾಯಲ್ಲಿದು ಭೂ
ಭುವನ ಪ್ರಸಿದ್ಧಮಜಮೆಂ
ದವಧಾರಿಸಿ ಪೊತ್ತುಕೊಂಡು ಪೋದಂ ಪಾರ್ವಂ

ಅಂತು ನಡೆದ ಪಾರ್ವಂಗೆ ಮತ್ತೊರ್ವನಿದಿರು ಬಂದೆಲೆ ಪಾರ್ವ! ನಿಮಗೆ ಕುಶಾಕ್ಷಮಾಲಾಯಜ್ಞೋಪವೀತೋತ್ತರೀಯಾದಿ ಚಿಹ್ನಂಗಳೆತ್ತಲೀ ನಾಯಂ ಪೊತ್ತು

ಪೋಪುದೆತ್ತಲೆತ್ತಾನುಂ ನಿಮಗೆ ಮೃಗಯಾವ್ಯಸನ ವ್ಯಾಪಾರಮಾದುದಕ್ಕುಮಲ್ಲದಾಗಳದು ನಿಮ್ಮ ದುಷ್ಕರ್ಮದ ಫಲಮೆಂದು ನುಡಿದು ಪೋಪುದುಮಾ ಪಾರ್ವಂ ಚೋದ್ಯಂಬಟ್ಟು,

ಚಿತ್ತಭ್ರಾಂತಿಶ್ರಾಂತಂ
ಪೊತ್ತುದುಮಂ ತಡವಿ ನೋಡುತುಂ ಛಾಗಲಮಂ
ಮತ್ತಾ ಪಾರ್ವಂ ವಿಸ್ಮಿತ
ಚಿತ್ತಂ ಚಿಂತಿಸುತೆ ಮುಂತೆ ಬರೆ ಮತ್ತೊರ್ವಂ

ಅಂತು ಬಂದೆಲೆ ದ್ವಿಜ! ನೀನಿನಿತು ಕಾಲಂ ಬ್ರಾಹ್ಮಣನುಂ ಸದಾಚಾರನುಮಾಗಿ ದಿರ್ೀಗಳೀ ಶ್ವಾನನಂ ಪೊತ್ತು ಹೀನಜಾತಿಸಮಾನನಾದೆ. ಇದಂ ಮಹಾಜನಂಗಳ್ ಕಂಡರಪ್ಪೊಡೆ ಸಭಾಜನಕ್ಕಂ ಸಹಪಙ್ತಿಗಂ ಪೊಱಗೆಂದು ಸಮಯಬಾಹ್ಯನಂ ಮಾೞ್ಪರದಱಿಂದೀನಾಯನೀಡಾಡಿ ಪ್ರಾಯಶ್ಚಿತ್ತಮಂ ಕೈಕೊಳ್ಳಮೆಂದು ಪೇೞ್ದು ಪೋಪುದುಮಾ ಪಾರ್ವನಿದಂ ಕಂಡವರೆಲ್ಲಂ ನಾಯಂ ಪೊತ್ತುಕೊಂಡು ಪೋದಪನೆನುತ್ತುಮಿರ್ದರಾನೆತ್ತಾನುಂ ಮರುಳ್ಗೊಂಡೆನಕ್ಕುಮದಲ್ಲದಾಗಳದು ಕಾಮರೂಪಿಯಕ್ಕುಮಿದನೆಂತಱಿಯಲಕ್ಕುಮೆಂದು ಭಯಂಗೊಂಡಾಡಂ ಶ್ವಾನನೆಂದೀಡಾಡಿ ಮಾಳಂಗೊಂಡೋಡಿದಂ. ಇತ್ತಲಾ ಧೂರ್ತರೆಲ್ಲರ್ ಬಂದು ತಮ್ಮ ವಂಚನೋಪಾಯಕ್ಕೆ ತಾವೆ ಮೆಚ್ಚಿ ನಕ್ಕು ಆಡಂ ತಿಂದರ್.

❖ ❖ ❖ ❖

ಕವಿ–ಕೃತಿ ಪರಿಚಯ : ದುರ್ಗಸಿಂಹ (ಕ್ರಿ.ಶ. ಸುಮಾರು ೧೦೨೫) ಕರ್ನಾಟಕ ಪಂಚತಂತ್ರಂ ಕೃತಿಯ ಕರ್ತೃ. ಇವರು ಚಾಲುಕ್ಯರಲ್ಲಿ *'ಸತ್ಯಾಶ್ರಯ ಕುಲತಿಲಕ'* ಎಂದು ಪ್ರಸಿದ್ಧರಾಗಿ ಕ್ರಿ.ಶ. ೧೦೧೫ ರಿಂದ ಕ್ರಿ.ಶ. ೧೦೪೨ರವರೆಗೆ ರಾಜ್ಯವಾಳಿದ *'ಜಗದೇಕ ಮಲ್ಲ'* ಅಥವಾ *'ಜಯಸಿಂಹ'*ನಲ್ಲಿ ಸಂಧಿವಿಗ್ರಹಿಯಾಗಿದ್ದರು. ಕಿಸುವೊಳಲಿನ ಸೈಯಡಿ ಅಗ್ರಹಾರವು ಇವರ ಊರು. (ಈಗಿನ ಗದಗ ಜಿಲ್ಲೆ ರೋಣ ತಾಲ್ಲೂಕಿನ ಸೂಡಿ). ಕ್ರಿಸ್ತಶಕದ ಆದಿಯಲ್ಲಿ ಸಂಸ್ಕೃತದಲ್ಲಿ ರಚಿತವಾಗಿದ್ದ ವಸುಭಾಗಭಟ್ಟರ *ಸಂಸ್ಕೃತ ಪಂಚತಂತ್ರವನ್ನು* (ಜಗತ್ತಿನ ನಾನಾ ಭಾಷೆಗಳಿಗೆ ಪಂಚತಂತ್ರದ ಕಥೆಗಳು ಅನುವಾದಗೊಂಡಿವೆ) ಆಧರಿಸಿ ದುರ್ಗಸಿಂಹ *'ಕರ್ನಾಟಕ ಪಂಚತಂತ್ರಂ'* ಕೃತಿಯನ್ನು ರಚಿಸಿದ್ದಾರೆ.

ದುರ್ಗಸಿಂಹ ಅವರದು ಗದ್ಯಭೂಯಿಷ್ಠವಾದ ಚಂಪೂಶೈಲಿ. ಇದು ಕನ್ನಡ ಗದ್ಯ ಸಾಹಿತ್ಯದ ಬೆಳವಣಿಗೆಯಲ್ಲಿ ಕವಿಗೊಂದು ಮಾನ್ಯಸ್ಥಾನವನ್ನು ದೊರಕಿಸಿಕೊಟ್ಟಿದೆ. ಪ್ರಾಣಿಪ್ರಪಂಚ-ಮನುಷ್ಯ ಪ್ರಪಂಚವನ್ನು ಪರಿಣಾಮಕಾರಿಯಾಗಿ ಕೂಡಿಸುವ *'ಕರ್ನಾಟಕ ಪಂಚತಂತ್ರಂ'* ಕೃತಿಗೆ ಕನ್ನಡ ವಾಙ್ಮಯದಲ್ಲಿ ಪ್ರಶಸ್ತವಾದ ಸ್ಥಾನವಿದೆ.

ಪ್ರಸ್ತುತ ಕತೆಯನ್ನು *'ಕರ್ನಾಟಕ ಪಂಚತಂತ್ರ'*ದ ಭೇದ ಪ್ರಕರಣದಿಂದ ಆಯ್ದುಕೊಂಡಿದೆ. ಬ್ರಾಹ್ಮಣನೋರ್ವನು ಯಜ್ಞಕ್ಕಾಗಿ ಕೊಂಡೊಯ್ಯುತ್ತಿದ್ದ ಆಡನ್ನು ನಾಲ್ವರು ಧೂರ್ತರು ವಂಚಿಸಿ ತಿಂದ ವೃತ್ತಾಂತವು ಇದರಲ್ಲಿದೆ.

ಶಬ್ದಾರ್ಥ : ಶ್ರೋತ್ರಿಯ-ವೇದಾಧ್ಯಯನ ಮಾಡಿದ ಬ್ರಾಹ್ಮಣ, ವೈದಿಕ ; ಪೆಗಲ್-ಹೆಗಲ್ ; ಪಾರ್ವ-ಹಾರುವ, ಬ್ರಹ್ಮಜ್ಞಾನಿ ; ಮಾಱುಗೊಂಡು-ಬೆಲೆಗೆ ಖರೀದಿಸು ; ಬೆಳ್ಳ-ಬೆಪ್ಪ, ಮುಗ್ಧ ; ಆಳವಾಡು-ಮೋಸಮಾಡು ; ಮಾರ್ + ಬಟ್ಟೆ-ಬೇರೆ ದಾರಿ ; ನೀವ್ + ಎತ್ತಾನುಂ-ನೀವೆತ್ತಾನುಂ-ನೀವು ಎಲ್ಲಿಯಾದರೂ ; ಮರುಳ್ + ಗೊಳ್ - ಮರುಳ್ಗೊಳ್-ಹುಚ್ಚನಾಗು ; ಅಟ್ಟುದು-ಅಡುಗೆ ಮಾಡಿದ್ದು ; ತೊಡರ್-ತೊಡಗು ; ಕಳದು ಪೋಪುದು-ಸಾಗಿ ಹೋಗುವುದು ; ಛಾಗಲ-ಆಡು; ಶ್ರವಣ-ಕಿವಿ ; ಶಿರ-ತಲೆ ; ಪುಚ್ಛ-ಬಾಲ ; (ಆದ್ಯಾವಯವ-ಆದ್ಯ + ಅವಯವ), ಆದ್ಯ-ಮೊದಲಾದ ; ಅವಯವ-ಅಂಗ ; ಭೂ-ಭುವನ ; ಅಜ-ಆಡು ; ಕುಶ-ದರ್ಭೆ ; ಅಕ್ಷಮಾಲಾ-ಜಪಮಣಿ ಸರ ; ಯಜ್ಞೋಪವೀತ-ಜನಿವಾರ ; ಉತ್ತರೀಯ-ಮೇಲು ಹೊದಿಕೆ ; ಮೃಗಯಾ ವ್ಯಸನ-ಪ್ರಾಣಿಗಳನ್ನು ಬೇಟೆಯಾಡುವ ಚಟ ; ಚೋದ್ಯ-ಆಶ್ಚರ್ಯ ; ಪೊರಗು-ಹೊರಗು ; ಶ್ರಾಂತ-ಆಯಾಸ, ದಣಿವು; ಭ್ರಾಂತಿ-ಭ್ರಮೆ ; ಸಮಯ-ಧರ್ಮ ; ಸಮಯ ಬಾಹ್ಯನಂ-ಧರ್ಮಬಾಹಿರನನ್ನಾಗಿ; ಈಡಾಡು-ಬಿಸಾಡು, ತ್ಯಜಿಸು ; ಮರುಳ್ + ಕೊಂಡೆನು (ಮರಳ್ಗೊಂಡೆನು)-ಹುಚ್ಚಾದೆನು ; ಕಾಮರೂಪಿ-ಬಯಸಿದ ರೂಪ ಪಡೆವ ; ಮಾಳಂಗೊಂಡು-ಬಯಲನ್ನು (ಮೈದಾನವನ್ನು) ಹಿಡಿದು.

ಟಿಪ್ಪಣಿ :

ಪಂಚತಂತ್ರ : 'ತಂತ್ರ' ಎಂದರೆ ಪರಿಚ್ಛೇದ ಎಂದರ್ಥ. ಉಪಾಯ ಎಂಬರ್ಥವೂ ಸಂಗತವಾಗಿದ್ದು, ಕಥೆ ಎಂಬರ್ಥವೂ ಇರಬಹುದೆಂದು ಊಹಿಸಲಾಗಿದೆ. ಕೃತಿಯಲ್ಲಿ ಐದು ಪ್ರಕರಣಗಳಿವೆ. ಭೇದ ಪ್ರಕರಣ, ಪರೀಕ್ಷಾ ವ್ಯಾವರ್ಣನ, ವಿಶ್ವಾಸ ಪ್ರಕರಣ, ವಂಚನಾ ಪ್ರಕರಣ ಮತ್ತು ಮಿತ್ರ ಕಾರ್ಯ ಪ್ರಕರಣ.

೧) **‘ಭೇದ’** : ಕಪಟೋಪಾಯದಿಂದ ಸ್ನೇಹಿತರಲ್ಲಿ ಒಡಕನ್ನುಂಟು ಮಾಡುವುದು.

೨) **‘ಪರೀಕ್ಷೆ’** : ಯಾವುದೇ ಕೆಲಸವನ್ನು ವಿಚಾರಪೂರ್ವಕವಾಗಿಯಲ್ಲದೆ ಮಾಡಲಾಗದು ಎಂದು ತಿಳಿಸುವುದು.

೩) **‘ವಿಶ್ವಾಸ’** : ನಂಬದವರನ್ನು ನಂಬುವಂತೆ ಮಾಡಿ ಒಳಹೋಗುವುದು.

೪) **‘ವಂಚನೆ’** : ಅನ್ಯರ ಬಗೆಯನ್ನರಿತು ಸಂಧಾನ ಮಾಡಿ ವಂಚಿಸುವುದು.

೫) **‘ಮಿತ್ರಕಾರ್ಯ’** : ಪರರನ್ನು ಸ್ನೇಹದಿಂದ ತನ್ನವರನ್ನಾಗಿ ಮಾಡಿಕೊಳ್ಳುವುದು.

ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ :

೧) ‘ನಾಯಂ ಮಾಡಿ ತಿಂಬಂ ಬನ್ನಿಂ.’

೨) ‘ನೀನಪ್ಪೊಡೆ ದೂರ್ವಾಸನ ಸಮಾನನಪ್ಪ ಬ್ರಾಹ್ಮಣಂ.’

೩) ‘ದುಷ್ಟಂಗೆ ಮಱುಮಾತುಗೊಟ್ಟೊಡೇನಪ್ಪುದು?’

೪) ‘ಮರುಳಕ್ಕಿ ಅಟ್ಟುದನುಂಡಿರೊ ಪೇಳಿಮ್.’

೫) ‘ನಾಯಲ್ಲದು ಭೂಭುವನ ಪ್ರಸಿದ್ಧಮಜಂ.’

೬) ‘ಶ್ವಾನನಂ ಪೊತ್ತು ಹೀನಜಾತಿಸಮಾನನಾದೆ.’

೭) ‘ಪ್ರಾಯಶ್ಚಿತ್ತಮಂ ಕೈಕೊಳ್ಳಿಮ್.’

ಒಂದು ವಾಕ್ಯದಲ್ಲಿ ಉತ್ತರಿಸಿ :

೧) ಶ್ರೋತ್ರಿಯನೆಂದರೆ ಯಾರು?

೨) ಪಾರ್ವನು ಯಾವ ಕಾರಣಕ್ಕಾಗಿ ಆಡನ್ನು ಖರೀದಿಸಿದ್ದನು?

೩) ಪಾರ್ವನು ಆಡನ್ನು ಹೇಗೆ ಕೊಂಡೊಯ್ಯುತ್ತಿದ್ದನು?

೪) ‘ಆನೆತ್ತಾನುಂ ಮರುಳ್ಗೊಂಡೆನಕ್ಕುಂ’ ಎಂದುಕೊಂಡವರು ಯಾರು?

೫) ಭಯಗೊಂಡ ಬ್ರಾಹ್ಮಣನು ಕಡೆಗೆ ಏನು ಮಾಡಿದನು?

ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ :

೧) ಪಾರ್ವನನ್ನು ನೋಡಿ ಧೂರ್ತರು ಏನೆಂದುಕೊಂಡರು?

೨) ಮೊದಲ ಧೂರ್ತನ ಮಾತಿಗೆ ಬ್ರಾಹ್ಮಣನು ಹೇಗೆ ಪ್ರತಿಕ್ರಿಯಿಸಿದ?

೩) ಭ್ರಮೆ ಮೂಡಿದೊಡನೆ ಬ್ರಾಹ್ಮಣನು ಏನು ಮಾಡಿದನು?

೪) ಬ್ರಾಹ್ಮಣ್ಯದ ಚಿಹ್ನೆಗಳಾವುವು?

ವಿವರವಾಗಿ ಉತ್ತರಿಸಿ :

೧) ಧೂರ್ತರು ವಂಚನೆಗೆ ಬಳಸಿದ ಉಪಾಯ ಮತ್ತು ಅದರ ಪರಿಣಾಮವನ್ನು ಕುರಿತು ಬರೆಯಿರಿ.

೨) ವಂಚಕರ ಸಂಚಿಗೆ ಹಂತ-ಹಂತವಾಗಿ ಮರುಳಾಗುವ ಬ್ರಾಹ್ಮಣನ ಮನಃಸ್ಥಿತಿಯನ್ನು ಕತೆಯ ಹಿನ್ನೆಲೆಯಲ್ಲಿ ಚರ್ಚಿಸಿ.

ಭಾಷಾಭ್ಯಾಸ :

೧) ಹಳಗನ್ನಡ ವಿಭಕ್ತಿ ಪ್ರತ್ಯಯಗಳನ್ನು ಗಮನಿಸಿ :

ಪ್ರಥಮಾ ವಿಭಕ್ತಿ ಪ್ರತ್ಯಯ	ಮ್/ನ್	ಪಾರ್ವಂ/ಪಾರ್ವನ್
ದ್ವಿತೀಯಾ ವಿಭಕ್ತಿ ಪ್ರತ್ಯಯ	ಅಂ	ಪಾರ್ವನಂ
ತೃತೀಯಾ ವಿಭಕ್ತಿ ಪ್ರತ್ಯಯ	ಇಂ	ಪಾರ್ವನಿಂ
ಚತುರ್ಥೀ ವಿಭಕ್ತಿ ಪ್ರತ್ಯಯ	ಗೆ	ಪಾರ್ವಂಗೆ
ಪಂಚಮೀ ವಿಭಕ್ತಿ ಪ್ರತ್ಯಯ	ಅತ್ತಣಿಂ	ಪಾರ್ವನತ್ತಣಿಂ
ಷಷ್ಠೀ ವಿಭಕ್ತಿ ಪ್ರತ್ಯಯ	ಅ	ಪಾರ್ವನ
ಸಪ್ತಮೀ ವಿಭಕ್ತಿ ಪ್ರತ್ಯಯ	ಒಳ್	ಪಾರ್ವನೊಳ್

೨) ಇವುಗಳನ್ನು ಬಿಡಿಸಿ ಬರೆಯಿರಿ :

ಬೇಚೂರು, ಮಾರ್ಬಟ್ಟೆ, ಪೆಗಲೊಳರ್ದ, ಅಟ್ಟುದನುಣ್.

೩) ಇವುಗಳಿಗೆ ನಾನಾರ್ಥ ಪದಗಳನ್ನು ಬರೆಯಿರಿ :

ಅಜ, ಪೊತ್ತು, ಆಡು, ಕುಶ, ಬಟ್ಟೆ, ಸಮಯ.

೪) ಇವುಗಳಿಗೆ ಸಮಾನಾರ್ಥ ಪದಗಳನ್ನು ಬರೆಯಿರಿ :

ಚೋದ್ಯ, ಭುವನ, ಭಯ, ಪಾರ್ವ.

೫) ಹಳಗನ್ನಡದ 'ಪ' ಕಾರವು ಹೊಸಗನ್ನಡದಲ್ಲಿ 'ಹ' ಕಾರವಾಗುವ ಧ್ವನಿ ವ್ಯತ್ಯಾಸವನ್ನು ಗಮನಿಸಿ :

ಪೊತ್ತು>ಹೊತ್ತು,	ಪಾರುವ>ಹಾರುವ,	ಪೇೞ್ಮ್>ಹೇಳಿರಿ,
ಪೆಗಲ್>ಹೆಗಲು,	ಪೋಪುದು>ಹೋಹುದು,	ಪರಿದು>ಹರಿದು.

೬) ಕೆಳಗಿನ ಪಠ್ಯ ಭಾಗವನ್ನು ಹೊಸಗನ್ನಡದಲ್ಲಿ ಬರೆಯಿರಿ :

"ಅಂತು ನಡೆದ ಪಾರ್ವಂಗೆ ಮತ್ತೊರ್ವನಿದಿರು ಬಂದೆಲೆ ಪಾರ್ವ! ನಿಮಗೆ ಕುಶಾಕ್ಷಮಾಲಾಯಜ್ಞೋಪವೀತೋತ್ತರೀಯಾದಿ ಚಿಹ್ನಂಗಳೆತ್ತಲೀ ನಾಯಂ ಪೊತ್ತು ಪೋಪುದೆತ್ತಲೆತ್ತಾನುಂ ನಿಮಗೆ ಮೃಗಯಾವ್ಯಸನ ವ್ಯಾಪಾರಮಾದುದಕ್ಕುಮಲ್ಲದಾಗಳದು ನಿಮ್ಮ ದುಷ್ಕರ್ಮದ ಫಲಮೆಂದು ನುಡಿದು ಪೋಪುದುಂ."

ಚಟುವಟಿಕೆ :

ಯಾವುದಾದರೂ ಎರಡು ಪ್ರಾಣಿ / ಪಕ್ಷಿಗಳ ಸಂವಾದವನ್ನು ಕಲ್ಪಿಸಿಕೊಂಡು ಕಥೆಯ ರೂಪದಲ್ಲಿ ಬರೆಯಿರಿ.

ಆಕರ ಗ್ರಂಥ :

ದುರ್ಗಸಿಂಹ ವಿರಚಿತ ಕರ್ನಾಟಕ ಪಂಚತಂತ್ರಂ – ಸಂಪಾದಕರು – ಡಾ. ಸಿ.ಪಿ. ಕೃಷ್ಣಕುಮಾರ್ – ಪ್ರಕಾಶಕರು–ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು. ಮುದ್ರಣ ವರ್ಷ : ೧೯೯೪

ಹೆಚ್ಚಿನ ಓದು :

೧) ಕನ್ನಡ ಪಂಚತಂತ್ರದ ಇತರ ಕಥೆಗಳನ್ನು ಓದಿರಿ.

೨) ದೇವುಡು ನರಸಿಂಹಶಾಸ್ತ್ರಿಗಳ *'ಕನ್ನಡ ಹಿತೋಪದೇಶ'* ಕೃತಿಯನ್ನು ಓದಿರಿ.

ರೋಮ್ ನಗರದಲ್ಲಿ

– ಕೆ. ಶಿವರಾಮ ಕಾರಂತ

ಜ್ಞಾನದಾಹ ಮನುಷ್ಯನ ಸಹಜ ಗುಣ. ಜ್ಞಾನಾರ್ಜನೆಗೆ ಅನೇಕ ಮಾರ್ಗಗಳಿವೆ. ಅವುಗಳಲ್ಲಿ ದೇಶ–ವಿದೇಶಗಳನ್ನು ಸುತ್ತುತ್ತ, ಸಂಸ್ಕೃತಿಯನ್ನು ಪರಿಚಯಿಸಿ ಕೊಳ್ಳುವ, ತುಲನಾತ್ಮಕವಾಗಿ ಅರಿಯುವ, ಕಂಡದ್ದನ್ನು ವಿಶ್ಲೇಷಣಾತ್ಮಕವಾಗಿ ಬರಹ ರೂಪದಲ್ಲಿ ದಾಖಲಿಸುವ ಪರಿಪಾಠವೂ ಒಂದು. ಕನ್ನಡದಲ್ಲಿ ಇಂಥ *'ಪ್ರವಾಸ ಸಾಹಿತ್ಯ'* ಪರಂಪರೆ ವಿಪುಲವಾಗಿ ಬೆಳೆದು ಬಂದಿದೆ. ಈ ಪ್ರಕಾರಕ್ಕೆ ಚಾಲನೆ ನೀಡಿದ ಕೃತಿಗಳಲ್ಲಿ ಕಾರಂತರ *'ಅಪೂರ್ವ ಪಶ್ಚಿಮ'*ವೂ ಒಂದು. ಪ್ರಸ್ತುತ ಲೇಖನ ಸಂಗ್ರಹದಲ್ಲಿ ಐತಿಹಾಸಿಕ ಪರಂಪರೆಯುಳ್ಳ ರೋಮ್ ನಗರದ ಸಂಸ್ಕೃತಿ, ನಾಗರೀಕತೆ, ಶಿಲ್ಪಕಲೆ, ಚಿತ್ರಕಲೆಗಳ, ಸೊಬಗು, ವಿಲಾಸ, ಲಾಲಿತ್ಯ, ವರ್ಣಮಯ ಚಿತ್ತಾರಗಳ ರಸಾತ್ಮಕ ವರ್ಣನೆಗಳನ್ನು ಕಾಣಬಹುದು. ಅಪೂರ್ವ ರೋಮ್ ನಗರದ ಬಹುಮುಖೀ ವಿನ್ಯಾಸದ ಪರಿಚಯ ಇಲ್ಲಿದೆ.

ಈ ನಗರವನ್ನು ಸ್ಮರಿಸಿದಾಗ ನಮಗೆ ಎರಡು ಹಳೆಯ ಗಾದೆಗಳು ನೆನಪಾಗುತ್ತವೆ. 'ರೋಮ್ ಅನ್ನು ಒಂದು ದಿನದಲ್ಲಿ ಕಟ್ಟಿದ್ದಲ್ಲ' ಎಂಬ ನಾಣ್ಣುಡಿಯೊಂದು; 'ಎಲ್ಲಾ ಹಾದಿಗಳು ಸೇರುವುದು ರೋಮ್ ಅನ್ನು' ಎನ್ನುವ ನಾಣ್ಣುಡಿ ಇನ್ನೊಂದು. ಯುರೋಪಿನ ಇತಿಹಾಸದಲ್ಲಿ ರೋಮ್ ನಗರವು ದೊರಕಿಸಿಕೊಂಡ ಪ್ರಾಧಾನ್ಯ ಇನ್ನಾವ ಪಾಶ್ಚಾತ್ಯ ನಗರಕ್ಕೂ ಬರಲಾರದು. ಅದರ ಇತಿಹಾಸ ಕ್ರಿಸ್ತಶಕಕ್ಕಿಂತ ಪೂರ್ವದ ಕೆಲವು ಶತಮಾನಗಳ ತನಕ ಒಂದು ಕಡೆ ಚಾಚಿಕೊಂಡಿದ್ದರೆ, ಈ ಕಾಲಪಟಲದ ಇನ್ನೊಂದು ಸೆರಗು ಇಂದಿನ ತನಕವೂ ನೀಡಿಕೊಂಡಿದೆ. ಸಾಮ್ರಾಟ್ ಅಗಸ್ಟಸ್, ಜೂಲಿಯಸ್ ಸೀಸರ್, ಎಡ್ರಿಯಾನ್ ಮೊದಲಾದವರಿಂದ ತೊಡಗಿದ ರಾಜಕೀಯ ಜೀವನ ಮುಸೋಲೋನಿಯ ಆಳ್ವಿಕೆಯ ತನಕ ಹಬ್ಬಿದಂಥ ಒಂದು ವಿಸ್ತಾರವಾದ ಮಾನವ ಕುಲದ ಇತಿಹಾಸ ಇದು ಎನ್ನುವಷ್ಟು ಪ್ರಬಲವಾದದ್ದು.

ಇವತ್ತಿನ ರೋಮ್ ನಗರದಲ್ಲಿ ಅದರ ಪೂರ್ವ ಯುಗದ ಮತ್ತು ಮಧ್ಯ ಯುಗಗಳ ಇತಿಹಾಸ ಸ್ಮಾರಕಗಳು ತುಂಬಿಕೊಂಡಿವೆಯಲ್ಲದೆ, ಅದು ಬಹುಮಟ್ಟಿಗೆ ಪ್ರಾಚೀನ ನಗರವಾಗಿಯೇ ಕಾಣಿಸುತ್ತದೆ. ಅಗಲವಾದ ಬೀದಿಗಳು, ಸುಂದರವಾದ ಪಿಯಾಜ್ಜ಼ಗಳು, ಕಾರಂಜಿಗಳು, ಸ್ಮಾರಕಗಳು, ಅರಮನೆಗಳು ಅನೇಕವಿವೆ. ನಾಣ್ಣುಡಿಯಲ್ಲಿ ಹೇಳುವಂತೆ ಅದು ಒಂದು ದಿನದ ರಚನೆಯಲ್ಲ; ಯುಗಮಾನಗಳ ರಚನೆ. ಹಾಗೆಯೇ, ಆ ಇನ್ನೊಂದು ನಾಣ್ಣುಡಿಯಲ್ಲಿ ಹೇಳುವಂತೆ ಯುರೋಪಿಯನ್

ನಾಗರೀಕತೆಯಲ್ಲಿ ರೋಮನ್ನರು ವಹಿಸಿದ ಪ್ರಧಾನ ಪಾತ್ರದಿಂದಾಗಿ, ಈಜಿಪ್ಟಿನಿಂದ ಪೂರ್ವಕ್ಕಿರುವ ರಾಷ್ಟ್ರಗಳಿಗೆಲ್ಲ ರೋಮ್ ಸ್ಫೂರ್ತಿಯನ್ನು ಕೊಟ್ಟ ನಗರವಾಗಿತ್ತು. ಅದರ ಸಂಸ್ಕೃತಿಯು ಹೆಚ್ಚಿನದು ; ಅಧಿಕಾರ, ದರ್ಪಗಳು ಹೆಚ್ಚಿನವು. ಪಶ್ಚಿಮ ದೇಶಗಳಿಗೆ ಅದು ರಾಜಧಾನಿಯಾದುದರಿಂದ ಎಲ್ಲ ಹಾದಿಗಳೂ ಅಂದಿನ ರೋಮ್‌ನ ಕಡೆ ಮುಖ ಮಾಡಿಕೊಂಡಿದ್ದುದರಲ್ಲಿ ಆಶ್ಚರ್ಯವಿಲ್ಲ. ಇಂದು ಪ್ರಪಂಚದ ಕ್ರೈಸ್ತರಿಗೆ ಅದರಲ್ಲಿಯೂ ರೋಮನ್ ಕೆಥೋಲಿಕ್ ಆದವರಿಗೆ, ಜರುಸಲೇಮ್ ದೊಡ್ಡ ಯಾತ್ರಾ ಸ್ಥಳವಾಗಿದ್ದರೂ ಕೂಡ, ಕ್ರಿಸ್ತನ ಜನ್ಮಭೂಮಿಗಿರುವ ಪ್ರಾಧಾನ್ಯ, ಕ್ರಿಸ್ತ ಜಗದ್ಗುರುವಿನ ಊರಿಗೆ ಸಂದಿದೆ. ಹಳೆಗಾಲದಿಂದ ಇಂದಿನ ತನಕ ಅನೇಕ ಶಿಲ್ಪಿಗಳು, ಚಿತ್ರಕಾರರು, ವಾಸ್ತುಕಲಾ ಕೋವಿದರು ಈ ನಗರದ ಬೆಳವಣಿಗೆಗೂ, ವಿಸ್ತಾರಕ್ಕೂ ನೆರವಾದವರು. ಆಧುನಿಕ ರೋಮಿನ ಯಾವ ಮೂಲೆಗೆ ನಾವು ಹೋಗಲಿ–ಅಲ್ಲಲ್ಲಿ ಪ್ರಾಚೀನ ದೇವಾಲಯಗಳೋ, ಮಹಾದ್ವಾರಗಳೋ, ಸಭಾಂಗಣ (Forum) ಗಳೂ ಹರಡಿ ಬಿದ್ದಿವೆ. ಇವು ಒಂದೊಂದು ಸಾವಿರ, ಎರಡು ಸಾವಿರ ವರ್ಷಗಳ ಪೂರ್ವ ಕಥಾನಕವನ್ನು ಹೇಳುತ್ತವೆ.

ಪ್ರಾಚೀನ ರೋಮಿನ ಒಂದು ಬಹುದೊಡ್ಡ ಸ್ಮಾರಕ ಕೊಲೋಸಿಯಮ್ ಎಂಬುದು. ಇದನ್ನು ಕ್ರಿಸ್ತಪೂರ್ವದಲ್ಲಿ ಕಟ್ಟುವುದಕ್ಕೆ ತೊಡಗಿ, ಕ್ರಿಸ್ತಶಕದ ಒಂಭತ್ತನೇ ಇಸವಿಯಲ್ಲಿ ಮುಗಿಸಿದರು. ಕೊಲೋಸಿಯಮ್ ಒಂದು ವಿಚಿತ್ರವಾದ ವಿನೋದ ಶಾಲೆ. ಈ ಕಟ್ಟಡ ವರ್ತುಲಾಕಾರವಾಗಿದ್ದು, ಅದರ ಪರಿಧಿಯೇ ಒಂದು ಸಾವಿರದ ಎಂಟು ನೂರು ಅಡಿ ಉದ್ದವಾಗಿದೆ. ನಾಲ್ಕು ಉಪ್ಪರಿಗೆಯುಳ್ಳ ಈ ವರ್ತುಲವಾದ ಮಂದಿರ ಸುಮಾರು ೫೦,೦೦೦ ಜನ ಕುಳಿತಿರಬಹುದಾದ ಒಂದು ವಿನೋದ ಶಾಲೆ. ಅದರ ಪ್ರವೇಶಕ್ಕೆ ಹತ್ತೆಂಟು ದ್ವಾರಗಳಿವೆ. ಆಗಿನ ಜನತೆಯ ರಾಜಕೀಯ ಅಂತಸ್ಥಿಗೆ ಸಮನಾಗಿ, ನಾಲ್ಕು ಮಹಡಿಗಳಲ್ಲಿ ಪ್ರೇಕ್ಷಕರು ಕುಳಿತುಕೊಂಡು, ನಡುವಣ ಅಂಗಣದಲ್ಲಿ ನಡೆಯುತ್ತಿದ್ದ ವಿನೋದಗಳನ್ನು ನೋಡುತ್ತಿದ್ದರಂತೆ. ಈ ವಿನೋದಗಳು ಐತಿಹಾಸಿಕ ದೃಷ್ಟಿಯಿಂದ ವಿನೋದಗಳೇ ಹೊರತು, ಮಾನವತೆಯ ದೃಷ್ಟಿಯಿಂದ ಅಲ್ಲ. ಕವಚ, ಖಡ್ಗಗಳನ್ನು ಹಿಡಿದು, ಯೋಧರು, ಯೋಧರೊಡನೆ ಯುದ್ಧ ಮಾಡುತ್ತಿದ್ದರು ; ನಿಶ್ಯಸ್ತ್ರರ ಕಣ್ಣು ಕಟ್ಟಿ ಸಾಯುಧರು ಕಾದುತ್ತಿದ್ದರು. ಗುಲಾಮರನ್ನು ಸಿಂಹಗಳೆದುರಿಗೆ ಒಡ್ಡುತ್ತಿದ್ದರು. ಇಂಥವೇ ವಿನೋದಗಳು! ತಮ್ಮ ಕಾಲದ ರೋಮನ್ನರ ಅಮಾನುಷತೆಯೇ ಜನರ ವಿನೋದಗಳಾಗಿದ್ದುವು. ಹಳೆಯ ಚರಿತ್ರೆ ಗೊತ್ತಿಲ್ಲದವನು ಈ ಸ್ಥಳಕ್ಕೆ ಬಂದು ನಿಂತನಾದರೆ, ಅವನ ಕಣ್ಣೆದುರಿಗೆ ಕಟ್ಟಬಹುದಾದ ಭೀಷಣ ಚಿತ್ರ, ಇನ್ನೊಂದು ನರಕದ ಕಲ್ಪನೆಯನ್ನು ಮಾಡಿಕೊಡಬಲ್ಲದು. ಆದರೆ ಈ ಕಟ್ಟಡದ ವಾಸ್ತು ರಚನೆ, ಅದಕ್ಕಿರುವ ಭವ್ಯತೆ ರೋಮನ್‌ರಿಗಿದ್ದ ಅಗಾಧ ಕಲ್ಪನಾಶಕ್ತಿ, ಸಾಹಸಗಳನ್ನು ತೋರಿಸಬಲ್ಲದು.

ಈ ಸ್ಥಳಕ್ಕೆ ಸಮೀಪವಾಗಿ ಕಾನ್‌ಸ್ಟೆಂಟೈನ್ ದೊರೆಯ ಸ್ಮಾರಕವಾದ ಒಂದು ಮಹಾದ್ವಾರವಿದೆ. ಆತ ಕ್ರಿಸ್ತಧರ್ಮವನ್ನು ವಿರೋಧಿಸಿ ಹಳೆಗಾಲದ ರೋಮನ್ನರನ್ನು ಗೆದ್ದನು ; ಮುಂದೆ ಕ್ರಿಸ್ತಧರ್ಮ ಪ್ರಚಾರಕ್ಕೆ ತಳಪಾಯ ಹಾಕಿಕೊಟ್ಟ ಮಹಾ ಸಾಮ್ರಾಟ. ಈ ಪ್ರದೇಶದ ಸುತ್ತಮುತ್ತಲೆಲ್ಲ ಪ್ರಾಚೀನ ರೋಮಿನ ಹಲವಾರು ಅವಶೇಷಗಳಿವೆ. ಸಾಮ್ರಾಟ್ ಎಡ್ರಿಯನ್ ಕ್ರಿಸ್ತಯುಗಕ್ಕೆ ಪೂರ್ವದಲ್ಲಿ ಕಟ್ಟಿದ ವೀನಸ್ ದೇವತೆಯ ಒಂದು ದೇವಾಲಯವಿದೆ. ಹಳೆಗಾಲದ ಹಲವು ರೋಮನ್ ಸಭಾಂಗಣಗಳು ಇಲ್ಲಿವೆ. ಇಲ್ಲಿ ನಿಂತಿರುವ ಹಾಲುಗಲ್ಲಿನ ಶಿಲಾಸ್ತಂಭಗಳು, ಅನೇಕ ಭಗ್ನ ಶಿಲ್ಪಗಳು ನಮಗೆ ಪ್ರಾಚೀನ ವೈಭವವನ್ನು ನೆನಪು ಮಾಡಿಕೊಡುತ್ತವೆ. ಅಲ್ಲಲ್ಲಿ ಶನಿ, ಗುರು ಮೊದಲಾದ ದೇವತೆಗಳಿಗೆ ಸಂದಂಥ ದೇವಾಲಯಗಳ ಭಗ್ನಾವಶೇಷಗಳಿವೆ. ಒಂದು ಕಡೆ ಅಗಸ್ಟಸ್ ದೊರೆ (ಕ್ರಿಸ್ತಪೂರ್ವ ಎರಡನೆಯ ಶತಮಾನ)ಯ ಸಭಾಂಗಣದ ಭಗ್ನಾವಶೇಷಗಳಿವೆ. ಈಗ ಅಲ್ಲಿ ಅಳಿದುಳಿದು ನಿಂತಿರುವ ಮೂರು–ನಾಲ್ಕು ಅತ್ಯುನ್ನತವಾದ ಹಾಲುಗಲ್ಲಿನ ಸ್ತಂಭಗಳು, ಪೂರ್ವದ ಸಭಾಂಗಣದ ಕಲ್ಪನೆಯನ್ನು ನಮಗೆ ಸಂಪೂರ್ಣ ಕೊಡಲಾರವು.

ನಗರ ಮಧ್ಯದಲ್ಲಿರುವ ಪ್ರಾಚೀನ ಮಂದಿರಗಳಲ್ಲಿ "ಪೇಂತಿಯಾನ್" ಸುಸ್ಥಿತಿಯಲ್ಲಿರುವ ಒಂದು ಸುಂದರ ದೇವಾಲಯ. ಇದಕ್ಕೆ ವರ್ತುಲಾಕಾರದ ಗೋಡೆಗಳಿದ್ದು, ಅದರ ಮೇಲೆ ಅರ್ಧ ಗೋಲಾಕೃತಿಯ ಮಾಡಿದೆ. ಮಾಡಿನ ರಂಧ್ರದೊಳಗಿಂದ ಬೆಳಕು ಒಳಕ್ಕೆ ಬೀಳುತ್ತದೆ. ಹೊರಗೆ ಗ್ರೀಕ್ ಮುಖಮಂಟಪವಿದೆ. ಅದರ ಒಳಗಿನ ಆಕೃತಿಯು ಮೊದಲಿನದೇ. ಇದು ಕ್ರಿಸ್ತಯುಗಕ್ಕಿಂತಲೂ ಪೂರ್ವದ ಕಟ್ಟಡ. ಒಂದು ಕಾಲದಲ್ಲಿ ಈ ಸ್ಥಳ ಪ್ರಾಚೀನ ರೋಮನ್ ದೇವತೆಗಳ ಮಂದಿರವಾಗಿತ್ತು. ಕ್ರಿಸ್ತಪೂರ್ವ ಏಳುನೂರ ಇಪ್ಪತ್ತೇಳನೆಯ ಇಸವಿಯಲ್ಲಿ ಕಟ್ಟಿದ ಆ ಮಂದಿರ, ಎರಡು ಮೂರು ಬಾರಿ ಪುನರುಜ್ಜೀವನಗೊಂಡಿತ್ತಲ್ಲದೇ, ಅನಂತರ ಬಂದ ಕ್ರಿಸ್ತ ಧರ್ಮೀಯರಿಂದ ಅಲ್ಲಿನ ದೇವತೆಗಳೂ ಬದಲಾದರು. ಇವತ್ತು ಅದು "ಮೇರಿ"ಗೆ ಅರ್ಪಿತವಾಗಿದೆ. ಒಳಗಿರುವ ವೃತ್ತಾಕೃತಿಯ ಸುಂದರವಾದ ಸಭಾಂಗಣವನ್ನು ಹಾಲುಗಲ್ಲಿನಿಂದ ಹಾಸಿದ್ದಾರೆ. ಅದರ ಸುತ್ತಲಿರುವ ಸ್ತಂಭಗಳು, ಮಂಟಪಗಳು ಹಲವು ತೆರನ ಎಲಬಾಸ್ಟರ್ ಶಿಲೆಗಳಿಂದ ರಚನೆಗೊಂಡು ನಯನ ಮನೋಹರವಾಗಿವೆ.

ರೋಮ್ ನಗರದ ಎಲ್ಲೆಲ್ಲೂ ಪೂರ್ವ ಯುಗದ ವಾಸ್ತುಶಿಲ್ಪವನ್ನು ನಾವು ಅಸಂಖ್ಯವಾಗಿ ಕಾಣುತ್ತೇವೆಯೇ ಹೊರತು ಆಧುನಿಕ ವಾಸ್ತುಶೈಲಿಯನ್ನು ಕಾಣುವುದಕ್ಕಿಲ್ಲ. ಇದಕ್ಕೆ ಒಂದೇ ಒಂದು ಆಕ್ಷೇಪ, ಇಲ್ಲಿನ ರೈಲು ನಿಲ್ದಾಣ. ಪ್ರಪಂಚದಲ್ಲಿ ಇಷ್ಟು ಹಿರಿಯ ಮತ್ತು ಆಧುನಿಕವಾದ ರೈಲ್ವೆ ನಿಲ್ದಾಣವಿಲ್ಲ ಎನ್ನುತ್ತಾರೆ. ಇದ್ದರೂ

ಇರಬಹುದು. ಅಲ್ಲಿ ಹೋಗಿ ನಿಲ್ಲುವ ಪ್ರಯಾಣಿಕನಿಗೆ ಈ ಕಟ್ಟಡವು ವಿಚಿತ್ರವಾದ ಒಂದು ಅನುಭವವನ್ನು ಉಂಟುಮಾಡುತ್ತದೆ. ಕಟ್ಟಡದ ಮುಂಭಾಗವೇ ಅದರ ಚೆಲುವಿನ ಸರ್ವಸ್ವ. ಸುಮಾರು ೩೦೦ ಅಡಿ ಅಗಲ, ೧೫೦೦ ಅಡಿ ಉದ್ದವಾದ ಒಂದೇ ಒಂದು ಚಾವಡಿ ಎದುರಿಗಿದೆ. ಅದರ ಮುಂದಕ್ಕೆ ಚಾಚಿಕೊಂಡು ಅದರ ಅರ್ಧದಷ್ಟು ಅಗಲಕ್ಕೆ ಇನ್ನೊಂದು ಚಾವಡಿ ಸೇರಿದೆ. ನಡುವೆ ಕಂಬಗಳೇ ಇಲ್ಲದೆ, ದೊಡ್ಡ ಸಮುದ್ರದ ಅಲೆಗಳಂತೆ ಕಾಣಿಸುವ ಮಾಡು ತರಂಗವಾಗಿ ಚಾಚಿಕೊಂಡಿವೆ. ಮಾಡಿಗೆ ಗಾಜನ್ನು ಹೊದೆಯಿಸಿದ್ದಾರೆ. ಮೇಲಿನಿಂದಲೂ, ಎದುರಿಂದಲೂ, ಸುತ್ತಲಿಂದಲೂ ಬೆಳಕಿಗೆ ಸಂಪೂರ್ಣ ತೆರವಿದೆ. ಯಾವತ್ತೂ ಚಾವಡಿಯ ನೆಲವನ್ನು ಗಾಜಿನಷ್ಟು ನಯವಾಗಿ ಮಾಡಿದ ಶಿಲೆಗಳಿಂದ ಹಾಸಿದ್ದಾರೆ. ಅಲ್ಲಲ್ಲಿ ಶಿಲೆಯದೇ ಮಂಚಗಳಿವೆ. ಈ ಮಂಚಗಳು ಸರಳವಾದ ಹಾಸುಗಲ್ಲುಗಳು; ನಯವಾಗಿ ಮಾಡಿದ ಒಂದು ಜಾತಿಯ ಕೆಂಪು ಶಿಲೆಯಿಂದ ನಿರ್ಮಾಣವಾದುವು. ಕೇವಲ ಸರಳವಾಗಿ ಕಾಣಿಸುವಂತಹ ಇಲ್ಲಿನ ನೆಲ, ಮಾಡು, ಅಲಂಕಾರಗಳು ಅಷ್ಟೊಂದು ಲಲಿತವಾಗಿವೆ; ಸಂತೋಷ ಉಕ್ಕಿಸುತ್ತವೆ. ಯುದ್ಧಾನಂತರ ನಿರ್ಮಾಣವಾದ ಈ ಮಂದಿರಕ್ಕೆ ಕೆಲವು ಕೋಟಿ ರೂಪಾಯಿಗಳಾದರೂ ವೆಚ್ಚವಾಗಿರಬೇಕು. ಇಟಲಿಯು ಎಷ್ಟು ಪ್ರಾಚೀನವಾಗಿತ್ತೋ ಅಷ್ಟೇ ಆಧುನಿಕವಾಗಬಲ್ಲುದು ಎಂಬುದಕ್ಕೆ ಈ ನಿಲ್ದಾಣ ಸಾಕ್ಷಿಯಾಗಿದೆ.

ರೋಮಿನಲ್ಲಿ ನಾವು ನೋಡಲೇಬೇಕಾದಂತಹ ಸ್ಥಳಗಳಲ್ಲಿ ಅಲ್ಲಿನ ಹಲವಾರು ಚರ್ಚುಗಳು ಮುಖ್ಯವೆನ್ನಬಹುದು. ಸೈಂಟ್ ಪೀಟರ್ ಬೆಸಿಲಿಕಾ, ಸೈಂಟ್ ಪಾಲ್ಸ್ ಬೆಸಿಲಿಕಾ, ಗಿವೋನಿ ಬೆಸಿಲಿಕಾ, ಸೈಂಟ್ ಮಾಗಿಯೋರಿ ಬೆಸಿಲಿಕಾ ಮೊದಲಾದವುಗಳು.

ರೋಮ್ ನಗರಕ್ಕೆ ಹೋದವರು ಅದರ ಒಂದು ಅಂಶವಾದ, ಆದರೂ ಸ್ವತಂತ್ರ ರಾಜ್ಯವಾದ 'ವೆಟಿಕನ್' ನಗರ ನೋಡದೆ ಬರುವಂತಿಲ್ಲ. ವೆಟಿಕನ್ ಮ್ಯೂಸಿಯಮ್, ಸೈಂಟ್ ಪೀಟರನ ಬೆಸಿಲಿಕಾ, ಸಿಸ್ಟೀನ್ ಚೇಪೆಲ್ ಇವೆಲ್ಲ ಸುಮಾರು ಹದಿಮೂರು ಎಕ್ರೆ ವಿಸ್ತಾರವಾದ ವೆಟಿಕನ್ ರಾಜ್ಯದಲ್ಲಿ ದಟ್ಟಣಿಸಿ ನಿಂತ ವಾಸ್ತುಕಲಾ ಸ್ಮಾರಕಗಳು.

ಸೈಂಟ್ ಪೀಟರ್ಸ್ ಬೆಸಿಲಿಕಾ ಪ್ರಪಂಚದಲ್ಲಿಯೇ ಹಿರಿದಾದ ಚರ್ಚ್ ಎಂಬ ವಿಖ್ಯಾತಿಯನ್ನು ಪಡೆದಿದೆ. ಅದರ ಎದುರಿಗೆ ಸುಮಾರು ೨೦೦ ಅಡಿ ನೀಳವೂ, ೮೦೦ ಅಡಿ ಅಗಲವೂ ಆದ ವರ್ತುಲವಿದೆ. ಅದರ ನಾಲ್ಕು ಸುತ್ತಲೂ ಸುಂದರ ಸ್ತಂಭರಾಜಿಗಳುಳ್ಳ ಚಾವಡಿಗಳಿವೆ. ಅವನ್ನಲಂಕರಿಸುವ ಅನೇಕ ಸುಂದರ ಪ್ರತಿಮೆಗಳಿವೆ.

ಈ ಅಂಗಣದ ನಡುವೆ ಹೇಲಿಯೋಪೋಲಿಸ್ ನಗರದಿಂದ ತಂದ, ತೊಂಭತ್ತು ಅಡಿ ಉನ್ನತವಾದ ಒಂದು ಒಬ್ಲಿಸ್ಕ್ ನಟ್ಟಿದ್ದಾರೆ. ಈಜಿಪ್ಟಿನ ಈ ವಿಜಯಸ್ಥಂಭದ ಮೇಲೆ ಇಂದು ಕ್ರಿಸ್ತನ ವಿಜಯದ ಕುರುಹಾದ ಶಿಲುಬೆಯನ್ನು ಇರಿಸಿದ್ದಾರೆ.

ಇಲ್ಲಿನ ಪ್ರಸಿದ್ಧ ವಾಸ್ತು ವಿಶೇಷವೆಂದರೆ ಸ್ಯೆಂಟ್ ಪೀಟರ್ಸ್ ಬೆಸಿಲಿಕಾ. ಆರಂಭದಲ್ಲಿ ಇದನ್ನು ಸಾಮ್ರಾಟ್ ಕಾನ್‌ಸ್ಟೆಂಟೈನ್ ಕಟ್ಟಿಸಿದನಂತೆ. ಅನಂತರ ೧೫ನೆಯ ಶತಮಾನದಲ್ಲಿ ಇದು ಪುನರುಜ್ಜೀವನಗೊಂಡು ಇವತ್ತಿನ ಸ್ವರೂಪವನ್ನು ಪಡೆಯಿತು. ಗ್ರೀಕ್ ದೇವಾಲಯದಂತೆ ಎದುರಿಗೆ ಏರಿ ಹೋಗುವ ಸೋಪಾನಗಳವೆ. ಉನ್ನತ ಸ್ಥಂಭಗಳನ್ನು ಅಳವಡಿಸಿ ನಿಂತ ಭವ್ಯ ಮುಖಮಂಟಪವೂ, ಚಾವಡಿಯೂ ಇದೆ. ಅದರ ಹಿಂದಿನಿಂದ ಅತ್ಯುನ್ನತವಾಗಿ ಮೇಲಕ್ಕೇರುವ ಗೋಲಾಕೃತಿಯ ಗೋಪುರವಿದೆ. ಅದರ ಮೇಲೆ ಸುಂದರವಾದ ಶಿಖರವಿದೆ. ಎದುರಿನ ಚಾವಡಿಯನ್ನು ಕಳೆದು ಒಳಗೆ ಹೋದೆವಾದರೆ, ಮೂರು ನೀಳವಾದ ಹಿರಿಯ ಸಭಾಂಗಣಗಳೂ, ಅವನ್ನು ವಿಂಗಡಿಸುವ ಸ್ಥಂಭರಾಜಿಗಳೂ ಕಾಣಸಿಗುತ್ತವೆ. ಕಟ್ಟಡದ ಒಳಗಿನ ರಚನೆ ಕ್ರಿಸ್ತನ ಶಿಲುಬೆಯ ಆಕೃತಿಯಲ್ಲಿದೆ. ಶಿಲುಬೆಯ ಮಧ್ಯಭಾಗದಿಂದ ನಡುವಣ ಗೋಪುರ ಮೇಲಕ್ಕೇರುತ್ತದೆ. ಇಲ್ಲಿನ ಕಂಬಗಳು, ಗೋಡೆಗಳು, ಕಮಾನುಗಳು, ಮುಚ್ಚಿಗೆಗಳು ಅಂಗುಲ ಅಂಗುಲಕ್ಕೂ ಸಂಪತ್ತು ಶೋಭೆಗಳನ್ನು ಮೆರೆಯಿಸುವಂತವು. ಎಷ್ಟೊಂದು ಜಾತಿಯ ಎಲಬಾಸ್ಟರ್ ಕಲ್ಲುಗಳನ್ನು ಇಲ್ಲಿ ಬಳಸಿದ್ದಾರೆ, ಎಂಥೆಲ್ಲ ಚಿತ್ರ ಕೆಲಸ ಮಾಡಿದ್ದಾರೆ ಎಂದು ಬಣ್ಣಿಸುವುದು ಕಷ್ಟ. ಈ ಮಂದಿರವನ್ನು ಚೆಲುವುಗೊಳಿಸುವ ಸಲುವಾಗಿ ದುಡಿಯದಂತಹ ಇಟಲಿಯನ್ ಕಲಾವಿದನೇ ಇಲ್ಲ ಎಂಬಂತೆ ಕಾಣುತ್ತದೆ. ಈ ಮಂದಿರದೊಳಗೆ ನಾಲ್ಕಾರು ಚೇಪೆಲುಗಳವೆ. ಹತ್ತೆಂಟು ಅತಿ ಭವ್ಯವೂ ವಿಸ್ತಾರವೂ ಆದ ಮೊಸಾಯಿಕ್ ಚಿತ್ರಗಳವೆ. ಒಂದೊಂದು ಮೊಸಾಯಿಕ್ ಚಿತ್ರವೂ ಹತ್ತು-ಮೂವತ್ತು ಅಡಿ ಗಾತ್ರವಾಗಿದ್ದು, ಪ್ರಸಿದ್ಧ ಚಿತ್ರಗಾರರ ತೈಲಚಿತ್ರಗಳ ಅನುಕರಣೆಗಳಾಗಿವೆ. ತೀರಾ ಹತ್ತಿರಕ್ಕೆ ಹೋಗಿ ನಿಂತರೂ ಇವು ಬಣ್ಣದ ಪಿಂಗಾಣಿಯ ಚೂರುಗಳನ್ನು ಜೋಡಿಸಿ ಮಾಡಿದುವೆಂಬ ಕಲ್ಪನೆಯೇ ಆಗುವುದಿಲ್ಲ. ಆ ಚೂರುಗಳ ಜೋಡಣೆಯು ಅಷ್ಟು ಸೂಕ್ಷ್ಮ ; ಬಳಸಿದ ಬಣ್ಣಗಳು ಅಷ್ಟು ಉಜ್ವಲ. ಚಿತ್ರಗಳ ಗಾತ್ರ, ಸೌಂದರ್ಯಗಳೆರಡೂ ನಮ್ಮ ಮನಸ್ಸನ್ನು ಬೆರಗುಗೊಳಿಸುತ್ತವೆ.

ಇಲ್ಲಿನ ಚೇಪೆಲ್ ಒಂದರಲ್ಲಿ ಮೈಕೆಲ್ ಏಂಜಲೋ ನಿರ್ಮಿಸಿದ ಕ್ರಿಸ್ತನ ಅತಿ ಸುಂದರ ಶಿಲ್ಪವಿದೆ. ತಾಯಿ ಮೇರಿ ತನ್ನ ತೊಡೆಯ ಮೇಲಕ್ಕೆ ಶಿಲುಬೆಯಿಂದಿಳಿಸಿದ ಯೇಸುವನ್ನು ಹೂವಿನಂತೆ ಮಲಗಿಸಿಕೊಂಡಿದ್ದಾಳೆ. ಆಕೆಯ ಮೈತುಂಬ ಅರಿವೆ. ದೃಷ್ಟಿ, ತೊಡೆಯಲ್ಲಿ ಮಲಗಿದ ಮಗುವನ್ನು ನಿಟ್ಟಿಸುತ್ತಿದೆ. ಮನಸ್ಸು, ಪ್ರಪಂಚಕ್ಕೊದಗಿದ

ವಿಪತ್ತನ್ನು ಚಿಂತಿಸುತ್ತಿದೆ. ಅರೆ ಬತ್ತಲೆಯಾಗಿ ಮಲಗಿಕೊಂಡು ಉಸಿರು ನಿಲ್ಲಿಸಿದ ಯೇಸು ಕ್ರಿಸ್ತನ ಮುಖದ ವರ್ಚಸ್ಸನ್ನು ಬಣ್ಣಿಸುವಂತಿಲ್ಲ. ಮೂವತ್ತು ವಯಸ್ಸಿನ ಯೌವ್ವನ; ಕಪಟವರಿಯದ ಮುಖ; ಪ್ರಪಂಚವನ್ನು ಮೆಚ್ಚಿದ ಪ್ರೇಮ–ಇವುಗಳೆಲ್ಲವೂ ಸೇರಿದ್ದು, ಮೃತ್ಯುವನ್ನು ತಬ್ಬಿಕೊಂಡ ಅವನ ಸ್ನೇಹಮಯ, ಶಾಂತ, ನಿಷ್ಕಳಂಕ ಮನೋಭಾವವನ್ನು ತೋರಿಸುತ್ತವೆ. ಎಷ್ಟೆಷ್ಟು ಸಮೀಪವಾಗಿ ಏಕಾಗ್ರವಾಗಿ ಈ ಪ್ರತಿಮೆಯನ್ನು ನೋಡುತ್ತೇವೆಯೋ, ಅಷ್ಟಷ್ಟು ಹೆಚ್ಚಿಗೆ ಕ್ರಿಸ್ತನ ಉಜ್ವಲ ಭಾವಮಯ ಜೀವನ ನಮಗೆ ಹೊಳೆದು ಕಾಣುತ್ತದೆ. ಮೈಕೆಲ್ ಏಂಜಲೋವಿನ ದೈವತ್ವ ದರ್ಶನದ ಈ ಪ್ರತೀಕ ಪ್ರಪಂಚದಲ್ಲೇ ಸಾಟಿಯಿಲ್ಲದ್ದು. ಆತ ಮೋಸೆಸ್ ವಿಗ್ರಹವನ್ನು ಕೆತ್ತಿದ್ದು ತನ್ನ ಅಪರ ವಯಸ್ಸಿನಲ್ಲಿ ; ಇದನ್ನು ಕೆತ್ತಿದ್ದು ಬರಿಯ ಇಪ್ಪತ್ತನಾಲ್ಕು ವರ್ಷದ ತರುಣನಿದ್ದಾಗ. ಆ ಸಣ್ಣ ವಯಸ್ಸಿನಲ್ಲಿ ಇಷ್ಟು ಸುಂದರವಾದ ಪ್ರತಿಮೆಯನ್ನು ಕೆತ್ತಲು ಮೈಕೆಲ್ ಏಂಜಲೋ ದೈವದತ್ತ ಶಕ್ತಿಯನ್ನೇ ಪಡೆದವನಾಗಿ ನಮಗೆ ಕಾಣಿಸುತ್ತಾನೆ. ತನ್ನ ಆಯುಷ್ಯದಲ್ಲಿ ಆತ ಇದೊಂದೇ ಪ್ರತಿಮೆಯನ್ನು ಮಾಡಿದ್ದರೂ ಅವನ ಬಾಳು ಸಾರ್ಥಕವೆಂದು ಹೇಳಬೇಕು.

ನಾನು ರೋಮ್ ನಗರದಲ್ಲಿ ಒಂದು ವಾರಕ್ಕಿಂತ ಹೆಚ್ಚಿನ ಸಮಯ ಕಳೆದೆ. ಇತರ ಪ್ರವಾಸಿಗಳೊಡನೆಯೂ ಅಲೆದಾಡಿದೆ. ಮನಸ್ಸಿನ ತೃಪ್ತಿಗಾಗಿ ಒಂದೊಂದು ದಿನ ಒಂದೊಂದೇ ಮೂಲೆಯನ್ನು ಆರಿಸಿಕೊಂಡು ಹೋಗಿ ಅಲ್ಲಿರುವುದನ್ನು ನೋಡಿದೆ. ಇದರ ನಡುವೆ ಒಂದು ದಿನ, ಪ್ರಾಚೀನ ಪೊಂಪೀ ನೋಡುವುದಕ್ಕೆ ಹೋಗಿದ್ದೆನಾದರೂ, ನನ್ನ ಮಾನಸಿಕ ಆವರಣವೆಲ್ಲಾ ರೋಮ್‌ಮಯವಾಗಿತ್ತು. ಇದು ಆಧುನಿಕ ಇಟಲಿಯಲ್ಲ; ಇಂದಿಗೂ ಪ್ರಾಚೀನ ರೋಮ್ ಎನಿಸುತ್ತಿತ್ತು ಮನಸ್ಸಿಗೆ.

❖ ❖ ❖ ❖

ಲೇಖಕರ ಪರಿಚಯ : *'ಕಡಲ ತೀರದ ಭಾರ್ಗವ'* ಎಂದೇ ಖ್ಯಾತರಾಗಿರುವ ಡಾ. ಕೆ. ಶಿವರಾಮ ಕಾರಂತ (ಜನನ ೧೯೦೨, ಮರಣ ೧೯೯೭) ಉಡುಪಿ ಜಿಲ್ಲೆಯ ಕೋಟದಲ್ಲಿ ಜನಿಸಿದರು. ಕಾದಂಬರಿ, ಕತೆ, ಪ್ರಬಂಧ, ನಾಟಕ, ನಿಘಂಟು ರಚನೆ, ವಿಜ್ಞಾನ ಸಾಹಿತ್ಯ, ವಿಶ್ವಕೋಶ, ಪತ್ರಿಕೋದ್ಯಮ ಮುಂತಾದ ಪ್ರಕಾರಗಳಲ್ಲಿ ಕೃಷಿ ಮಾಡಿರುವ ಕಾರಂತರ ಆಸಕ್ತಿಯ ಕ್ಷೇತ್ರಗಳು ಅಪರಿಮಿತವಾದವು. ಯಕ್ಷಗಾನ, ಸಂಗೀತ, ಚಲನಚಿತ್ರ, ರಂಗಭೂಮಿ, ರಾಜಕೀಯ, ಸಮಾಜ ಸೇವೆ, ಪರಿಸರ ಹೋರಾಟ ಮುಂತಾದ ಕ್ಷೇತ್ರಗಳಲ್ಲಿ ಅವರು ಸಾಧನೆ ಮಾಡಿದ್ದಾರೆ. ***ಮೂಕಜ್ಜಿಯ ಕನಸುಗಳು, ಅಳಿದ ಮೇಲೆ, ಮರಳಿ ಮಣ್ಣಿಗೆ, ಸರಸಮ್ಮನ ಸಮಾಧಿ, ಚೋಮನ ದುಡಿ, ಚಿಗುರಿದ ಕನಸು, ಮೈಮನಗಳ ಸುಳಿಯಲ್ಲಿ*** ಮುಂತಾದ ಐವತ್ತಕ್ಕೂ ಹೆಚ್ಚು ಕಾದಂಬರಿಗಳನ್ನು

ರಚಿಸಿರುವ ಶ್ರೀಯುತರು *ಅಬುವಿನಿಂದ ಬರಾಮಕ್ಕೆ, ಅಪೂರ್ವ ಪಶ್ಚಿಮ* ಎಂಬ ಪ್ರವಾಸ ಕಥನಗಳು, *ಬಾಳ್ವೆಯೇ ಬೆಳಕು, ಅಳಿದುಳಿದ ನೆನಪುಗಳು, ಹುಚ್ಚು ಮನಸ್ಸಿನ ಹತ್ತು ಮುಖಗಳು, ಯಕ್ಷಗಾನ ಬಯಲಾಟ, ಬಾಲ ಪ್ರಪಂಚ, ವಿಜ್ಞಾನ ಪ್ರಪಂಚ* ಮುಂತಾದ ವಿಚಾರಪೂರ್ಣ ಕೃತಿಗಳನ್ನು ಕನ್ನಡಕ್ಕೆ ನೀಡುವ ಮೂಲಕ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ.

ಇವರ *ಮೂಕಜ್ಜಿಯ ಕನಸುಗಳು* ಕೃತಿಗೆ ಭಾರತೀಯ ಜ್ಞಾನಪೀಠ ಪ್ರಶಸ್ತಿ, *ಯಕ್ಷಗಾನ ಬಯಲಾಟ* ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ, *ಮೈಮನಗಳ ಸುಳಿಯಲ್ಲಿ* ಕೃತಿಗೆ ಪಂಪ ಪ್ರಶಸ್ತಿ ಗೌರವಗಳು ಸಂದಿವೆ. ೧೯೫೫ರಲ್ಲಿ ಮೈಸೂರಿನಲ್ಲಿ ಜರುಗಿದ ಅಖಿಲ ಭಾರತ ೩೭ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿಯ ಗೌರವ ಸಂದಿದೆ. ಅಲ್ಲದೆ ಪ್ರಥಮ ವಿಶ್ವ ಕನ್ನಡ ಸಮ್ಮೇಳನದ ಉದ್ಘಾಟನಾ ಸಮಾರಂಭದ ಅಧ್ಯಕ್ಷ ಪದವಿ, ಹಲವು ವಿಶ್ವವಿದ್ಯಾಲಯಗಳ ಗೌರವ ಡಾಕ್ಟರೇಟ್ ಪದವಿಗಳು ಕಾರಂತರನ್ನು ಅರಸಿ ಬಂದಿವೆ. ಪ್ರಪಂಚದ ನಾನಾ ಭಾಗಗಳಲ್ಲಿ ಸುತ್ತಾಡಿ ಬಂದ ಕಾರಂತರು *'ರೋಮ್'* ನಗರಕ್ಕೆ ಭೇಟಿಕೊಟ್ಟ ಸಂದರ್ಭದಲ್ಲಿ ತಾವು ಕಂಡ ಹಲವು ವೈಶಿಷ್ಟ್ಯಗಳನ್ನು ಪ್ರಸ್ತುತ ಪ್ರವಾಸ ಕಥನದಲ್ಲಿ ಚಿತ್ರಿಸಿದ್ದಾರೆ.

ಶಬ್ದಾರ್ಥ : ಪಿಯಾ಼ಜ-ಚೌಕ (ಹತ್ತಾರು ಜನರ ಗುಂಪು ಸೇರುವ ಕೇಂದ್ರ) ; ಕೋವಿದ-ವಿದ್ವಾಂಸ, ಪಂಡಿತ ; ಭೀಷಣ-ಕಠಿಣ, ಕಠೋರ ; ಹಾಲುಗಲ್ಲು-ಹಾಲಿನ ಬಣ್ಣದ ನುಣುಪಾದ ಕಲ್ಲು ; ಸ್ಥಂಭ-ಕಂಬ ; ಸ್ಥಂಭರಾಜಿ-ಕಂಬಗಳ ಸಮೂಹ ; ಅಪರ ವಯಸ್ಸು-ಇಳಿ ವಯಸ್ಸು ; ಮಾಡು-ಮೇಲ್ಛಾವಣಿ, ಛತ್ತು.

ಟಿಪ್ಪಣಿ :

೧) ರೋಮ್ : ಇಟಲಿಯ ಪ್ರಮುಖ ಪಟ್ಟಣ.

೨) ಜೂಲಿಯಸ್ ಸೀಸರ್ : ರೋಮ್‌ನ ರಾಜಕಾರಣಿ. ಗ್ಯಾಲಸ್ ಜೂಲಿಯಸ್ ಸೀಸರ್ ಎಂಬುದು ಪೂರ್ಣ ಹೆಸರು. ಸೈನ್ಯದಲ್ಲಿದ್ದ (ಮಿಲಿಟರಿ) ಮಹಾಯೋಧ. ಮುಂದೆ ರೋಮ್ ಸಾಮ್ರಾಜ್ಯವನ್ನು ವಿಸ್ತರಿಸಿದ ಧೀರ (ಕಾಲ : ಕ್ರಿ.ಪೂ. ೧೦೧ ರಿಂದ ೪೪ರವರೆಗೆ). *'ಡಿಕ್ಟೇಟರ್ ಫಾರ್ ಲೈಫ್'* ಎಂಬ ಬಿರುದು ಪಡೆದವ. ಜುಲೈ ತಿಂಗಳ ಹೆಸರು ಇವನಿಂದಲೇ ಬಂದದ್ದು. ಸರ್ವಾಧಿಕಾರೀ ಮನೋಭಾವದಿಂದ ರೋಷಗೊಂಡು ಇವನ ಅನುಯಾಯಿಗಳಾಗಿದ್ದ ಬ್ರೂಟಸ್ ಮತ್ತು ಕ್ಯಾಸಿಯಸ್ ಎಂಬುವರಿಂದ ಹತನಾದ ದುರ್ದೈವಿ.

೩) ಜೆರುಸಲೇಮ್ : ಇಸ್ರೇಲ್‌ನ ರಾಜಧಾನಿ. ಕ್ರೈಸ್ತರ ಪವಿತ್ರ ಸ್ಥಳ.

೪) ಎಲಬಾಸ್ಟರ್ ಶಿಲೆ : ರಾಸಾಯನಿಕ ಹೆಸರು ಕ್ಯಾಲ್ಸಿಯಂ ಸಲ್ಫೇಟ್. ಬಿಳಿಯ ಬಣ್ಣದ ಖನಿಜ ಶಿಲೆ ಹೆಚ್ಚಾಗಿ ಅಮೇರಿಕಾದಲ್ಲಿ ಕಂಡುಬರುತ್ತದೆ. ಚಪ್ಪಡಿ ಕಲ್ಲುಗಳನ್ನಾಗಿ, ನೆಲಕ್ಕೆ ಹಾಸುಗಲ್ಲುಗಳನ್ನಾಗಿ ಬಳಸಲು, ಪುಡಿಮಾಡಿದ ಕಲ್ಲುಗಳನ್ನು ಆಭರಣ ಮತ್ತು ಅಲಂಕಾರದ ಹೂದಾನಿಗಳನ್ನಿಡಲು ಬಳಸುತ್ತಾರೆ.

೫) ವೀನಸ್ ದೇವತೆ : ಗ್ರೀಕ್ ಚರಿತ್ರೆಗಳಲ್ಲಿ ಪ್ರತಿಪಾದಿತವಾಗಿರುವಂತೆ ಈಕೆ ಸೌಂದರ್ಯದ ಅಧಿದೇವತೆ.

೬) ಚೇಪೆಲ್ : ಕ್ರೈಸ್ತರ ಪ್ರಾರ್ಥನಾ ಮಂದಿರ.

೭) ಒಬ್ಲಿಸ್ಕ್ : ಕ್ರೈಸ್ತರ ಪ್ರಾರ್ಥನಾ ಮಂದಿರ.

೮) ಮೈಕೆಲ್ ಏಂಜಲೋ : ಮೈಕೆಲ್ ಏಂಜಲೋ ಎಂಬ ಇಟಲಿಯ ಅತ್ಯುತ್ತಮ ಶಿಲ್ಪಿ, ಚಿತ್ರ ಕಲಾವಿದ (ಕಾಲ ೧೪೭೫– ೧೫೬೪) ಪೋಪ್ ಆದೇಶದಂತೆ ರೋಮ್‌ನ ೧೬ನೇ ಚಾಪೆಲ್ ವಿನ್ಯಾಸಗೊಳಿಸಿ ಬೈಬಲ್ ಕುರಿತು ಒಂದು ಹೊಸ ಕಲ್ಪನೆಯನ್ನು ಹುಟ್ಟು ಹಾಕಿ ಅದ್ಭುತವಾದ ಪೈಂಟಿಂಗ್ ಮಾಡಿದ ಜಗತ್ಪ್ರಸಿದ್ಧ ಕಲಾವಿದ. *'ಪುನರುತ್ಥಾನ'* ಕಾಲದ ಅತ್ಯಂತ ಶ್ರೇಷ್ಠ ಕಲಾವಿದ.

೯) ಸಾಮ್ರಾಟ್ ಕಾನ್‌ಸ್ಟಂಟೈನ್ : ರೋಮ್ ಚಕ್ರವರ್ತಿ. ಕಾಲ ಕ್ರಿ.ಶ. ೨೭೪ ರಿಂದ ೩೩೭ರವರೆಗೆ. ಕ್ರೈಸ್ತ ಧರ್ಮ ಪ್ರಚಾರವನ್ನು ಮಾಡಿದ ಮೊದಲ ಚಕ್ರವರ್ತಿ. ಕ್ರೈಸ್ತ ಧರ್ಮದಲ್ಲಿ "ಸಹನೆ" ಎಂಬುದರ ಪ್ರತಿಪಾದನೆಯನ್ನು ತುಂಬ ಪರಿಣಾಮಕಾರಿಯಾಗಿ ಮಾಡಿದ ದೊರೆ. *'ಮಿಲಾನ್'*ನಲ್ಲಿ ಇವನನ್ನು ಕುರಿತ ಶಾಸನಗಳಿವೆ.

ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ :

೧) 'ಒಂದು ದಿನದ ರಚನೆಯಲ್ಲ; ಯುಗಮಾನಗಳ ರಚನೆ.'

೨) 'ಅದು 'ಮೇರಿ'ಗೆ ಅರ್ಪಿತವಾಗಿದೆ.'

೩) 'ಅಲ್ಲಲ್ಲಿ ಶಿಲೆಯದೇ ಮಂಚಗಳಿವೆ.'

೪) 'ಜೋಡಣೆಯು ಅಷ್ಟು ಸೂಕ್ಷ್ಮ; ಬಳಸಿದ ಬಣ್ಣಗಳು ಅಷ್ಟು ಉಜ್ವಲ.'

೫) 'ಇದು ಆಧುನಿಕ ಇಟಲಿಯಲ್ಲ; ಇಂದಿಗೂ ಪ್ರಾಚೀನ ರೋಮ್.'

ಒಂದು ವಾಕ್ಯದಲ್ಲಿ ಉತ್ತರಿಸಿ :

೧) ಈಜಿಪ್ಟ್‌ನಿಂದ ಪೂರ್ವಕ್ಕಿರುವ ರಾಷ್ಟ್ರಗಳಿಗೆಲ್ಲ ಸ್ಫೂರ್ತಿ ಕೊಟ್ಟ ನಗರ ಯಾವುದು?

೨) ರೋಮನ್ ಕೆಥೋಲಿಕ್ ಕ್ರೈಸ್ತರ ಅತಿ ದೊಡ್ಡ ಯಾತ್ರಾ ಸ್ಥಳವನ್ನು ಹೆಸರಿಸಿ.

೩) ರೋಮ್ ನಗರದ ಪ್ರಾಚೀನ ಮಂದಿರಗಳಲ್ಲಿ ಸುಸ್ಥಿತಿಯಲ್ಲಿರುವ ಸುಂದರ ದೇವಾಲಯ ಯಾವುದು?

೪) ಪೇಂತಿಯಾನ್ ದೇವಾಲಯದ ಸ್ತಂಭಗಳು, ಮಂಟಪಗಳು ಯಾವ ಶಿಲೆಗಳಿಂದ ರಚನೆಗೊಂಡಿವೆ?

೫) ವೀನಸ್ ದೇವತೆಯ ದೇವಾಲಯವನ್ನು ನಿರ್ಮಿಸಿದ ರೋಮ್ ಸಾಮ್ರಾಟ ಯಾರು?

೬) ಪ್ರಪಂಚದಲ್ಲೇ ಹಿರಿದಾದ ಚರ್ಚು ಯಾವುದು?

ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ :

೧) ರೋಮ್ ನಗರವನ್ನು ಕುರಿತ ಎರಡು ಹಳೆಯ ಗಾದೆಗಳು ಯಾವುವು?

೨) ಪ್ರಾಚೀನ ರೋಮ್‌ನ ಸಭಾಂಗಣವನ್ನು ಕುರಿತು ಕಾರಂತರ ಅಭಿಪ್ರಾಯವೇನು?

೩) ಕಾನ್‌ಸ್ಟಂಟೈನ್ ದೊರೆಯ ವಿಶೇಷತೆ ಏನು?

೪) ರೋಮ್‌ನ ಪೂರ್ವ ಕಥಾನಕಗಳು ನಮಗೆ ಹೇಗೆ ತಿಳಿದು ಬರುತ್ತವೆ?

೫) ರೋಮ್‌ನಲ್ಲಿ ನೋಡಲೇಬೇಕಾದ ಪ್ರಸಿದ್ಧ ಚರ್ಚುಗಳು ಯಾವುವು?

೬) ವೆಟಿಕನ್ ನಗರವನ್ನು ಕುರಿತು ಕಾರಂತರು ತಿಳಿಸಿದ ವಿವರಗಳೇನು?

ವಿವರವಾಗಿ ಉತ್ತರಿಸಿ :

೧) ಕೊಲೋಸಿಯಮ್ ಸ್ಮಾರಕವನ್ನು ಲೇಖಕರು ಹೇಗೆ ಬಣ್ಣಿಸಿದ್ದಾರೆ?

೨) ರೋಮ್ ನಗರದ ಪ್ರಾಚೀನ ಮಂದಿರಗಳಲ್ಲಿ ಸುಸ್ಥಿತಿಯಲ್ಲಿರದ ಸುಂದರ ದೇವಾಲಯಗಳನ್ನು ಕುರಿತು ಬರೆಯಿರಿ.

೩) ಮೈಕೆಲ್ ಏಂಜಲೋ ನಿರ್ಮಿಸಿದ ಕ್ರಿಸ್ತನ ಶಿಲ್ಪದ ಸೌಂದರ್ಯವನ್ನು ಲೇಖಕರು ಹೇಗೆ ಬಣ್ಣಿಸಿದ್ದಾರೆ?

೪) ರೋಮ್‌ನ ಆಧುನಿಕ ವಾಸ್ತುಶೈಲಿಯು ಇಲ್ಲಿನ ರೈಲು ನಿಲ್ದಾಣದ ಮೂಲಕ ಹೇಗೆ ವ್ಯಕ್ತಗೊಂಡಿದೆ?

೫) ಸೈಂಟ್ ಪೀಟರ್ಸ್ ಬೆಸಿಲಿಕಾದ ವಾಸ್ತು ವಿಶೇಷತೆಯನ್ನು ಕಾರಂತರು ಹೇಗೆ ಚಿತ್ರಿಸಿದ್ದಾರೆ? ವಿವರಿಸಿ.

೬) ಮೈಕೆಲ್ ಏಂಜಲೋವಿನ ಬಾಳು ಸಾರ್ಥಕಗೊಳಿಸಿದ ಶಿಲ್ಪ ಕಲಾಕೃತಿಯನ್ನು ಕಾರಂತರು ವರ್ಣಿಸಿದ ಬಗೆ ತಿಳಿಸಿ.

ಭಾಷಾಭ್ಯಾಸ :

೧) ಇವುಗಳಿಗೆ ತತ್ಸಮ-ತದ್ಭವ ಬರೆಯಿರಿ :

ಸ್ಥಂಬ, ಸಾವಿರ, ಪ್ರಯಾಣ, ಬಣ್ಣ, ದೃಷ್ಟಿ, ಸ್ನೇಹ.

೨) ಇವುಗಳಿಗೆ ನಾನಾರ್ಥ ಪದಗಳನ್ನು ಬರೆಯಿರಿ :

ಕೂರು, ಕೊನೆ, ಮಾಡು, ಕಲೆ.

೩) ಇವುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ :

ಬೆರಗಾಗು, ಕಲ್ಪನಾಶಕ್ತಿ, ವಾಸ್ತು ವೈಭವ, ಸ್ಮಾರಕ.

ಚಟುವಟಿಕೆ :

೧) ನೀವು ಸಂದರ್ಶಿಸಿದ ಐತಿಹಾಸಿಕ ಸ್ಥಳಗಳ ಕುರಿತು ಪ್ರಬಂಧ ಬರೆಯಿರಿ.

೨) ನೀವು ಕಂಡ ಕಲಾಕೃತಿಗಳ ವಿಶೇಷತೆಯನ್ನು ಕುರಿತು ಟಿಪ್ಪಣಿ ಬರೆಯಿರಿ.

ಆಕರ ಗ್ರಂಥ :

'ಅಪೂರ್ವ ಪಶ್ಚಿಮ' – ಡಾ. ಕೆ. ಶಿವರಾಮಕಾರಂತ, ಪ್ರಕಾಶನ : ಸಪ್ನ ಬುಕ್ ಹೌಸ್, ಬೆಂಗಳೂರು.

ಹೆಚ್ಚಿನ ಓದು :

೧) ಅಮೇರಿಕಾದಲ್ಲಿ ಗೊರೂರು – ಗೊರೂರು ರಾಮಸ್ವಾಮಿ ಅಯ್ಯಂಗಾರ್

೨) ಅಪರ ವಯಸ್ಕನ ಅಮೇರಿಕಾ ಯಾತ್ರೆ – ಎ.ಎನ್. ಮೂರ್ತಿರಾವ್

೩) ಗಂಗೆಯ ಶಿಖರಗಳಲ್ಲಿ – ಜಿ.ಎಸ್. ಶಿವರುದ್ರಪ್ಪ

೪) ಪೆರುವಿನ ಪವಿತ್ರ ಕಣಿವೆ – ನೇಮಿಚಂದ್ರ

ಮೈ ಮೇಲೆ ದೇವರು, ದೆವ್ವ ಬರುವುದು! ಏನು?

ಸಿ.ಆರ್. ಚಂದ್ರಶೇಖರ್

ಜೀವನದಲ್ಲಿ ಸುಖಗಳಿಂದ ವಂಚಿತನಾದಾಗ ಮಾನವನು ನಾನಾ ಬಗೆಯ ಸಂಕಷ್ಟಗಳಿಗೆ ಒಳಗಾಗುತ್ತಾನೆ. ಅಭದ್ರತೆಯ ಆತಂಕದಲ್ಲಿ ತೊಳಲಾಡುತ್ತಾನೆ. ಅವನ ತಪ್ತ ಮನಸ್ಸು ಸಮಸ್ಯೆಗಳಿಂದ ಬಿಡುಗಡೆಯಾಗಬಹುದಾದ ನೆಮ್ಮದಿಯ ಮಾರ್ಗಗಳನ್ನು ಅರಸ ತೊಡಗುತ್ತದೆ. ಇಂತಹ ಸನ್ನಿವೇಶಗಳಲ್ಲಿ ದುರ್ಬಲಗೊಂಡ ಮನಸ್ಸು ತನ್ನ ಪರಿಸರದ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯಲ್ಲಿನ ಅನೇಕ ಅಂಶಗಳಿಂದ ಪ್ರಭಾವಿತವಾಗುತ್ತದೆ. ಇದನ್ನು ಮನಃಶಾಸ್ತ್ರದ ಪರಿಭಾಷೆಯಲ್ಲಿ "ಮನೋ ಸಾಮಾಜಿಕ-ಸಾಂಸ್ಕೃತಿಕ ವಿಶೇಷ" ಎನ್ನುತ್ತಾರೆ. ಇದು ವ್ಯಕ್ತಿ ಮತ್ತು ಸಮಾಜದ ಮೇಲೆ ಬೀರುವ ದುಷ್ಪರಿಣಾಮ ಮತ್ತು ಅದರ ನಿವಾರಣೆಯ ಉಪಾಯಗಳನ್ನು ಇಲ್ಲಿ ಪ್ರಸ್ತುತ ಪಡಿಸಲಾಗಿದೆ.

ಹದಿನೆಂಟು ವರ್ಷ ವಯಸ್ಸಿನ ಶಾಂತಿ, ಇದ್ದಕ್ಕಿದ್ದಂತೆ ಹೂಂಕರಿಸಿ, ತಲೆಯನ್ನು ತೂಗತೊಡಗಿದಳು. ಅವಳ ಉಸಿರಾಟದ ವೇಗ ಹೆಚ್ಚುತ್ತಿದ್ದಂತೆ, ಅವಳ ಇಡೀ ದೇಹ ತೂಗತೊಡಗಿತು. ಅವಳ ಜಡೆ ಬಿಚ್ಚಿಕೊಂಡು, ಕೂದಲುಗಳು ಹಾರಾಡತೊಡಗಿದವು. ಆಕೆ ಹಲ್ಲುಗಳನ್ನು ಮಸೆಯತೊಡಗಿದಳು. ಕಠಿಣವಾದ, ದೊಡ್ಡ ದನಿಯಲ್ಲಿ 'ಎಲ್ಲಿ ಆ ತಾಟಕಿ ಸಾವಿತ್ರಮ್ಮ ಎಲ್ಲಿ? ಅವಳ ನಾಲಗೆಯನ್ನು ಸೀಳಿ, ಅವಳ ಪ್ರಾಣ ಹೀರುತ್ತೇನೆ. ಎಲ್ಲಿ ಅವಳು?' ಎಂದು ಕೂಗು ಹಾಕಿದಳು. ಪಕ್ಕದಲ್ಲಿದ್ದ ನೆರೆಮನೆ ಹೆಂಗಸು, 'ಯಾರು ನೀನು? ನಿನಗೇನು ಬೇಕು? ಈ ಹುಡುಗಿಯ ಮೇಲೆ ಏಕೆ ಬಂದಿದ್ದೀಯೆ?' ಎಂದು ಕೇಳಿದಳು. 'ನಾನು ಯಾರಾ? ನಿನಗಿನ್ನೂ ಗೊತ್ತಾಗಲಿಲ್ಲವಾ? ಬಾವಿಗೆ ಬಿದ್ದು ಸತ್ತ ಗೌರಿ ನಾನು. ಶಾಂತಿ ನನ್ನ ಸ್ನೇಹಿತೆ. ಅವಳನ್ನು ನೋಡಿ ಹೋಗೋಣ ಅಂತ ಬಂದಿದ್ದೀನಿ' ಎಂದು ಮತ್ತೆ ಹೂಂಕರಿಸಿದಳು. 'ನೋಡಾಯಿತಲ್ಲ, ಹೊರಟು ಹೋಗು ಆಗಾಗ್ಗೆ ಬಂದು ಶಾಂತಿಗೆ ತೊಂದರೆ ಕೊಡಬೇಡ ನಿನ್ನ ದಮ್ಮಯ್ಯ' ಎಂದು ಶಾಂತಿಯ ನಾದಿನಿ ಕೇಳಿಕೊಂಡಳು. 'ಆಹಾ, ಬಾಯಿ ಮುಚ್ಚೇ ವಯ್ಯಾರಿ, ನನ್ನ ಶಾಂತಿಗೆ ಹಿಂಸೆ ಕೊಡ್ತಿರೋ ನಿನ್ನಮ್ಮ ಎಲ್ಲಿದ್ದಾಳೆ, ಕರಿ. ಕತ್ತು ಮುರೀತಿನಿ, ಪಾಪ ಶಾಂತಿ ಎಷ್ಟು ಒಳ್ಳೆಯ ಹುಡುಗಿ, ಅವಳನ್ನು ನೋಯಿಸಿದರೆ ನಿಮ್ಮ ಗತಿ ನೆಟ್ಟಗಿರುವುದಿಲ್ಲ ಉಷಾರ್, ಕರೀ ಆ ಮುದುಕಿಯನ್ನು. ನನ್ನ ಕಾಲಿಗೆ ಬಿದ್ದು ಕ್ಷಮೆ ಕೇಳಲಿ. ಶಾಂತಿಯನ್ನು ಗೋಳಾಡಿಸೋಲ್ಲ, ಚೆನ್ನಾಗಿ ನೋಡ್ಕೋಳ್ತೇನೆ ಅಂತ ಮಾತು ಕೊಡಲಿ. ನಾನು ಹೋಗ್ತೇನೆ' ಎಂದು ಕೂಗು ಹಾಕಿದಳು. ಸಾವಿತ್ರಮ್ಮ ನಡುಗುತ್ತಾ ಬಂದು ಸಾಷ್ಟಾಂಗ ನಮಸ್ಕಾರ ಮಾಡಿ, ಗಲ್ಲ ಬಡಿದು ತಪ್ಪೊಪ್ಪಿಕೊಂಡಳು. ಶಾಂತಿಯ ದೇಹ ವಿಪರೀತ ತೂರಾಡಿ ದೊಪ್ಪನೆ ನೆಲದ ಮೇಲೆ ಉರುಳಿಕೊಂಡಿತು. ನೆರದಿದ್ದವರು ಶೈತ್ಯೋಪಚಾರ

ಮಾಡಿದರು. ಹತ್ತು ನಿಮಿಷಗಳ ನಂತರ ಕಣ್ತೆರೆದ ಶಾಂತಿ 'ಅಯ್ಯೋ' ಎಂದು ನರಳಿದಳು. 'ಏನಾಯ್ತು ನನಗೇನಾಗಿದೆ. ವಿಪರೀತ ತಲೆನೋವು' ಎಂದು ಮತ್ತೆ ಕಣ್ಣು ಮುಚ್ಚಿ ಮಲಗಿದಳು.

◆ ◆ ◆ ◆

ವೀರಭದ್ರ ದೇವರ ಗುಡಿಯ ಪೂಜಾರಿಯ ಆರು ಅಡಿ ಎತ್ತರದ ಕಪ್ಪನೆಯ ದೇಹ ಇದ್ದಕ್ಕಿದ್ದಂತೆ ಕುಣಿಯಲಾರಂಭಿಸಿತು. ಅವನ ಕಣ್ಣುಗಳು ಗರಗರನೆ ತಿರುಗಿದವು. ಅವನ ಉಸಿರಾಟದ ವೇಗಕ್ಕೆ ಎದೆ ಏರಿಳಿಯುತ್ತಿತ್ತು. ತಟ್ಟೆಯಿಂದ ಕುಂಕುಮವನ್ನು ಹಿಡಿಯಲ್ಲಿ ಎತ್ತಿಕೊಂಡು, ಮುಖಕ್ಕೆ ಬಳೆದುಕೊಂಡ. ವಿಚಿತ್ರ ಶಬ್ದಗಳನ್ನು ಮಾಡತೊಡಗಿದಾಗ, ನೆರದಿದ್ದ ಜನ, 'ದೇವರು ಬಂತು, ದೇವರು ಬಂತು' ಎಂದು ಭಯ ಭಕ್ತಿಯಿಂದ ಕೈ ಮುಗಿದು ನಿಂತರು. ಪೂಜಾರಿಯ ಶಿಷ್ಯ, ಕರ್ಪೂರದಾರತಿ ಮಾಡಿ, ಅಡ್ಡ ಬಿದ್ದು, 'ನಮ್ಮ ತಪ್ಪುಗಳನ್ನೆಲ್ಲ ಹೊಟ್ಟೆಯಲ್ಲಿ ಹಾಕ್ಕೊಂಡು, ನಮ್ಮನ್ನೆಲ್ಲ ಕಾಪಾಡಪ್ಪ, ನಿನ್ನ ಮಕ್ಕಳೆಲ್ಲ ತಮ್ಮ ಕಷ್ಟಗಳನ್ನು ಹೇಳ್ಕೊಂಡು, ಸಹಾಯ ಬೇಡೋಕೆ ಬಂದವರೆ. ಕೇಳೋಕೆ ಅಪ್ಪಣೆಯಾಗಬೇಕು' ಎಂದ. ಪೂಜಾರಿ, 'ಹ್ಞೂ, ಏನು ಬೇಕು ಅಂತ ಹೇಳಲಿ' ಎಂದ. ಆಗ ಒಬ್ಬೊಬ್ಬರಾಗಿ ಮುಂದೆ ಬಂದು, ತಮ್ಮ ಕಷ್ಟ, ಖಾಯಿಲೆ, ಜಗಳ, ನಷ್ಟ, ಕಳವು ಇತ್ಯಾದಿಗಳ ಬಗ್ಗೆ ಹೇಳಿಕೊಳ್ಳತೊಡಗಿದರು. ಪೂಜಾರಿ, ಕೇಳಿಸಿ ಕೊಂಡಂತೆ ಮಾಡಿ, ಬೊಗಸೆಗೆ ಹೂ ಹಾಕಿ ಶಬ್ದ ಮಾಡುತ್ತಿದ್ದ; ದೇವರು ಏನು ಹೇಳಿತು ಎಂದು ಶಿಷ್ಯ ಅರ್ಥೈಸಿ ಹೇಳುತ್ತಿದ್ದ. ಹೀಗೆ ಬೆಳಗ್ಗೆಯೇ ಪ್ರಾರಂಭವಾದ ದೈವ ಸಂದರ್ಶನ, ಸಂಜೆಯಾಗುವ ತನಕ ಮುಂದುವರೆಯಿತು.

◆ ◆ ◆ ◆

ಈ ದೃಶ್ಯಗಳು ನಮ್ಮ ಸಮಾಜದಲ್ಲಿ ಬಹು ಸಾಮಾನ್ಯ. ಒಬ್ಬ ವ್ಯಕ್ತಿಯ ಮೇಲೆ, ಅಥವಾ ಹಲವಾರು ವ್ಯಕ್ತಿಗಳ ಮೇಲೆ ಅಥವಾ ಸಾಮೂಹಿಕವಾಗಿ ಹತ್ತಾರು ಜನರ ಮೇಲೆ ದೇವರು ಅಥವಾ ದೆವ್ವ ಬರುವ ಪ್ರಕರಣಗಳು ವರದಿಯಾಗುತ್ತಲೇ ಇರುತ್ತವೆ. ದೇವಸ್ಥಾನದ ಆವರಣದಲ್ಲಿ, ಪುಣ್ಯ ಕ್ಷೇತ್ರಗಳಲ್ಲಿ, ಜಾತ್ರೆ, ರಥೋತ್ಸವಗಳಲ್ಲಿ, ಧಾರ್ಮಿಕ ಆಚರಣೆಯ ಸಂದರ್ಭಗಳಲ್ಲಿ ಇದು ಸರ್ವೇ ಸಾಮಾನ್ಯ. ಇದೇನು? ಇದು ಅತಿಮಾನವ ಶಕ್ತಿಯ ರೂಪವೇ? ಆಗ ವ್ಯಕ್ತಿ ಕೆಲವು ವಿಶೇಷ ಸಾಮರ್ಥ್ಯಗಳನ್ನು ಪ್ರಕಟಿಸುತ್ತಾನಲ್ಲಾ ಅದು ಹೇಗೆ ಸಾಧ್ಯವಾಗುತ್ತದೆ? ಇದಕ್ಕೆ ವೈಜ್ಞಾನಿಕ ವಿವರಣೆಗಳೇನು?

ಇದುವರೆಗೆ ನಡೆದಿರುವ ಅನೇಕ ಅಧ್ಯಯನಗಳ ಪ್ರಕಾರ, ಮೈಮೇಲೆ ದೆವ್ವ ಬರುವುದು ಒಂದು ಮನೋ-ಸಾಮಾಜಿಕ-ಸಾಂಸ್ಕೃತಿಕ ವಿಶೇಷ. ಯಾವ ಯಾವ

ಸಮಾಜ, ಸಂಸ್ಕೃತಿಯಲ್ಲಿ ಜನ ದೆವ್ವಗಳವೆ, ಅವು ಜನರ ಮೈ ಮೇಲೆ ಬರಬಹುದು ಎಂದು ನಂಬುತ್ತಾರೋ, ಅಲ್ಲಿ ವ್ಯಕ್ತಿಯ ಮೇಲೆ ದೆವ್ವ ಬರುತ್ತದೆ. ನಂಬಿಕೆ ಇಲ್ಲದಿದ್ದರೆ ಈ ವಿಶೇಷ ಜರುಗುವುದಿಲ್ಲ. ಇದಕ್ಕೆ ಮೂರು ರೀತಿಯ ವಿವರಣೆಗಳವೆ.

೧) ಉನ್ಮಾದ ಮನೋಸ್ಥಿತಿ : ಒಬ್ಬ ವ್ಯಕ್ತಿ ಹಲವು ಕಾರಣಗಳಿಂದ ತೀರಾ ಸಂಕಷ್ಟಕ್ಕೆ ಈಡಾದಾಗ, ದ್ವಂದ್ವಕ್ಕೆ ಒಳಗಾದಾಗ, ಮನಸ್ಸಿನ ನೆಮ್ಮದಿ ಸಾಕಷ್ಟು ಕಲಕಿ ಹೋದಾಗ ಜಾಗೃತ ಮನಸ್ಸು, ಸ್ವಲ್ಪ ಹೊತ್ತಾದರೂ ಎಲ್ಲವನ್ನೂ ಮರೆತು, ಕ್ಲಿಷ್ಟಕರ ಸನ್ನಿವೇಶದಿಂದ ಮರೆಯಾಗಲು ಬಯಸುತ್ತದೆ. ಆಗ ಸುಪ್ತ ಮನಸ್ಸು, ಮೇಲ್ಪದರಕ್ಕೆ ಬಂದು, ಆ ಸಾಮಾಜಿಕ ಸಾಂಸ್ಕೃತಿಕ ಪರಿಸರದಲ್ಲಿ ಜನ ನಿರೀಕ್ಷೆ ಮಾಡುವ ಅಥವಾ ಒಪ್ಪಿಕೊಳ್ಳುವ ನಡವಳಿಕೆ, ವಿಶೇಷ ಪ್ರತಿಕ್ರಿಯೆಯನ್ನೂ ಪ್ರಕಟಿಸಿ, ಅವರ ಗಮನ ಸೆಳೆಯುವುದಲ್ಲದೆ, ಸಹಾನುಭೂತಿಯನ್ನು ಪಡೆಯುತ್ತದೆ. ಉದಾಹರಣೆಗೆ : ಶಾಂತಿ, ಅತ್ತೆಯ ಕಾಟದಿಂದ ನೊಂದವಳು. ಆದರೆ ಹಿರಿಯಳಾದ ಅತ್ತೆಯನ್ನು ದೂರುವಂತಿಲ್ಲ, ಶಿಕ್ಷಿಸುವಂತಿಲ್ಲ, ಗಂಡನೂ ತಾಯಿಯ ಕಡೆಯೇ. ಅಂತಹ ಸನ್ನಿವೇಶದಲ್ಲಿ ಆಕೆ ದೆವ್ವ ಹಿಡಿದವಳಂತೆ ವರ್ತಿಸಿ, ಅತ್ತೆಯನ್ನು ದೂಷಿಸಿದಾಗ, ಸರಿಯಾಗಿ ನಡೆದುಕೊಳ್ಳುವಂತೆ ಆಣತಿ ಇತ್ತಾಗ, ಎಲ್ಲರೂ ಅದನ್ನು ಒಪ್ಪಿಕೊಳ್ಳುವ ಸಂಭವವೇ ಹೆಚ್ಚು. ಈ ಕೆಲಸಕ್ಕಾಗಿ ಆಕೆಯನ್ನು ಯಾರೂ ದೂರುವುದಿಲ್ಲ. ಅಲ್ಲದೆ ಆಕೆಯ ಜಾಗೃತ ಮನಸ್ಸಿಗೆ ತಾನೇನು ಮಾಡುತ್ತಿದ್ದೇನೆ ಎಂಬುದು ಗೊತ್ತಿಲ್ಲ. ಜ್ಞಾನ ಬಂದ ಮೇಲೆ ಆಕೆಗೆ ನಡೆದದ್ದು ಒಂದೂ ಜ್ಞಾಪಕದಲ್ಲಿ ಇಲ್ಲದಿರಲು ಇದೇ ಕಾರಣ. ಹೀಗಾಗಿ, ನಮ್ಮ ಸಮಾಜದಲ್ಲಿ ಅನೇಕ ರೀತಿಯಲ್ಲಿ ಶೋಷಣೆಗೆ ಒಳಗಾಗುವ ಮಹಿಳೆಯರ ಮೈ ಮೇಲೆ ಹೆಚ್ಚಾಗಿ ದೆವ್ವ ಬರುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿಯೇ ಇದು ಹೆಚ್ಚು.

೨) ಪರೋಕ್ಷ ಪ್ರತಿಭಟನೆ ಮತ್ತು ಸಂಪರ್ಕ ಸಾಧನೆ : ನೇರವಾಗಿ ಹೇಳುವುದಕ್ಕೆ ಆಗದ್ದನ್ನು, ನೇರವಾಗಿ ಹೇಳಲು ಧೈರ್ಯವಿಲ್ಲದಿದ್ದಾಗ ಅಥವಾ ನೇರವಾಗಿ ಹೇಳಿದರೂ ಯಾರೂ ಗಮನ ಕೊಡದೇ ಇದ್ದಾಗ, ವ್ಯಕ್ತಿ ಮೈ ಮೇಲೆ ದೆವ್ವ (ಅಥವಾ ದೇವರು) ಬರಿಸಿಕೊಂಡು ನಾಟಕೀಯವಾಗಿ ನರ್ತಿಸಿ, ಸಂಬಂಧಪಟ್ಟವರ ಗಮನ ಸೆಳೆದು ಪ್ರತಿಭಟಿಸಬಹುದು. ತನಗೇನು ಬೇಕೆಂದು ಕೇಳಬಹುದು, ಪಡೆಯಲೂ ಬಹುದು.

೩) ಅನುಕರಣೆ : ನೂರಕ್ಕೆ ಐವತ್ತು ಜನ ಸುಲಭವಾಗಿ, ಇತರರ ಪ್ರಭಾವಕ್ಕೆ ಒಳಗಾಗುವಂಥವರು. ಇತರರು ಜೋರಾಗಿ, ಪರಿಣಾಮಕಾರಿಯಾಗಿ ಒಂದು ಮಾತು ಒಂದು ಅಭಿಪ್ರಾಯವನ್ನು ಮಂಡಿಸಿದರೆ, ಹೌದು ಎಂದು ಒಪ್ಪಿಗೆ ಕೊಡುವಂಥವರು

ಗುಂಪಿನಲ್ಲಿದ್ದಾಗ, ಹೆಚ್ಚು ಜನ ಏನು ಮಾಡುತ್ತಾರೋ, ತಾವೂ ಅದನ್ನೇ ಮಾಡುವಂಥವರು, ಇಂಥವರು, ಬೇರೆಯವರಿಗೆ ಮೈ ಮೇಲೆ ದೆವ್ವ (ದೇವರು) ಬಂದಿರುವುದನ್ನು ಕಂಡರೆ, ತಾವೂ ಅಂತೆಯೇ ಅನುಕರಿಸಿ ನಡೆದುಕೊಳ್ಳುತ್ತಾರೆ (ಸಮೂಹ ಸನ್ನಿ). ಆನಂತರ ತಾವೇಕೆ ಹಾಗೆ ಮಾಡಿದೆವೆಂದು ಅವರಿಗೂ ತಿಳಿಯುವುದಿಲ್ಲ. ಒಬ್ಬ ಆಕಳಿಸಲು ತೊಡಗಿದರೆ, ಮತ್ತೆ ಕೆಲವರು ಆಕಳಿಸಲು ಶುರು ಮಾಡುವುದು, ಒಬ್ಬ ಮೂತ್ರ ವಿಸರ್ಜನೆಗೆಂದು ಹೊರಟರೆ, ಇತರರೂ ಹೊರಡುವುದು ಇಂತಹ ಪ್ರಕ್ರಿಯೆಯ ಸಾಮಾನ್ಯ ಉದಾಹರಣೆಗಳು.

ಮೈ ಮೇಲೆ ದೆವ್ವ ಬರುವ ವ್ಯಕ್ತಿಗಳನ್ನು ವಿವರವಾಗಿ ಪರೀಕ್ಷಿಸಿದರೆ, ಅವರಿಗೆ ಯಾವುದೋ ಒಂದು ತೀವ್ರ ಬಗೆಯ ಮಾನಸಿಕ ಕ್ಲೇಶವಿರುವುದು ಕಂಡುಬರುತ್ತದೆ. ಸಂತೋಷ, ತೃಪ್ತಿ ಅವರಿಗಿರುವುದಿಲ್ಲ. ಅವರ ಮನಸ್ಸನ್ನು ದುಃಖ, ಭಯ, ನಿರಾಶೆ, ಅಸಹಾಯಕತೆ ಕಾಡುತ್ತಿರುತ್ತವೆ. ಅವರಿಗೆ ಇತರರ ಸಹಾನುಭೂತಿ-ಸಹಾಯದ ಅಗತ್ಯವಿರುತ್ತದೆ. ಕೆಲವು ಸಲ ಮನೋವೈದ್ಯರ ಸಲಹೆ ಚಿಕಿತ್ಸೆಯೂ ಬೇಕಾಗಿರುತ್ತದೆ. ಆದ್ದರಿಂದ ಅವರನ್ನು ಭೂತ ಬಿಡಿಸುವ, ಅಪಾಯಕಾರಿ, ಕ್ರೂರ ಚಿಕಿತ್ಸಾ ವಿಧಾನಕ್ಕೆ ಒಳಪಡಿಸದೆ, ಮಾನಸಿಕ ಆಸ್ಪತ್ರೆಗೆ ಕರೆದೊಯ್ಯುವುದು ಅತ್ಯಗತ್ಯ. ಮನೋವಿಶ್ಲೇಷಣೆ ಮತ್ತು ಮನೋಚಿಕಿತ್ಸೆಯಿಂದ ಅವರು ಗುಣಮುಖರಾಗುತ್ತಾರೆ.

ಇನ್ನು ಮೈ ಮೇಲೆ ದೇವರು ಬರುವುದು ನಮ್ಮ ಜನಗಳ ದೃಷ್ಟಿಯಿಂದ ಒಂದು ಸ್ವಾಗತಾರ್ಹ ವಿಶೇಷ. ಯಾರ ಕಣ್ಣಿಗೂ ಕಾಣದ, ಎಲ್ಲಿದ್ದಾನೆಂದು ತಿಳಿಯದ, ಯಾರೊಂದಿಗೂ ಮಾತಾಡದ ದೇವರು, ಒಬ್ಬ ವ್ಯಕ್ತಿಯ ಮೈ ಮೇಲೆ ಬಂದು ಜನರೊಂದಿಗೆ ಮಾತನಾಡಿ, ಅವರ ಕಷ್ಟ-ಸುಖಗಳನ್ನು ಕೇಳಿಕೊಂಡು, ಪರಿಹಾರ ಕೊಡುತ್ತಾನೆ ಎಂದರೆ ಅದು ಸಾಮಾನ್ಯ ವಿಷಯವೇ ? ದೇವರು ಮೈ ಮೇಲೆ ಬರುವ ವ್ಯಕ್ತಿ ದೇವಸಮಾನನಾಗಿ ಬಿಡುತ್ತಾನೆ. ಜನ ಆತನನ್ನು ಓಲೈಸುತ್ತಾರೆ. ಅವನ ಅಪ್ಪಣೆಯೇ ವೇದ ವಾಕ್ಯವಾಗುತ್ತದೆ. ಆತನನ್ನು ಸುಪ್ರೀತನನ್ನಾಗಿ ಮಾಡಲು ಹಿಡಿತ ಮಾಡದೆ ಕಾಣಿಕೆ-ದಕ್ಷಿಣೆಗಳನ್ನು ಕೊಡುತ್ತಾರೆ. ಪ್ರಮುಖ ನಿರ್ಧಾರಗಳನ್ನು ಮಾಡುವಾಗಲೆಲ್ಲಾ ಅವನ ಸಲಹೆ ಮಾರ್ಗದರ್ಶನಗಳನ್ನು ಬಯಸುತ್ತಾರೆ. ಕುಟುಂಬದಲ್ಲಿ, ಸಮಾಜದಲ್ಲಿ ಉನ್ನತ ಸ್ಥಾನಗಳನ್ನು ಬಯಸುತ್ತಾರೆ. ಈ ಎಲ್ಲ ಅನುಕೂಲತೆಗಳು, ಮರ್ಯಾದೆಗಳು ಸಿಗುವುದಾದರೆ ಯಾರಿಗೆ ಬೇಡ? ಅನೇಕ ದೇವಸ್ಥಾನಗಳ ಆದಾಯದ ಪ್ರಮುಖ ಮೂಲ ಮತ್ತು ಜನಪ್ರಿಯತೆಯ ಮೂಲ ಆ ದೇವಸ್ಥಾನದ ಪೂಜಾರಿಯ ಮೈ ಮೇಲೆ ಅಥವಾ ದೇವಸ್ಥಾನದ ಆವರಣದಲ್ಲಿ ಭಕ್ತಾದಿಗಳ ಮೇಲೆ ದೇವರು ಬರುವುದು. ಅದು ನಡೆದಾಗ, ಆ ದೇವರು ಸಕ್ರಿಯವಾಗಿದೆ,

ಜನ ಸಂಪರ್ಕವನ್ನು ಇಟ್ಟುಕೊಂಡಿದೆ, ಮಾತಾಡದ ಬೇರೆ ಕಲ್ಲು ದೇವರಿಗಿಂತ, ಮಾತಾಡುವ ಈ ದೇವರು ಚೆನ್ನಲ್ಲವೇ.

ಪೂಜಾರಿ ತನ್ನ ಸಾಮಾನ್ಯ ಜ್ಞಾನದಿಂದ ಅಥವಾ ವಿಶೇಷ ಶ್ರಮದಿಂದ ಸಂಬಂಧಪಟ್ಟವರ ಕಷ್ಟ-ನಷ್ಟಗಳ ಬಗ್ಗೆ ತಿಳಿದುಕೊಂಡು ಅಥವಾ ಅನುಭವದಿಂದ ಆದಷ್ಟು ಸರಿಯಾಗಿಯೇ ಕಲ್ಪಿಸಿಕೊಂಡು, ಸಮಾಧಾನ, ಪರಿಹಾರಗಳನ್ನು ಹೇಳುತ್ತಾ, ನೊಂದವರಿಗೆ ಸಾಂತ್ವನ ನೀಡುತ್ತಾನೆ. ಅವರಲ್ಲಿ ಆಶಾವಾದದ ಬೆಳಕನ್ನು ಹೊತ್ತಿಸುತ್ತಾನೆ. ಕ್ಲೈಬ್ಯವನ್ನು ಕಳೆದು ಪುರುಷ ಪ್ರಯತ್ನ ಮಾಡುವಂತೆ ಪ್ರಚೋದಿಸುತ್ತಾನೆ. ಅದರಿಂದ ತೊಂದರೆ ನಿವಾರಣೆಯಾದರೆ, ಅದರ ಕೀರ್ತಿ ಪರಿಮಳದಂತೆ ಎಲ್ಲೆಡೆ ಹರಡುತ್ತದೆ. ತೊಂದರೆ ನಿವಾರಣೆ ಆಗದಿದ್ದರೆ, ವಿಫಲತೆಯನ್ನು ಜನ ಸುಲಭವಾಗಿ ಒಪ್ಪಿಕೊಂಡು ಬಿಡುತ್ತಾರೆ. 'ನಮ್ಮ ದುರಾದೃಷ್ಟ, ನಮ್ಮ ಕರ್ಮ, ಇನ್ನೊಂದು ದೇವರ ಕೃಪೆಗೆ ಯತ್ನಿಸೋಣ' ಎಂದು ಮರಳಿ ಯತ್ನವನ್ನು ಮುಂದುವರಿಸುತ್ತಾರೆ.

ಮೈ ಮೇಲೆ ದೇವರು ಬರುವ ವ್ಯಕ್ತಿ ಈ ರೀತಿ ನಿಸ್ವಾರ್ಥದಿಂದ ರೋಗಿಯ ಅಸಹಾಯಕರ ಆತ್ಮವಿಶ್ವಾಸವನ್ನು ಹೆಚ್ಚಿಸುವ, ಅವರಿಗೆ ಸಾಂತ್ವನ ನೀಡುವ ಕೆಲಸ ಮಾಡುವುದರಲ್ಲಿ ತಪ್ಪೇನಿಲ್ಲ. ಆದರೆ ಎಷ್ಟೋ ಕಡೆಗಳಲ್ಲಿ, ಅವರ ಶೋಷಣೆ ನಿರಂತರವಾಗಿ ನಡೆಯುವುದಲ್ಲದೆ, ಅವರ ಅಸಹಾಯಕತೆಯನ್ನು, ಅವಲಂಬನೆಯನ್ನು ಮತ್ತಷ್ಟು ಹೆಚ್ಚಿಸುವ ಕೆಲಸ ನಡೆಯುತ್ತದೆ. ಕಾಣಿಕೆ ಹೆಚ್ಚು ಕೊಟ್ಟರೆ, ವಿಶೇಷ ಕೊಡುಗೆ ಎನ್ನುತ್ತಾರೆ. ದೇವರು ಬೇಕೆಂದಾಗ ಪೂಜಾರಿಯ ಮೈ ಮೇಲೆ ಬರುತ್ತದೆ. 'ನನ್ನನ್ನು ನಂಬಿ, ನೀವಿನ್ನೇನು ಮಾಡಬೇಕಾಗಿಲ್ಲ, ನಿಮಗೆ ಒಳ್ಳೆಯದನ್ನು ಮಾಡುವ ಜವಾಬ್ದಾರಿ ನನ್ನದು' ಎಂದು ದೇವರು ಹೇಳಿದರೆ, ಜನ ನಿಷ್ಕ್ರಿಯರಾಗುತ್ತಾರೆ. ಪುರುಷ ಪ್ರಯತ್ನ ಮಾಡುವುದಿಲ್ಲ. ಹರಕೆ, ಕಾಣಿಕೆ ಸಲ್ಲಿಸಲು ತಮ್ಮ ಅಳಿದುಳಿದ ಸಂಪತ್ತನ್ನು ಕಳೆದು ಕೊಳ್ಳುವುದಷ್ಟೇ ಅಲ್ಲ, ಸಾಲಗಾರರೂ ಆಗುತ್ತಾರೆ. ಖಾಯಿಲೆ ಇರುವ ರೋಗಿಗೆ, ಸೂಕ್ತ ಚಿಕಿತ್ಸೆ ಕೊಡಿಸುವ ಬದಲು ಪೂಜೆ ಪುನಸ್ಕಾರಗಳಲ್ಲಿ ಹೊತ್ತು ಕಳೆಯುತ್ತಾರೆ.

ಮೈ ಮೇಲೆ ದೇವರು ಬರುವ ವ್ಯಕ್ತಿ, ಜನಾಕರ್ಷಣೆ ಮಾಡಲು ಅನೇಕ ಆಟಗಳನ್ನು ಕಟ್ಟುತ್ತಾನೆ. ಬೆಂಕಿಯ ಮೇಲೆ ನಡೆಯುವುದು, ಮುಳ್ಳಿನಹಾವುಗೆಯನ್ನು ತುಳಿಯುವುದು, ಕತ್ತಿಯಿಂದ ಹೊಡೆದುಕೊಳ್ಳುವುದು, ನಾಲ್ಕಾರು ಜನ ಒಟ್ಟಿಗೆ ಸೇರಿ ಮಾಡಲಾಗದಂತಹ ಕೆಲಸಗಳನ್ನು ಮಾಡುವುದು ಇತ್ಯಾದಿ. ಇದೆಲ್ಲವನ್ನೂ ಯಾರು ಬೇಕಾದರೂ, ಸ್ವಲ್ಪ ತರಬೇತಿ, ಸ್ವಲ್ಪ ಬುದ್ಧಿವಂತಿಕೆ ಹಾಗೂ ಸ್ವ-ಸೂಚನೆ

(auto hyponosis) ಗಳಿಂದ ಮಾಡಬಹುದಾಗಿದೆ. ಆದ್ದರಿಂದ ಜನ ಈ ಮೈ ಮೇಲೆ ದೇವರು ಬರುವ ವ್ಯಕ್ತಿಯ ಇತಿಮಿತಿಗಳನ್ನು ತಿಳಿಯಬೇಕು. ಅನಾರೋಗ್ಯ ಸಮಸ್ಯೆಗಳಿಗೆ ಆತನನ್ನು ಅವಲಂಬಿಸುವ ಪ್ರವೃತ್ತಿಯನ್ನು ಬಿಡಬೇಕು.

ದೇವರ ಕಲ್ಪನೆ ಜಗತ್ತಿನ ಎಲ್ಲ ಜನಾಂಗಗಳಲ್ಲಿ ಕಂಡುಬರುತ್ತದೆ. ತನಗಿಂತ ಮಿಗಿಲಾದ ಶಕ್ತಿಯೊಂದಿದೆ. ಅದರ ಕೃಪೆ ಇದ್ದರೆ ತನ್ನ ಕಷ್ಟ-ನಷ್ಟ ನೋವುಗಳು ಇಲ್ಲವಾಗಿ, ಸುಖ, ತೃಪ್ತಿ ಸಿಗುತ್ತದೆ ಎಂಬ ಆಶಾವಾದ ಕಷ್ಟಕ್ಕೀಡಾದ ವ್ಯಕ್ತಿಗೆ ಆಸರೆಯಾಗಿ ನಿಲ್ಲಬಹುದು. ಆತನ ಅಸಹಾಯಕತೆಯನ್ನು ಸ್ವಲ್ಪಮಟ್ಟಿಗಾದರೂ ನಿವಾರಿಸಬಲ್ಲುದು. ಈ ದಿಸೆಯಲ್ಲಿ ಸರಳ ಧಾರ್ಮಿಕ ಚಟುವಟಿಕೆಗಳಾದ ಧ್ಯಾನ, ಉಪವಾಸ, ವ್ರತಗಳು, ಪ್ರಾರ್ಥನೆಗಳು ಅನುಕೂಲಕಾರಿ. ಅವು ಮನಸ್ಸಿಗೆ ಹಿತವನ್ನುಂಟು ಮಾಡಿ, ಆತ್ಮವಿಶ್ವಾಸವನ್ನು ಹೆಚ್ಚಿಸಬಲ್ಲವು. ಆದರೆ ಅವುಗಳ ಜೊತೆ ಜೊತೆಗೆ, ವೈಜ್ಞಾನಿಕ ರೀತಿಯ ವಿಶ್ಲೇಷಣೆ ಮತ್ತು ಪ್ರಾಮಾಣಿಕ ಹಾಗೂ ವ್ಯವಸ್ಥಿತವಾಗಿ ಮಾಡುವ ಪ್ರಯತ್ನಗಳಿಂದ ಮಾತ್ರ ಸಮಸ್ಯೆ ಪರಿಹಾರವಾಗುವ ಸಂಭವ ಹೆಚ್ಚುತ್ತದೆ ಎಂದು ನಾವು ಮನಗಾಣಬೇಕು. ಹಣ ಮತ್ತು ಕಾಲವನ್ನು ವ್ಯರ್ಥವಾಗಿ ಹಾಳು ಮಾಡುವ ಆಡಂಬರದ ಧಾರ್ಮಿಕ ಆಚರಣೆಗಳು ಹಾಗೂ ಕಂದಾಚಾರಗಳು ಅಪಾಯಕಾರಿ ಆಗಬಲ್ಲವು.

ಆದ್ದರಿಂದ ಮೈ ಮೇಲೆ ದೆವ್ವ ಮತ್ತು ದೇವರು ಬರುವುದು ಅರ್ಥ ಮಾಡಿಕೊಳ್ಳ ಬಹುದಾದಂಥ ಸಾಮಾನ್ಯ ಮನೋ-ಸಾಮಾಜಿಕ ಸಂಗತಿ. ಅದರಲ್ಲಿ ಅತಿ ಮಾನವ ವಿಶೇಷವೇನೂ ಇಲ್ಲ. ದೆವ್ವ ಬರುವ ವ್ಯಕ್ತಿಗೆ ಮನೋಚಿಕಿತ್ಸೆ ಅಗತ್ಯವಾದರೆ ಮೈ ಮೇಲೆ ದೇವರು ಬರುವ ವ್ಯಕ್ತಿಗೆ ಉದಾಸೀನವೇ ಮದ್ದು.

❖ ❖ ❖ ❖

ಲೇಖಕರ ಪರಿಚಯ : ಡಾ. ಸಿ.ಆರ್. ಚಂದ್ರಶೇಖರ್‌ರವರು ರಾಮನಗರ ಜಿಲ್ಲೆಯ ಚನ್ನಪಟ್ಟಣದಲ್ಲಿ ೧೨ನೇ ಡಿಸೆಂಬರ್ ೧೯೪೮ರಲ್ಲಿ ಜನಿಸಿದರು. ತಂದೆ ಬಿ.ಎಂ. ರಾಜಣ್ಣಾಚಾರ್, ತಾಯಿ ಸರೋಜಮ್ಮ. ಬೆಂಗಳೂರಿನ ನಿಮಾನ್ಸ್‌ನಲ್ಲಿ ೧೯೭೫ರಿಂದಲೂ ಹಿರಿಯ ವಿಷಯ ತಜ್ಞರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ಮನೋರೋಗಿಗಳಿಗೆ ಚಿಕಿತ್ಸೆ, ವಿದ್ಯಾರ್ಥಿಗಳಿಗೆ ಬೋಧನೆ ಮತ್ತು ಪ್ರಶಿಕ್ಷಣ ನೀಡುವ ಕೆಲಸದೊಂದಿಗೇ ವಿಜ್ಞಾನ ಸಾಹಿತ್ಯ ಕೃಷಿ ಮಾಡುತ್ತಿರುವ ಇವರು ನಾಡಿನ ಹಲವಾರು ಕನ್ನಡ ನಿಯತಕಾಲಿಕೆಗಳಲ್ಲಿ ಸುಮಾರು ಒಂದು ಸಾವಿರಕ್ಕೂ ಮೀರಿ ವಿಜ್ಞಾನ ಲೇಖನಗಳನ್ನು ಬರೆದಿದ್ದಾರೆ.

ಕನ್ನಡ ಭಾಷೆಯಲ್ಲಿ ಮಾನಸಿಕ ಸಮಸ್ಯೆ ಮತ್ತು ಚಿಕಿತ್ಸೆಗಳಿಗೆ ಸಂಬಂಧಿಸಿದಂತೆ ಮೊಟ್ಟ ಮೊದಲು ಲೇಖನಗಳನ್ನು ಬರೆದವರು ಎಂಬ ಕೀರ್ತಿಗೆ ಭಾಜನರಾಗಿದ್ದಾರೆ. *'ಮನಸ್ಸೆ ನೀ ಪ್ರಶಾಂತವಾಗಿರು', 'ಅನ್ಯೋನ್ಯ ದಾಂಪತ್ಯ ಹೇಗೆ?' 'ಖಾಯಿಲೆಗೆ ಕಾರಣಗಳು-ನಿಮ್ಮ ನಂಬಿಕೆ ಎಷ್ಟು ಸರಿ?', 'ಆಹಾರ, ಪರಿಸರ ಮತ್ತು ಆರೋಗ್ಯ', 'ಹದಿಹರೆಯದ ಮಾನಸಿಕ ಸಮಸ್ಯೆಗಳು'* ಮುಂತಾದ ೯೭ ಪುಸ್ತಕಗಳನ್ನು ಕನ್ನಡದಲ್ಲಿ ಅಲ್ಲದೆ ೧೫ ಇಂಗ್ಲೀಷ್ ಕೃತಿಗಳನ್ನೂ ರಚಿಸಿದ್ದಾರೆ. ಇವುಗಳಲ್ಲಿ ಕೆಲವು ತೆಲುಗು, ಉರ್ದು ಮತ್ತು ಗುಜರಾತಿ ಭಾಷೆಗಳಿಗೆ ತರ್ಜುಮೆಗೊಂಡಿವೆ.

'ಕನ್ನಡ ವೈದ್ಯ ಸಾಹಿತ್ಯ ಪರಿಷತ್'ನ ಸಂಸ್ಥಾಪಕ ಸದಸ್ಯರಾಗಿ ವೈದ್ಯ ಸಾಹಿತ್ಯ ಬರವಣಿಗೆಯನ್ನು ಜನಪ್ರಿಯಗೊಳಿಸುವ ಕಾರ್ಯದಲ್ಲೂ ತಮ್ಮನ್ನು ತೊಡಗಿಸಿಕೊಂಡಿರುವ ಇವರಿಗೆ ೧೯೮೦ ಮತ್ತು ೨೦೦೩ರಲ್ಲಿ ಕನ್ನಡ ಸಾಹಿತ್ಯ ಅಕಾಡೆಮಿ ಪುರಸ್ಕಾರ, ಡಾ. ಬಿ.ಸಿ. ರಾಯ್ ಪ್ರಶಸ್ತಿ, ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಪ್ರಶಸ್ತಿ, ರಾಜ್ಯ ಸರ್ಕಾರದ ಪ್ರಶಸ್ತಿಗಳೇ ಅಲ್ಲದೆ ನಾಡಿನ ಹಲವಾರು ಸಂಘ-ಸಂಸ್ಥೆಗಳಿಂದ ೪೦ಕ್ಕೂ ಹೆಚ್ಚು ಪುರಸ್ಕಾರಗಳು ಲಭಿಸಿವೆ.

ಶಬ್ದಾರ್ಥ : ಕ್ಲೇಶ-ದುಃಖ, ನೋವು, ತೊಂದರೆ ; ಆಣತಿ-ಆದೇಶ ; ಕ್ಲೈಬ್ಯ-ಅಂಜಿಕೆ, ಹೆದರಿಕೆ ; ಸಾಂತ್ವನ-ಸಮಾಧಾನ ; ಸುಪ್ರೀತ-ತೃಪ್ತಿ ಹೊಂದು ; ನಿಷ್ಕ್ರೀಯ-ಜಡಗೊಳ್ಳು; ಸನ್ನಿ-ಮತಿಭ್ರಮೆ.

ಟಿಪ್ಪಣಿ :

೧) ಉನ್ಮಾದ ಮನಸ್ಥಿತಿ : ಒಂದು ಬಗೆಯ ಆವೇಶ ಮತ್ತು ಉನ್ಮತ್ತಾವಸ್ಥೆ. ಜಾಗೃತ ಮನಸ್ಸಿನ ಅರಿವಿಗೆ ಬಾರದಂತೆ ವರ್ತಿಸುವ ಚಟುವಟಿಕೆಗಳು.

೨) ಸ್ವ-ಸೂಚನೆ (Auto Hypnosis) : ಜಾಗೃತ ಪ್ರಜ್ಞೆಯಲ್ಲಿ ತನಗೆ ತಾನೇ ನೀಡಿದ ಸಲಹೆ ಅಥವಾ ಸೂಚನೆಗಳಿಗೆ ತನ್ನ ಮನಸ್ಸನ್ನು ಅಧೀನ ಪಡಿಸುವ ಪ್ರಕ್ರಿಯೆ. ಇದು ತಾತ್ಕಾಲಿಕ ಅವಧಿಯದ್ದಾಗಿರುತ್ತದೆ.

ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ :

೧) 'ಅವಳನ್ನು ನೋಯಿಸಿದರೆ ನಿಮ್ಮ ಗತಿ ನೆಟ್ಟಗಿರುವುದಿಲ್ಲ. ಉಷಾರ್!'

೨) 'ಹ್ಞೂ, ಏನು ಬೇಕು ಅಂತ ಹೇಳಲಿ!'

೩) 'ತನಗೇನು ಬೇಕೆಂದು ಕೇಳಬಹುದು, ಪಡೆಯಲೂಬಹುದು.'

೪) 'ಮನೋ-ವಿಶ್ಲೇಷಣೆ ಮತ್ತು ಮನೋ ಚಿಕಿತ್ಸೆಯಿಂದ ಅವರು ಗುಣಮುಖರಾಗುತ್ತಾರೆ.'

೫) 'ಅದರಲ್ಲಿ ಅತಿ ಮಾನವ ವಿಶೇಷವೇನೂ ಇಲ್ಲ.'

ಒಂದು ವಾಕ್ಯದಲ್ಲಿ ಉತ್ತರಿಸಿ :

೧) ಯಾವ ವಿಶೇಷದ ಪರಿಣಾಮವಾಗಿ ಮೈ ಮೇಲೆ ದೆವ್ವ ಬರುತ್ತದೆ?

೨) ಯಾರ ಮೈ ಮೇಲೆ ಹೆಚ್ಚಾಗಿ ದೆವ್ವ ಬರುತ್ತದೆ?

೩) ಯಾವುದು ಜನರ ದೃಷ್ಟಿಯಲ್ಲಿ ಸ್ವಾಗತಾರ್ಹ ವಿಶೇಷವಾಗಿದೆ?

೪) ಅನೇಕ ದೇವಾಲಯಗಳ ಆದಾಯ ಮತ್ತು ಜನಪ್ರಿಯತೆಯ ಮೂಲ ಯಾವುದು?

೫) ಯಾವಾಗ ಭಕ್ತರಿಗೆ ವಿಶೇಷ ಕೊಡುಗೆಗಳು ಲಭಿಸುತ್ತವೆ?

ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ :

೧) ಮನೋ-ಸಾಮಾಜಿಕ-ಸಾಂಸ್ಕೃತಿಕ ವಿಶೇಷವನ್ನು ಪರಿಚಯಿಸಲು ಲೇಖಕರು ನೀಡುವ ಮೂರು ವಿವರಣೆಗಳಾವುವು? ಹೆಸರಿಸಿ.

೨) ಪರೋಕ್ಷ ಪ್ರತಿಭಟನೆ ಮತ್ತು ಸಂಪರ್ಕ ಸಾಧನೆ ಎಂದರೇನು?

೩) ಅನುಕರಣೆ (ಸಮೂಹ ಸನ್ನಿ) ಎಂದರೇನು? ಲೇಖಕರು ನೀಡುವ ಸಾಮಾನ್ಯ ಉದಾಹರಣೆಗಳಾವುವು?

೪) ಪೂಜಾರಿಯು ನೊಂದವರಿಗೆ ಸಾಂತ್ವನವನ್ನು ಹೇಗೆ ನೀಡುತ್ತಾನೆ?

೫) ಜನರು ಪುರುಷ ಪ್ರಯತ್ನಗಳನ್ನು ಯಾವಾಗ ಕೈ ಬಿಡುತ್ತಾರೆ?

೬) ದೆವ್ವ ಮತ್ತು ದೇವರು ಬರುವ ವ್ಯಕ್ತಿಗಳಿಗೆ ಲೇಖಕರು ಸೂಚಿಸುವ ಮದ್ದುಗಳು (ಚಿಕಿತ್ಸೆ) ಯಾವುವು?

ವಿವರವಾಗಿ ಉತ್ತರಿಸಿ :

೧) ಮೈ ಮೇಲೆ ದೆವ್ವ ಬರುವುದರ ಬಗ್ಗೆ ಮನೋವೈಜ್ಞಾನಿಕ ಅಧ್ಯಯನಗಳು ಯಾವ ವಿವರಣೆಯನ್ನು ನೀಡುತ್ತವೆ?

೨) ಉನ್ಮಾದ ಮನೋಸ್ಥಿತಿ ಎಂದರೇನು? ವಿವರಿಸಿ.

೩) ಮೈ ಮೇಲೆ ದೇವರು ಬರುವ ವ್ಯಕ್ತಿ ಕಟ್ಟುವ ಆಟಗಳಾವುವು? ಅವುಗಳನ್ನು ಇತರರೂ ಮಾಡಿ ತೋರಿಸಲು ಸಾಧ್ಯವೇ? ವಿವರಿಸಿ.

೪) ಮೈ ಮೇಲೆ ದೇವರು ಬರುವುದು ನಮ್ಮ ಜನಗಳ ಸ್ವಾಗತಾರ್ಹ ವಿಶೇಷ! ಹೇಗೆ? ವಿವರಿಸಿ.

ಭಾಷಾಭ್ಯಾಸ :

೧) ಇವುಗಳನ್ನು ಬಿಡಿಸಿ ಬರೆಯಿರಿ :

ಶೈತ್ಯೋಪಚಾರ, ಕಣ್ತೆರೆ, ಕರ್ಪೂರದಾರತಿ, ರಥೋತ್ಸವ, ಮೇಲ್ಪದರ

೨) ಕೆಳಗಿನ ನುಡಿಗಟ್ಟುಗಳನ್ನು ನಿಮ್ಮ ವಾಕ್ಯದಲ್ಲಿ ಪ್ರಯೋಗಿಸಿ :

ವೇದವಾಕ್ಯ, ಶೈತ್ಯೋಪಚಾರ, ಹೊಟ್ಟೆಯಲ್ಲಿ ಹಾಕಿಕೊ.ಸ

ಚಟುವಟಿಕೆ :

೧) ನಿಮ್ಮ ಪ್ರದೇಶದಲ್ಲಿ ನೀವು ಕಂಡಿರುವ ದೆವ್ವ / ದೇವರು ಮೈ ಮೇಲೆ ಬಂದ ಪ್ರಸಂಗವೊಂದನ್ನು ಕುರಿತು ಪ್ರಬಂಧ ಬರೆಯಿರಿ.

೨) ಪಠ್ಯದಲ್ಲಿ ಬಳಕೆಯಾಗಿರುವ ಪಾರಿಭಾಷಿಕ ಪದಗಳನ್ನು ಪಟ್ಟಿ ಮಾಡಿ.

೩) 'ಪವಾಡಗಳ ರಹಸ್ಯ ಬಯಲು' ಕಾರ್ಯಕ್ರಮಗಳನ್ನು ವೀಕ್ಷಿಸಿ.

ಆಕರ ಗ್ರಂಥ : ವಿಚಾರ ಸಾಹಿತ್ಯ – ಸಂಪಾದಕರು–ಪುರುಷೋತ್ತಮ ಬಿಳಿಮಲೆ, ಪ್ರಕಾಶನ–ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು. ಮುದ್ರಣ ವರ್ಷ : ೧೯೯೨

ಹೆಚ್ಚಿನ ಓದು :

೧) ನಿಮ್ಮ ಬದುಕಿನ ಸಮಸ್ಯೆಗಳಿಗೆ ಸಮಾಧಾನ – ಲೇಖಕರು : ಸಿ.ಆರ್. ಚಂದ್ರಶೇಖರ್ ನವಕರ್ನಾಟಕ ಪ್ರಕಾಶನ, ಬೆಂಗಳೂರು.

೨) ಕಷ್ಟ ಮನಸ್ಸಿಗೆ; ಖಾಯಿಲೆ ದೇಹಕ್ಕೆ – ಲೇಖಕರು : ಸಿ.ಆರ್. ಚಂದ್ರಶೇಖರ್ ನವಕರ್ನಾಟಕ ಪ್ರಕಾಶನ, ಬೆಂಗಳೂರು.

ದಾರಿ ಯಾವುದಯ್ಯಾ ಕಾಲೇಜಿಗೆ?

– ಸ.ಜ. ನಾಗಲೋಟಿಮಠ

ಆತ್ಮ ಚರಿತ್ರೆ ಎಂಬುದು ವ್ಯಕ್ತಿ ಪರಿಚಯವನ್ನು ಮಾಡಿಕೊಳ್ಳುತ್ತಲೇ ಒಂದು ಆದರ್ಶವೂ, ಅರ್ಥಪೂರ್ಣವೂ ಆದ ಬದುಕನ್ನು ನಡೆಸುವುದು ಹೇಗೆಂಬುದನ್ನು ತಿಳಿಯಲು ಸಹಕಾರಿಯಾಗುವ ಸಾಹಿತ್ಯ ವಿಭಾಗ. ಜ್ಞಾನದಾಹ, ನೀತಿ ಮಗ್ನತೆ, ನಿಃಸ್ವಾರ್ಥ ಮನೋಭಾವ, ಪ್ರಾಮಾಣಿಕತೆ, ಕಷ್ಟಸಹಿಷ್ಣುತೆ ಇದ್ದರೆ ಮನುಷ್ಯ ತನ್ನ ಗುರಿ ತಲುಪಲು ಖಂಡಿತ ಸಾಧ್ಯ. ಈ ಸತ್ಯವನ್ನು ತಿಳಿಸುವುದೇ ಇಲ್ಲಿನ ಗುರಿ. ಸ್ವಾರಸ್ಯವೂ ಕುತೂಹಲಕರವೂ ಆದ ಸ್ವಾನುಭವದ ಸಂಗತಿಗಳು ಬದುಕಿನ ಹಲವು ಮುಖಗಳ ಮೇಲೆ ಬೆಳಕನ್ನು ಚೆಲ್ಲಿ ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಲು ನೆರವಾಗುತ್ತವೆ.

ಎಸ್.ಎಸ್.ಎಲ್.ಸಿ. ಪರೀಕ್ಷೆ ಮುಗಿಯಿತು. ಪಾಸಾಗುವದು ಖಚಿತ. ಮುಂದಿನ ಶಿಕ್ಷಣಕ್ಕೆ ತಯಾರಿ ನಡೆಯಿತು. ನಮ್ಮ ಊರಿನ ಹಿರಿಯ ವಿದ್ಯಾರ್ಥಿಗಳನ್ನು ಭೇಟಿಯಾಗಿ ಮಾರ್ಗದರ್ಶನ ಕೇಳಿದೆ. ಪುಣೆಯಲ್ಲಿರುವ ಫರ್ಗ್ಯುಸನ್ ಕಾಲೇಜಿನ ಹೆಸರು ಮೊದಲು ಬರುತ್ತಿತ್ತು. ಚೆನ್ನಾಗಿ ಓದಬೇಕೆಂದರೆ ಆ ಕಾಲೇಜು ಒಳ್ಳೆಯದು. ಅದರ ಪ್ರೊಸ್ಪೆಕ್ಟಸ್ ತರಿಸಲು ಓಲೆ ಬರೆದೆ. ಕರ್ನಾಟಕ ಸೈನ್ಸ್ ಕಾಲೇಜು ಸಹ ದೊಡ್ಡ ಹೆಸರು ಮಾಡಿದ ಸಂಸ್ಥೆ. ಅದಕ್ಕೂ ಬರೆದು ಪ್ರೊಸ್ಪೆಕ್ಟಸ್ ತರಿಸಿ ಫಾರ್ಮ್‌ಗಳನ್ನು ತುಂಬಿ ಇಟ್ಟಿದ್ದೆ. ಫಲಿತಾಂಶ ಬಂದೊಡನೆ ಅಂಕ ನೋಡಿ ತುಂಬಿ ಪೋಸ್ಟ್ ಮಾಡುವುದೆಂದು ನಿರ್ಧರಿಸಿದ್ದೆ. ಯಾಕೋ ಏನೋ ಫರ್ಗ್ಯುಸನ್ ಕಾಲೇಜಿಗೆ ಸೇರಬೇಕು, ಅಲ್ಲಿಯ ವಿದ್ಯಾರ್ಥಿಗಳ ಸಂಗಡ ಪೈಪೋಟಿ ನಡೆಸಬೇಕು ಎಂಬ ಹಂಬಲ. ಜಾಣತನದಲ್ಲಿ ಹೆಸರು ಮಾಡಿದ ಸಾರಸ್ವತ ಬ್ರಾಹ್ಮಣರೂ ಚಿತ್ಪಾವನ ಬ್ರಾಹ್ಮಣರೂ ಆ ಕಾಲೇಜಿಗೆ ಜಾಸ್ತಿ ಬರುವರು ಎಂದು ಕೇಳಿದ್ದೆ. ಅವರೊಡನೆ ಇದ್ದು ನಾನೂ ಜಾಣನಾಗಬೇಕೆಂಬ ಬಯಕೆ ಇತ್ತು.

ಅಷ್ಟರಲ್ಲಿ ಫಲಿತಾಂಶ ಹೊರಬಂತು. ನಮ್ಮ ಹೈಸ್ಕೂಲಿಗೆ ನಾನೇ ಪ್ರಥಮನಾಗಿದ್ದೆ. ನನಗೊಬ್ಬನಿಗೇ ಡಿಸ್ಟಿಂಕ್ಷನ್ ಅಂಕಗಳು ದೊರೆತಿದ್ದವು. ಇಂಗ್ಲಿಷ್ ವಿಷಯದಲ್ಲಿ ನನಗೆ ಪ್ರಥಮ, ಎಂಭತ್ತಕ್ಕಿಂತ ಜಾಸ್ತಿ ಅಂಕಗಳು. ಕೇಂದ್ರಕ್ಕೆ ನಾನೇ ಪ್ರಥಮ ಎಂದರು. ನನ್ನ ಎಲ್ಲ ಗುರುಗಳೂ ಮೆಚ್ಚಿದರು. ಸಂಸ್ಕೃತ ವಿಷಯ ಬಿಟ್ಟು ಹೈಸ್ಕೂಲಿಗೆ ಪ್ರಥಮ ರ್‍ಯಾಂಕ್ ಪಡೆದವನು ನಾನೇ ಮೊದಲು. ಅದೇ ನನ್ನ ಗುರಿಯಾಗಿತ್ತು. ಸಂಸ್ಕೃತ

ಗುರುಗಳು ಮೊದಲೇ ಸಾರಿಬಿಟ್ಟಿದ್ದರು ; ಸಂಸ್ಕೃತ ಬಿಟ್ಟವನು ಶಾಲೆಗೆ ಪ್ರಥಮ ಬರುವುದು ಅಶಕ್ಯ ಎಂದು! ಫಲಿತಾಂಶ ನೋಡಿದ ಮೇಲೆ ಅವರು ಮೌನವಾದರು. ಎರಡನೆಯ ಸ್ಥಾನವನ್ನು ವೀರಭದ್ರ ಕುಳ್ಳಿ ಪಡೆದಿದ್ದ. ಮೂರನೆಯ ರ‍್ಯಾಂಕ್ ಪಡೆದವನು ಮಗೆಪ್ಪಾ ಮಂಡಿ. ಇವನೂ ಪ್ರಥಮ ವರ್ಗದಲ್ಲಿ ಪಾಸಾಗಿದ್ದ. ಸಂಸ್ಕೃತ ಗುರುಗಳ ಶಿಷ್ಯರು ನಾಲ್ಕನೆಯ ಸ್ಥಾನ ಪಡೆದಂತೆ ನೆನಪಿದೆ. ಊರಲ್ಲಿ ಒಂದು ವಾರದವರೆಗೆ ಇದೇ ಸುದ್ದಿ. ನನ್ನೊಡನೆ ಇದ್ದ ನನ್ನ ಗೆಳೆಯ ಗುಂಡಿ ಜಯವಂತ ಹಾಗೂ ಸಿದ್ದಣ್ಣ ಅವರೂ ಪಾಸಾಗಿದ್ದರು. ನಮ್ಮ ವಿರೋಧಿ ಗುಂಪಿನಲ್ಲಿ ನಪಾಸಾದವರು ಜಾಸ್ತಿ ಇದ್ದರು. ಆ ಕಡೆಗೆ ಎಲ್ಲವೂ ಮಬ್ಬು ಮುಸುಕಿತ್ತು. ಆ ಕಾಲದಲ್ಲಿ ಎಸ್.ಎಸ್.ಎಲ್.ಸಿ. ಫಲಿತಾಂಶ ಇಡೀ ಊರನ್ನೇ ಎಬ್ಬಿಸುತ್ತಿತ್ತು. ನಾವು ಯಾವ ಕಾಲೇಜಿಗೆ ಹೋಗಬೇಕು ಎಂಬುದನ್ನು ಅವರೂ ಚರ್ಚಿಸಿ ನಾವು ಎಲ್ಲಿಗೆ ಹೋಗಬೇಕೆಂದು ಸೂಚಿಸುತ್ತಿದ್ದರು.

ನನ್ನ ತಂದೆಗೋ ಸಂತೋಷ; ನಾನು ರ‍್ಯಾಂಕ್ ಪಡೆದದ್ದಕ್ಕಲ್ಲ. ಜಾಸ್ತಿ ಅಂಕ ಗಳಿಸಿದ್ದಕ್ಕಲ್ಲ. ಅವರು ಸಂತೋಷ ಪಟ್ಟದ್ದೆಂದರೆ ನನ್ನ ಓದು ಮುಗಿಯಿತು. ಮರುದಿನದಿಂದ ನಾನು ಪ್ರಿಂಟಿಂಗ್ ಪ್ರೆಸ್ಸಿನ ಕೆಲಸಕ್ಕೆ ಸೇರುವೆನೆಂಬ ವಿಷಯ. ನಾನು ಪ್ರೆಸ್ಸಿನ ಕೆಲಸ ನಿರ್ವಹಿಸಿದರೆ ತಂದೆ ಕೆಲಸ ಕಡಿಮೆಯಾಗುವುದು. ಆಗ ಅವರು ಪ್ರೆಸ್ಸನ್ನೂ ಉಳಿದ ವ್ಯವಹಾರವನ್ನೂ ವೃದ್ಧಿ ಮಾಡುವ ಲವಲವಿಕೆ ಇತ್ತು. ಆ ಕಾರಣ ಮರುದಿನದಿಂದ ಪ್ರೆಸ್ಸಿಗೆ ಕೆಲಸಕ್ಕೆ ಬರಲು ಹೇಳಿದರು. ಪ್ರೆಸ್ಸಿನಲ್ಲಿ ಆಗ ಸಾಂಗ್ಲಿಯಿಂದ ಓರ್ವ ಕೆಲಸಗಾರ ಬಂದಿದ್ದ. ಅವನು ಹಾಳೆಯ ಮೇಲೆ ಗೆರೆ ಮೂಡಿಸುವ ಯಂತ್ರವನ್ನು ತಂದು ಯಾರಿಗಾದರೂ ಅದನ್ನು ನಡೆಸಲು ತರಬೇತಿ ಕೊಡಲು ಬಂದಿದ್ದ. ಆದರೆ ಪ್ರೆಸ್ಸಿನ ಯಾವ ನೌಕರನಿಗೂ ಅವನ ಮೇಲೆ ವಿಶ್ವಾಸ ಮೂಡಿರಲಿಲ್ಲ. ಅಂಥ ಪರಿಸ್ಥಿತಿಯಲ್ಲಿ ನಾನು ಸೇರಿದೆ. ನೇರವಾಗಿ ನನ್ನನ್ನು ರೂಲಿಂಗ್ ಯಂತ್ರವನ್ನು ಇಟ್ಟಿದ್ದ ರೂಮಿಗೆ ಕಳುಹಿಸಿದರು. ನಾನು ಅಲ್ಲಿ ಆ ಮರಾಠಿ ಕೆಲಸಗಾರನ ಕೈ ಕೆಳಗೆ ಕೆಲಸ ಪ್ರಾರಂಭಿಸಿದೆ. ಒಂದು ವಾರದಲ್ಲಿ ಅವನಿಂದ ಎಲ್ಲವನ್ನೂ ಕಲಿತುಬಿಟ್ಟೆ. ಅಷ್ಟರಲ್ಲೇ ಅವನ ಮನೆಯಿಂದ ಕರೆ ಬಂದಿತು. ಒಂದೆರಡು ದಿನದ ಮಟ್ಟಿಗೆ ಊರಿಗೆ ಹೋಗಿ ಬರುವೆನೆಂದು ಹೇಳಿ ಹೋದ.

ಪ್ರೆಸ್ಸಿನಲ್ಲಿ ಬ್ಯಾಂಕಿನ ಪುಸ್ತಕಗಳು ತ್ವರಿತವಾಗಿ ಬೇಕಾಗಿದ್ದವು. ತಂದೆಯವರು ಪರಿಸ್ಥಿತಿಯನ್ನು ವಿವರಿಸಿದರು. 'ಪ್ರಯತ್ನಿಸುವೆ' ಎಂದು ಹೇಳಿದೆ. ಮರುದಿನ ಮುಂಜಾನೆ ಕೆಲಸ ಪ್ರಾರಂಭಿಸಿದೆ. ಸಂಜೆಯ ಹೊತ್ತಿಗೆ ಬ್ಯಾಂಕಿನ ಕೆಲಸವನ್ನೆಲ್ಲ ಮುಗಿಸಿ, ತಂದೆಯವರನ್ನು ಕರೆದು ತಂದು ತೋರಿಸಿದೆ. ನನ್ನ ಕೆಲಸವನ್ನು ನೋಡಿ ಅವರು

ಅಚ್ಚರಿಪಟ್ಟರು. ಎಲ್ಲ ಕೆಲಸಗಾರರನ್ನು ಕರೆದು, ಕೆಲಸ ಎಷ್ಟು ಉತ್ತಮವಾಗಿದೆ ಎಂದು ಪ್ರಶಂಸಿಸಿದರು. ಆಗಲೇ ಹೇಳಿಬಿಟ್ಟರು, ನಾನೇ ಆ ವಿಭಾಗದ ಮುಖ್ಯಸ್ಥನೆಂದು. ಸಾಂಗ್ಲಿಯ ಕೆಲಸಗಾರ ಮರಳಿ ಬರಲೇ ಇಲ್ಲ. ನಾನು ಉಳಿದ ಕೆಲಸಗಾರರೊಡನೆ ದುಡಿಯಹತ್ತಿದೆ.

ಇಂಗ್ಲಿಷ್ ಪತ್ರ ವ್ಯವಹಾರ ಪ್ರಾರಂಭಿಸಿದೆ. ಬ್ಯಾಂಕಿನ ವ್ಯವಹಾರವನ್ನು ತಿಳಿಯಲು ಬ್ಯಾಂಕಿನ ಮ್ಯಾನೇಜರ್ ಅವರಿಗೆ ವಿನಂತಿಸಿದರು. ಅವರು ನನ್ನನ್ನು ಒಂದೆರಡು ದಿನ ಬ್ಯಾಂಕಿನಲ್ಲಿಟ್ಟುಕೊಂಡು ಎಲ್ಲ ವಿವರಿಸಿದರು. ತಂದೆಯವರು ತಮ್ಮ ಎಲ್ಲ ಸ್ನೇಹಿತರಿಗೆ ನನ್ನ ಬಗ್ಗೆ ಹೇಳಿಯೇ ಹೇಳಿದರು. ಈ ಸುದ್ದಿ ಊರಲ್ಲಿ ಹರಡಿತು. ಇದನ್ನು ಕೇಳಿ ಊರಿನ ಹಿರಿಯರು ನನ್ನ ತಂದೆಯನ್ನು ನೋಡಲು ಬಂದರು. ಎಲ್ಲವನ್ನೂ ತಿಳಿದುಕೊಂಡು ಬಯ್ಯಲು ಪ್ರಾರಂಭಿಸಿದರು. "ನಿನ್ನ ಮಗನು ಮುಂದೆ ಓದಲು ಹೋಗಬೇಕು. ಇಷ್ಟು ಜಾಣನಾದ ಹುಡುಗನನ್ನು ನೀನು ಸಾಮಾನ್ಯ ಕೆಲಸಗಾರನನ್ನಾಗಿ ಮಾಡುತ್ತಿರುವೆ. ತಲೆ ಸರಿಯಿದೆಯೋ, ಇಲ್ಲವೋ" ಎಂದು ಸಿಟ್ಟಿಗೆದ್ದರು. ಅವರ ಹಿಂದೆಯೇ ನನಗೆ ಕಲಿಸಿದ ಗುರುಗಳು ಬಂದರು, "ಸ್ವಾಮಿಗಳೇ! ಅವನನ್ನು ಕಲಿಸುವದು ನಿಮಗೆ ಭಾರವೆನಿಸಿದರೆ ಫ್ರೀ ಬೋರ್ಡಿಂಗದಲ್ಲಿ ಇಟ್ಟು ನಾವೇ ಕಲಿಸುವ ಜವಾಬ್ದಾರಿ ಹೊರುತ್ತೇವೆ" ಎಂದರು. ಈಗ ನಮ್ಮ ಮನೆಯಲ್ಲಿ ತಂದೆ-ತಾಯಂದಿರು ಚರ್ಚಿಸತೊಡಗಿದರು. ಅವರಿಗೂ ಹೆಮ್ಮೆ ಇತ್ತು, ಕಲಿಸುವ ಆಸೆ ಇತ್ತು. ಇಬ್ಬರಿಗೂ ಶಿಕ್ಷಣ ಅಷ್ಟಕ್ಕಷ್ಟೆ ಇತ್ತು. ನನ್ನ ತಾಯಿ ಶಾಲೆಗೆ ಹೋದವಳಲ್ಲ. ಆದರೆ ಒಂದೊಂದು ಶಬ್ದ ಓದುತ್ತಿದ್ದಳು. ತಂದೆ ೫ನೇ ಇಯತ್ತೆ ಪಾಸು ಮಾಡಿದ್ದರು. ಆಗೀಗ ಸುದ್ದಿಪತ್ರಿಕೆ, ವಾರಪತ್ರಿಕೆ ನೋಡುತ್ತಿದ್ದರು.

ಜನರು ಹೇಳುವ ಮಾತುಗಳನ್ನು ಕೇಳಿ ನನ್ನನ್ನು ಕಲಿಸುವ ನಿಶ್ಚಯ ಮಾಡಿದರು. ಪುಣೆಗೆ ಹೋಗುವ ಮಾತನ್ನು ಒಪ್ಪಲಿಲ್ಲ. ಅಲ್ಲಿಯ ಬ್ರಾಹ್ಮಣ ಹುಡುಗಿಯರು ಮರುಳು ಮಾಡಿ ನನ್ನನ್ನು ತಮ್ಮಲ್ಲಿಯೇ ಇಟ್ಟುಕೊಳ್ಳುವರು ಎಂದು ಯಾರೋ ಹೇಳಿದರು. ಹೀಗಾಗಿ ಫರ್ಗ್ಯುಸನ್ ಕಾಲೇಜಿನ ಕನಸು ಮುರಿದುಬಿತ್ತು. ಕರ್ನಾಟಕದಲ್ಲಿಯೇ ಕಲಿಯುವದೆಂದು ಹೇಳಿಸಿದರು. ಆಗ ಕರ್ನಾಟಕ ಕಾಲೇಜು, ಧಾರವಾಡ ಜಾಣರ ಕಾಲೇಜೆಂದು ಹೆಸರಾಗಿತ್ತು. ನನ್ನ ಅಂಕಗಳನ್ನು ನೋಡಿ ಅಲ್ಲಿ ನನಗೆ ಸ್ಥಾನ ಸಿಗುವುದೆಂದು ಎಲ್ಲರೂ ಹೇಳಿದರು. ಅಷ್ಟರಲ್ಲಿ ನಮ್ಮ ತಂದೆಯವರ ಸ್ನೇಹಿತರಾದ ಚನ್ನಮಲ್ಲಪ್ಪ ಅಬಕಾರ ಎಂಬುವರು ಬಂದರು. ಅವರು ಪ್ರತಿಷ್ಠಿತ ಕೆ.ಎಲ್.ಇ. ಸಂಸ್ಥೆಯ ಸದಸ್ಯರಾಗಿದ್ದರು. ಯಾವಾಗಲೂ ಪ್ರಸಿದ್ಧ ವ್ಯಕ್ತಿಗಳ ಸಹವಾಸದಲ್ಲಿ ಇರುತ್ತಿದ್ದರು.

ಅವರು ಹೇಳಿದರು, "ಜಂಬಯ್ಯ ಸ್ವಾಮಿ ! ನಿನ್ನ ಮಗನ ಜವಾಬ್ದಾರಿ ನನಗೆ ಬಿಡು. ನಾನು ಅವನನ್ನು ಒಳ್ಳೆಯ ಕಾಲೇಜಿಗೆ ಸೇರಿಸುವೆ." ನಿಜವಾಗಿ ನನ್ನ ತಂದೆಗೆ ಇದೇ ಬೇಕಾಗಿತ್ತು. ಅವರು ಕಾಲೇಜು ಮುಂತಾದವುಗಳ ಸಂಪರ್ಕದಲ್ಲಿ ಬಂದವರೇ ಅಲ್ಲ. ಆ ವರ್ಷ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ರ್‍ಯಾಂಕ್ ಪಡೆದ ಕಾಲೇಜೆಂದರೆ ಹುಬ್ಬಳ್ಳಿಯಲ್ಲಿ ಹೊಸದಾಗಿ ಪ್ರಾರಂಭಿಸಿದ ಪಿ.ಸಿ. ಜಾಬಿನ್ ಸೈನ್ಸ್ ಕಾಲೇಜು. ಅದೇ ಕಾಲೇಜಿಗೆ ನನ್ನನ್ನು ಸೇರಿಸುವದೆಂದು ತೀರ್ಮಾನಿಸಿದರು. ಬೇಕಾದ ಹಣವನ್ನು ನನ್ನ ತಂದೆ ಅಬಕಾರ ಅವರಿಗೆ ಕೊಟ್ಟು ಕಾಲೇಜಿಗೆ ಸೇರಿಸಲು ಹೇಳಿ ನಿಶ್ಚಿಂತರಾಗಿ ಕುಳಿತರು.

ಒಂದು ದಿನ ಅಬಕಾರ ಅವರು ನನ್ನನ್ನು ಹಾಗೂ ಮಂಡಿ ಮಗೆಪ್ಪ ಅವರನ್ನು ಕರೆದುಕೊಂಡು ಬಸ್ಸಿನ ಮೂಲಕ ಕುಡಚಿಗೆ ತಲುಪಿದರು. ಕುಡಚಿಯಿಂದ ರೈಲಿನ ಮೂಲಕ ಧಾರವಾಡಕ್ಕೆ ಹೋದೆವು. ಧಾರವಾಡದಲ್ಲಿ ಅವರ ಮಗ ಕಾಲೇಜು ಕಲಿಯುತ್ತಿದ್ದ. ಅವರ ಮಗಳ ಮನೆಯಿತ್ತು. ಮನೆಯಲ್ಲಿ ಊಟ ಮಾಡಿಸಿ ಮಲಗಿಸಿದರು. ಮರುದಿನ ಸ್ನಾನ ಊಟ ತೀರಿಸಿಕೊಂಡು ಹುಬ್ಬಳ್ಳಿಗೆ ಹೋಗಿ ಜಾಬಿನ್ ಕಾಲೇಜು ತಲುಪಿದೆವು. ಅಲ್ಲಿಯ ಪ್ರಿನ್ಸಿಪಾಲರು ಅಬಕಾರರನ್ನು ಗುರುತಿಸಿದರು. ನಮ್ಮ ಅಂಕಪಟ್ಟಿಗಳನ್ನು ನೋಡಿ ಪ್ರಿನ್ಸಿಪಾಲ್ ಬೊಮ್ಮಣ್ಣನವರು ಸಂತೋಷಪಟ್ಟು ನಮ್ಮಿಬ್ಬರನ್ನೂ ಕಾಲೇಜಿಗೆ ಸೇರಿಸಿಕೊಂಡರು. "ಕಾಲೇಜಿನ ಕ್ಲಾಸುಗಳು ಪ್ರಾರಂಭವಾಗಲು ಇನ್ನೂ ೨೦ ದಿನಗಳಿವೆ. ನೀವು ಊರಿಗೆ ಹೋಗಿ ಬನ್ನಿ"ರೆಂದರು. ಆಗಲೇ ನಮ್ಮಿಬ್ಬರನ್ನು ವಿದ್ಯಾರ್ಥಿ ನಿಲಯಕ್ಕೆ ಸೇರಿಸಿ ಹಣ ತುಂಬಿದರು.

ನಮಗೆ ಬೇಕಾದ ವಿಷಯಗಳನ್ನೆಲ್ಲ ತಿಳಿಸಿ ಹೇಳಿದರು. ಸ್ಥಳಗಳನ್ನು ತೋರಿಸಿದರು. ಆಗ ನಮಗೆ ಖಾನಾವಳಿಯಲ್ಲಿ ಊಟ ಮಾಡುವುದು ದೊಡ್ಡ ಸಾಹಸವೆನಿಸಿತು. ಅಲ್ಲಿಯ ಊಟವನ್ನು ಮೊದಲ ಸಲ ಉಂಡಾಗ ಆಶ್ಚರ್ಯವೆನಿಸಿತು. ಮನೆಯಲ್ಲಿ ಇಂಥ ಶಿಸ್ತು ಇರುತ್ತಿರಲಿಲ್ಲ. ಚಪಾತಿ, ಪಲ್ಯ, ಚಟ್ನಿ, ಉಪ್ಪಿನಕಾಯಿ, ಅನ್ನ, ಸಾರು, ಹಪ್ಪಳ, ನಿಂಬೆಹಣ್ಣು ಇತ್ಯಾದಿಗಳನ್ನು ನೋಡಿ ಸಂತೋಷಪಟ್ಟೆವು. ಮನೆಯಲ್ಲಿ ನಾವು ರೊಟ್ಟಿ, ಚಟ್ನಿ, ಪಲ್ಯ ಎಂದರೆ ಊಟ ಮುಗಿದಂತೆ. ಖಾನಾವಳಿಯ ಊಟ ಮಾಡಿದರೆ ನಾವು ಪೈಲವಾನ ಆಗುವವೆಂದು ಮಾತಾಡಿದೆವು. ಊರಿಗೆ ಮರಳಿದ ಮೇಲೆ ಎಲ್ಲರಿಗೂ ಹುಬ್ಬಳ್ಳಿಯ ವೈಭವ ಹಾಡಿದ್ದೇ ಹಾಡಿದ್ದು. ಹತ್ತಾರು ಜನ ನಮಗೆ ಬುದ್ಧಿ ಹೇಳಿದ್ದೇ ಹೇಳಿದ್ದು. ಈ ಹೊತ್ತಿಗಾಗಲೇ ಜಯವಂತ ಗುಂಡಿ ಹಾಗೂ ವೀರಭದ್ರ ಕುಳ್ಳಿ ತಮ್ಮ ಹೆಸರನ್ನು ಜಾಬಿನ್ ಕಾಲೇಜಿಗೆ ದಾಖಲಿಸಿ ಬಂದರು. ಅವರು ಹಾಸ್ಟೆಲ್ ತುಟ್ಟಿಯೆಂದು ಹೊರಗೆ ಕೊಠಡಿ ಹಿಡಿಯಲು ನಿಶ್ಚಯಿಸಿದರು. ನಮ್ಮ ಊರಿನ ಕೆಲ

ಹಿರಿಯ ವಿದ್ಯಾರ್ಥಿಗಳು ಇಂಜಿನೀಯರಿಂಗ್ ಕಾಲೇಜಿನಲ್ಲಿ ಓದುತ್ತಿದ್ದರು. ಅವರು ಗುಂಡಿ ಹಾಗೂ ಕುಳ್ಳಿಯವರಿಗೆ ಮಾರ್ಗದರ್ಶಿಗಳಾದರು.

ಹುಬ್ಬಳ್ಳಿಗೆ ಹೊರಡುವ ದಿನ ಬಂದೇ ಬಿಟ್ಟಿತು. ಒಂದು ಗಾದಿ, ಒಂದು ಟ್ರಂಕು ತೆಗೆದುಕೊಂಡು ಬಸ್ಸಿಗೆ ಹತ್ತಿದೆ. ಕುಡಚಿಯಿಂದ ಹುಬ್ಬಳ್ಳಿಗೆ ರೈಲು ತಿಕೇಟು ತೆಗೆದಿದ್ದರೂ ನೇರವಾಗಿ ಹೋಗಲು ಧೈರ್ಯ ಸಾಲದು. ಧಾರವಾಡ ಸ್ಟೇಷನ್‌ನಲ್ಲಿ ಇಳದೆ. ಒಂದು ಟಾಂಗಾ ತೆಗೆದುಕೊಂಡು ಅಬಕಾರ ಅವರ ಚಿರಂಜೀವಿ ಗುರು ಅವರ ರೂಮಿಗೆ ಹೋದೆ, ಇದ್ದರು, ಬರವಮಾಡಿಕೊಂಡರು. ರಾತ್ರಿ ಊಟವನ್ನು ಅವರ ಖಾನಾವಳಯಲ್ಲಿಯೇ ತೀರಿಸಿದೆ. ಮರು ದಿನ ಅವರು ಧೈರ್ಯ ಹೇಳದರು. ಕಾಲೇಜಿನಲ್ಲಿ ನಡೆಯುವ ಸಂಗತಿಗಳ ಬಗ್ಗೆ ವಿವರಿಸಿದರು. ಅವರು ಧಾರವಾಡದಲ್ಲಿ ಇದ್ದು ಒಂದೆರಡು ವರ್ಷಗಳಾಗಿದ್ದವು. ದುರ್ದೈವದಿಂದ ಅವರು ತಮ್ಮ ಪರೀಕ್ಷೆಗಳನ್ನು ಪಾಸಾಗಿದ್ದಿಲ್ಲ. ನೋಡಲು ಆಕರ್ಷಕವಾಗಿದ್ದರು. ಅವರು ಸಿನೆಮಾ ನಟನಾಗಬೇಕು ಎಂದು ಆಶಿಸಿದ್ದರು. ಇದೇ ಕೆಲಸಕ್ಕೆಂದು ಮುಂಬೈಗೆ ಹೋಗಿ ಬಂದಿದ್ದರು. ಯಾವುದೇ ನಟನ ಹೆಸರು ಬಂದರೆ ಆ ವ್ಯಕ್ತಿಯ ವಿವರ ಕೊಡುತ್ತಿದ್ದರು. ಕಾಲೇಜಿನಲ್ಲಿ ಕಲಿಯುವ ಪಾಠಗಳ ಬಗ್ಗೆ ವಿಪರೀತ ಅನಾಸಕ್ತಿ. ಧಾರವಾಡದಲ್ಲಿ ಓರ್ವ ಯುವತಿಯನ್ನು ಪ್ರೀತಿಸಿದ್ದರು. ಅವಳನ್ನು ನನಗೂ ತೋರಿಸಿ ಹೇಗೆ ಕಾಣಿಸುತ್ತಾಳೆಂದು ಕೇಳದರು. ನನಗೆ ಇದೆಲ್ಲ ಹೊಸದು. ಆಕೆ ಮಾಲಾಸಿನ್ಹಾಳಂತೆ ಕಾಣುತ್ತಾಳೆ ಎಂದು ವರ್ಣಿಸಿದರು. ನಿತ್ಯ ಆಕೆ ಒಂದು ಕಡೆ ವಾಯುವಿಹಾರಕ್ಕೆ ಬರುತ್ತಾಳೆ. ಆ ಕಾರಣ ಇವರು ಶೃಂಗರಿಸಿಕೊಂಡು ಅಲ್ಲಿ ಹೋಗಿ ನಿಲ್ಲುತ್ತಿದ್ದರಂತೆ. ಪ್ರೀತಿ ಅದೇ ರೀತಿಯಿಂದ ಬೆಳೆಯಬೇಕೆಂದು ಉಪದೇಶಿಸಿದರು.

ಇಷ್ಟೆಲ್ಲ ಕಲಿತು ಮರುದಿನ ಹುಬ್ಬಳ್ಳಿಗೆ ಹೊರಟೆ. ಬಸ್ಸಿನ ಮೇಲೆ ನನ್ನ ಟ್ರಂಕು ಹಾಗೂ ಹಾಸಿಗೆ ಗಂಟು ಏರಿಸಿದೆ. ಬಸ್ಸು ಜಾಬಿನ್ ಕಾಲೇಜಿಗೆ ನಿಲ್ಲಿಸಿ ನನ್ನನ್ನು ಇಳಸಬೇಕೆಂದು ಗುರು ಅವರು ಕಂಡಕ್ಟರನಿಗೆ ಹೇಳದರು. ಅವರ ಧೈರ್ಯವನ್ನು ನಾನು ಮೆಚ್ಚಿದೆ. ಬಸ್ಸು ಹೊರಟಿತು. ಜಾಬಿನ್ ಕಾಲೇಜಿನ ಮುಂದೆ ನಿಂತಿತು. ಕೆಳಗೆ ಇಳದು ಹಿಂದಿನಿಂದ ಬಸ್ಸಿನ ಮೇಲೆ ಏರಿದೆ. ಹಾಸಿಗೆಯನ್ನು ಕೆಳಗೆ ಒಗೆದೆ. ಆದರೆ ಟ್ರಂಕನ್ನು ಹಾಗೆ ಎಸೆಯಲು ಬರುವುದಿಲ್ಲ. ಕಂಡಕ್ಟರ್ ಸಹಾಯ ಮಾಡಿದರು. ಆಗ ನಾನು ಕಾಲಲ್ಲಿ ಚಪ್ಪಲು ಧರಿಸುತ್ತಿದ್ದೆ. ತಲೆಯ ಮೇಲೆ ಯಾವಾಗಲೂ ಗಾಂಧಿ ಟೊಪ್ಪಿಗೆ ಇರುತ್ತಿತ್ತು. ನನ್ನ ತಂದೆ ಒತ್ತಿ ಒತ್ತಿ ಹೇಳದ್ದರು, ತಲೆಯ ಮೇಲಿನ ಟೊಪ್ಪಿಗೆಯನ್ನು ತೆಗೆದರೆ ನಾಚಿಕೆ ಬಿಟ್ಟಂತೆ, ನಾಚಿಕೆ ಬಿಟ್ಟರೆ ಗುರು-ಹಿರಿಯರಿಗೆ ಅವಮಾನ, ಅಂಥ

ವಿದ್ಯಾರ್ಥಿ ಜೀವನದಲ್ಲಿ ಮುಂದು ಬರುವುದಿಲ್ಲ ಎಂದು ಅವರ ನಂಬುಗೆ. ಕಾರಣ ನಾನು ಯಾವಾಗಲೂ ತಲೆಯ ಮೇಲೆ ಟೊಪ್ಪಿಗೆ ಧರಿಸುತ್ತಿದ್ದೆ. ನನ್ನ ಸಾಮಾನ್ಯ ಉಡುಪಿನಲ್ಲಿ ನನ್ನ ಟ್ರಂಕು ಹಾಗೂ ಹಾಸಿಗೆಯನ್ನು ಹೆಗಲ ಮೇಲೆ ಹೊತ್ತುಕೊಂಡು ಕಾಲೇಜಿನ ಕಡೆಗೆ ನಡೆದೆ.

ಕಾಲೇಜಿನ ಮುಂದೆ ನೂರಾರು ವಿದ್ಯಾರ್ಥಿಗಳು. ಎಲ್ಲರೂ ಒಳ್ಳೆಯ ಬಟ್ಟೆ ತೊಟ್ಟಿದ್ದರು. ಕೊರಳಿಗೆ ಟೈ ಕಟ್ಟಿದ್ದರು. ಕಾಲಲ್ಲಿ ಬೂಟು, ಯಾರ ತಲೆಯ ಮೇಲೂ ಟೊಪ್ಪಿಗೆ ಇರಲಿಲ್ಲ. ನಾನು ಗಲಿಬಿಲಿಗೊಂಡೆ. ನನ್ನ ಟ್ರಂಕು ಹಾಗೂ ಹಾಸಿಗೆ ಗಂಟು ಎಲ್ಲಿಯವರೆಗೆ ಒಯ್ಯುವುದು? ಅವನ್ನು ಹೊರಗೆ ಇಟ್ಟು ಪ್ರಿನ್ಸಿಪಾಲರನ್ನು ಕಾಣಲು ಹೋದರೆ ಯಾರಾದರೂ ಅದನ್ನು ಎತ್ತಿಕೊಂಡು ಹೋದರೆ ಹೇಗೆ? ಅವು ಕಳೆದು ಹೋಗಬಾರದು. ಹಾಸಿಗೆಯನ್ನು ಹೊರಗಿಟ್ಟು, ಟ್ರಂಕು ಎತ್ತಿಕೊಂಡೇ ಪ್ರಿನ್ಸಿಪಾಲರ ಕೋಣೆ ಸೇರಿದೆ. ಅಲ್ಲಿದ್ದವರೆಲ್ಲ ನನ್ನನ್ನು ನೋಡಿ ಗಾಬರಿಯಾದರು. ಏನು? ಏನು? ಎಂದರು. ಇಂಗ್ಲಿಷಿನಲ್ಲಿ ಮಾತಾಡಿದರು. ಎಲ್ಲವೂ ಅರ್ಥವಾಯಿತು. ಆದರೆ ಉತ್ತರಿಸುವ ಧೈರ್ಯ ಬರಲಿಲ್ಲ. ಕನ್ನಡದಲ್ಲಿ ವಿನಂತಿಸಿದೆ, "ನನ್ನ ಹೆಸರು ನಾಗಲೋಟಿಮಠ, ನಾನು ಬನಹಟ್ಟಿ ಊರಿಂದ ಬಂದಿರುವೆ. ಅಬಕಾರ ಅನ್ನುವವರು ೨೦ ದಿನಗಳ ಹಿಂದೆ ಬಂದು ನನ್ನ ಹೆಸರು ದಾಖಲಿಸಿ ಹೋಗಿರುವರು. ನನಗೆ ಹಾಸ್ಟೆಲ್‌ನಲ್ಲಿರಲು ಫೀ ತುಂಬಿರುವರು."

ಪ್ರಿನ್ಸಿಪಾಲ ಬೊಮ್ಮಣ್ಣನವರು ತತ್‌ಕ್ಷಣ ನೆನಪಿಸಿಕೊಂಡರು. ಒಬ್ಬ ವ್ಯಕ್ತಿಯನ್ನು ಕರೆದು ನನ್ನನ್ನು ಹಾಸ್ಟೇಲಿಗೆ ಕರೆದುಕೊಂಡು ಹೋಗಲು ತಿಳಿಸಿದರು. ಬಂದ ವ್ಯಕ್ತಿ ಪ್ಯಾಂಟು, ಬುಶ್‌ಶರ್ಟ ಧರಿಸಿದ್ದ. ಕೂದಲನ್ನು ಚೆನ್ನಾಗಿ ಹಿಕ್ಕಿದ್ದ. ಅವನು ನನ್ನ ಟ್ರಂಕು ತೆಗೆದುಕೊಳ್ಳಲು ಬಂದ. ನನಗೋ ಗಾಬರಿ. ನನಗಿಂತ ಒಳ್ಳೆಯ ಬಟ್ಟೆ ಧರಿಸಿದ ವ್ಯಕ್ತಿ ನನ್ನ ಟ್ರಂಕು ಹೊರುತ್ತಾನೆಂದರೆ ಎಂಥ ಅನರ್ಥ. ನಾನು ಅವನಿಗೆ ಹೇಳಿದೆ, "ಸಾಹೇಬರೆ! ನೀವು ತ್ರಾಸು ಮಾಡಿಕೊಳ್ಳಬೇಡಿರಿ. ನಾನೇ ಎರಡನ್ನೂ ಹೊರುತ್ತೇನೆ. ನೀವು ನನ್ನ ರೂಮು ತೋರಿಸಿ ಉಪಕಾರ ಮಾಡಿರಿ".

ಆ ವ್ಯಕ್ತಿ ನನ್ನನ್ನು ನೋಡಿ ಹೇಳಿದ. "ಏನ್ರೀ! ಪ್ರಿನ್ಸಿಪಾಲರು ಹೀಗೆ ಎಂದೂ ಹೇಳಿದವರಲ್ಲ. ನಾನು ಕಾಳಜಿ ಮಾಡದಿದ್ದರೆ ನಮ್ಮ ನೌಕರಿ ಉಳೀತದ, ಏನ್ರಪ್ಪಾ?" ನನ್ನೊಳಗೆ ಮತ್ತೂ ಗೊಂದಲ. ಹಾಗಾದರೆ ಈ ವ್ಯಕ್ತಿ ಯಾರು? ನೋಡಲಿಕ್ಕೆ ದೊಡ್ಡ ಹುದ್ದೆಯವನಂತೆ ಕಾಣುವನು. ಯಾರು ಈತ? ನಿನ್ನ ಹುದ್ದೆ ಏನು? ಎಂದು ಕೇಳಲು

ಬಾರದು. ಅವನು ಹಾಸ್ಟೇಲಿಗೆ ಬಂದು ಮೊದಲನೆಯ ರೂಮಿನಲ್ಲಿ ನನ್ನ ಸಾಮಾನು ಇಟ್ಟು ಅಲ್ಲಿಯ ಜವಾನನಿಗೆ ಹೇಳಿ ಹೋದ. ಜವಾನನನ್ನು ಅನಂತರ ಕೇಳಿದೆ, "ನನ್ನೊಡನೆ ಬಂದವನು ಯಾರು?" ಎಂದು. "ಅವನು ಫಿಸಿಕ್ಸ್ ವಿಭಾಗದ ಪ್ಯೂನ್" ಎಂದು ಹೇಳಿದ. ನೋಡಲು ನಾನೇ ಪ್ಯೂನ್‌ನಂತೆ ಕಾಣುತ್ತಿದ್ದೆ. ಅವನು ಸಾಹೇಬರಂತೆ ಕಾಣುತ್ತಿದ್ದ!

ಕಾಲೇಜು ಪ್ರಾರಂಭವಾಯಿತು. ನಾನು ಹೊಸ ಪರಿಸರಕ್ಕೆ ಹೊಂದಿಕೊಂಡೆ. ಮೆಸ್‌ನಲ್ಲಿ ಒಳ್ಳೆಯ ಊಟ, ಸ್ನಾನ ಮಾಡಲು ಸಾಕಷ್ಟು ನೀರು, ಒಳ್ಳೆಯ ಗಾಳಿ ಬೆಳಕು ಆಡುವ ಕೊಠಡಿಗಳು, ಶಾಂತ ವಾತಾವರಣ, ನನಗಂತೂ ಸಂತೋಷ ವಾಯಿತು. ಇಂಥಲ್ಲಿ ಬೇಕಾದಷ್ಟು ಓದಬಹುದು ಎನಿಸಿತು. ಓದಿ ಒಳ್ಳೆಯ ಅಂಕಗಳನ್ನು ಪಡೆಯಬೇಕು ಎಂದು ನಿರ್ಧರಿಸಿದೆ. ದಿನ ಕಳೆದಂತೆ ಎಲ್ಲ ರೂಮುಗಳಿಗೂ ವಿದ್ಯಾರ್ಥಿಗಳು ಸೇರಿಕೊಂಡರು. ನನ್ನ ರೂಮ್‌ಮೇಟ್ ಯಾರೂ ಬರಲಿಲ್ಲ. ಸುಮ್ಮನಿದ್ದೆ.

ದಿನಾಲು ವೇಳೆಗೆ ಮುಂಚೆಯೇ ಕಾಲೇಜು ಕ್ಲಾಸುಗಳಿಗೆ, ಪ್ರಯೋಗಾಲಯ-ಗಳಿಗೆ ಹೋಗತೊಡಗಿದೆ. ನಮಗೆ ಕಲಿಸುವ ಗುರುಗಳು ಪ್ರಭಾವಿ ವ್ಯಕ್ತಿತ್ವ ಹೊಂದಿದವರು. ಅವರಲ್ಲಿ ಕೆಲವರನ್ನು ನಾನು ಮರೆಯುವ ಹಾಗಿಲ್ಲ. ನಾನು ನಮ್ಮ ಕ್ಲಾಸಿನೊಳಗೆ ಹೋಗುವಾಗ ತಲೆ ತಗ್ಗಿಸಿಕೊಂಡು ಹೋಗುತ್ತಿದ್ದೆ. ಆ ಕಡೆ, ಈ ಕಡೆ ನೋಡುತ್ತಿರಲಿಲ್ಲ. ಮುಂದಿನ ಡೆಸ್ಕುಗಳ ಮೇಲೆ ಹುಡುಗಿಯರು ಕೂಡ್ರುತ್ತಿದ್ದರು. ಆ ಕಡೆ ನೋಡಿದರೆ ಕಣ್ಣೇ ಹೋಗಬಹುದು ಎನ್ನುವಂತೆ ಮಾಡುತ್ತಿದ್ದೆ. ನಾನು ಯಾವಾಗಲೂ ಕೊನೆಯ ಬೆಂಚಿನ ಮೇಲೆ ಕೂಡ್ರುವ ಆಸಾಮಿ. ಆಗೊಮ್ಮೆ ಈಗೊಮ್ಮೆ ನನ್ನ ಟೊಪ್ಪಿಗೆ ಹಾರಿ ಹೋಗುತ್ತಿತ್ತು. ಅಂದರೆ ನಮ್ಮ ಕ್ಲಾಸಿನಲ್ಲಿಯ ಕೆಲ ಕಿಡಿಗೇಡಿಗಳು ಬಂದು ಹಿಂದಿನಿಂದ ಟೊಪ್ಪಿಗೆಯನ್ನು ಹಾರಹೊಡೆಯುತ್ತಿದ್ದರು. ಅದು ಹಾರಿ ಒಂದು ಕಡೆ ಬೀಳುತ್ತಿತ್ತು. ಬೇರೆ ಒಳ್ಳೆಯ ಹುಡುಗರು ತಂದು ನನಗೆ ಕೊಡುತ್ತಿದ್ದರು. ನಾನು ಯಾರಿಗೂ ಏನೂ ಅನ್ನುತ್ತಿರಲಿಲ್ಲ. ಉಳಿದ ಕೆಲವರು ಗೊಳ್ಳೆಂದು ನಗುತ್ತಿದ್ದರು. ಒಂದು ಮಾತು, ಎಲ್ಲರೂ ಕಿಡಿಗೇಡಿಗಳೇ ಎನ್ನಲು ಆಗದು. ಒಂದೆರಡು ಸಲ ನನ್ನ ಟೊಪ್ಪಿಗೆ ಮೇಲೆ ಹಾರಿತು. ಅದು ಕೆಳಗೆ ಮುಟ್ಟುವ ಮೊದಲೇ ಮತ್ತೊಬ್ಬ ವಿದ್ಯಾರ್ಥಿ ಎದ್ದು ಬಂದು ಟೊಪ್ಪಿಗೆ ಹಾರಿಸಿದವನ ಕತ್ತು ಹಿಡಿದು ಟೋಪಿ ಬಿದ್ದಲ್ಲಿ ಹೋಗಿ ಅದನ್ನು ಎತ್ತಿ ತಂದು ಕ್ಷಮೆ ಬೇಡುವಂತೆ ಮಾಡುತ್ತಿದ್ದ. ಇಂಥವರಲ್ಲಿ ಹಾವೇರಿಯ ಅಂಬೇಕರ ಎನ್ನುವ ಗೆಳೆಯ ಮುಂದು. ಬರಬರುತ್ತ ಈ ಮಂಗಾಟ ಮಾಯವಾದುವು. ಸಂಪೂರ್ಣ ಬಂದಾಗಲು ಮೂರು ತಿಂಗಳೇ ಬೇಕಾದುವು.

ನಮಗೆ ಝೂವಾಲಜಿ ವಿಷಯ ಕಲಿಸಲು ಮಳಗಿ ಎಂಬ ಲೆಕ್ಚರರ್ ಇದ್ದರು. ಒಳ್ಳೆಯ ರೂಪವಂತರು. ಅವರ ಅಕ್ಷರಗಳೂ ಅಷ್ಟೆ ಮುದ್ದು. ವಿಷಯ ಪರಿಣತರೂ ನಿಜ. ಅವರ ಕ್ಲಾಸುಗಳು ಎಲ್ಲರಿಗೂ ಹಿಡಿಸುತ್ತಿದ್ದವು. ಮೂರು ತಿಂಗಳಾದ ಮೇಲೆ ಅವರು ಒಂದು ಪರೀಕ್ಷೆ ನಡೆಸಿದರು. ನಾವು ಬರೆದ ಉತ್ತರ ಪತ್ರಿಕೆಗಳನ್ನು ಹಂಚಲು ಪ್ರಾರಂಭಿಸಿದರು. ಒಬ್ಬೊಬ್ಬರನ್ನೇ ಕರೆದು ಅವರು ಪಡೆದ ಅಂಕಗಳನ್ನು ಹೇಳಿ ಎಲ್ಲಿ ಸುಧಾರಿಸಬೇಕು ಎಂದು ಸೂಚಿಸುತ್ತಿದ್ದರು. ಪಾಸಾದವರು ಮುಗಿದರು. ಪ್ರಥಮ ವರ್ಗದಲ್ಲಿ ಬಂದವರನ್ನು ಅಭಿನಂದಿಸಿದರು. ಎಲ್ಲರೂ ಸಂತೋಷದಲ್ಲಿದ್ದರು. ಆದರೆ ನನ್ನ ಉತ್ತರ ಪತ್ರಿಕೆ ನನಗೆ ಸಿಗಲೇ ಇಲ್ಲ. ಗಾಬರಿಯಾಗಿ ಕುಳಿತಿದ್ದೆ. ಎಲ್ಲ ಉತ್ತರ ಪತ್ರಿಕೆಗಳು ಮುಗಿದವೆಂದು ಎಲ್ಲ ವಿದ್ಯಾರ್ಥಿಗಳು ತಿಳಿದಿದ್ದೆವು.

ಅಷ್ಟರಲ್ಲಿ ಮಳಗಿ ಅವರು ನನ್ನ ರೋಲ್ ನಂಬರ್ ಕರೆದು "ಯಾರು ಈ ವಿದ್ಯಾರ್ಥಿ?" ಎಂದರು. ಇಡೀ ಕ್ಲಾಸ್ ತಣ್ಣಗಾಯಿತು. ನನಗಂತೂ ಎದ್ದು ನಿಲ್ಲಲು ಸಹ ಶಕ್ತಿ ಹೋದಂತಾಯಿತು. ಮುಖ ತಗ್ಗಿಸಿಕೊಂಡು ನಿಂತೆ. ಜೋರಾಗಿ, "ನೀನೇ ಏನು?" ಎಂದರು. ಕತ್ತು ಅಲ್ಲಾಡಿಸಿ, "ಹೌದು" ಎಂದೆ. ಮುಂದೆ ಬರಲು ಹೇಳಿದರು. ನಡುಗುತ್ತಲೇ ಹೋದೆ. ತಾವು ನಿಂತ ಉಪನ್ಯಾಸ ಕೊಡುವ ಕಟ್ಟೆಯ ಮೇಲೆ ಏರಲು ಹೇಳಿದರು. ಇನ್ನೇನು ಅಳುವುದೊಂದೇ ಬಾಕಿ ಉಳಿದಿತ್ತು. ನನ್ನ ಹೆಗಲ ಮೇಲೆ ಕೈಯಿಟ್ಟರು. ನನ್ನ ಉತ್ತರ ಪತ್ರಿಕೆಯನ್ನು ಎಲ್ಲರಿಗೂ ತೋರಿಸಿ, "ಈ ಉತ್ತರ ಪತ್ರಿಕೆಯ ಉತ್ತರಗಳು ಉತ್ಕೃಷ್ಟ" ಎಂದರು. "ಇಡೀ ವರ್ಗಕ್ಕೆ ಇವನೇ ಪ್ರಥಮ" ಎಂದರು. ನನ್ನ ಸ್ನೇಹಿತರೆಲ್ಲ ಚಪ್ಪಾಳೆ ತಟ್ಟಿದರು. ಮಳಗಿ ಗುರುಗಳೂ ಚಪ್ಪಾಳೆ ತಟ್ಟಿ, "ಚೆನ್ನಾಗಿ ಓದು ಮುಂದೆ ಬರುವೆ" ಎಂದರು. ನಾನು ಅವರಿಗೆ ಬಾಗಿ ಕೈ ಮುಗಿದು ನನ್ನ ಉತ್ತರ ಪತ್ರಿಕೆಯನ್ನು ತೆಗೆದುಕೊಂಡು ಕೊನೆಯ ಬೆಂಚಿಗೆ ಹೋದೆ. ಕಿಡಿಗೇಡಿ ವಿದ್ಯಾರ್ಥಿಗಳೆಲ್ಲ ಫೇಲಾಗಿದ್ದರು. ಎಲ್ಲರೂ ಬಂದು ಅಭಿನಂದಿಸಿದರು. ಕೆಲವರಂತೂ ಬಂದು ಕ್ಷಮೆ ಕೇಳಿ ಹೋದರು. ಅಂದಿನಿಂದ ಕಾಲೇಜಿನಲ್ಲಿ ನನ್ನ ಅಂತಸ್ತು ಬೇರೆ ಆಯಿತು. ಎಲ್ಲರೂ ಮಾತಾಡಿಸುತ್ತಿದ್ದರು. ಮರ್ಯಾದೆ ಕೊಟ್ಟು ನಡೆದುಕೊಳ್ಳುತ್ತಿದ್ದರು. ನನ್ನ ಟೊಪ್ಪಿಗೆ ತಲೆಯ ಮೇಲೆ ಗಟ್ಟಿಯಾಗಿ ಕುಳಿತುಕೊಳ್ಳತೊಡಗಿತು. ನನ್ನ ಜೊತೆ ಇದ್ದ ಟೋಪಿ ಧರಿಸುವ ಸ್ನೇಹಿತರ ಬಗ್ಗೆಯೂ ಉಳಿದವರ ಆದರ ಹೆಚ್ಚಿತು.

❖ ❖ ❖ ❖

ಲೇಖಕರ ಪರಿಚಯ : 'ಸಜನಾ' ಎಂದೇ ಚಿರಪರಿಚಿತರಾಗಿರುವ ಡಾ. ಸ.ಜ. ನಾಗಲೋಟಿಮಠ ಇವರು ೨೦-೭-೧೯೪೦ರಲ್ಲಿ ಗದಗದಲ್ಲಿ ಜನಿಸಿದರು. ತಂದೆ ಜಂಬಯ್ಯ, ತಾಯಿ ಹಂಪವ್ವ. ಪ್ರಾಥಮಿಕ ಶಿಕ್ಷಣ ಬನಹಟ್ಟಿಯಲ್ಲಿ. ವೈದ್ಯಕೀಯ ಶಿಕ್ಷಣ ಹುಬ್ಬಳ್ಳಿಯಲ್ಲಿ. *'ಪೆಥಾಲಜಿ'* ವಿಭಾಗದಲ್ಲಿ ಹಲವು ಸಂಶೋಧನೆಗಳನ್ನು ನಡೆಸಿ, ರಾಷ್ಟ್ರ, ಅಂತಾರಾಷ್ಟ್ರೀಯ ನೆಲೆಯಲ್ಲಿ ಖ್ಯಾತರಾದರು. *'ಬಾಳೆಹಣ್ಣು ಮತ್ತು ಬ್ಲಡ್ ಪ್ರೆಶರ್', 'ಸ್ವಾಸ್ಥ್ಯ ಸಂಗಾತಿ', 'ಶ್ರೀಸಾಮಾನ್ಯ ಮತ್ತು ವೈದ್ಯ', 'ಬ್ರುಸೆಲ್ಲಾ ರೋಗ'* ಮುಂತಾದ ಕೃತಿಗಳನ್ನು ರಚಿಸಿರುವ ಶ್ರೀಯುತರು ದೇಶ-ವಿದೇಶಗಳಲ್ಲಿ ಸಂಶೋಧನಾ ಪ್ರಬಂಧಗಳನ್ನು ಮಂಡಿಸಿ ಅತಿಥಿ ಉಪನ್ಯಾಸಕರಾಗಿಯೂ ಕಾರ್ಯ ನಿರ್ವಹಿಸಿದರು. *ಡಾ. ಬಿ.ಸಿ. ರಾಯ್ ರಾಷ್ಟ್ರೀಯ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಪ್ರಪ್ರಥಮ ಶ್ರೀ ರೇಣುಕಾ ಪ್ರಶಸ್ತಿ; ಹರಿಓಂ ಆಶ್ರಮ ಅಲೆಂಬಿಕ್ ರಿಸರ್ಚ್ ರಾಷ್ಟ್ರೀಯ ಪ್ರಶಸ್ತಿ, ಬ್ರುಸೆಲ್ಲಾ ಪ್ರಶಸ್ತಿಗಳನ್ನು* ಪಡೆದವರು. ಶುಷ್ಕವಾಗಬಹುದಾದ ವೈಜ್ಞಾನಿಕ ಬರಹಗಳಿಗೂ ಮಾನವೀಯತೆಯ ಆರ್ದ್ರಭಾವಗಳ ಬುನಾದಿಯನ್ನು ಕಟ್ಟಿಕೊಡುವುದರ ಮೂಲಕ ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದವರು.

ಶಬ್ದಾರ್ಥ : ಗಾದಿ-ಹಾಸಿಗೆ ; ತ್ರಾಸು-ತೊಂದರೆ ; ಹಿಕ್ಕು-ತಲೆಗೂದಲು ಬಾಚು ; ತುಟ್ಟಿ-ದುಬಾರಿ ; ಪ್ರತೀಕ-ಸಂಕೇತ ; ಖಾನಾವಳಿ-ಊಟದ ಮನೆ.

ಟಿಪ್ಪಣಿ :

೧) ಮಾಲಾಸಿನ್ಹಾ : ಐವತ್ತು-ಅರವತ್ತರ ದಶಕಗಳಲ್ಲಿ ಹಿಂದೀ ಚಲನ ಚಿತ್ರರಂಗದಲ್ಲಿ ಜನಪ್ರಿಯಳಾಗಿದ್ದ (ನಟಿ) ಅಭಿನೇತ್ರಿ.

೨) ಸಾರಸ್ವತ : ಮೂಲತಃ ಸರಸ್ವತೀ ನದೀ ತೀರದಲ್ಲಿ ವಾಸಿಸುತ್ತಿದ್ದ ಬ್ರಾಹ್ಮಣರು. ಸರಸ್ವತೀ ಮುನಿಗಳ ವಂಶಜರೆಂದು ಪ್ರತೀತಿ. ಕಾಲಾಂತರದಲ್ಲಿ ದೇಶದ ನಾನಾ ಕಡೆಗೆ ಹಂಚಿ ಹೋದವರು.

೩) ಚಿತ್ಪಾವನ : ಕೊಂಕಣ ಸೀಮೆಗಳಲ್ಲಿ ವಾಸಿಸುವ ಇವರ ಮಾತೃಭಾಷೆ ಕೊಂಕಣಿ. ಕೊಂಕಣಸ್ಥ ಸೀಮೆಯ ಬ್ರಾಹ್ಮಣರು, ಸ್ಮಾರ್ತ ಸಂಪ್ರದಾಯದವರು, ಪಶ್ಚಿಮ ಮಹಾರಾಷ್ಟ್ರದಲ್ಲಿ ಹೆಚ್ಚು ಇರುವವರು, ದೇಶಪ್ರೇಮಕ್ಕೆ ಹೆಸರಾದವರು. ಮರಾಠಿ, ಕನ್ನಡ ಭಾಷೆಯನ್ನು ಆಡುವವರು.

೪) **ರೋಲ್ ಮಾಡೆಲ್ :** ಮತ್ತೊಬ್ಬರು ಅನುಸರಿಸಲು ಯೋಗ್ಯ ಗುಣಗಳನ್ನು ಹೊಂದಿರುವ ವ್ಯಕ್ತಿ.

ಅನ್ಯದೇಶ್ಯ ಶಬ್ದಗಳು :

ಫ್ರೀ–ಬೋರ್ಡಿಂಗ್ ; ಡಿಸ್ಟ್ರಿಂಕ್ಷನ್ ; ರ್‍ಯಾಂಕ್ ; ಸ್ಟೇಶನ್.

ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ :

೧) ‘ನಿನ್ನ ಮಗನ ಜವಾಬ್ದಾರಿ ನನಗೆ ಬಿಡು.’

೨) ‘ಆಕೆ ಮಾಲಾಸಿನ್ಹಾಳಂತೆ ಕಾಣುತ್ತಾಳೆ.’

೩) ‘ನಾನು ಕಾಳಜಿ ಮಾಡದಿದ್ದರೆ ನಮ್ಮ ನೌಕರಿ ಉಳೀತಾದ, ಏನ್ರಪಾ?’

೪) ‘ನಾನೇ ಪ್ಯೂನ್‌ನಂತೆ ಕಾಣುತ್ತಿದ್ದೆ.’

೫) ‘ಈ ಉತ್ತರ ಪತ್ರಿಕೆಯ ಉತ್ತರಗಳು ಉತ್ಕೃಷ್ಟ.’

ಒಂದು ವಾಕ್ಯದಲ್ಲಿ ಉತ್ತರಿಸಿ :

೧) ಪುಣೆಯಲ್ಲಿನ ಪ್ರಸಿದ್ಧ ಕಾಲೇಜಿನ ಹೆಸರೇನು?

೨) ಲೇಖಕರು ಮೊದಲಿಗೆ ಕೆಲಸಕ್ಕೆ ಸೇರಿದ್ದೆಲ್ಲಿ?

೩) ಲೇಖಕರ ತಂದೆಯವರು ಎಲ್ಲಿಯವರೆಗೆ ಶಿಕ್ಷಣ ಪಡೆದಿದ್ದರು?

೪) ‘ಜಾಣರ ಕಾಲೇಜು’ ಎಂದು ಹೆಸರು ಪಡೆದಿದ್ದ ಕಾಲೇಜು ಯಾವುದು?

೫) ಲೇಖಕರನ್ನು ಹಾಸ್ಟೆಲಿಗೆ ಕರೆದೊಯ್ದವರು ಯಾರು?

ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ :

೧) ಲೇಖಕರು ಪ್ರೆಸ್ಸಿನಲ್ಲಿ ಕೆಲಸಕ್ಕೆ ಸೇರಲು ಕಾರಣವೇನು?

೨) ಊರಿನ ಹಿರಿಯರು ಲೇಖಕರ ತಂದೆಯೊಡನೆ ಏನೆಂದು ಹೇಳಿದರು?

೩) ಗಾಂಧೀಟೋಪಿಯ ಬಗ್ಗೆ ಲೇಖಕರ ತಂದೆಯವರಿಗೆ ಯಾವ ಭಾವನೆಯಿತ್ತು?

೪) ಹುಬ್ಬಳ್ಳಿಯಲ್ಲಿಯ ಹಾಸ್ಟೆಲಿನ ವಾತಾವರಣ ಯಾವ ರೀತಿಯಲ್ಲಿತ್ತು?

ವಿವರವಾಗಿ ಉತ್ತರಿಸಿ :

೧) ಎಸ್.ಎಸ್.ಎಲ್.ಸಿ. ಪರೀಕ್ಷೆಯ ನಂತರ ಲೇಖಕರು ಮುಂದಿನ ಶಿಕ್ಷಣಕ್ಕೆ ಯಾವ ರೀತಿ ತಯಾರಿ ನಡೆಸಿದರು?

೨) ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ನಗರದ ಪರಿಸರಕ್ಕೆ ಕಾಲಿಟ್ಟಾಗ ಎದುರಿಸುವ ಸಮಸ್ಯೆಗಳು ಪ್ರಸ್ತುತ ಪಾಠದಲ್ಲಿ ಹೇಗೆ ಚಿತ್ರಿತವಾಗಿದೆ?

೩) ಲೇಖಕರ ಕಾಲೇಜು ಜೀವನದ ಹಿನ್ನೆಲೆಯಲ್ಲಿ ಆ ಕಾಲದ ಶಿಕ್ಷಣ ವ್ಯವಸ್ಥೆಯನ್ನು ಕುರಿತು ಬರೆಯಿರಿ.

ಭಾಷಾಭ್ಯಾಸ :

೧) ಇವುಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ :

ಅರ್ಥ, ಶಕ್ಯ, ಚಿಂತೆ, ಜವಾಬ್ದಾರಿ, ಪಾಸು, ಆದರ.

೨) ಇವುಗಳಿಗೆ ಸಮಾನಾರ್ಥ ಪದಗಳನ್ನು ಬರೆಯಿರಿ :

ನೆಲ, ಗ್ರಾಮ, ಜವಾನ, ದೇವರು.

೩) ಇವುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ :

ಮೀಸಲಾತಿ, ಅಭಿನಂದಿಸು, ಕಣ್ಣುತೆರೆ, ಹಣ್ಣುಗಾಯಿ ನೀರುಗಾಯಿ.

ಆಕರ ಗ್ರಂಥ :

'ಬಿಚ್ಚಿದ ಜೋಳಿಗೆ' – ಡಾ. ಸ.ಜ. ನಾಗಲೋಟಿಮಠ – (ವೈದ್ಯನ ಆತ್ಮ ನಿವೇದನೆ) (ಸುವರ್ಣ ಸಾಹಿತ್ಯ ಗ್ರಂಥ ಮಾಲೆ)–ಪ್ರಕಾಶಕರು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು. ಮುದ್ರಣ ವರ್ಷ : ೨೦೦೬.

ಕುಬುಸ

– ಕುಂ. ವೀರಭದ್ರಪ್ಪ

ಪ್ರಗತಿ ಮತ್ತು ನಾಗರಿಕತೆಗಳು ಬದುಕಿನ ಎರಡು ಪರಸ್ಪರ ಹೊಂದಲಾರದ ವಿಭಿನ್ನ ಲಯಗಳು. ಇವುಗಳ ನಡುವೆ ಘರ್ಷಣೆ ನಡೆದು ತೀವ್ರ ವೇದನೆಗೆ ಕಾರಣವಾಗುತ್ತವೆ. ನಾಗರಿಕತೆ ಆಯಾ ಪ್ರಾದೇಶಿಕ ಬದುಕಿನಲ್ಲಿ ನಾನಾ ಬಗೆಯ ಪಲ್ಲಟಗಳನ್ನು ತರುತ್ತವೆ. ಇಂತಹ ಪಲ್ಲಟಗಳಿಗೆ ತೀವ್ರವಾಗಿ ಮಹಿಳೆ ಸ್ಪಂದಿಸುತ್ತಾಳೆ. ಪರಂಪರೆ ಹಾಗೂ ನಾಗರಿಕತೆ ಎರಡನ್ನೂ ವಿಡಂಬನೆಯಿಂದ ಕಾಣುವ ಲೇಖಕರು ಬದುಕಿನ ನಿಜವಾದ ಅರ್ಥವನ್ನು ಶೋಧಿಸುವ ಪ್ರಯತ್ನವನ್ನು ಇಲ್ಲಿ ಮಾಡಿದ್ದಾರೆ.

ಪೂರ್ವದ ಸಿಂಧವಾಡಿ ಪ್ರಾಂತದಿಂದ ಪಶ್ಚಿಮದ ಕುಂತಳ ನಾಡನ್ನು ಬೇರ್ಪಡಿಸುವ ನದಿಯೊಂದರ ಅವಶೇಷವನ್ನು ಈಗಲೂ ನಮ್ಮ ಜಿಲ್ಲೆಯ ನೈಋತ್ಯ ದಿಕ್ಕಿನಲ್ಲಿ ಕಾಣಬಹುದು. ಯಾವ ಕಲ್ಲು ಎತ್ತಿದರೂ ಒಂದಾದರೂ ಚೇಳು ಗೋಚರಿಸುವ ಚೇಳುಗುಡ್ಡವೂ; ಯಾವುದಾದರೂ ಪೊದೆ ಕಲಕಿದರೆ ಒಂದಾದರೂ ಬಳೆವಡಕನಂಥ ಹಾವು ಗೋಚರಿಸುವ ಹಾವುಗುಡ್ಡವೂ ನತದೃಷ್ಟ ನದಿಯ ಎಡಬಲ ಮಗ್ಗುಲಲ್ಲಿವೆ. ಈ ಎರಡೂ ಗುಡ್ಡಗಳ ತಪ್ಪಲಲ್ಲಿರುವ ಏಕೈಕ ಗ್ರಾಮವಾದ ವಡ್ಡಟ್ಟಿಯು ಸ್ವಾತಂತ್ರ್ಯೋತ್ತರ ಭಾರತದಲ್ಲೂ ಶಿಲಾಯುಗ ಕಾಲದ ಎಲ್ಲ ಲಕ್ಷಣ ಸ್ವಭಾವಗಳನ್ನು ಉಳಿಸಿಕೊಂಡು ಬಂದಿದೆ. ಚೇಳುಗಳು, ಹಾವುಗಳು ನಾಗರಿಕತೆಯ ನೆರಳು ಆ ಗ್ರಾಮದ ಮೇಲೆ ಬೀಳದ ಹಾಗೆ ನೋಡಿಕೊಳ್ಳುತ್ತಿರುವವು. ಕೇಂದ್ರ ಸರಕಾರದವರು ಹಾವಿನ ಗುಡ್ಡ ಅಷ್ಟು ದೂರ ಇದೆ ಅನ್ನುತ್ತಿರಅಕ್ಕೆ ವಾಪಾಸಾದರೆ, ರಾಜ್ಯ ಸರಕಾರದವರು ಚೇಳುಗುಡ್ಡ ಅಷ್ಟು ದೂರ ಇದೆ ಅನ್ನುತ್ತಿರಅಕ್ಕೆ ವಾಪಾಸಾಗುತ್ತಿರುವರಾದ್ದರಿಂದ ವಡ್ಡಟ್ಟಿ ಎಂಬ ಗ್ರಾಮವು ರಾಜಕೀಯ ನಕ್ಷೆಯಲ್ಲಿ ಜಾಗ ಪಡೆದಿಲ್ಲ. ಒಂದೇ ವಾಕ್ಯದ ಷರಾದಿಂದ ನೆಲದ ಪಾಲಾಗಿ ಬಿಡುವ ಕಾರಣದಿಂದಾಗಿಯೇ, ಅದನ್ನು ತಡವಿ ಯಾಕೆ ಕಂದಾಯ ಇಲಾಖೆಯ ಲಕ್ಷಣ ಕಳೆದುಕೊಳ್ಳಬೇಕೆಂಬ ಕಾರಣದಿಂದಾಗಿಯೋ ಏನೋ ಯಾರೊಬ್ಬರು ಆ ಗ್ರಾಮವನ್ನು ನಿಸೂರು ಮಾಡುವ ಗೋಜಿಗೆ ಹೋಗಿಲ್ಲ. ಆರಕ್ಕೇರದೆ, ಮೂರಕ್ಕಿಳಿಯದೆ ಏನೋ ಒಂದು ರೀತಿ ಬದುಕುವ ಆ ಗ್ರಾಮದ ನಾನ್ನೂರು ಚಿಲ್ಲರೆ ಮಂದಿಯೂ ತಮಗದು ಬೇಕು, ತಮಗಿದು ಬೇಕು ಎಂದು ಅಹವಾಲು ಸಲ್ಲಿಸುವ ಗೋಜಿಗೆ ಹೋಗಿಲ್ಲ. ಯಾವುದೇ ರೋಗ ರುಜಿನಗಳ ತಂಟೆ ತಕರಾರುಗಳಿಲ್ಲದೆ ಶತಶತಮಾನಗಳ ಲಾಗಾಯ್ತು ಬದುಕುತ್ತ ಬಂದಿರುವ ಅವರು ದೇವರು ಕೊಟ್ಟಿರೋದು

ಮನಾರ ಇರುವಾಗ ಟವುಜರು ಮಂದಿ ಏನು ಕೊಟ್ಟೀತು? ಏನು ಬಿಟ್ಟೀತು? ಎಂದು ತಿಳಿದುಕೊಂಡಿರುವಂಥ ಸಾದಾ–ಸೀದಾ ಮಂದಿ. ಅವರು ವಡ್ಡಟ್ಟಿ ವಿನಾ ದುಸರಾ ಪ್ರಪಂಚ ನೋಡಿದವರಲ್ಲ. ಅವರು ಹೊರ ಪ್ರಪಂಚದ ಉಸಾಬರಿಗೂ ಹೋದವರಲ್ಲ. ಬೆಳಗಾಗುತ್ತಲೆ ಎದ್ದು ಮುದ್ದೆಹಿಂಡಿ ಕಟ್ಟಿಕೊಂಡು ಕೊಟ್ಟೂರು ಸೀಮೇಲಿರೋ ಹುಲಿಗುಡ್ಡ ತಪ್ಪಲಿಗೆ ಹೋಗಿ, ರೆಟ್ಟೆ ಮುರಿದು ಬಂಡೆಗಲ್ಲುಗಳನ್ನು ಎಬ್ಬಿಸಿ, ಅವುಗಳಿಗೊಂದು ಆಕಾರ ಕೊಟ್ಟು, ಸಂಜೆಯಾಗುತ್ತಲೇ ಗ್ರಾಮಕ್ಕೆ ವಾಪಾಸಾಗಿ ಝೂಡಿಸಿ ಉಂಡು ಗಪ್ಪಂತೆ ಮಲಗಿ ಬಿಡುವ ಅವರು ಅಕ್ಷರ ಕಂಡರೆ ಗಡಗಡ ನಡುಗಿ ಮೂರು ಮಾರು ದೂರ ನಿಲ್ಲುವ ಸಾಧು ಸ್ವಭಾವದ ಮಂದಿ. ಅವರ ಬಂಧು–ಬಳಗ, ನೆಂಟರಿಷ್ಟರೆಲ್ಲರು ಆ ಗ್ರಾಮದೊಳಗೇ ಇರುವುದರಿಂದ, ಅವರಿಗೆ ಯಾವುದೇ ಜಾಬು ಹೊರ ಪ್ರಪಂಚದಿಂದ ಬರುವುದಾಗಲೀ, ತಾವು ಯಾವುದೇ ಜಾಬನ್ನು ಹೊರ ಪ್ರಪಂಚಕ್ಕೆ ಬರೆಸುವುದಾಗಲೀ ಇಲ್ಲವೇ ಇಲ್ಲ. ಇಂಥ ಅನೇಕ ಕಾರಣಗಳಿಂದ ಆ ಗ್ರಾಮವಾಗಲೀ, ಆ ಗ್ರಾಮದ ಮಂದಿಯಾಗಲೀ ಭೂತಕಾಲದ ಉಕ್ಕಿನ ತೆರೆ ಸೀಳಿಕೊಂಡು ವರ್ತಮಾನದ ಜಗಜಗಿಸುವ ರಂಗಭೂಮಿಯತ್ತ ಇಣುಕಿದವರಲ್ಲ.

ಇಂಥ ಗ್ರಾಮದಲ್ಲಿ ಹುಟ್ಟಿ ನಾಲ್ಕು ಅಕ್ಷರ ಕಲಿತು ಬೆಂಗಳೂರಂಥ ನಗರದಲ್ಲಿ ಸರಕಾರಿ ನೌಕರಿ ಮಾಡುತ್ತಿರುವ ನೆಟ್ಟಕಲ್ಲು ದೈವಾಂಶ ಸಂಭೂತನೆಂದೇ ಹೇಳಬೇಕು.

ಎಲ್ಲ ಅಕ್ಷರಸ್ಥರಂತೆ ಅವನ ಬಾಲ್ಯವೂ ಸಹ, ಅವನ ಕುಟುಂಬ ಯಾರೊಬ್ಬರೂ ಅಕ್ಷರವೆಂಬ ಪಾತರಗಿತ್ತಿಯ ದುಂಬಾಲು ಬಿದ್ದವರಲ್ಲ. ಜರ್ಮಲಿ, ಗುಡೇಕೋಟೆಯ ಅಭೇದ್ಯ ಕೋಟೆಗಳನ್ನು, ದರೋಜಿ, ಕಮಲಾಪುರದ ಕೆರೆಗಳನ್ನೂ ಕಟ್ಟಿದವರ ಪೈಕಿ ಅವನ ಪೂರ್ವಿಕರು ಇದ್ದರೆಂಬುದೇ ಹೆಮ್ಮೆಯ ಸಂಗತಿ. ಸೈಜುಗಲ್ಲನ್ನು ಎದೆ ಮೇಲೆ ಎಳೆದುಕೊಂಡ ಎರಡನೆಯ ದಿನಕ್ಕೆ ಸತ್ತ ಮೊಮ್ಮಗ ಏರುಕಲ್ಲನ ಬಗೆಗಾಗಲೀ, ಹೆತ್ತೊಡನೆ ಉಡಿತುಂಬಿ ವಾರೊಪ್ಪತ್ತಿನಲ್ಲಿ ಒಂದು ಹಿಡಿ ಗಾಳಿಗಾಗಿ ಮೂಗು–ಬಾಯಿ ತೆರೆದು ಕೊಂಡು ನರಳಿ ನರಳಿ ಸತ್ತ ಮೊಮ್ಮಗಳು ಗುಡುದವ್ವನ ಬಗೆಗಾಗಲೀ, ಬಂಡೆವ್ವಜ್ಜಿ ಎರಡು ರಾತ್ರಿ, ಮೂರು ಹಗಲು ಹೇಳುತ್ತಿದ್ದುದೇ ಒಂದು ಛಂದ. ಸುತ್ತಿಗೆಯ ಒಂದೇ ಏಟಿಗೆ ಗುಡ್ಡವನ್ನು ಪುಡಿ ಪುಡಿ ಮಾಡುವಂಥ ಪರಾಕ್ರಮಿ ತನ್ನ ಮರಿ ಮೊಮ್ಮಗ ನೆಟ್ಟಕಲ್ಲು ಆಗಬೇಕೆಂದೇ ಮುದುಕಿ ಕನಸು ಕಂಡಿತ್ತು. ತನ್ನ ಬತ್ತಲೆ ಸುಕ್ಕುಗಟ್ಟಿದ ಬೆನ್ನಿಗೆ ಕಂದಮ್ಮನನ್ನು ಕಟ್ಟಿಕೊಂಡೇ ಬೆಂಚಿ ಹೊಡೆಯುತ್ತಿತ್ತು. ಅಂಬೆಗಾಲಿಡುತ್ತಿದ್ದ ಅದರ ಕೈಗೆ ಸುತ್ತಿಗೆ ಚಾಣುಕೊಟ್ಟು ಆಡಿಸುತ್ತಿತ್ತು. ಕೋಡಗಲ್ಲಿನ ನೆರಳಿನಲ್ಲಿ ಕಂದಮ್ಮನ ಬಾಯಿಗೆ ಮೆಂಥೆದ್ಹಿಂಡಿ ಮುದ್ದೆಯನ್ನು ತುತ್ತು ಮಾಡಿ ಉಣ್ಣಿಸುತ್ತಿತ್ತು. ಅಂಬೆಗಾಲಿನಿಂದ

ತೊದಲು ನಡಿಗೆಗೆ ಬಡ್ತಿ ಪಡೆದ ನೆಟ್ಟಕಲ್ಲು ಹುಲಿಗುಡ್ಡದ ಕಡೆ ಹಾಯುತ್ತಿದ್ದ ಲಾರಿಗಳ ಹಣೆಪಟ್ಟೀಲಿದ್ದ ಅಕ್ಷರಗಳನ್ನು ಕುತೂಹಲದಿಂದ ನೋಡತೊಡಗಿತು. ವಡ್ಡಟ್ಟಿ ಪ್ರಪಂಚಕ್ಕೂ, ಹೊರ ಪ್ರಪಂಚಕ್ಕೂ ತಾಳೆ ಹಾಕಿ ನೋಡತೊಡಗಿತು. ಹೊರ ಪ್ರಪಂಚದ ನಯ ನಾಜೂಕನ್ನು ಅನುಕರಿಸುವ ಪ್ರಯತ್ನವನ್ನು ಯಾವ ಕ್ಷಣದಿಂದ ಆರಂಭಿಸಿತೋ ನೆಟ್ಟಕಲ್ಲು ಆ ಕ್ಷಣದಿಂದಲೇ ನಿಸೂರು ನಡಿಗೆಗೆ ಬಡ್ತಿ ಪಡೆಯಿತು.

'ಯವ್ವೋ ಸಿಲೇಟು ಬೊಳಾಪ ಕೊಡ್ಸು. ನಾನಿಸ್ಕೂಲೀಗೋತೀನಿ' ಎಂದೊಮ್ಮೆ ಅದಕ್ಕೂ, ಇಸ್ಕೂಲಿಗೋಗಿ ಏಳೂರು ಕಾಗಿ ಯಬಿಸಬೇಕಂತ ಮಾಡಿಯ್ಯೋನಲೋ ಎಂದೊಮ್ಮೆ ಮುದುಕಿಗೂ ಜಟಾಪಟಿ ಆತು. ಮೊಂಡಿ ಹಿಡಿದ ಅದರ ಬೆನ್ನಿಗೆ ರಪ್ಪ ರಪ್ಪ ಅಂತ ಬಾರಿಸಿತು. 'ಯಾವ ಕೇಡಿಗಂತ ನಮ್ ನೆಟ್ಟಕ್ಲು ಇಸ್ಕೂಲಿಗೋತೀನಿ ಅಂತತೆ' ಅಂಥದೊಂದು ಪ್ರಶ್ನೆಯನ್ನು ಗ್ರಾಮದ ಹಿರೀಕ ಕರಗಲ್ಲಪ್ಪನ ಮುಂದಿಟ್ಟು ಆತ ಹೇಳಿದ ಯಾವತ್ತೂ ಶಾಂತಿಯನ್ನು ಮಾಡಿಸಿತು. ಅಂತರ ಕಟ್ಟಿಸಿತು, ಮಂತುರ ಮಾಡಿಸಿತು, ಆದರೆ ನೆಟ್ಟಕಲ್ಲು ಚಾಣ ಸುತ್ತಿಗೆಯನ್ನು ಬಂದಳಕೆಯೊಳಗೆ ಬಚ್ಚಿಟ್ಟು ಸುಟ್ಟಳ್ಳಿಗೆ ನಡಕೋತ, ನಡಕೋತ ಹೋಗಿ ತನಗೆ ತಾನೆ ಯಜಮಾನನಾಗಿ ಇಸ್ಕೂಲಿಗೆ ಸೇರಿಕೊಂಡಿತು. ಅದಕ್ಕೆ ಅಕ್ಷರಗಳು ಒಂದರ ಹಿಂದೆ ಒಂದರಂತೆ ಒಲಿದು ಬಿಟ್ಟವು. ಇದು ಕ್ರಮೇಣ ವಡ್ಡಟ್ಟಿ ಎಂಬ ಪ್ರಪಂಚದಲ್ಲಿ ಪಬ್ಲಿಲಿಕ್ಕಾಗಲು ಮುದುಕಿ ಅಯ್ಯೋ ಅಯ್ಯೋ ಎಂದು ತಲೆ ಚಚ್ಚಿಕೊಂಡಿತು. ಕೊನೀಕ ಗ್ರಾಮದ ಕರಗಲ್ಲಪ್ಪ ಮುಂತಾದ ಹಿರೀಕರು ಕೂಡಿಕೊಂಡು ಕಾಲ ಬದಲಾಗೈತೆ ಅವನಾದ್ರೂ ನಾಕಕ್ಸರ ಕಲೀಲಿ ಬಿಡು ಎಂದು ಸಮಾಧಾನ ಹೇಳಿ ರಂಪಾಟವನ್ನು ತಹಬಂದಿಗೆ ತಂದರು. ಅವತ್ತಿನಿಂದ ಏನು ಕಲಿತೆ! ಏನು ಬಿಟ್ಟೆ! ಎಂದು ನೆಟ್ಟಕಲ್ಲುವಿಗೆ ಸಪೋರುಟು ಕೊಡತೊಡಗಿದರು. ಹೀಗೆ ಹಿನ್ನೀರು ಮುನ್ನೀರು ಎಲ್ಲ ಲಯವಾಗಿ ಒದಗಿ ಬರಲು ನೆಟ್ಟಕಲ್ಲು ದಿನಕ್ಕೊಂದು ಛಂದದಲ್ಲಿ ಬೆಳೆಯುತ್ತ ಒಂದೊಂದು ಕ್ಲಾಸನ್ನು ಒಂದೊಂದು ವಿಕ್ರಮದೊಂದಿಗೆ ದಾಟುತ್ತ ಕ್ರಮೇಣ ದೊಡ್ಡ ಸಾಲಿಯನ್ನೂ ಮುಗಿಸಿದನು. ಹಿಂಗಾಲ ಕಸುವು, ಮುಂಗಾಲ ಕಸುವು ಕಡಿಮೆಯಾಗಲು ಗೋರುಮೆಂಟು ನವುಕರಿ ಸೇರಬೇಕೆಂದು ನಿರ್ಧರಿಸಿದನು. ಮೀಸಲಾತಿ ಸವಲಭ್ಯ ಎಂಬ ಬೆಳ್ಳಿ ಚುಕ್ಕಿಯ ಬೆಳಕಲ್ಲಿ ಅವನು ನವುಕರಿಗೆ ಅಪಲೈ ಮಾಡಿದ್ದಾಗಲೀ, ಇಂಟರು ಬಂದದ್ದಾಗಲೀ ತಡವಾಗಲಿಲ್ಲ. ಅಂತೂ ವಡ್ಡಟ್ಟಿ ಇಲೇಜಿನಲ್ಲಿ ನೀವೊಬ್ಬನಾದ್ರೂ ಯಜುಕೇಟೆಡ್ಡಾದೆಲ್ಲ ಎಂದಾಪೀಸರು ಎಂದವನನ್ನು ಅಟೆಂಡರು ಜಾಬಿಗೆ ಸೆಲೆಕ್ಟ್ ಮಾಡಿದ್ದಾಗಲೀ ತಡವಾಗಲಿಲ್ಲ.

ತಾನು ಚಿಕ್ಕಂದಿನಲ್ಲಿ ಯಾವ ನಗರವನ್ನು ಕಣ್ತುಂಬ ನೋಡಬೇಕೆಂದು ಆಸೆ ಪಟ್ಟಿದ್ದನೋ ಅದೇ ನಗರದಲ್ಲಿ ನವುಕರಿ ಮಾಡಬೇಕಾಗಿ ಬಂತು. ಗಗನಚುಂಬಿ ಕಟ್ಟಡದ

ತುಟ್ಟತುದಿಯಲ್ಲಿ ಅವನು ನವುಕರಿ ಆರಂಭಿಸಿದ ಕಛೇರಿ ಇತ್ತು. ದೇವಾನುದೇವತೆಗಳಿಗೆ ಕೈ ಮುಗಿದು ಕೆಲಸಕ್ಕೆ ಸೇರಿಕೊಂಡ. ಮೊದಮೊದಲು ಇರುಸು ಮುರುಸು ಉಂಟಾಯಿತು. ಕ್ರಮೇಣ ಹೊಂದಿಕೊಂಡ. ಎಲ್ಲರೂ ಟಿಸ್ಸಾ, ಪುಸ್ಸಾ ಎಂದು ಮಾತಾಡುವವರೆ. ನೆಟ್ಕಲ್ಲು ಆ ಫೈಲು ತಗೊಂಡು ಬಾ.... ನೆಟ್ಕಲ್ಲು ಈ ಫೈಲು ತಗೊಂಡೊಯ್ದು ಅಲ್ಲಿಗೆ ಕೊಡು ಎಂದು ಪ್ರೀತಿಯಿಂದ ಮಾತಾಡಿಸುವವರೆ. ಊರು, ವಿದ್ಯಾಭ್ಯಾಸ, ಅಪ್ಪ, ಅಮ್ಮ ಇತ್ಯಾದಿ ವಿವರಗಳನ್ನು ಕುತೂಹಲದಿಂದ ಕೇಳಿ ಸಂಗ್ರಹಿಸುವವರೆ. ಗ್ರಾಮ್ಯಕ್ಕೆ ನಾಗರಿಕತೆಯನ್ನು ಮಿಕ್ಸು ಮಾಡಿ ಅವನು ಮಾತಾಡುತ್ತಿದ್ದುದನ್ನು ಕೇಳಿ ರೋಮಾಂಚನಗೊಳ್ಳುತ್ತಿದ್ದವರೆ. ಓಹೋ! ತಾನು ಎಲ್ಲರಿಗೂ ಅಚ್ಚು ಮೆಚ್ಚು, ಯಾರ ಬಳಿ ಇಲ್ಲದ ವಿಶೇಷ ವ್ಯಕ್ತಿತ್ವ ತನ್ನದೆಂದು ನೆಟ್ಟಕಲ್ಲು ತನಗೆ ತಾನು ಉಬ್ಬಿಹೋಗುತ್ತಿದ್ದ. ತನ್ನನ್ನು ಇತರರೊಂದಿಗೆ ಹೋಲಿಸಿ ನೋಡಿಕೊಳ್ಳ ತೊಡಗಿದ. ವಸ್ತುತಃ ತಾನು ಎಲ್ಲರಿಗಿಂತ ಒಂದು ಕೈ ಮಿಗಿಲಾಗಿರಬೇಕೆಂದುಕೊಂಡ. ಅದಕ್ಕಾಗಿ ಸ್ವಭಾವತಃ ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳಲು ಪ್ರಯತ್ನಿಸಿದ. ಇತರರ ಲೇವಡಿಗೆ ಗ್ರಾಸವಾಗುತ್ತಿರುವ ತನ್ನ ಹೆಸರನ್ನು ಬದಲಾಯಿಸಿಕೊಳ್ಳಬೇಕೆಂದು ನಿರ್ಧರಿಸಿ, ಆ ಕ್ಷಣ ಕಾರ್ಯಪ್ರವೃತ್ತನಾಗಿ ಕಾನೂನು ರೀತ್ಯಾ ತನ್ನ ಹೆಸರನ್ನು ಎನ್.ಕೆ. ವಡವಟ್ ಎಂದು ಬದಲಾಯಿಸಿಕೊಂಡ. ವಡವಟ್ ಬ್ಯೂಟಿಫುಲ್ ನೇಮ್ ಎಂದು ಕಛೇರಿಯ ಎಲ್ಲರೂ ಉದ್ಗರಿಸಿ ಅದನ್ನು ಸ್ವಾಗತಿಸಿದರು. ಅದರರೊಂದಿಗೆ ತನ್ನ ಜೀವನ ಶೈಲಿಯನ್ನೂ ಬದಲಾಯಿಸಿಕೊಂಡ. ಮೇಲ್ವರ್ಗದವರು ವಾಸಿಸುವ ಬಡಾವಣೆಗಳಲ್ಲಿ ವಾಸಕ್ಕೆ ಮನೆ ಹಿಡಿಯಲು ಪ್ರಯತ್ನಿಸಿದನಾದರೂ ತನ್ನ ಮಾಸಿಕ ಆದಾಯದ ಮಿತಿಯನ್ನು ಅನುಲಕ್ಷಿಸಿ ಗಾಯತ್ರಿ ನಗರದಲ್ಲಿ ಎರಡು ಕೋಣೆಗಳ ಒಂದು ತಗಡಚ್ಛಾದಿತ ಪುಟ್ಟ ಮನೆಯನ್ನು ಬಾಡಿಗೆ ಹಿಡಿದ. ಅಟೆಂಡರ್ ಎಂಬ ಅದ್ಭುತ ಉದ್ಯೋಗ ಮಾಡುತ್ತಿರುವ ತಾನು ಸುಂಕಲಮ್ಮ, ಕಂದಾರೆಮ್ಮರಂಥ ಶೂದ್ರ ದೇವತೆಗಳಿಗೆ ನಡೆದುಕೊಳ್ಳುವುದು ಶೋಭೆ ತರುವ ಸಂಗತಿಯಲ್ಲವೆಂದು ಭಾವಿಸಿ, ಮೇಲ್ವರ್ಗದವರು ನಡೆದುಕೊಳ್ಳುವ ಬೆಣ್ಣೆ ಆಂಜನೇಯ, ಚಲುವನಾರಾಯಣ ಮುಂತಾದ ಪ್ರಥಮ ದರ್ಜೆಯ ದೇವತೆಗಳಿಗೆ ನಡೆದುಕೊಳ್ಳತೊಡಗಿದ. ಪ್ರಸಾದ ರೂಪದ ಹೂವನ್ನು ಕಿವಿಯ ಸಂದಿಯಲ್ಲಿ ಇಟ್ಟುಕೊಳ್ಳುತ್ತಿದ್ದವನು ಪಾಕೆಟ್ಟಿನಲ್ಲಿ ಇರಿಸಿ ಕೊಳ್ಳತೊಡಗಿದ. ನಾಗರಿಕವಾಗಿ ಮಾತಾಡುವುದನ್ನೂ, ವರ್ತಿಸುವುದನ್ನು ರೂಢಿಸಿಕೊಂಡ. ಪಡೆವ ಪಗಾರದ ಅರ್ಧ ಭಾಗವನ್ನು ತನ್ನ ಖರ್ಚಿಗೆ ಇರಿಸಿಕೊಂಡು ಉಳಿದರ್ಧದ ಒಂದು ಭಾಗವನ್ನು ಸುದೀರ್ಘ ಪತ್ರದೊಂದಿಗೆ ವಡ್ಡಟ್ಟಿಯಲ್ಲಿರುವ ತನ್ನ ಅಜ್ಜಿಗೂ, ಇನ್ನೊಂದು ಭಾಗವನ್ನು ತಾನು ನಡೆದುಕೊಳ್ಳುತ್ತಿರುವ ದೇವಾನುದೇವತೆಗಳ ಸಂಪ್ರೀತಿಗೂ ಮೀಸಲಿರಿಸಿದ.

ಅವನು ಕಳಸಿದ ಲಕೋಟಿ ಮತ್ತು ಮನಿಯಾರ್ಡರು ವಡ್ಡಟ್ಟಿಗೆ ಹೋಗಿ, ಪಲಾನ ಮುದುಕಿಗೆ ವಿತರಿಸುವ ವಿಷಯದಲ್ಲಿ ಗುಣಸಾಗರದ ಪೋಸ್ಟ್ ಮಾಸ್ಟರರಿಗೂ, ಅಂಚೆಯಣ್ಣಂದಿರಿಗೂ ನಡುವೆ ದೊಡ್ಡ ಜಟಾಪಟಿ ಆಯ್ತು ಎಂಬುದರ ಬಗೆಗಾಗಲೀ, ಚೇಳುಗುಡ್ಡ ಮತ್ತು ಹಾವುಗುಡ್ಡಗಳ ನಡುವೆ ಇದ್ದ ಹಾದಿಯನ್ನು ಸೈಕಲ್ ಮೂಲಕ ಅಂಚೆಯಣ್ಣ ಪಲಾನ ಮುದುಕಿಯ ಹಟ್ಟಿ ಮುಂದೆ ನಿಂತು ಹೆಸರು ಹಿಡಿದು ಕೂಗಿದ್ದಾಗಲೀ, ಯಾವನೋ, ಮಡ್ಕೆಂಡೆಣ್ತೇನ ಕರದಂಗ ಯಸರಿಡಿದು ಕರೆಯೋನು? ಎಂದಬ್ಬರಿಸುತ್ತ ಕಾಮನ ಬಿಲ್ಲಿನಂಥ ಮುದುಕಿ ಒಂದೇ ನೆಗೆತಕ್ಕೆ ಅಂಗಳದಲ್ಲಿ ನಿಂತು ಅಂಚೆಯಣ್ಣನ ಕಡೆ ದುರುಗುಟ್ಟಿ ನೋಡಿದ್ದಾಗಲೀ, ಕಡೀಕೆ ಆ ಕಾಗದ ನೋಡಿ ಗಡಗಡ ನಡುಗಿದ್ದಾಗಲೀ, ಕೆಲವು ನೋಟುಗಳನ್ನು ಕೈಲಿ ಹಿಡಿದು ಅದರ ಮೇಲೆ ಕಣ್ಣೀರು ಸುರಿಸುತ್ತ ನೆಟ್ಕಲ್ಲೂ.........ನೆಟ್ಕಲ್ಲೂ.........ಎಂದು ಉದ್ಗರಿಸಿದ್ದಾಗಲೀ ಮಿ. ವಡವಟ್ ಊಹಿಸಿಕೊಂಡು ದೇದೀಪ್ಯಮಾನವಾಗಿ ಅನುಭವಿಸುವುದಾಗಲಿಲ್ಲ.

ಅಂತೂ ವಡ್ಡಟ್ಟಿಯ ಸಮಸ್ತರು ಒಬ್ಬೊಬ್ಬರಾಗಿಯೊ ಗುಂಪು ಗುಂಪಾಗಿಯೋ ಬಂದು ಬೇತಾಳ ವಿಂಶತಿಕಥೆಗಳೇ ಬರೆದಂತಿದ್ದ ಕಾಗದವನ್ನು ನೋಡಿ ಬೆಕ್ಕಸ ಬೆರಗಾಗುತ್ತಿದ್ದರು. ಹಾಗೆ ದವಡೆಯಲ್ಲಿ ತೊಂಬಲದುಂಡೆಯನ್ನು ಪ್ರತಿಷ್ಠಾಪಿಸಿಕೊಂಡು ಅಲಲಾ ನೆಟ್ಕಲ್ಲು.........ಸೆಕ್ಕಾರಿ ಸೆಂಬ್ಳ ತಿಮ್ತಿದಿಯಾ ಎಂದು ಮೇಲು ಮಾತಿಗೆ ಉದ್ಗರಿಸುತ್ತಿದ್ದ ಪಲಾನ ಮುದುಕಿಯನ್ನೂ ಮಾತಾಡಿಸಿಕೊಂಡು ಹೋಗುತ್ತಿದ್ದುದು, ಅದರಿಂದ ಪ್ರೇರೇಪಿತರಾಗಿ ತಂತಮ್ಮ ಕರುಳ ಕುಡಿಗಳನ್ನು ಇಸ್ಕೂಲಿಗೆ ಕಳಸಬೇಕೆಂದು ಯೋಚಿಸುತ್ತಿದ್ದುದು, ಇದೆಲ್ಲವೂ ಆ ಕ್ಷಣ ಮಿ. ವಡವಟ್‌ನ ಅರಿವಿಗೆ ನಿಲುಕಲಿಲ್ಲ.

ತಾನಿಷ್ಟಿದ್ದವನನ್ನು ಅಷ್ಟುದ್ದ ಮಾಡಿದ ಮುದುಕಿ ಬೇರೆ ಅಲ್ಲ. ಬೆಣ್ಣೆ ಆಂಜನೇಯ ಬೇರೆ ಅಲ್ಲ ಎಂದು ಭಾವಿಸಿಯೇ ನೆಟ್ಟಕಲ್ಲು ಅಲಿಯಾಸ್ ವಡವಟ್ ಪ್ರತಿ ತಿಂಗಳು ಜೋಪಾನವಾಗಿ ಮನಿಯಾರ್ಡರು ಮಾಡುವುದರ ಮೂಲಕ ಗುಣಸಾಗರ ಮತ್ತು ವಡ್ಡಟ್ಟಿ ನಡುವೆ ನಾಲ್ಕು ಜನ ಸಲೀಸಾಗಿ ಅಡ್ಡಾಡುವಂಥ ಕಾಲು ಹಾದಿಯನ್ನು ನಿರ್ಮಿಸಲು ಕಾರಣನಾಗಿದ್ದ.

ತಾನೀಗ ಮೊದಲಿನಂತಿಲ್ಲ, ಹೊಟ್ಟೆಗೂ, ಬಟ್ಟೆಗೂ ದೇವರು ಕಡಿಮೆ ಮಾಡಿಲ್ಲ. ಸಿನಿಮಾ ಯಾಟ್ರಿಸ್‌ನಂತ ಅತಿಲೋಕ ಸುಂದರಿಯರ ನಡುವೆ ಅಡ್ಡಾಡುತ್ತಿರುವ ತನಗೀಗ ಕಡಿಮೆ ಬಿದ್ದಿರುವ ಒಂದು ಸಂಗತಿ ಎಂದರೆ ಇಚ್ಛೆಯನರಿತು ನಡೆಯುವಂಥ ಹೆಂಡತಿ, ತಾನಿನ್ನು ತಡ ಮಾಡದೆ ಅನುರೂಪಳಾದ ಕನ್ಯಾಮಣಿಯೋರ್ವಳನ್ನು ಮದುವೆಯಾಗಬೇಕು, ನಾಲ್ಕಾರು ಮಕ್ಕಳಿಗೆ ತಂದೆಯಾಗಬೇಕು. ನಾಲ್ಕು ಜನರ ಕಣ್ಣಿಗೆ

ಹಬ್ಬವಾಗುವಂತೆ ಜೀವನ ನಡೆಸಬೇಕು. ಈ ಪ್ರಕಾರವಾಗಿ ನಿರ್ಧರಿಸಿದ ಅವನು ಕೈ ಕಟ್ಟಿ ಕೂಡ್ರಲಿಲ್ಲ. ಟಿಪ್ ಟಾಪ್ ಡ್ರೆಸ್ ಮಾಡಿಕೊಂಡು, ಕನ್ಯಾನ್ವೇಷಣೆಗೆ ತೊಡಗಿದ. ಹೀಗೆ ಹತ್ತಾರು ಕಡೆ ತಿರುಗಾಡಿದ ಮೇಲೆ ಅದೇ ನಗರದ ಇನ್ನೊಂದು ಕಛೇರಿಯ ಸೀನಿಯರ್ ಅಟೆಂಡರನಾಗಿ ಕೆಲಸ ಮಾಡುತ್ತಿದ್ದ ಅಯ್ಯಾಳಪ್ಪ ತನ್ನ ಮಗಳನ್ನು ಕೊಟ್ಟು ಮದುವೆ ಮಾಡುವುದಾಗಿ ಮುಂದೆ ಬಂದ. ಹುಡುಗಿ ಇದ್ದುದರ ಪೈಕಿ ವಯನಾಗಿದ್ದಳು. ಹಿರೇರನ್ನು ಕರೆದುಕೊಂಡು ಬಂದು ಈಳ್ಗೇ ನಾಮಾಚಾರ ಮಾಡಿಕೊಂಡು ಹೋಗುವಂತೆ ಅಯ್ಯಾಳಪ್ಪ ಸೂಚಿಸಿದ. ಹುಡುಗಿಯ ಕಟ್ಟುಮಸ್ತಾದ ಈಸ್ಟ್‌ಮನ್ ಕಲರು ಪೋಟೋ ಹಿಡಿದುಕೊಂಡು ಮುದುಕಿಗೆ ತೋರಿಸಿ ಒಪ್ಪಿಸಿ ಕರೆತರಲು ಆ ರಾತ್ರಿಯೇ ವಡ್ಡಟ್ಟಿ ಕಡೆ ಪ್ರಯಾಣ ಬೆಳೆಸಿದ.

ಎರಡು ಐತಿಹಾಸಿಕ ಗುಡ್ಡಗಳ ನಡುವೆ ನಡೆದು ಕರಗಲ್ಲು ದಾಟಿ ದುತ್ತನೆ ಪ್ರತ್ಯಕ್ಷನಾದ ಇನ್‌ಸರ್ಟು ಮಾಡಿದ ಅವನನ್ನು ಕಂಡು ಗ್ರಾಮದ ಅನೇಕರು ಓಹ್ ತಮ್ಮನ್ನು ಹಿಡಕೊಂಡೊಯ್ಲಿಕೆ ಯಾದೋ ದೇವ್ರು ಬಂದ್ಯೆತೆ ಎಂದು ಅನ್ಯಥಾ ಭಾವಿಸಿ ಕಾಲಿಗೆ ಬುದ್ಧಿ ಹೇಳಿದರು. ಹಾಗೆ ಓಡುತ್ತಿದ್ದ ಅವರನ್ನೆಲ್ಲ ತರುಬಿ ತನ್ನನ್ನು ತಾನು ಪರಿಚಯಿಸಿಕೊಂಡ. ಓಯ್ ನಮ್ನೆಟ್ಕಲ್ಲು ದೊಡ್ಡಾಪೀಸ್ರಾಗಿಬಿಟ್ಟಾನೆ ಎಂದುಗ್ಗರಿಸುತ್ತ ಅವರೆಲ್ಲ ಅವನ ಸುತ್ತುಮುತ್ತ ಮೆರವಣಿಗೆಯೋಪಾದಿಯಲ್ಲಿ ಮುದುಕಿ ಹಟ್ಟಿಗೆ ಕರೆದೊಯ್ದರು. ಮುದುಕಿ ಕ್ರಮೇಣ ಅದು ತಮ್ಮ ನೆಟ್ಟಕಲ್ಲೆ ಎಂದು ಅರ್ಥ ಮಾಡಿಕೊಂಡಿತು. ಸರಕಾರಿ ಸಂಬಳ ತಿಂಬುವವನ ಎದುರು ಹೆಂಗೆ ಮಾತಾಡುವುದು! ಹೆಂಗೆ ಬಿಡುವುದು ಎಂದೊಂದು ಕ್ಷಣ ಕಸಿವಿಸಿ ಅನುಭವಿಸಿ ಕ್ರಮೇಣ ಸಾವರಿಸಿ ಕೊಂಡಿತು. ಷಡುರಸವ ಸವೆಸಿ ನಾನಾ ರೀತಿಯಲ್ಲಿ ಮರಿ ಮೊಮ್ಮಗನನ್ನು ಸತ್ಕಾರ ಮಾಡಿತು. ಎಲ್ಲ ಆದ ಮೇಲೆ ವಡವಟ್ ಮದುವೆ ಪ್ರಸ್ತಾಪವೆತ್ತಿದ. ಅವನ ತಲೆ ಮೇಲೆ ನಾಲ್ಕು ಅಕ್ಷತೆ ಕಾಳು ಹಾಕಲು ತುದಿಗಾಲ ಮೇಲೆ ನಿಂತಿದ್ದ ಮುದುಕಿ ಅವನು ತೋರಿಸಿದ ಹುಡುಗಿ ಪೋಟೋ ನೋಡುತ್ತಲೇ ಕಣ್ಣು ಬಾಯಿಗಳಿಂದ ಚಾಣು ಸುತ್ತಿಗೆ ಪ್ರಹರಿಸತೊಡಗಿತು. ಇಡೀ ಗ್ರಾಮದ ಜನ ಮುದುಕಿಯ ಅಭಿಪ್ರಾಯವನ್ನು ಬೆಂಬಲಿಸಿದರು. ಕುಬುಸ ತೊಡೋಳ್ನ ಅದೆಂಗೋ ಮದ್ವಿ ಆಗ್ತೀಯಾ....... ಈ ಊರಂಬೋ ಊರಾಗ ಯಾವ ಯಣು ಮಗಳಾದ್ರು ಕುಬುಸ ತೊಟ್ಟಾಳೇನೊ ನೋಡು ಎಂದು ಕಿಡಿಕಿಡಿ ಕಾರಿತು. ಕುಬುಸದ ವಿಷಯದಲ್ಲಿ ಮುದುಕಿಗೂ, ನೆಟ್ಟಕಲ್ಲುವಿಗೂ ನಡೆದ ಮಾತಿನ ಚಕಮಕಿಯಲ್ಲಿ ಕೆಲವು ಅಪರೂಪದ ಸಂಗತಿಗಳೂ ಹೊರಬಿದ್ದವು. ಎಂದು ಕುಬುಸ ತೊಡುವಿರೋ ಅಂದೇ ಜಾಗ ಖಾಲಿ ಮಾಡುವುದಾಗಿ ಅಪ್ಪಣೆ ಕೊಟ್ಟಿರುವ ಉಡುಸಲಮ್ಮ ದೇವತೆಯ ಮಾತಿಗೆ ಬೆಲೆ ಕೊಟ್ಟೇ ವಡವಟ್ಟಿಯ

ಯಾವ ಹೆಣ್ಣು ಕುಬುಸು ತೊಡುವಂಥ ಅಪರಾಧ ಮಾಡುವುದಿಲ್ಲವಂತೆ. ತಮ್ಮ ಜಾತಿಯ ಕುಲದೇವರೇ ಕುಬುಸ ತೊಟ್ಟಿಲ್ಲದಿರುವಾಗ ನರಮಾನವರು ಹೇಗೆ ಕುಬುಸ ತೊಡುವುದು ? ಕದ್ದು ಮುಚ್ಚಿ ಕುಬುಸ ತೊಡುತ್ತಿದ್ದ ಕಾರಣದಿಂದಾಗಿ ಮೇಲಗಿರಿಯವರ ವಂಶ ನಿರ್ವಂಶವಾಗಿ ಬಿಟ್ಟಿರುವುದಂತೆ! ಇಂಥ ಹತ್ತಾರು ಸಂಗತಿಗಳು ಹೊರಬಿದ್ದು ಫಜೀತಿಗಿಟ್ಟುಕೊಂಡ ನೆಟ್ಟಕಲ್ಲು ಕಾಲ ಬದಲಾಗಿದೆ ಎಂದೂ, ವಡ್ಡಟ್ಟಿಯ ಪ್ರತಿಯೋರ್ವ ಮಹಿಳೆ ಕುಬುಸ ತೊಡಬೇಕಿರುವುದೆಂದೂ ಕುಬುಸ ನಾಗರಿಕ ಸಮಾಜದ ಲಕ್ಷಣವೆಂದೂ ಗಟ್ಟಿಯಾಗಿ ಹೇಳುವ ಪ್ರಯತ್ನ ಮಾಡಿ ಗ್ರಾಮಸ್ಥರಿಂದ ಅನೇಕ ವಿಧದ ಪ್ರತಿಭಟನೆಯನ್ನು ಎದುರಿಸಿದ. ಮುದುಕಿ ಕರುಳು ಸಂಬಂಧ ಹರಿದುಕೊಂಡು ಕುಬುಸ ತೊಡೋ ಹುಡುಗೀನ ಮದುವೆಯಾಗಿ ಅದೇನು ಅನುಭೋಸ್ತಿಯೋ ಅನುಭೋಸು ಎಂದು ಎದೆ ಎದೆ ಬಡಿದುಕೊಂಡಿತು. ಇನ್ನು ಈ ಮಾನವ ರೂಪಿ ಗೋರ್ಕಲ್ಲುಗಳನ್ನು ಒಪ್ಪಿಸುವುದು ಅಸಾಧ್ಯವೆಂದು ಭಾವಿಸಿದ ಮಿ. ವಡವಟ್ ಒನ್, ಟೂ, ತ್ರೀ ಎಂದು ಮುಂತಾಗಿ ವಾರ್ನಿಂಗ್ ನಂಬರುಗಳನ್ನು ಎಣಿಸಿ ನಿಮ್ಮಿಷ್ಟ ಎಂದು ಅಂದೇ ನಗರಕ್ಕೆ ವಾಪಾಸಾದನು. ಕನ್ಯಾಪಿತೃ ಅಯ್ಯಾಳಪ್ಪಗೆ ಏನೇನು ವಿವರಿಸಬೇಕೋ, ಅದೆಲ್ಲವನ್ನು ವಿವರಿಸಿದನು. ಅದೇ ಜನಾಂಗದಿಂದ ಬಂದಿದ್ದರೂ ಆತಗೆ ಇದು ಬಲು ವಿಚಿತ್ರವೆನ್ನಿಸಿತು. ಅವರ ಪೈಕಿ ಕೆಲವರು ವರನ ಪರವಾಗಿ ನಿಂತು ತಂದೆ, ತಾಯಿ, ಅಕ್ಕ, ಅಜ್ಜಿ ಪಾತ್ರ ವಹಿಸಿದರು. ತೀರ ಹತ್ತಿರದಲ್ಲಿದ್ದ ಶುಭ ಮುಹೂರ್ತ ನೋಡಿ ಅದೇ ಗಾಯತ್ರಿ ನಗರದ ಕಲ್ಯಾಣ ಮಂಟಪದಲ್ಲಿ ವಡವಟ್‌ನ ಮದುವೆ ಮಾಡಿ ಮುಗಿಸಿದರು. ಸೋಬನ ಆದ ಮರುದಿನವೇ ಏನೇನು ಕೊಡಬೇಕೋ, ಅದೆಲ್ಲವನ್ನು ಕೊಟ್ಟು ಇಲ್ಲದ್ದನ್ನು ಇದೆ ಅಂತ ತಿಳ್ಕೊಂಡು ಜೀವನ ನಡೆಸಿಕೊಂಡು ಹೋಗ್ರಿ ಎಂದು ಆಶೀರ್ವದಿಸಿ ನೂತನ ದಂಪತಿಗಳನ್ನು ಆಟೋ ಹತ್ತಿಸಿ ಕಳಿಸಿಕೊಟ್ಟರು.

ವಡವಟ್‌ನ ಬಾಳ ಸಂಗಾತಿಯಾಗಿ ಬಂದ ಕಮಲ ಎಂಬ ಯುವತಿಯು ಟೆನ್ತನ್ನು ಫೇಲಾಗಿದ್ದರೂ ತುಂಬ ಜಾಣೆ ಅನ್ನಿಸಿಕೊಂಡಿದ್ದಳು. ಗಂಡನ ಮನೆಯನ್ನು ಪ್ರವೇಶಿಸಿದ ದಿನವೇ ಗೃಹ ಖಾತೆಯ ಜೊತೆಗೆ ಅರ್ಥ ಖಾತೆಯನ್ನೂ ವಹಿಸಿಕೊಂಡಳು. ಏನು ತಿನ್ನಬೇಕು! ಎಷ್ಟು ತಿನ್ನಬೇಕು! ಎಷ್ಟು ಉಳಿತಾಯ ಮಾಡಬೇಕು! ಎಂದು ಮುಂತಾದ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದಳು. ಇನ್ನು ಮಕ್ಕಳು ಮರಿ ಆದ ಮೇಲೆ ಇನ್ನೆಷ್ಟು ಉಳಿಸಲು ಯೋಚಿಸುತ್ತಾಳೋ ಎಂದು ವಡವಟ್ ಒಳಗೊಳಗೆ ಅಂದುಕೊಂಡ. ತಾನು ಆಕೆಯನ್ನು ತುಂಬ ಪ್ರೀತಿಸುತ್ತಿದ್ದ. ಆಕೆಗೆ ಸಣ್ಣಗೆ ಹೆದರುತ್ತಿದ್ದ. ಆಕೆಯ ಯಾವ ಮಾತನ್ನೂ ಮೀರುತ್ತಿರಲಿಲ್ಲ. ಆಫೀಸಿನ ಸಹೋದ್ಯೋಗಿಗಳ ಪತ್ನಿಯರಿಗೆಲ್ಲ ಅವನ ವಿಧೇಯತೆಯ ಸುದ್ಧಿ ಮುಟ್ಟಿತು. ಅವರೆಲ್ಲ ತಂತಮ್ಮ

ಗಂಡಂದಿರನ್ನು ಅಟೆಂಡರು ವಡವಟ್ಟನ್ನು ನೋಡಿ ಕಲಿತುಕೊಳ್ರಿ ಎಂದು ತಾಕೀತು ಮಾಡತೊಡಗಿದರು. ಅವರಿವರ ಗೊಡವೆಕಡೆ ವಡವಟ್ ದಂಪತಿಗಳು ಕಿವಿ ಚಾಚುತ್ತಿರಲಿಲ್ಲ. ತಾವಾಯಿತು, ತಮ್ಮ ಮನೆ ಬಾಳುವೆಯಾಯಿತು.

ದೇವರು ಕಣ್ಣು ತೆಗೆದ, ಒಂದರ ಹಿಂದೆ ಒಂದರಂತೆ ಒಟ್ಟು ಮೂರಾದವು. ಇರೋ ಮನೆ ಚಿಕ್ಕದಾಗಲು ಆಕೆ ಮತ್ತಷ್ಟು ಆರ್ಥಿಕ ಸುಧಾರಣೆಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದಳು. ವಡವಟ್ ಅದನ್ನು ಒಪ್ಪಿ ಪಾಲಿಸತೊಡಗಿದ. ಆಗೊಮ್ಮೆ, ಈಗೊಮ್ಮೆ ಐದೋ, ಹತ್ತೋ ಕದ್ದು ಮುಚ್ಚಿ ಉಳಿಸಿಕೊಂಡು ಖರ್ಚು ಮಾಡುತ್ತಿದ್ದ. ಕಮಲ ಅದು ಹೇಗೋ ಪತ್ತೆ ಹಚ್ಚಿ ಕಟ್ ಮಾಡಿದಳು. ಉಳಿತಾಯ ಖಾತೆಯನ್ನು ಸದೃಢಗೊಳಿಸ ಬೇಕಾದರೆ ಏನು ಮಾಡಬೇಕು ಎಂಬ ಬಗ್ಗೆ ವಡವಟ್ ದಂಪತಿಗಳು ಇಡೀ ರಾತ್ರಿ ಚರ್ಚಿಸಿ ಒಂದು ನಿರ್ಧಾರಕ್ಕೆ ಬಂದರು. ಅದೇನೆಂದರೆ ಸ್ವಾಸ್ಥಿ ವಡ್ಡಟ್ಟಿಯಲ್ಲಿರೋ ಚರ–ಸ್ಥಿರ ಆಸ್ತಿಯನ್ನು ಹೋದಷ್ಟಕ್ಕೆ ಮಾರಿ ಮುದುಕಿಯನ್ನು ನಗರಕ್ಕೆ ಕರೆತಂದು ತಮ್ಮಲ್ಲಿಯೇ ಇಟ್ಟುಕೊಳ್ಳುವುದು, ಆಕೆ ಇಲ್ಲಿದ್ದರೆ ತಮಗೆ ತಿಂಗಳು ತಿಂಗಳು ಹಣ ಕಳಿಸುವುದು ತಪ್ಪುತ್ತದೆ ಮತ್ತು ಕ್ಷೇಮಲಾಭ ವಿಚಾರಿಸಲೋಸುಗ ದಟ್ಟಂಡಿ ದಾರಂಡಿ ಅಡ್ಡಾಡುವುದೂ ತಪ್ಪುತ್ತದೆ. ಅದಲ್ಲದೆ ಮುದುಕಿ ಮೊಮ್ಮಕ್ಕಳನ್ನು ಆಡಿಸಿಕೊಂಡು ಮನೆಯಲ್ಲಿದ್ದರೆ ತಾನು ಅಗರಬತ್ತಿ ಕೆಲಸಕ್ಕೆ ಹೋಗಿ ಒಂದಿಷ್ಟು ಸಂಪಾದಿಸಬಹುದು ಎಂಬ ಲೆಕ್ಕಾಚಾರ ಕಮಲಳದಾಗಿತ್ತು. ಆಕೆಯ ಈ ಎಲ್ಲ ನಿರ್ಣಯಗಳು ಸ್ವಾಗತಾರ್ಹವೇ!

ಮರುದಿನವೇ ವಡವಟ್ ತನ್ನ ಮುತ್ತಜ್ಜಿಯನ್ನು ಕರೆತರಲೋಸುಗ ವಡ್ಡಟ್ಟಿಗೆ ಪ್ರಯಾಣ ಬೆಳೆಸಿದನು. ವಿವಾಹಿತನೋರ್ವನ, ತಂದೆಯೋರ್ವನ, ಸರಕಾರಿ ನೌಕರನೋರ್ವನ ಗತ್ತಿನಿಂದಲೇ ಅವನು ಬಸ್ಸು ಹತ್ತಿ ಸೀಟು ಹಿಡಿದು ಹತ್ತಿ ತಲುಪಿದ್ದು ವಡ್ಡಟ್ಟಿಗೊ, ಗುಣಸಾಗರದ ನಡುವೆ ದಿನಕ್ಕೊಂದೆರಡು ಮೂರಾವರ್ತಿ ಸೈಕಲ್ ರಿಕ್ಷಾ ಅಡ್ಡಾಡುತ್ತಿರುವ ಸಂಗತಿ ತಿಳಿದು ಅವನ ಸಂತೋಷಕ್ಕೆ ಪಾರವೇ ಇರಲಿಲ್ಲ. ಒಂದು ಸಂತೋಷದ ಮತ್ತು ಆಶ್ಚರ್ಯದ ಸಂಗತಿ ಎಂದರೆ ಹಾಗೆ ಸೈಕಲ್ ರಿಕ್ಷಾ ತುಳಿಯುತ್ತಿದ್ದ ವ್ಯಕ್ತಿ ತನ್ನ ಬಾಲ್ಯದ ಗೆಳೆಯನೇ ಆಗಿದ್ದನೆಂಬುದು. ಕಲ್ಲು ಹೊಡ್ದು ಒಂದು ಹೊತ್ತು ಉಂಬುವುದಕ್ಕಿಂತ ರಿಕ್ಷಾ ತುಳಿದು ಎರಡು ಹೊತ್ತು ಉಂಬುವುದೇ ವಾಸಿ ಎಂದು ಅವನು ಹೇಳಿದ್ದು ಸರಿ ಅನ್ನಿಸಿತು. ಹಾಗೆಯೇ ವಡ್ಡಟ್ಟಿಯ ಅನೇಕ ಹುಡುಗರು ಸಾಲೆ ಕಲಿಯಲೆಂದು ಗುಣಸಾಗರಕ್ಕೆ ಬಂದು ಹೋಗುತ್ತಿರುವರೆಂಬಿವೇ ಮೊದಲಾದ ಅನೇಕ ಸಂಗತಿಗಳನ್ನು ಹೇಳಿ ಹೇಳಿ ಊರು ಮುಟ್ಟಿಸಿದ.

ಮುದುಕಿ ಅದೇ ಬಿಗುಮಾನದಿಂದ ಬರಮಾಡಿಕೊಂಡು ಮೂಲೆ ಹಿಡಿಯಿತು. ಓಣಿ ಸರೀಕರ ನೆರವಿನಿಂದ ಅದನ್ನು ಮೂಲೆಯಿಂದ ಕದಲಿಸಿ ಮಾತಾಡಿಸುವಷ್ಟರಲ್ಲಿ ಹೊಟ್ಟೆಯಲ್ಲಿದ್ದುದು ಒಂದು ಅಡಿ ಕೆಳಕ್ಕೆ ಸರಿಯಿತು. ನಿನಗೇನು ಮೊಮ್ಮಕ್ಕಳ್ನ ನೋಡೋ ಆಸೆ ಇಲ್ಲೇನಬೇ ಎಂದು ಇಚ್ಛಾಮರಣಿಯಾದ ಅದನ್ನು ಕೇಳಿದ. "ಯಾಕಿಲ್ಲಲೋ ಬಾಡ್ಕಾವ್" ಅಂತ ಒಂದೇ ಮಾತು ಅಂತು. ಹಂಗಿದ್ರೆ ಹೊಂಡು ಅಂದ. ಎರಡಕ್ಕೂ ನಕಾರಾತ್ಮಕವಾಗಿ ತಲೆ ಅಲ್ಲಾಡಿಸಿತು.

ಕಮಲಳ ಮಾತಿಗೆ ತಪ್ಪದ ಗಂಡನಾದ ವಡವಟ್ ಮುದುಕಿಯನ್ನು ತನ್ನ ಸಂಗಡ ನಗರಕ್ಕೆ ಕರೆದೊಯ್ಯಲೇಬೇಕೆಂದು ಕೂತು ನಿಶ್ಚಯ ಮಾಡಿದನು. ಅದು ವಲ್ಲೆ ಅಂದರೇನಾಯ್ತು; ಓಣಿಯವರು ಸತ್ತಿದ್ದಾರೆಯೇ! ಅವರವರ ಅಂತಸ್ತಿಗನುಗುಣವಾಗಿ ಸಂಬಂಧವಾಚಕಗಳನ್ನು ಪ್ರಯೋಗಿಸಿ ಅವರಿವರ ಕೈಕಾಲು ಹಿಡಿದನು. ಅವನ ವಯಸ್ಸಾದ ಮಾತುಗಳಿಗೆ ಕರಗಿ ಅವರು ಉಡುಸಲಮ್ಮಗೆ ಅವನಿಂದ ದಂಡ ಕಟ್ಟಿಸಿ ಮುದುಕಿಯನ್ನು ನಟ್ಟನಡುವೆ ಕೂಡ್ರಿಸಿಕೊಂಡು ಬಗೆಬಗೆಯ ಮಾತುಗಳಿಂದ ತಿದ್ದಿ ತೀಡತೊಡಗಿದರು. ಬದಲಾಗಿರುವ ಕಾಲವನ್ನು ; ನಾಕು ಜನ ಹೆಂಗಿರ್ತಾರೋ ಹಂಗಿರಬೇಕೆಂದು ಇಳಿವಯಸ್ಸಿನಲ್ಲಿ ಕುಂತ್ಗಂಡು ಉಂಬಬೇಕೆಂದು ಇವೇ ಮುಂತಾದ ಮಾತುಗಳನ್ನು ಪರಿಪರಿಯಾಗಿ ಹೇಳಿದರು. ಜೊತೆಗೆ ವಡವಟ್ ಅಂಗಲಾಚಿದನು. ಮುದುಕಿ ಕರುಳಿನ ಕುಡಿಗಳನ್ನು ಕಣ್ಣಲ್ಲಿ ತಂದುಕೊಂಡು ಚಾವತ್ತಿನಲ್ಲಿ ಅನೇಕ ಸಂಗತಿಗಳನ್ನು ಯೋಚಿಸೀ ಯೋಚಿಸೀ ಒಪ್ಪಿಕೊಂಡಿತು. ಹಳೆಪಳೆ ಸೀರೆಗಳನ್ನೆಲ್ಲ ಗಂಟು ಕಟ್ಟಿಕೊಂಡು ಪಯಣಕ್ಕೆ ಸಿದ್ಧವಾಯಿತು. ಒಂಚೂರು ಕಡಿಮೆಯಾಗದಂತೆ ಮುದುಕಿಯನ್ನು ಬಲು ಜೋಪಾನವಾಗಿ ನೋಡಿಕೊಳ್ಳಬೇಕೆಂದು ವಡವಟ್‌ಗೆ ಹಿತವಚನ ಹೇಳಲೋಸುಗ ನಾಕೈದು ಮಂದಿ ಗುಣಸಾಗರದವರೆಗೆ ಹೊರಟು ನಿಂತರು.

ಗುಣಸಾಗರದಲ್ಲಿ ಬಸ್ಸು ಹತ್ತುವಾಗ ಮುದುಕಿಯ ಕಾಲುಗಳು ಥರಥರ ನಡುಗ ತೊಡಗಿದವು. ತನ್ನ ಜೀವಮಾನದಲ್ಲಿ ಅದೇ ಮೊದಲ ಬಾರಿಗೆ ಬಸ್ಸು ಹತ್ತುತ್ತಿರುವುದು. ಅದು ಒಂದು ಸಲ ಗಂಡನ ಮನೆವರೆಗೆ ಬಂಡಿಯಲ್ಲಿ ಪ್ರಯಾಣ ಮಾಡಿರುವುದುಂಟು. ಕಾಡು ಬಲವಾಗಿ ಕೈಬೀಸಿ ಕರೆಯುತ್ತಿರುವ ಮುಚ್ಚಂಜೆ ಹೊತ್ತಿನಲ್ಲಿ ದುಬಾರಿ ಬಸ್ಸಿನಲ್ಲಿ ದೂರ ದೇಶಕ್ಕೆ ಪ್ರಯಾಣ ಮಾಡುವುದೆಂದರೇನು! ಅದು ಕರೆದೊಯ್ಯುವ ಪರಿ ಎಂಥದೋ! ಏನೋ ಕರುಳಿನ ಕುಡಿಗಳನ್ನು ನೋಡುವುದೂ ಒಂದೆ ; ದೇವಾನು ದೇವತೆಗಳನ್ನು ನೋಡುವುದೂ ಒಂದೆ. ಸುತ್ತಾನ್ನಾಕಡೆ ಕೊಳವೆ ಚಣ್ಣದವರು ಅಡುಗೋಲಜ್ಜಿಯ ದೇಹ ಸಿರಿಯನ್ನು ನೋಡುತ್ತಿರಲು ಅತ್ತ ವಾಪಸು ಬರುವೆನೋ

ಇಲ್ಲವೋ ಎಂಬಂತೆ ಭಾವಿಸಿ ಅಪ್ಪಿಕೊಳ್ಳುವವರನ್ನು ಅಪ್ಪಿಕೊಂಡಿತು. ಸಬಾಡೀನೇಟ್ಸ್‌ಗಳಿಂದ ಪದಾಭಿವಂದನೆ ಮಾಡಿಸಿ ಕೊಂಡಿತು. ಎಲ್ಲರೂ ಕಣ್ಣಲ್ಲಿ ನೀರು ತಂದು ಕೊಂಡಿರಲಿಕ್ಕೆ ; ಕೈಗಳನ್ನು ಹಿತಮಿತವಾಗಿ ಅಲುಗಾಡಿಸುತ್ತಿರಲಿಕ್ಕೆ ಮುದುಕಿ ಬಸ್ಸಾರೋಹಣ ಮಾಡಿ ಇತಿಹಾಸ ಸೃಷ್ಟಿಸಿತು. ಬಸ್ಸು ಚಲಿಸತೊಡಗಿದಾಗ, ದೇಹವೆಂಬ ಸಮುದ್ರದಿಂದ ಪ್ರಾಣವೆಂಬ ಮೀನು ಜಿಗಿದು ಸುಡುವ ಮರಳಲ್ಲಿ ಬಿದ್ದಂಥ ಪ್ರಾಣಾಂತಿಕ ಅನುಭವ ಒಂದು ಕ್ಷಣವಾಯಿತು. ಬಸ್ಸು ಊರು ಬಿಟ್ಟೂ ಬಿಟ್ತು. ಮುದುಕಿನ್ನು ಯಾಕಾದರೂ ಬಸ್ಸಿನಲ್ಲಿ ಹತ್ತಿಸಿಕೊಂಡೆವಪ್ಪಾ ಶಿವನೆ ಎಂದು ಕಂಡಕ್ಟರ್ ಒಂದು ನೂರು ಸಲ ಪೇಚಾಡಿರಬಹುದು! ಬೇಕಂತಾಗಲೀ, ಬೇಡವಂತಾಗಲೀ ಮುದುಕಿ ಆ ಪ್ರಕಾರವಾಗಿ ವರ್ತಿಸಿರಲಿಲ್ಲ. ಒಂದೊಂದು ಗದಕಿಗೆ ಅದರ ದೇಹವೆಂಬೋ ದೇಹವು ಆ ರೀತಿಯಾಗಿ ಪ್ರತಿಕ್ರಿಯಿಸುತ್ತಿತ್ತು. 'ಅದು ಬಸ್ಸಿನೊಳಗೆ ಪ್ರಯಾಣಿಸುತ್ತಿರುವುದೋ! ಬಸ್ಸೇ ಅದರೊಳಗೆ ಪ್ರಯಾಣಿಸುತ್ತಿರುವುದೋ ಎಂಬಂಥ ಅನುಭವ'. ಎಷ್ಟು ಬಿಗಿ ಹಿಡಿದುಕೊಂಡರೂ ಮೈ ತಿರುಗದೆ ಸುಮ್ಮನಿರಲಿಲ್ಲ. ಹೊಟ್ಟೆಯಲ್ಲಿದ್ದದ್ದು ಬಾಯಿಗೆ ಬರುವುದು ತಡವಾಗುತ್ತಿರಲಿಲ್ಲ. ಹಿಂದು ಮುಂದುಗಡೆ ಕೂತಿದ್ದ ಸಹ ಪ್ರಯಾಣಿಕರು ರೇಗಾಡುವುದು, ವಿಥ್ ಔಟ್ ಬ್ಲೌಜು.......ಶೇಮ್‌ಲೆಸ್ ಎಂದು ಕೆಲವರು ಗೊಣಗುವುದು ಮಾಮೂಲಾಗಿತ್ತು. ಆದರೆ ವಡವಟ್ ಮಾತ್ರ ದಾರಿಯುದ್ದಕ್ಕೂ ತಾಳ್ಮೆ ಎಂಬ ಲೇವಣಿಯನ್ನು ಕಳೆದುಕೊಳ್ಳಲಿಲ್ಲ.

ಊರು ತಲುಪುವಷ್ಟರಲ್ಲಿ ಮುದುಕಿ ಹಣ್ಣುಗಾಯಿ, ನೀರುಗಾಯಿ ಆಗಿಬಿಟ್ಟಿತು. ಈಗ ಸಾಯುವೆನೋ; ಇನ್ನೊಂದು ಸೊಲುಪ ಹೊತ್ತಿಗೆ ಸಾಯುವೆನೋ ಎಂಬಂತಾಗಿದ್ದ ಅದರ ರೆಟ್ಟೆ ಹಿಡಿದು ತುಂಬ ಎಚ್ಚರಿಕೆಯಿಂದ ವಡವಟ್ ಕೆಳಕ್ಕಿಳಿಸಿದನು. ಸೊಲುಪ ಸೊಂಟವನ್ನು ಮೇಲೆತ್ತಿ; ಮಂಜುಗವಿದಿದ್ದ ಕಣ್ಣುಗಳನ್ನು ಬಿಚ್ಚಿ ನೋಡಿ ಒಂದು ಕ್ಷಣ ಅವಕ್ಕಾಗಿ ಬಿಟ್ಟಿತು. ಇದ್ಯಾವ ಸೀಮೆ ಊರಿಗೆ ಕರ್ಕೊಂಡು ಬಂದಿಯೋ.... ಎಂದು ಉದ್ಗರಿಸಿತು. ಆ ನಗರವನ್ನು; ಆ ನಗರದ ಯಾವತ್ತು ಥಳಕು ಬಳುಕಿನ ಮಂದಿಯನ್ನು ಮಾತಿನಿಂದ ಥಳಿಸತೊಡಗಿದ ಆ ಮುದುಕಿಯನ್ನು ಕರೆದೊಯ್ದು ಗಾಯತ್ರಿ ನಗರದ ತಮ್ಮ ಮನೆಗೆ ಸೇರಿಸುವಷ್ಟರಲ್ಲಿ ಆ ಮಹಾಶಯನಿಗೆ ಸಾಕುಸಾಕಾಗಿ ಹೋಯಿತು.

ಆ ಮುದುಕಿ ಸೇರ್ಪಡೆಯಿಂದಾಗಿ ಗಾಯತ್ರಿ ನಗರದ ಚಹರೆಯೇ ಬದಲಾಗಿ ಬಿಟ್ಟಿತು. ಇಷ್ಟೊಂದು ವಯಸ್ಸಾಗಿರುವ ಮುದುಕಿ ತನ್ನ ಗಂಡನ ವಂಶಾವಳಿಯಲ್ಲಿರ ಬಹುದೆಂದು ಕನಸು ಮನಸ್ಸಿನಲ್ಲೂ ಯೋಚಿಸಿರದಿದ್ದ ಕಮಲಳೇ ಒಂದು ಕ್ಷಣ ಅವಾಕ್ಕಾಗಿ ಬಿಟ್ಟಳೆಂದ ಮೇಲೆ ಉಳಿದವರ ಪಾಡೇನು! ವಡವಟ್‌ನ ಮಕ್ಕಳನ್ನು ಕಣ್ತುಂಬ ನೋಡಿ

ಪ್ರಸನ್ನಚಿತ್ತೆಯಾದ ಮುದುಕಿ ಕ್ರಮೇಣ ಪ್ರೇಕ್ಷಣೀಯ ವಸ್ತುವಾಯಿತು. ದಿನನಿತ್ಯ ಓಣಿಯ ಒಬ್ಬರಲ್ಲಾ ಒಬ್ಬರು ಮನೆಗೆ ಬರುವುದು "ಏನ್ರಿ ಕಮಲಾರವ್ರೆ....... ನಿಮ್ಮನೇಲಿ ಓಲ್ಡೆಸ್ಟ್ ವುಮ್ಯಾನ್ ಇದೆ ಅಂತಲ್ಲ...... ನೋಡ್ಕೊಂಡು ಹೋಗೋಣಾಂತ ಬಂದ್ವಿ" ಎಂದು ಕೇಳುವುದು. ಹಾಗೆ ಬಂದವರಿಗೆ ಕಮಲಾ ಒಂದು ಕಪ್ಪು ಚಹಾನೋ; ಜ್ಯೂಸೋ ನೀಡಿ ಸತ್ಕರಿಸಿ ಚರಪಟ್ಟಾಧ್ಯಕ್ಷೆ ಮುದುಕಿಯನ್ನು ತೋರಿಸುವುದು; ಆ ಅತಿಥಿ ಅಬಾಗರು ಅದರ ಕಡೆ ಡೈನಾಸಾರಸ್ ಕಡೆ ನೋಡುವಂತೆ ಹುಳ ಹುಳ ನೋಡುವುದು, ಅದರ ದೇಹಕ್ಕಂಟಿರುವ ಚರ್ಮ ಸುಕ್ಕುಗಟ್ಟಿರುವ ಪರಿಗೆ ಬೆರಗಾಗುವುದು, ಯಾರಾದರೋ ಒಬ್ಬರು ಅಜ್ಜಿ ಪ್ರಥಮ ಸ್ವಾತಂತ್ರ ಸಂಗ್ರಾಮ ನೋಡಿದ್ದೀಯಾ ಎಂಬಂಥ ಪ್ರಶ್ನೆಗಳನ್ನು ಕೇಳುವುದು, ಬೆರಗುಗೊಳ್ಳುವುದು. ಆ ಬೆರಗನ್ನು ಅಕ್ಕಪಕ್ಕದ ಮನೆಗೆ ಹೇಳುವುದು, ಕೇಳುವುದು ಹೀಗೆ ನಡೆದಿತ್ತು. ಹೆಂಗಸರು ಮಕ್ಕಳಂದ ಮೈ ಚಳ ಬಿಟ್ಟು ನೋಡಿಸಿಕೊಳ್ಳುತ್ತಿದ್ದ ಮುದುಕಿ ಗಂಡಸರೆದುರು ಮುದುಡಿಕೊಂಡು ಬಿಡುತ್ತಿತ್ತು ನಾಚಿಕೆಯಿಂದ.

ಎಚ್.ಜಿ. ರಾಜು ಎಂಬ ಹವ್ಯಾಸಿ ಛಾಯಾಗ್ರಾಹಕ ಅದಾವ ಮಾದರಿಯಿಂದಲೋ ತೆಗೆದ ಅದರ ಪೋಟೋಗಳು ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗದಿದ್ದಲ್ಲಿ ವೆಂಕಟೇಶ ಗಲಗಲಿ ಎಂಬ ಸಮಾಜ ಶಾಸ್ತ್ರಜ್ಞನಾಗಲೀ ; ಅರುಣ್ ಕುಮಾರ್ ಮೂಲಿಮನಿ ಎಂಬ ಮಾನವ ಶಾಸ್ತ್ರಜ್ಞನಾಗಲೀ ; ಚಲಪತಿ ಕೊಂಬಳ ಎಂಬ ಕವಿಯಾಗಲಿ ಹುಡುಕಿಕೊಂಡು ಬಂದು ಗಂಟೆಗಟ್ಟಲೆ ಚರ್ಚೆ ನಡೆಸಿ ದೊಡ್ಡ ದೊಡ್ಡ ಲೇಖನಗಳನ್ನು ಬರೆಯುತ್ತಿರಲಿಲ್ಲ. ಆಫೀಸಿನಲ್ಲಿ ಎಲ್ಲರೂ ಮಿ. ವಡವಟ್ ನಿಮ್ಮನೇಲಿ ಬ್ಲೌಜ್‌ಲೆಸ್ ಮುದುಕಿ ಇದೆಯಂತೆ; ಹೌದೆ; ನೀನು ಬ್ಲೌಜ್‌ಲೆಸ್ ವಂಶದಿಂದ ಬಂದವ್ನಂತೆ ಹೌದಾ ಮುಂತಾಗಿ ಇಕ್ಕತೊಡಗಿದರು. ಅದರಿಂದ ಮನಸ್ಸಿಗೆ ಒಂದು ನಮೂನೆ ಮಾಡಿಕೊಂಡ ಆ ಮರ್ಯಾದೆ ಪುರುಷೋತ್ತಮ ತನ್ನ ಸಹಧರ್ಮಿಣಿಗೆ ಹೇಳಬಿಟ್ಟ. ಆಕೆಯೂ ಅಂಥದೇ ಮುಜುಗರ ಅನುಭವಿಸುತ್ತಿದ್ದಳು. ಮಕ್ಕಳೂ ತಮ್ಮ ಕಾರ್ಮೆಂಟ್ ಸ್ಕೂಲಲ್ಲಿ ಇಂಥ ಮಾತುಗಳಂದ ಕುಟುಕಿಸಿಕೊಂಡಿದ್ದರು. ಕುಬುಸ ತೊಟ್ಟು ಕೊಂಡರೆ ಆಗಿರುವ ವಯಸ್ಸಿಗೆ ಒಂದು ಶೋಭೆ ಬಂದಂತೆ ಎಂದು ಕೆಲವರು, ಈ ವಯಸ್ಸಿನಲ್ಯಾಕೆ ಕುಬುಸ ತೊಡಿಸ್ಲಿಕ್ಕೆ ಯೋಚಿಸಿದ್ದೀರಿ; ನೀವೇನಾದ್ರು ಕುಬುಸ ತೊಡಿಸಿದ್ರೀ ಅಂದ್ರ ಹೋದ ವಯಸ್ಸು ವಾಪಸು ಬಂದೀತಾ ಎಂದು ಹೇಳಲೆತ್ನಿಸಿದ ಕೆಲ ಆತ್ಮೀಯರನ್ನೂ ಲೆಕ್ಕಿಸದೆ ಆ ದಂಪತಿಗಳು ಆ ಮುದುಕಿಗೆ ಒಂದು ಕುಬುಸ ತೊಡಿಸಲು ಕೂತು ನಿಶ್ಚಯ ಮಾಡಿದರು.

ತನ್ನ ಯಾವತ್ತೂ ಪಂಚೇಂದ್ರಿಯಗಳನ್ನು ಗಟ್ಟಿ ಮುಟ್ಟಾಗಿಟ್ಟುಕೊಂಡಿದ್ದ ಮುದುಕಿ ತನಗೆ ಕುಬುಸ ತೊಡಿಸಬೇಕೆಂಬ ಸಂಚಿನ ವಿದ್ಯಾಮಾನಗಳನ್ನು ಗಮನಿಸದೆ

ಇರಲಿಲ್ಲ. ಅವರಿಗಿಂತ ಮೊದಲೆ ಅದು ಹುಷಾರಾಗಿ ಬಿಟ್ಟು ಡುರುಕಿ ಹಾಕಿಬಿಟ್ಟಿತು. ಕುಬುಸ ತೊಟ್ಟುಕೊಂಡು ನಾಗರಿಕ ಸಮಾಜವನ್ನು ಗೌರವಿಸಬೇಕೆಂದೂ; ತೊಡದಿದ್ದಲ್ಲಿ ಕುಟುಂಬದ ಪ್ರತಿಯೋರ್ವ ಸದಸ್ಯ ಸಮಾಜದಲ್ಲಿ ನಗೆಪಾಟಲಾಗುವನೆಂದೂ ಗಂಡ-ಹೆಂಡತಿ ಪರಿಪರಿಯಾಗಿ ಹೇಳಿದರು. ಅವರು ಕಣ್ಣಿಗೆ ಬಾಯಿ ತಂದುಕೊಂಡು ಕುಬುಸದ ಮಹಾತ್ಮೆಯನ್ನು ಎಷ್ಟೇ ಹೇಳಿದರೂ ಮುದುಕಿ ಅವರತ್ತ ಬೆನ್ನು ಮಾಡಿ ಬಿಟ್ಟಿತು. ಅವರು ಒತ್ತಾಯಿಸಿದಾಗ ತನ್ನನ್ನು ಕರೆದುಕೊಂಡು ಬಂದಲ್ಲಿಗೆ ಬಿಟ್ಟು ಬಿಡಿರೆಂದು ಘರ್ಜಿಸಿ ಬಾಯಿ ಮುಚ್ಚಿಸಿತು. ಯಾರನ್ನೇ ಆಗಲಿ ಕರೆದುಕೊಂಡು ಬಂದಷ್ಟು ಸುಲಭವಲ್ಲ, ಬಿಟ್ಟು ಬರುವುದು; ದಂಪತಿಗಳು ಇಟ್ಟುಕೊಂಡ ಫಜೀತಿಯನ್ನು ಯಶಸ್ವಿಯಾಗಿ ನಿಭಾಯಿಸಲು ವಿಶ್ವ ಪ್ರಯತ್ನ ಮಾಡಿದರು.

ಮುದುಕಿಯನ್ನು ಕುಬುಸವೋ ; ಕುಬುಸವನ್ನು ಮುದುಕಿಯೋ ಆಕರ್ಷಿಸ ಬೇಕಾದರೆ ಏನೇನು ಮಾಡಬೇಕೋ ಅವೆಲ್ಲ ತಂತ್ರಗಾರಿಕೆಯನ್ನು ಅವರು ಪ್ರಯೋಗಿಸಲಾರಂಭಿಸಿದರು. ಕುಬುಸ ತೊಟ್ಟು ಅತ್ಯಾಕರ್ಷಕವಾಗಿ ಕಾಣಿಸುವ ಗಾಯತ್ರಿ ನಗರದ ಹೆಸರಾಂತ ಮುದುಕಿಯರಾದ ಲಚ್ಚುಮಜ್ಜಿ, ಅಲುಮೇಲಮ್ಮಜ್ಜಿ, ಲಲಿತಾಷ್ಟಕಮ್ಮಜ್ಜಿಯೇ ಮೊದಲಾದವರನ್ನು ಕಂಡು ಇದ್ದ ವಿಷಯ ಹೇಳಿ, ಬಹುಮಾನದಾಮಿಷ ಒಡ್ಡಿಯೂ ಕರೆತಂದು ತಮ್ಮ ಬ್ಲೌಜ್ಲೆಸ್ ಮುದುಕಿಯ ಬಳಿ ಬಿಟ್ಟರು. ಆ ಮೂರು ಮುದುಕಿಯರು ಕಡಿಮೆಯಾದವರಲ್ಲ. ಪ್ರತಿಯೊಂದು ವಿಷಯದಲ್ಲಿ ಹೆಸರು ಮಾಡಿದ್ದಂಥವರೇ ; ಅವರವರ ವೃದ್ಧಾಪ್ಯ ಅವರವರ ಮನೆಗಳಲ್ಲಿ ಅಷ್ಟು ಕ್ಷೇಮವಾಗಿರಲಿಲ್ಲ. ಆದ್ದರಿಂದ ಸದರಿ ಕೆಲಸವನ್ನು ಅತ್ಯುತ್ಸಾಹದಿಂದ ಹೆಗಲ ಮೇಲೆ ಹಾಕಿಕೊಂಡರು.

ವಡ್ಡಟ್ಟಿ ಮುದುಕಿಯೊಂದಿಗೆ ಅವರು ಚಿಟಿಕೆ ಹೊಡೆವಷ್ಟರಲ್ಲಿ ನ್ಯಾಸ್ತ ಬೆಳೆಸಿ ಬಿಟ್ಟರು. ಅದರೆದುರು ತಮ್ಮ ವೃದ್ಧಾಪ್ಯವನ್ನು ಹಳಿಯುತ್ತ ಅದರ ವೃದ್ಧಾಪ್ಯವನ್ನು ಕೊಂಡಾಡತೊಡಗಿದರು. ಮಾಡಿಕೊಂಡ ಹೆಂಡರ ಸೆರಗು ಹಿಡಿದು ಅಡ್ಡಾಡುವ ತಮ್ಮ ಮಕ್ಕಳ ಮೃದು ನಡವಳಿಕೆಯನ್ನು ವರ್ಣನ ಮಾಡಿ ಹೇಳತೊಡಗಿದರು. ಅಷ್ಟೊತ್ತಿಗಾಗಲೆ ಒಂದಿಷ್ಟು ವಯಸ್ಸಾದ ಮಾತುಗಳನ್ನಾಡುವುದು ಕಲಿತಿದ್ದ ವಡ್ಡಟ್ಟಿ ಅಜ್ಜಿ ತಮ್ಮ ವಡ್ಡಟ್ಟಿ ಗ್ರಾಮದ ಜೀವನ ಶೈಲಿಯ ಬಗೆಗೋ, ತನಗೆ ಎಂಥೆಂಥ ಪರಾಕ್ರಮಿ ಮಕ್ಕಳಿದ್ದರು ಎಂದೋ, ತಾನು ಎಂಥೆಂಥ ಬೆಕ್ಕು, ನಾಯಿ, ಕೋಳಿಗಳನ್ನು ಸಾಕಿದ್ದೆನೆಂದೋ; ತಾನು ಎಂಥೆಂಥ ಗಿಡ-ಮರಗಳನ್ನು ನೆಟ್ಟಿದ್ದೆನೆಂದೋ; ತಾನು ನೆಟ್ಟಕಲ್ಲು ಎಂಬ ಕಂದಮ್ಮನನ್ನು ಹೇಗೆ ಜೋಪಾನ ಮಾಡಿದೆನೆಂದೋ ವರುಣನ ಮಾಡಿ ಹೇಳುತ್ತಿತ್ತು.

ಇದನ್ನೆಲ್ಲ ಕೇಳಿ ಕೇಳಿ ಮತ್ತು ಅವರಿಗೆಲ್ಲ ತಿಂಡಿ ತೀರ್ಥ ಸರಬರಾಜು ಮಾಡಿ ಮಾಡಿ ರೋಸಿ ಹೋಗಿ ಕಮಲಮ್ಮ ಆ ವೃದ್ಧ ತ್ರಿಮೂರ್ತಿಗಳನ್ನು ಕಕ್ಕಸು ಕೋಣೆ ಮರೆಗೆ ಸಂಜ್ಞೆ ಮಾಡಿ ಕರೆದು ಕುಬುಸದ ಮೇಲೆ ಆಸಕ್ತಿ ಕುದುರಿಸುವಂಥ ಟಾಪಿಕ್ಕುಗಳನ್ನು ಎತ್ತಿಕೊಳ್ಳಬೇಕೆಂದು ಅಧಿಕಾರವಾಣಿಯಲ್ಲಿ ಸೂಚಿಸಿದಳು. ಆ ಕ್ಷಣದಿಂದ ಅವರು ಅದರೆದುರು ಸೆರಗು ಜಾರಿಸಿಕೊಂಡು ತಾವು ತೊಟ್ಟಿರುವ ಕುಬುಸಗಳನ್ನು ಪ್ರದರ್ಶಿಸತೊಡಗಿದರು. ಅವರ ವರ್ತನೆ ಅಶ್ಲೀಲವೆನ್ನಿಸಿ ವಡ್ಡಟ್ಟಿ ಮುದುಕಿಯು "ಆಯ್......ಸೆರಗು ಹೊದ್ಕಳ್ರಿ ನಮ್ಮವ್ವರೇ......ಯಾರಾದ್ರೂ ಹುಡ್ರು ಹುಪ್ಡಿ ನೋಡ್ಯಾರು" ಎಂದು ಗದರಿಸಿತು. ಇನ್ನೊಬ್ಬರು ಎದೆ ಮುಚ್ಚುವಂತೆ ಸೆರಗು ಹೊದ್ದಕೊಳ್ಳಬೇಕೆಂದು ಪ್ರಜ್ಞಾಪೂರ್ವಕವಾಗಿ ಬಯಸುವ ತಮ್ಮ ಮುದುಕಿ ಯಾಕೆ ಕುಬುಸ ಧರಿಸಲು ನಿರಾಕರಿಸುತ್ತದೆ ಎಂಬುದೇ ಯಕ್ಷ ಪ್ರಶ್ನೆಯಾಯಿತು ಕಮಲಳಿಗೆ. ಆಕೆಯ ಸಲಹೆ ಮೇರೆಗೆ ಅವರು ವಡ್ಡಟ್ಟಿ ಮುದುಕಿಯನ್ನು ನೇರವಾಗಿ ಕೇಳಿಕೊಂಡರು. ಆದರೆ ಅದು ಅವರ ಮಾತಿಗೆ ಸೊಪ್ಪು ಹಾಕದೆ ಗಯ್ಯಾಳೇರ......ತಾಟಗಿತ್ತೇರ ಎಂಬಿವೇ ಮೊದಲಾದ ವಿಶೇಷಣಗಳಿಂದ ಶಪಿಸಿ ಅವರನ್ನು ದೂರತಳ್ಳಿತು. ನಮ್ಮನ್ನ ಉಂಡು, ನಮ್ಮ ಬಟ್ಟೆ ಹೊದ್ದು ಅದೂ ಯಕಃಶ್ಚಿತ್ ಬ್ಲೌಜ್‌ಲೆಸ್ ಮುದುಕಿಯಿಂದ ಬಯ್ಯಿಸಿ ಕೊಳ್ಳುವುದೇ ?...... ಅಂಗಳದಲ್ಲಿ ತಡೆದ ಕಮಲಳಿಗೂ ಆಕೆ ತೋರಿಸಿದ ಆಮಿಷಗಳಿಗೂ ಮರುಳಾಗದೆ ಅಮ್ಮಾ ತಾಯಿ....... ಆ ಉಡುಸಲಮ್ಮನ ಮೊಮ್ಮಗಳನ್ನು ಮನೇಲಿಟ್ಟು ಕೊಂಡು ಅದ್ಯಾವ ಸುಖ ಅನುಭವಿಸ್ತೀಯೋ..... ಎಂದು ರೋಸಿ ನುಡಿದು ಹೋಗಿಬಿಟ್ಟವು. ಬಾಯಲ್ಲಿ ತೊಂಬಲ ತುಂಬಿಕೊಂಡು ಬಿಮ್ಮಗೆ ಕೂತಿದ್ದ ಮುದುಕಿ ಕಡೆ ದುರುಗುಟ್ಟಿ ನೋಡಿ ಅಡುಗೆ ಮನೆ ಸೇರಿಕೊಂಡ ಕಮಲಳಿಗಿಡೀ ದಿನ ಮನಸ್ಸು ಸ್ವಾಧೀನದಲ್ಲಿರಲಿಲ್ಲ.

ಅಂದು ರಾತ್ರಿ ಓ.ಟಿ. ಮಾಡಿ ಧಣಿದು ಬಂದ ಗಂಡನಿಗೆ ಕೇಳಿಸುವಂತೆ ಹೀಗೆ ಕುಬುಸ ತೊಡದೋರ ವಂಶದೋರಿಗೆ ಕೊಟ್ಟು ನನ್ನ ಮದ್ವಿ ಮಾಡಿದ್ನಲ್ಲ ನಮ್ಮಪ್ಪ..... ಎಂದು ಶುರು ಮಾಡಿದಳು. ಈ ವಿಷಯ ನಿಮ್ಮಪ್ಪಗೂ ಗೊತ್ತಿತ್ತೆಂದೂ, ನಿಮ್ಮ ವಂಶದ ಹಿರಿಯರೂ ಕುಬುಸ ತೊಡುತ್ತಿರಲಿಲ್ಲವೆಂದೂ ವಡವಟ್ ತಗ್ಗಿದ ಧನಿಯಲ್ಲಿ ಹೇಳಲು ಉಪಕ್ರಮಿಸಿದನು. ಇಡೀ ಮನೆ ಬಣ ಬಣ ಆಗುವುದನ್ನು ತಪ್ಪಿಸಲು ಬಗೆಬಗೆಯ ಪ್ರಯತ್ನ ಮಾಡಿದನು. ನಿಮ್ಮಜ್ಜಿ ಒಂದು ವಾರದೊಳಗೆ ಕುಬುಸ ಧರಿಸದಿದ್ದಲ್ಲಿ ನಾನು ಮಕ್ಕಳು ಮರಿ ಕಟ್ಟಿಕೊಂಡು ಸಿಟಿ ಬಸ್ಸು ಏರುವೆನೆಂದು ಬೆದರಿಕೆ ಹಾಕಿದಳು.

ಒಳ್ಳೆ ಫಜೀತಿಗಿಟ್ಟುಕೊಂಡಿತಲ್ಲ ನನ್ನ ಬಾಳುವೆ ಎಂದು ಪರಿತಪಿಸಿದ ಅವಯ್ಯನೇನು ಕೈಕಟ್ಟಿ ಕೂತಿರಲಿಲ್ಲ. ಕುಬುಸ ತೊಡುವಂಥ ಬುದ್ಧಿಯನ್ನು ಮುದುಕಿಗೆ ದಯಪಾಲಿಸಿದರೆ ಬೆಣ್ಣೆ ಅಲಂಕಾರ ಮಾಡಿಸುವುದಾಗಿ ಕೋಟೆ ಆಂಜನೇಯನಿಗೆ ಎಂದೋ ಹರಕೆ ಹೊತ್ತಿದ್ದನು. ಯಾರ ಒತ್ತಾಯದಿಂದಲೂ ಆಗುವ ಕೆಲಸವಲ್ಲವಿದು ಎಂದು ಭಾವಿಸಿದ ಅವನು ಮರುದಿನವೇ ಮಂತ್ರವಾದಿ ಭೀಮಪ್ಪನ ಬಳಿಗೆ ಹೋಗಿ ಅಂತ್ರ ಮಂತ್ರಿಸಿಕೊಂಡು ಬಂದನು. ನಿದ್ದೆ ಮಂಪರಿನಲ್ಲಿದ್ದಾಗ, ಮುದುಕಿಯ ರೆಟ್ಟೆಗೆ ಕಟ್ಟಬೇಕೆಂದು ವಿಶ್ವಪ್ರಯತ್ನ ಮಾಡಿದನು. ಮುದುಕಿ ಸದಾ ಕೋಳಿ ನಿದ್ದೆ ಮಾಡುತ್ತಿದ್ದುದರಿಂದ ಅದೂ ಸಾಧ್ಯವಾಗಲಿಲ್ಲ. ಆದರೆ ಅದರ ಸೀರೆ ಸೆರಗಿಗೆ ಕಟ್ಟಿ ಗಂಟು ಹಾಕುವಲ್ಲಿ ಯಶಸ್ವಿಯಾಗಿ ಸಮಾಧಾನದ ಉಸಿರು ಬಿಟ್ಟನು. ಅದು ಈ ಕ್ಷಣ ಕುಬುಸ ಬಯಸಬಹುದು.... ಆ ಕ್ಷಣ ಕುಬುಸ ಬಯಸಬಹುದೆಂದು ಚಾತಕ ಪಕ್ಷಿಯೋಪಾದಿಯಲ್ಲಿ ಕಾಯತೊಡಗಿದನು. ಅದರ ಕಣ್ಣಿಗೆ ಎಟಕುವಂತೆ ಹತ್ತಾರು ನಮೂನೆಯ ಪೋಲಕ ಬಟ್ಟೆಗಳನ್ನು ಹರಡಿದನು. ಯಾಕೀ ತನ್ನ ಮರಿಮೊಮ್ಮಗ ನೆಟ್ಟಕಲ್ಲು ಹೀಗೆ ಬಯಲಿಗೆ ಬಟ್ಟೆ ಅಲಂಕಾರ ಮಾಡಿರುವನೆಂದು ಮುದುಕಿ ಯೋಚಿಸಿತಾದರೂ ವಿಶದವಾಗಿ ಹೊಳೆಯಲಿಲ್ಲ. ಆದರೆ ಇದು ಇದ್ದಕ್ಕಿದ್ದಂತೆ "ಮಗಾ ನೆಟ್ಟಕಲ್ಲೂ...... ಒಂದು ಚಾಣು ಸುತ್ತಿಗ ತಂದ್ಕೊಡೋ...... ಕಲ್ಲು ಹೊಡೆಯಂಗಾಗೈತಿ" ಎಂದು ಹೇಳಿ ಎಲ್ಲರನ್ನು ದಿಗ್ಭ್ರಮೆಗೊಳಿಸಿತು. ಆದ ಬೇಸರವನ್ನು, ನಿರಾಸೆಯನ್ನು ತೋರಗೊಡದೆ ಅವನು "ಹೋಗವ್ವಾ ಹೋಗು..... ಇದೇನು ಹೇಳೋ ಮಾತಲ್ಲ.... ಕೇಳೋ ಮಾತಲ್ಲ..... ನಿಂಗೀಗ ಕಡ್ಮೆ ಆಗಿರೋದಾದ್ರು ಏನು ! ಮೈ ತುಂಬ ನೀಟಾಗಿ ಬಟ್ಟೆ ಬರೆ ತೊಟ್ಕೊಂಡು ಆರಾಮಾಗಿರಬಾರ್ದೇನು !" ಎಂದನವನು. ಅವನ ಮಾತಿನ ಒಳ ಅರ್ಥ ಕ್ರಮೇಣ ಗೊತ್ತಾಗಿ ಮುದುಕಿ...... ಅಲಲಲಾ ಏನಲೋ ಅದು ಮೈ ತುಂಬ ಬಟ್ಟೆ ಬರೆ ತೊಟ್ಕೊಂಡು ಅಂದ್ರೆ.......ನಾನೇನೀಗ ಬರಿ ಬೆತ್ಲೆ ಇದ್ದೀನಾ.... ಆ ತಾಟಗಿತ್ತಿ ನಿನ್ನೇಣ್ತಿ ಮಾತು ಕಟ್ಟಿಕೊಂಡು ಹಿಂಗಾಡ್ತಿದ್ದಿಯಲ್ಲಾ..... ನಾನು ಕುಬಸ ತೊಟ್ಕೊಂಡು ಅದ್ಯಾವ ನರಕಕ್ಕೋಗ್ಲಿ..... ಎಂದು ಐರಾವಣ ಮೈರಾವಣ ಆಗಿ ಬಿಟ್ಟಿತು. ಮತ್ತೆ ಮುಂದುವರಿದು ಕುಬುಸ ತೊಟ್ಕೊಂಡಾಕ್ಷಣ ನಂಗೇನು ಹರೇವು ಮತ್ತೆ ಬರ್ತದಾ.... ನಾನೆಂಥೋರ ವಂಸದೋಳು ಏನು ಕಥೆ...... ಇಲ್ಲಾ ನಾನೊಂದು ಚಣ ಈ ಊರಾಗಿರಾಕಿಲ್ಲ..... ಇಲ್ಲೆ ಪಿರಾಣ ಬಿಟ್ಟೇ ಅಂದ್ರೆ, ನೀನೂ ನಿನ್ನೇಣ್ತಿ ಸೇರ್ಕಂಡು ನನ್ನ ಯಣಕ್ಕೆ ಕುಬುಸದ ಸಿಂಗಾರ ಮಾಡಿ ಮಣ್ಣಾಗ ಇಕ್ಕೋರೆ..... ಎಂದು ಇಡೀ ಗಾಯತ್ರಿ ನಗರ ಅಲ್ಲಾಡುವಂತೆ ಗರ್ಜನೆ ಮಾಡಿತು.

ಅದರ ರೋಷಾವೇಶದ ಮಾತು ಕೇಳಿ ವಡವಟ್ ದಂಪತಿ ದಿಙ್ಮೂಢರಾಗಿ ಪರಸ್ಪರ ಮುಖ ನೋಡಿಕೊಂಡರು. ಕುಬುಸದ ಪರ ಅವರೂ; ಅದರ ವಿರುದ್ಧ ಅದೂ ಮಾತಿನ ಚಕಮಕಿ ನಡೆಸಿದರು. ಕುಬುಸ ತೊಡಲು ನಿರಾಕರಿಸುವ ಮುದುಕಿ ಎಲ್ಲಿರಬೇಕೋ ಅಲ್ಲಿರುವುದೇ ವಾಸಿ ಎಂದು ಅವರು ಬಗೆದರು. ಕೂಳು ನೀರು ಬಿಟ್ಟು ಕೂತ ಮುದುಕಿ ವಡ್ಡಟ್ಟಿ ಗ್ರಾಮದ ಪ್ರತಿಯೊಂದು ಆಗು ಹೋಗುಗಳನ್ನು ಕನವರಿಸ ತೊಡಗಿದಳು. ವಡ್ಡಟ್ಟಿ ಗ್ರಾಮ ತನ್ನನ್ನು ಕೈಬೀಸಿ ಕರೆಯುತ್ತಿದೆ ಎಂದು ಭಾವಿಸಿದ ಅದು ಹಳೆ ಪಳೆ ಸೀರೆಗಳನ್ನು ಗಂಟು ಕಟ್ಟಿಕೊಂಡು ಹೊರಡಲು ರೆಡಿಯಾಯಿತು. ಊರು ಬರೋ ಮಟ ನಡೆದೇ ಹೋಗುವುದಾಗಿ ಹೇಳಿತು. ಅದು ಹೇಳೋ ಮಾತಲ್ಲ, ಕೇಳೋ ಮಾತಲ್ಲ.... ಜೋಪಾನವಾಗಿ ಕರೆದೊಯ್ದು ಊರಲ್ಲಿ ಬಿಟ್ಟು ಬನ್ನಿ ಎಂದು ಹೇಳಿ ಗಂಡನನ್ನು ಅದರ ಸಂಗಡ ಕಮಲ ಕಳಿಸಿಕೊಟ್ಟಳು.

❖ ❖ ❖ ❖

ಲೇಖಕರ ಪರಿಚಯ : *ಕುಂ.ವೀ.* ಎಂದೇ ಕನ್ನಡ ಸಾರಸ್ವತ ಲೋಕದಲ್ಲಿ ಖ್ಯಾತರಾಗಿರುವ ಕುಂಬಾರ ವೀರಭದ್ರಪ್ಪ (ಜನನ ೧೯೫೩) ಅವರು ಜನಿಸಿದ್ದು ಬಳ್ಳಾರಿ ಜಿಲ್ಲೆಯ ಕೊಟ್ಟೂರಿನಲ್ಲಿ. ಆಂಧ್ರಪ್ರದೇಶದ ಹಳ್ಳಿಗಳಲ್ಲಿ ಮೂರೂವರೆ ದಶಕಗಳ ಕಾಲ ಶಾಲಾ ಶಿಕ್ಷಕರಾಗಿ ಸೇವೆ ಸಲ್ಲಿಸಿ, ವಿಶ್ರಾಂತ ಜೀವನ ಸಾಗಿಸುತ್ತಿದ್ದಾರೆ. *ಇನ್ನಾದರೂ ಸಾಯಬೇಕು, ಡೋಮ ಮತ್ತಿತರ ಕಥೆಗಳು, ಭಗವತಿ ಕಾಡು, ಅಪೂರ್ವ ಚಿಂತಾಮಣಿ ಕಥೆ, ಭಳಾರೆ ವಿಚಿತ್ರಂ* ಮುಂತಾದ ಕಥಾ ಸಂಕಲನಗಳನ್ನೂ *ಬೇಲಿ ಮತ್ತು ಹೊಲ, ಕಪ್ಪು, ಕೆಂಡದ ಮಳೆ, ಕೊಟ್ರ ಹೈಸ್ಕೂಲಿಗೆ ಸೇರಿದ್ದು, ಶಾಮಣ್ಣ, ಅರಮನೆ* ಮುಂತಾದ ಕಾದಂಬರಿಗಳನ್ನೂ ಪ್ರಕಟಿಸಿರುವ ಕುಂ.ವೀ. ಅವರು ಅನೇಕ ಜೀವನ ಚರಿತ್ರೆಗಳನ್ನು ರಚಿಸಿರುವುದಲ್ಲದೆ, ತೆಲುಗಿನಿಂದ ಹಲವಾರು ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಇವರ ಅನೇಕ ಕಥೆಗಳು ಇಂಗ್ಲಿಷ್ ಹಾಗೂ ಅನೇಕ ಭಾರತೀಯ ಭಾಷೆಗಳಿಗೆ ಅನುವಾದಗೊಂಡಿವೆ. *ಕೊಟ್ರೇಶಿ ಕನಸು, ಮನಮೆಚ್ಚಿದ ಹುಡುಗಿ, ದೊರೆ, ಬೇಲಿ ಮತ್ತು ಹೊಲ* ಮುಂತಾದವು ಚಲನಚಿತ್ರಗಳಾಗಿವೆ. ಇವರ *ಅರಮನೆ* ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ಲಭಿಸಿದೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ ಮುಂತಾದ ಪುರಸ್ಕಾರಗಳು ಇವರಿಗೆ ಸಂದಿವೆ.

ಶಬ್ದಾರ್ಥ : ನಿಸೂರ–ನಿರಾಳ ; ಮನಾರ–ಸಾಕಷ್ಟು ; ಟವುಜರು (Trousure)–ಸುಶಿಕ್ಷಿತ ; ಜಾಬು–ಉತ್ತರ ಪತ್ರ ; ಜರ್ಮಲಿ–ಊರು, ಸ್ಥಳ ; ಪಲಾನ–ನಿಗದಿತ ; ದೇದಿಪ್ಯ–ದಿವ್ಯವಾದ, ಬೆಳಕು ; ಯಾಟ್ರಸ್ (Actors)–ಸಿನಿಮಾ ನಟರು ; ವೈನಾಗಿ–ಚೆನ್ನಾಗಿ; ಷಡುರಸ–ಉಪ್ಪು, ಹುಳಿ, ಖಾರ, ಸಿಹಿ, ಕಹಿ ಒಗರು ಈ ಆರು ರಸಗಳು ; ಚಹರೆ–ಗುರುತು ; ನಾಸ್ತ–ಸ್ನೇಹ, ನಂಟಸ್ತಿಕೆ.

ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ :

೧) 'ಯಾವ ಕೇಡಿಗಂತ ನಮ್ ನೆಟ್ಟಕಲ್ಲು ಇಸ್ಕೂಲಿಗೋತಿನಿ ಅಂತತೆ.'

೨) 'ಇಲ್ಲದ್ದನ್ನು ಇದೆ ಅಂತ ತಿಳ್ಕೊಂಡು ಜೀವನ ನಡೆಸಿಕೊಂಡು ಹೋಗ್ರಿ.'

೩) 'ಮೊಮ್ಮಕ್ಕಳ್ನ ನೋಡೋ ಆಸೆ ಇಲ್ಲೇನಬೇ.'

೪) 'ಕರುಳಿನ ಕುಡಿಗಳನ್ನು ನೋಡುವುದೂ ಒಂದೆ; ದೇವಾನುದೇವತೆಗಳನ್ನು ನೋಡುವುದೂ ಒಂದೆ.'

೫) 'ಇದ್ಯಾವ ಸೀಮೆ ಊರಿಗೆ ಕರ್ಕೊಂಡು ಬಂದಿಯೋ.'

೬) 'ಕುಬಸ ತೊಟ್ಕೊಂಡು ಅದ್ಯಾವ ನರಕಕ್ಕೋಗ್ಲಿ?'

ಒಂದು ವಾಕ್ಯದಲ್ಲಿ ಉತ್ತರಿಸಿ :

೧) ಮುದುಕಿ ಕಂಡಿದ್ದ ಕನಸು ಯಾವುದು?

೨) ನೆಟ್ಟಕಲ್ಲು ಚಿಕ್ಕವನಿದ್ದಾಗ ಯಾವ ನಗರ ನೋಡಬೇಕೆಂದು ಆಸೆ ಪಟ್ಟಿದ್ದನು?

೩) ವಡವಟ್‌ನು ಯಾವ ನೌಕರಿಗೆ ಸೇರಿಕೊಂಡನು?

೪) ವಡವಟ್‌ನ ಮದುವೆ ಎಲ್ಲಿ ಆಯಿತು?

೫) ವಡ್ಡಟ್ಟಿಯ ಗ್ರಾಮದೇವತೆ ಯಾರು?

ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ :

೧) ನೆಟ್ಟಕಲ್ಲನ ಓದಿಗೆ ಸಂಬಂಧಿಸಿದಂತೆ ಮುದುಕಿಯ ಮನಸ್ಸನ್ನು ಊರಿನ ಜನ ಪರಿವರ್ತಿಸಿದ ಬಗೆ ಹೇಗೆ?

೨) ನೆಟಕಲ್ಲನನ್ನು ದೈವಾಂಶ ಸಂಭೂತನೆಂದು ಊರಿನವರು ಏಕೆ ತಿಳಿದಿದ್ದರು?

೩) ನೆಟಕಲ್ಲು ತನ್ನ ಹೆಸರು ಏನೆಂದು ಬದಲಾಯಿಸಿಕೊಂಡನು? ಮತ್ತು ಏಕೆ?

೪) ಅಯ್ಯ್ಯಾಳಪ್ಪ ನವದಂಪತಿಗಳಿಗೆ ಏನೆಂದು ಆಶೀರ್ವದಿಸಿದನು?

೫) ವಡ್ಡಟ್ಟಿಯ ಜನರು ಕುಬಸವನ್ನು ಏಕೆ ಧರಿಸುತ್ತಿರಲಿಲ್ಲ?

ವಿವರವಾಗಿ ಉತ್ತರಿಸಿ :

೧) ನಗರ ಜೀವನ ನೆಟಕಲ್ಲುವಿನ ಮೇಲೆ ಬೀರಿದ ಪ್ರಭಾವಗಳನ್ನು ವಿವರಿಸಿರಿ.

೨) ಕುಟುಂಬದ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಕಮಲಳು ಹೇಗೆ ಯೋಚಿಸಿದಳು?

೩) ಮುದುಕಿಗೆ ಕುಬುಸ ತೊಡಿಸಲು ವಡವಟ್ ದಂಪತಿಗಳು ಪಟ್ಟ ಪಾಡನ್ನು ವಿವರಿಸಿರಿ.

೪) ಗ್ರಾಮ ಹಾಗೂ ನಗರ ಜೀವನದ ಯೋಚನಾ ವಿಧಾನದ ವ್ಯತ್ಯಾಸವನ್ನು ಕಥೆಯ ಹಿನ್ನೆಲೆಯಲ್ಲಿ ಚರ್ಚಿಸಿರಿ.

೫) ತಲೆಮಾರುಗಳ ನಡುವಿನ ವೈರುಧ್ಯ ಮುದುಕಿ ಮತ್ತು ಮಗನ ಪಾತ್ರಗಳ ಮೂಲಕ ಹೇಗೆ ಮೂಡಿಬಂದಿದೆ? ಚರ್ಚಿಸಿರಿ.

ಭಾಷಾಭ್ಯಾಸ :

೧) ಇವುಗಳನ್ನು ಬಿಡಿಸಿ ಬರೆಯಿರಿ :

ಸಹೋದ್ಯೋಗಿ, ಕನ್ಯಾನ್ವೇಷಣೆ, ದೇವಾನುದೇವತೆ, ಮೆರವಣಿಗೋಪಾದಿ, ಪ್ರತಿಯೋರ್ವ, ಮುಸ್ಸಂಜೆ, ವಂಶಾವಳಿ, ಪದಾಭಿವಂದನೆ, ಅತ್ಯುತ್ಸಾಹ, ರೋಷಾವೇಷ.

೨) ಪದ್ಯದಲ್ಲಿರುವ ಅನ್ಯದೇಶ್ಯ ಶಬ್ದಗಳನ್ನು ಗುರುತಿಸಿ :
ಉದಾಹರಣೆ : ಜಾಬು, ಗೌರಮೆಂಟ್, ಪೋಸ್ಟ್ ಮಾಸ್ಟರ್, ಅಟೆಂಡರ್, ಪಗಾರ.

೩) ಈ ಕೆಳಗಿನ ಶಬ್ದಗಳಿಂದ ಸ್ವಂತ ವಾಕ್ಯ ರಚಿಸಿ :
ಅವಶೇಷ, ನತದೃಷ್ಟ, ಯಕಶ್ಚಿತ್, ಜಾತಕಪಕ್ಷಿ, ತಾಳೆಹಾಕು.

೪) ಈ ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿರಿ :
ಸೊಪ್ಪುಹಾಕು, ಕಿಡಿಕಾರು, ಚಾಣಸುತ್ತಿಗೆ, ಪ್ರಹರಿಸು (ಕೆಂಡ ಮಂಡಲವಾಗು), ಮೈಚಳಬಿಡು, ಕಣ್ಣು ತೆಗೆ, ಹಣ್ಣುಗಾಯಿ-ನೀರುಗಾಯಿ.

ಚಟುವಟಿಕೆ :

೧) ಪದ್ಯದಲ್ಲಿ ಬಂದಿರುವ ಗ್ರಾಮ್ಯಪದಗಳ ಗ್ರಾಂಥಿಕ ರೂಪಗಳನ್ನು ಬರೆಯಿರಿ.
ಉದಾಹರಣೆ : ಕುಂತ್ಗಂಡು, ತೊಡೋಳ್ನ.

೨) ನೀವು ಗಮನಿಸಿರುವ ಗ್ರಾಮೀಣ ಪ್ರದೇಶಗಳಲ್ಲಿ ನಾಗರಿಕತೆಯ ಪ್ರಭಾವದಿಂದ ಆದ ಬದಲಾವಣೆ ಕುರಿತು ಪ್ರಬಂಧ ಬರೆಯಿರಿ.

ಆಕರ ಗ್ರಂಥ :

ಭಳಾರೆ ವಿಚಿತ್ರಂ (ಕತೆಗಳು) – ಸಂಪಾದಕರು : ಕುಂ. ವೀರಭದ್ರಪ್ಪ
ಪ್ರಕಾಶಕರು : ಮನೋಹರ ಗ್ರಂಥ ಮಾಲೆ, ಧಾರವಾಡ.

ನಂಜನಗೂಡು ತಿರುಮಲಾಂಬ

– ವಿಜಯಾ ದಬ್ಬೆ

ಬದುಕಿನ ವಿಷಯ ಪರೀಕ್ಷೆಗೆ ದೃತಿಗೆಡದೆ, ಆಘಾತಗಳ ಅಗ್ನಿಕುಂಡದಲ್ಲೂ ಚಿಗುರುವ ಜೀವ ಚೈತನ್ಯಗಳಿರುತ್ತವೆ. ಇಂತಹ ಚೇತನಗಳು ನೋವನ್ನೂ ಸಕಾರಾತ್ಮಕವಾಗಿ ಸ್ವೀಕರಿಸಿ, ತನ್ನಂತೆ ನೊಂದ ಮತ್ತೊಂದು ಜೀವಕ್ಕೆ ಸಾಂತ್ವನ ಹೇಳುವ, ದಾರಿದೀಪವಾಗುವ, ನೊಂದವರ ನೋವಿಗೆ ದನಿಯಾಗುವ ಮಾರ್ಗಗಳನ್ನು ಕಂಡುಕೊಳ್ಳುತ್ತವೆ. ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದ ಮೊದಲ ಬರಹಗಾರ್ತಿ, ಪ್ರಕಾಶಕಿ, ಪತ್ರಿಕೋದ್ಯಮಿ ಎನಿಸಿದ ನಂಜನಗೂಡು ತಿರುಮಲಾಂಬ ಅವರ ಸಾಧನೆ ಅಪೂರ್ವವಾದದುದು, ಮಾದರಿಯಾದುದು. ಸಮಾಜದ ಕಟುವಿಮರ್ಶೆಯನ್ನು ತಾಳಿ ನಿಂತು ದೃಢ ಚಿತ್ತದಿಂದ ಬದುಕನ್ನೆದುರಿಸಿದರು. ಬದುಕಿನ ಸಿಹಿ–ಕಹಿಗಳನ್ನುಂಡ ಈ ಹಿರಿಯ ಜೀವ ತಮ್ಮ ಮಿತಿಯೊಳಗೆ ಸಮಾಜದಲ್ಲಿ ಚಲನೆಯ ಅಲೆಗಳನ್ನೆಬ್ಬಿಸಿದರು.

ವೃತ್ತಿಯಿಂದ ವಕೀಲರೂ ಪ್ರವೃತ್ತಿಯಿಂದ ವಿದ್ಯಾಪ್ರೇಮಿಗಳೂ ತಮ್ಮದೇ ಆದ ರೀತಿಯಲ್ಲಿ ಆಚಾರನಿಷ್ಠರೂ, ಸಮಾಜ ಕಾರ್ಯಕರ್ತರೂ, ಲೇಖಕರೂ ಆಗಿದ್ದ ನಂಜನಗೂಡಿನ ವೆಂಕಟಕೃಷ್ಣ ಅಯ್ಯಂಗಾರ್ ಅವರ ಮಗಳೇ ನಂಜನಗೂಡು ತಿರುಮಲಾಂಬ. ೧೮೮೭ರ ಮಾರ್ಚ್ ೨೫ರಂದು ವ್ಯಯ ಸಂವತ್ಸರದ ಫಾಲ್ಗುಣ ಶುದ್ಧ ದ್ವಾದಶಿಯಂದು ವೆಂಕಟಕೃಷ್ಣ ಅಯ್ಯಂಗಾರ್ ಮತ್ತು ಅಲಮೇಲಮ್ಮನವರ ಮೂರನೆಯ ಮಗುವಾಗಿ ತಿರುಮಲಾಂಬ ಜನಿಸಿದರು. ಆ ವೇಳೆಗೆ ಎರಡು ಹೆಣ್ಣು ಮಕ್ಕಳ ತಾಯಿಯಾಗಿದ್ದ ಅಲಮೇಲಮ್ಮ ತಿರುಮಲಾಂಬ ಅವರಿಗೆ ಜನ್ಮ ಕೊಟ್ಟ ನಂತರದ ವರ್ಷಗಳಲ್ಲಿ ಮತ್ತೊಂದು ಹೆಣ್ಣು ಮಗವನ್ನೂ, ಗಂಡು ಮಗುವನ್ನೂ ಪಡೆದರು. ಕೊನೆಯ ಮಗು ಇನ್ನೂ ಆರು ತಿಂಗಳ ಕೂಸಾಗಿರುವಾಗಲೇ ಕಣ್ಮುಚ್ಚಿದರು. ಐದು ವರ್ಷದ ಬಾಲೆ ತಿರುಮಲಾಂಬ ತಾಯಿಯಿಲ್ಲದ ತಬ್ಬಲಿಯಾಗಬೇಕಾಯಿತು.

ಎಂಟು ವರ್ಷದ ಹುಡುಗಿ ತಿರುಮಲಾಂಬ ನಂಜನಗೂಡಿನ ಬಾಲಿಕಾ ಪಾಠಶಾಲೆಯ ವಿದ್ಯಾರ್ಥಿನಿಯಾದಳು. ಹನ್ನೆರಡು ವರ್ಷ ತುಂಬುವ ಮೊದಲೇ ಆಕೆಯ ವಿದ್ಯಾರ್ಥಿ ಜೀವನ ಮುಗಿಯಿತು. ಜೀವನದುದ್ದಕ್ಕೂ ಅಧ್ಯಯನಶೀಲರಾಗಿದ್ದ ತಿರುಮಲಾಂಬ ಅವರ ಶಾಲಾ ಶಿಕ್ಷಣ ನಾಲ್ಕನೆಯ ತರಗತಿಯವರೆಗೆ ಮಾತ್ರ ಸಾಗಿತು. ಅವರು ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿಯಾಗಿರುವಾಗ ಮುಖ್ಯೋಪಾಧ್ಯಾಯರ ಮೇಲೆ ಸಹಅಧ್ಯಾಪಕರಿಂದ ಅಕಾರಣ ದೂರು ಬಂದ ಪರಿಣಾಮ ಮುಖ್ಯೋಪಾಧ್ಯಾಯರು ಕೆಲಸ ಕಳೆದುಕೊಂಡರು. ಪುಟ್ಟ ತಿರುಮಲಾಂಬೆಗೆ ಇದು

ಅನ್ಯಾಯವೆನಿಸಿತು. ಜೊತೆಗೆ ಅಪರಿಮಿತವಾದ ಸಿಟ್ಟು ಬಂದ ಕಾರಣ ಮತ್ತೆ ಶಾಲೆಗೆ ಹೋಗಲಿಲ್ಲ. ಶಾಲೆ ಬಿಟ್ಟು ಬಂದ ಹುಡುಗಿಗೆ ಮದುವೆ ಮಂಟಪ ಕಾಯುತ್ತಿತ್ತು. ಹದಿಮೂರರ ಈ ಮುಗ್ಧ ಹುಡುಗಿ ಪುಟ್ಟ ಮುತ್ತೈದೆಯ ಪಟ್ಟವೇರಿದ ದಿನಗಳು ಹಸಿರಾಗಿರುವಾಗಲೇ, ಆ ಓಲಗದ ಸದ್ದಿನ್ನೂ ಕಿವಿಯಲ್ಲಿ ಗುಯ್‌ಗುಡುತ್ತಿರುವಾಗಲೇ ಯಾರೂ ಊಹಿಸಿರದ ಆಘಾತ ಎರಗಿತು. ಅರುಣೋದಯವನ್ನು ಕತ್ತಲೆ ನುಂಗಿತು; ಆ ಪುಟ್ಟ ಹುಡುಗಿಯೊಡನೆ ಹಸೆಯೇರಿದ್ದ ಹುಡುಗ ಪ್ಲೇಗಿಗೆ ತುತ್ತಾಗಿ ಎಂದೆಂದಿಗೂ ಆಕೆಯಿಂದ ಅಗಲಿದ. ಹದಿನಾಲ್ಕರ ಹುಡುಗಿ ತಿರುಮಲಾಂಬೆ ವಿಧವೆ! ಹೀಗೆ ಪ್ರಾರಂಭವಾದ ದುರಂತ ಅಲ್ಲಿಗೇ ನಿಲ್ಲಲಿಲ್ಲ. ೧೯೦೦-೧೯೦೭ರ ಅವಧಿಯಲ್ಲಿ ಮತ್ತೆರಡು ಪ್ರಿಯ ಜೀವಗಳಾದ ತಮ್ಮ-ತಂಗಿಯರನ್ನು ಅವರು ಕಳೆದುಕೊಂಡರು.

ಇಂಥ ಆಘಾತಗಳಿಗೆ ಒಳಗಾಗಿ ಕತ್ತಲಲ್ಲೇ ಸದ್ದಿಲ್ಲದೆ ಬಾಳು ತಳ್ಳಿ ಕೊನೆಯುಸಿರೆಳೆಯುವ ಜೀವಗಳೆಷ್ಟೋ! ಆದರೆ ಈ ಆಘಾತಗಳ ಅಗ್ನಿಕುಂಡಗಳಲ್ಲಿ ಚಿಗುರುವ ಜೀವಗಳೂ ಇವೆ. ಅಂಥ ಜೀವಗಳು ವಿನಾಶವನ್ನು ಮೆಟ್ಟಿನಿಂತು ಬೆಳೆಯುತ್ತವೆ. ಬದುಕು ನೀಡುವ ವಿಷವೂ ಅವಕ್ಕೆ ಅಮೃತವಾಗುತ್ತದೆ. ಅಂಥ ಜೀವಗಳಲ್ಲಿ ಒಂದು ನಂಜನಗೂಡು ತಿರುಮಲಾಂಬ ಅವರು. ಇದ್ದಕ್ಕಿದ್ದಂತೆ ಎದುರಾದ ಆಘಾತ ಅವರನ್ನು ಅಲುಗಿಸಿದರೂ ಧೃತಿಗೆಡದ ಅವರು ತಮ್ಮ ಬದುಕಿನ ದಾರಿಯನ್ನು ಕಂಡುಕೊಂಡರು. ಬದುಕಿನ ಒಂದು ನಿಟ್ಟಿನ ಮೇಲೆ ಶಾಶ್ವತವಾದ ತೆರೆ ಬಿದ್ದಿತಾದರೂ ಅದರೊಡಲಲ್ಲೇ ಸಂಪಾದಕಿ, ಲೇಖಕಿ, ಪ್ರಕಾಶಕಿ ತಿರುಮಲಾಂಬ ಹುಟ್ಟಿದರು.

ಕೊಳ್ಳೆಗಾಲದ ಸಿರಿವಂತ ಮನೆತನಕ್ಕೆ ಸೊಸೆಯಾಗಿ ಹೋಗಬೇಕಾಗಿದ್ದ ತಿರುಮಲಾಂಬ ಬಾಲ ವಿಧವೆಯಾಗಿ ತಂದೆಯ ಮನೆಯಲ್ಲಿ ಉಳಿದರು. ತಮ್ಮ ಮೆಚ್ಚಿನ ಮಗಳನ್ನು ವಿಶೇಷ ಆದರದಿಂದ ಕಂಡ ತಂದೆ ವೆಂಕಟಕೃಷ್ಣ ಅಯ್ಯಂಗಾರರು ಮಗಳ ದುಃಸ್ಥಿತಿಗಾಗಿ ನೊಂದರೂ ಮಗಳಿಗೆ ಅನೇಕ ಬಗೆಯಲ್ಲಿ ಸಮಾಧಾನ ಹೇಳಿದರು. ಅಡಿಗಡಿಗೆ ಸದ್ಗ್ರಂಥಗಳನ್ನು ಒದಗಿಸಿಕೊಟ್ಟು ಹಿತಬೋಧೆ-ತತ್ತ್ವ ವಿಚಾರಗಳಿಂದ ಧೈರ್ಯ-ಸ್ಥೈರ್ಯಗಳನ್ನು ತುಂಬಿದರು. ತಿರುಮಲಾಂಬ ಸತತ ಅಧ್ಯಯನದಲ್ಲಿ ಮುಳುಗಿದರು. ೧೯೦೨-೦೩ರ ಅವಧಿಯಲ್ಲಿ ಅವರ ಬದುಕಿನ ಮುಖ್ಯ ಘಟ್ಟ ತೆರೆಯಿತು. ೧೬ ವಯಸ್ಸಿನ ಅವರು ಒಂದು ಮಧ್ಯಾಹ್ನ ಒಂದೂವರೆ ಘಂಟೆ ಸಮಯ ಸೂರ್ಯ ಬಿಂಬ ನೋಡುತ್ತ ಭಗವಂತನ ಧ್ಯಾನ ಮಾಡುತ್ತಿದ್ದಾಗ, ಬಿಂಬದ ಮಧ್ಯೆ ಸೂಕ್ಷ್ಮ ಮೂರ್ತಿಯನ್ನು ಕಂಡು ಪರವಶರಾದರು. ಅವರ ಬಾಯಿಂದ *'ಸರಸ್ವತೀ (ಭಾರತಿ) ಪೊರೆಯೆನ್ನನು'* ಎಂಬ ಮೂರು ನುಡಿಯ ಗೀತೆಯೊಂದು ಹೊರಬಂದು ಅದೇ

ಗೀತೆ ರಚನೆಗೆ ಸ್ಫೂರ್ತಿಯಾಯಿತು. ಅಂದಿನಿಂದ ಅವರು *'ಭಗವಂತನ ಸ್ತುತಿ'* ಸಂಬಂಧಿಯಾದ ರಚನೆಗೆ ತೊಡಗಿದರು. *'ಸಾವಿತ್ರಿ ಚರಿತ್ರೆ'* ಎಂಬ ಯಕ್ಷಗಾನವನ್ನು ತಾವು ಈ ಮೊದಲ ಹಂತದಲ್ಲಿ ರಚಿಸಿದ್ದಾಗಿ ತಿರುಮಲಾಂಬ ಅವರೇ ಹೇಳಿದ್ದರೂ ಅದು ಈಗ ಅಲಭ್ಯವಾಗಿದೆ. ಪತ್ರಿಕೆಗಳಲ್ಲಿ ಪ್ರಚುರವಾಗುತ್ತಿದ್ದ ವಿಧವೆಯರ ಪರಿತಾಪ ಸ್ಥಿತಿಗತಿಗಳನ್ನು ನೋಡಿ ನೋಡಿ ಮನಸ್ಸಿಗೆ ಉಂಟಾದ ಸಂತಾಪ-ಅನುತಾಪಗಳ ಶಮನಾರ್ಥವಾಗಿ ಸ್ವಾನುಭವವೂ ಸೇರಿ *'ವಿಧವಾತತ್ತ್ವ'* ಎಂಬ ಲೇಖನವನ್ನೂ *'ನಭಾ'*, *'ವಿದ್ಯುಲ್ಲತಾ'* ಎಂಬ ಕಾದಂಬರಿಗಳನ್ನೂ ಅವರು ರಚಿಸಿದರು.

ಆರೇಳು ವರ್ಷಗಳ ಅವಧಿಯಲ್ಲಿ ಅವರು ತೋಚಿದ್ದನ್ನು ಬರೆದುಕೊಳ್ಳುತ್ತಾ ಬಂದಿದ್ದರೂ ಅವರು ೧೯೧೨ರಲ್ಲಿ *'ಮಧುರವಾಣಿ'* ಪತ್ರಿಕೆಯ ಲೇಖನ ಸ್ಪರ್ಧೆಗೆ ಬರೆದ *'ಸದಾಚಾರ'* ಎಂಬ ಪ್ರಬಂಧವೇ ಮೊದಲ ಪ್ರಕಟಿತ ಬರಹವಾಯಿತು. ಮಧುರವಾಣಿಯ ಸಂಪಾದಕರು ಖುದ್ದಾಗಿ ನಂಜನಗೂಡಿಗೆ ಬಂದು ಲೇಖಕಿಯನ್ನು ಅಭಿನಂದಿಸಿದರು. ಮುಂದಿನ ಬರಹಗಳಿಗೆ ಉತ್ತೇಜನ ನೀಡಿದರು. ಪರಿಣಾಮವಾಗಿ ೧೯೧೩ರಲ್ಲಿ *'ಸುಶೀಲೆ'* ಹೊರಬಂದಿತು. ಪ್ರಬಂಧ, ನಾಟಕ, ಕಾದಂಬರಿ, ಗೀತೆಗಳನ್ನು ಒಳಗೊಂಡಿತು. ಜೊತೆಗೆ ತಿರುಮಲಾಂಬ ತಮ್ಮ ಹಾಗೂ ಇತರರ ಕೃತಿಗಳ ಪ್ರಕಟಣೆಗಳಿಗಾಗಿ *'ಸತೀ ಹಿತೈಷಿಣೀ'* ಮತ್ತು *'ಸನ್ಮಾನ ಗ್ರಂಥಾವಳಿ'* ಎಂಬ ಪ್ರಕಟಣ ಮಾಲೆಗಳನ್ನು ಆರಂಭಿಸಿದರು. ಇದರೊಡನೆ *'ಕರ್ನಾಟಕ ನಂದಿನಿ'* ಮತ್ತು *'ಸನ್ಮಾರ್ಗದರ್ಶಿ'* ಎಂಬೆರಡು ಪತ್ರಿಕೆಗಳ ಸಂಪಾದಕಿಯೂ ಆದರು. ತಿರುಮಲಾಂಬ ಆಧುನಿಕ ಸಾಹಿತ್ಯದಲ್ಲಿ ಮೊದಲ ಬರಹಗಾರ್ತಿ, ಪ್ರಕಾಶಕಿ, ಸಂಪಾದಕಿ ಎಂಬ ಹಲವು ಪ್ರಥಮಗಳಿಗೆ ಭಾಜನರಾದುದು ಹೀಗೆ.

ಆರಂಭದಲ್ಲಿ ಬರವಣಿಗೆ, ಪುಸ್ತಕ ಪ್ರಕಾಶನ, ಪತ್ರಿಕೋದ್ಯಮದ ಕೆಲಸಗಳೆಲ್ಲವೂ ಉತ್ಸಾಹ, ನಿರೀಕ್ಷೆಗಳನ್ನು ಬೆನ್ನಿಗೆ ಕಟ್ಟಿದ್ದರೂ ಕೆಲಕಾಲದ ನಂತರ ತಿರುಮಲಾಂಬ ಅವರ ಎರಡೂ ಪತ್ರಿಕೆಗಳು ಮತ್ತು ಪ್ರಕಾಶನಗಳು ಅವರ ಮೇಲೆ ಹೊರಿಸಿದ ಸಾಲದ ಹೊರೆ ಹೆಚ್ಚಿತು. ತಂದೆಯೂ ಆರ್ಥಿಕ ಮುಗ್ಗಟ್ಟಿನಲ್ಲಿದ್ದರು. ಓದುಗ ಲೋಕದ ಬೆಂಬಲವೂ ಈ ಹೊರೆಯನ್ನಿಳಿಸಲು ನೆರವೀಯದಾದಾಗ ಮೈಸೂರು ಮಹಾರಾಜರು ಐದು ಸಾವಿರ ರೂಪಾಯಿಗಳ ಮುಂಗಡ ಹಣ ನೀಡುವುದರ ಮೂಲಕ ನೆರವಿಗೆ ಬಂದರು. ಈ ಪ್ರೋತ್ಸಾಹ ತಿರುಮಲಾಂಬ ಅವರ ಪ್ರಕಟಣಾ ಕಾರ್ಯಕ್ಕೆ ತುಂಬಾ ಸಹಾಯ ಮಾಡಿತು. ಅಲ್ಲದೆ ಆ ಹಣದಿಂದ ಹಳೆ ಸಾಲದ ಸ್ವಲ್ಪ ಭಾಗವನ್ನು ತೀರಿಸುವುದು ಸಾಧ್ಯವಾಯಿತು. ಆದರೂ ಅವರಿಗೆ ಸರ್ಕಾರದಿಂದ ಪಡೆದ ಸಾಲವನ್ನು ಮರುಪಾವತಿ ಮಾಡಲಾಗಲಿಲ್ಲ. ತಮ್ಮಲ್ಲಿ ಪ್ರಕಟಗೊಂಡ ಪುಸ್ತಕಗಳನ್ನು ಸರ್ಕಾರಿ ಬುಕ್ ಡಿಪೋಗೆ

ಒಪ್ಪಿಸಿದರು. ಮದ್ರಾಸಿನ ಪಠ್ಯಪುಸ್ತಕ ಮತ್ತು ಸಾಹಿತ್ಯ ಸಂಘ, ಧಾರವಾಡದ ವಿದ್ಯಾವರ್ಧಕ ಸಂಘ ಹಾಗೂ ಕೃಷ್ಣರಾಜ ಒಡೆಯರವರಿಂದ ತಿರುಮಲಾಂಬ ಅವರ ಕೃತಿಗಳಿಗೆ ಬಹುಮಾನಗಳು ದೊರೆತವು. ಮೈಸೂರು ಮತ್ತು ಮದ್ರಾಸ್ ವಿಶ್ವವಿದ್ಯಾಲಯಗಳಲ್ಲಿ ಇವರ ಪುಸ್ತಕಗಳು ಪಠ್ಯವಾದವು. ಹೀಗೆ ಅಷ್ಟಿಷ್ಟು ಪ್ರೋತ್ಸಾಹ ಆಗಾಗ ದೊರೆತರೂ ಒಟ್ಟಂದದಲ್ಲಿ ಅಂದಿನ ವಾತಾವರಣ ಅವರ ಉತ್ಸಾಹ, ಭರವಸೆಗಳನ್ನು ಕುಗ್ಗಿಸಿದವು. ಆರ್ಥಿಕ ಹೊಡೆತ ಅವರ ಪ್ರಕಟಣೆ ಮತ್ತು ಬರಹಗಳನ್ನು ಕ್ರಮೇಣ ನುಂಗಿತು. ಪತ್ರಿಕೆಗಳು ನಿಂತವು, ಹಿತೈಷಿಣಿ ಮೌನಿಯಾದಳು.

ತಮ್ಮದೇ ಆದ ಸಂಸಾರದ ಜವಾಬ್ದಾರಿಗಳಿಲ್ಲದ ವಿಧವೆಯರಿಗಾಗಲೀ, ಅವಿವಾಹಿತೆಯರಿಗಾಗಲೀ ಅಪಾರ ಬಿಡುವು ದೊರೆಯುತ್ತದೆಂದೂ ಇದರಿಂದಾಗಿ ಅವರು ತಮ್ಮ ಆಸಕ್ತಿಗಳನ್ನು ರೂಢಿಸಿಕೊಳ್ಳಲು ಗೃಹಿಣಿಯರಿಗಿಂತ ಹೆಚ್ಚಿನ ಅವಕಾಶವಿರುತ್ತದೆಂದೂ ಯಾರಾದರೂ ಅಂದುಕೊಳ್ಳಬಹುದಾದ್ದು ಸಹಜ. ಆದರೆ ಆರ್ಥಿಕ ಬಲವಿದ್ದು, ಪ್ರತ್ಯೇಕವಾಗಿ ಬದುಕಬಲ್ಲಂಥವರ ಬಗ್ಗೆ ನಮ್ಮ ಈ ಅನಿಸಿಕೆ ಸರಿ ಎನಿಸಬಹುದಾದರೂ ಆರ್ಥಿಕವಾಗಿ ಪರಾವಲಂಬಿಯಾಗಿದ್ದು, ಒಟ್ಟು ಕುಟುಂಬಗಳಲ್ಲಿ ಬದುಕುವವರಿಗೆ, ಗೃಹಿಣಿಯರಿಗಿಂತಲೂ ಹೆಚ್ಚಿನ ಒತ್ತಡಗಳಿರುತ್ತವೆ. ಒಂದು ದೃಷ್ಟಿಯಿಂದ ವಿಶೇಷವಾಗಿ ಹಕ್ಕಿನ ದೃಷ್ಟಿಯಿಂದ ಅಂಥವರಿಗೆ ಮನೆ, ಮಕ್ಕಳು ಇಲ್ಲವಾದರೂ ಬಂಧುಗಳೆಲ್ಲರ ಮನೆ, ಮಕ್ಕಳ ಜವಾಬ್ದಾರಿಯೂ ಅವರ ಮೇಲೆ ಬೀಳುವುದು ಸಾಮಾನ್ಯ. ತಿರುಮಲಾಂಬ ಅವರ ಬದುಕು ಕೂಡ ಇದಕ್ಕೆ ಅಪವಾದವಾಗಲಿಲ್ಲ. ತಾಯಿಯಿಲ್ಲದ ಮಕ್ಕಳೇ ಇರಲಿ, ಖಾಯಿಲೆ ಬಿದ್ದ ಬಂಧುಗಳೇ ಇರಲಿ, ಬಸುರಿ-ಬಾಣಂತಿಯರೇ ಇರಲಿ ತಿರುಮಲಾಂಬ ಅವರ ಆರೈಕೆಯನ್ನು ನಿರೀಕ್ಷಿಸಬಹುದಾಗಿತ್ತು. ಜೊತೆಗೆ ಮನೆವಾಳ್ತೆ – ಈ ಎಲ್ಲಾ ಜವಾಬ್ದಾರಿ, ದುಡಿಮೆಗಳ ನಡುವೆಯೆ ಅವರ ಬರಹದ ಬದುಕು ಸಾಗಿತ್ತು. ತುಂಬಿದ ಸಂಸಾರ, ಲೆಕ್ಕವಿಲ್ಲದಷ್ಟು ಅತಿಥಿ, ಅಭ್ಯಾಗತರಿಗೆ ಮಾಡಬೇಕಾಗಿದ್ದ ಸತ್ಕಾರ – ಹೀಗೆ ಬಿಡುವಿಲ್ಲದ ದುಡಿಮೆ, ಹತ್ತಾರು ಜನರನ್ನು ಅನುಸರಿಸಬೇಕಾಗಿದ್ದ ಅನಿವಾರ್ಯತೆಯ ನಡುವೆ ಅವರ ಸಂಪಾದನೆ, ಪ್ರಕಾಶನ, ಲೇಖನದ ವ್ಯವಸಾಯ ನಡೆಯಬೇಕಿತ್ತು. ಅವರ ನಿತ್ಯದ ದುಡಿಮೆ ಮುಗಿಯುವಾಗ ರಾತ್ರಿ ಹನ್ನೊಂದೋ, ಹನ್ನೆರಡೋ ಹೊಡೆದಿರುತ್ತಿತ್ತು. ಆಮೇಲೆ ಬರಹಕ್ಕೆ ಬಿಡುವು. ಮಧ್ಯರಾತ್ರಿಯಲ್ಲಿ ಕಿರಿಯ ಸೋದರ ಶ್ರೀಮುಕುಂದನ್ ಜೊತೆ ಸೂರ್ಯೋದಯದ ವರ್ಣನೆ ರೂಪುಗೊಳ್ಳುತ್ತಿತ್ತು! ಮಕ್ಕಳ ಮೇಲಿನ ಮಮತೆ, ಪ್ಲೇಗ್ ರೋಗಗಳ ಶುಶ್ರೂಷೆ ಯಾವುದಕ್ಕೂ ಹೆದರದ ಮನಸ್ಸು-ದೇಹದ ಒಡತಿ ಅವರಾಗಿದ್ದರು.

ತಿರುಮಲಾಂಬ ಅವರದು ಏಕಲವ್ಯ ಪರಂಪರೆ. ಭಾಷೆ, ಸಾಹಿತ್ಯಗಳ ಅಧ್ಯಯನದಲ್ಲಿ ಅವರು ತಮಗೆ ತಾವೇ ಗುರುವಾದರು. ತಮ್ಮ ಬಂಧುವೊಬ್ಬರಿಂದ *'ರಘುವಂಶ'*ದ ಎರಡು ಸರ್ಗಗಳನ್ನು ಕಲಿತರು. ಅಷ್ಟೇ ಅವರ ಸಂಸ್ಕೃತ ಪಾಠ. ಮುಂದಿನದು ಸ್ವಾಧ್ಯಾಯ. ಇಂಗ್ಲೀಷನ್ನೂ ಅವರೇ ಕಲಿತುಕೊಂಡರು. ವಿಳಾಸ ಬರೆಯಲು, ಬಂದ ಕಾಗದಗಳನ್ನು ಓದಿ ತಿಳಿದುಕೊಳ್ಳಲು ಸಾಧ್ಯವಾಗುವಷ್ಟು ಇಂಗ್ಲೀಷ್ ಬರುತ್ತಿತ್ತು. ಸ್ವಲ್ಪ ಬಂಗಾಳಿಯೂ ಬರುತ್ತಿತ್ತು. ಬಂಗಾಳಿ ಕಥೆಗಳನ್ನೆಲ್ಲ ಓದುವ ಅಭ್ಯಾಸವಿತ್ತು. ತಮ್ಮ ೬೦ನೇ ವಯಸ್ಸಿನಲ್ಲಿ ತಮಿಳು ಧಾರ್ಮಿಕ ಬರಹಗಳನ್ನು ಓದುವ ಆಸೆಯಿಂದ ಮನೆಮಾತಾದ ತಮಿಳು ಲಿಪಿಯನ್ನು ಕಲಿತರು. ಯಾವ ಭಾಷೆ ಕಲಿತರೂ ಅವರು ಬರೆದದ್ದು ಮಾತ್ರ ಕನ್ನಡದಲ್ಲಿ. ತಿರುಮಲಾಂಬ ಅವರದು ಅಪೂರ್ವ ಜ್ಞಾಪಕ ಶಕ್ತಿ. ಓದಿದ್ದೇ ಆಗಲಿ, ನೋಡಿದ್ದೇ ಆಗಲಿ ಸುಲಭವಾಗಿ ಅವರ ನೆನಪಿನಲ್ಲಿ ಉಳಿದು ಬಿಡುತ್ತಿತ್ತು.

ಮೂವತ್ತನೆಯ ವಯಸ್ಸಿಗೆ ಅಂಟಿದ ವಾತರೋಗ, ಎರಡು ಬಾರಿ ಶಸ್ತ್ರ ಚಿಕಿತ್ಸೆಗೆ ಒಳಗಾದ ಕಣ್ಣು, ಇಳಿಗಾಲದಲ್ಲಿ ಕಾಲಿನ ಮೂಳೆ ಮುರಿತ ಇಂಥ ದೈಹಿಕ ವಿಪತ್ತುಗಳ; ತಂದೆ–ತಾಯಿಯ, ಪತಿಯ, ಸೋದರ–ಸೋದರಿಯರ ಮರಣ, ತಮ್ಮ ಪ್ರೀತಿಯ ಅಮೂಲ್ಯ ಪುಸ್ತಕ ಸಂಗ್ರಹದ ಬೆಂಕಿನಾಶ – ಇಂಥ ಯಾತನಾಮಯ ಅನುಭವದ ಮಧ್ಯೆಯೂ ಬೇರೆಯವರಿಗೆ ತೊಂದರೆ ಕೊಡದಿರಲು ತಿರುಮಲಾಂಬ ಯತ್ನಿಸುತ್ತಿದ್ದರು. ಪ್ರಕಾಶಕಿ, ಸಂಪಾದಕಿಯಾಗಿ ಕೆಲಸ ಮಾಡುವಾಗಲೂ ಹೆಚ್ಚಿನ ಕೆಲಸ ಅವರದೇ. ಪತ್ರ ವ್ಯವಹಾರವೇ ಇರಲಿ, ಕರಡು ಓದುವುದೇ ಇರಲಿ, ತಮ್ಮ ಊಟ–ಉಡುಗೆಯ ವಿಷಯವೇ ಇರಲಿ ತಮ್ಮ ಕೆಲಸವನ್ನು ತಾವೇ ಮಾಡುತ್ತಿದ್ದರು. ಮಿತ ಅಗತ್ಯಗಳು, ಸಂಯಮದ ಬದುಕು, ಪರೋಪಕಾರಕ್ಕೆ ಹಿಂದೆಗೆಯದ ಕೈ – ಈ ಎಲ್ಲವೂ ಅವರ ವ್ಯಕ್ತಿತ್ವದಲ್ಲಿ ಬೆರೆತು ಹೋಗಿದ್ದವು. ನಾಟಕ ಸಂಘ, ರಾತ್ರಿ ಶಾಲೆಯನ್ನೂ ತಿರುಮಲಾಂಬ ನಡೆಸುತ್ತಿದ್ದುದುಂಟು. ಕೆಲವು ಔಷಧಿಗಳನ್ನೂ ಅವರೇ ತಯಾರಿಸಿ ಚಿಕಿತ್ಸೆ ನಡೆಸುತ್ತಿದ್ದರು. ಆದರೂ ಅವರ ಬದುಕಿನ ಪೂರ್ವಾಹ್ನದ ಗಮನಾರ್ಹವಾದ ಪಾಲು ಸಾರಸ್ವತ ಲೋಕಕ್ಕೇ ವಿನಿಯೋಗವಾಗುತ್ತಿತ್ತು. *'ನಭಾ', 'ವಿರಾಗಿಣೀ', 'ವಿಕ್ರಮ', 'ಗಿರಿಜಾಬಾಯಿ', 'ಮಣಿಮಾಲಾ', 'ವಿವೇಕೋದಯ'* ಕೃತಿಗಳಲ್ಲದೆ *'ಹಿತೈಷಿಣೀ ಸಂದೇಶ', 'ಭಾವನಾಲೋಕ', 'ಅಣುಗಿಯ ಅಳಲು'* ಮುಂತಾದ ಎಂಟು ಪ್ರಬಂಧಾವಳಿಗಳನ್ನು ರಚಿಸಿದ್ದಾರೆ. *'ಧ್ರುವ ಚರಿತ್ರೆ', 'ಪುತ್ರಕಾಮೇಷ್ಟಿ', 'ಗಜೇಂದ್ರಮೋಕ್ಷ'* ಮುಂತಾದವನ್ನು ಮರೆಯುವಂತಿಲ್ಲ.

ದೃಢ ವ್ಯಕ್ತಿತ್ವದ ಶಿಸ್ತುಗಾರ್ತಿ ತಿರುಮಲಾಂಬ ಒಮ್ಮೆ ಜೋಳದ ಕಡ್ಡಿ (ಕೊಯ್ಲು) ಕಾಲಿಗೆ ಹೊಡೆದು ಅದರ ಭಾಗ ಕಾಲಿನ ಒಳಗೆ ಸೇರಿತು. ಶಸ್ತ್ರ ಚಿಕಿತ್ಸೆ ಮಾಡಿ ಅದನ್ನು ಹೊರ ತೆಗೆಯಬೇಕಾಯಿತು. ಆಗ ತಿರುಮಲಾಂಬ ವೈದ್ಯರಿಗೆ *'ಕ್ಲೋರೋಫಾರಂ'* ಕೊಡದೆ ಶಸ್ತ್ರ ಚಿಕಿತ್ಸೆ ಮಾಡಿ ಎಂದು ಸೂಚಿಸಿದರಂತೆ. ಸ್ಥಿರತೆ, ನಂಬಿದನ್ನು ನಿಷ್ಠೆಯಿಂದ, ಎದೆಗಾರಿಕೆಯಿಂದ ನಡೆಸಿಕೊಂಡು ಹೋಗುವಿಕೆ ತಿರುಮಲಾಂಬ ಅವರ ವ್ಯಕ್ತಿತ್ವದ ಮೂಲಗುಣ ಎನ್ನಬಹುದು. ತಮ್ಮ ಧೈರ್ಯವನ್ನು ಕುರಿತು ಹೇಳುವಾಗ ತಾವು ರಾಕ್ಷಸಗಣದವರೆಂದು ತಿರುಮಲಾಂಬ ಬರೆದುಕೊಂಡಿದ್ದಾರೆ. ಅಶಿಸ್ತನ್ನು ಬೆದರಿಸಿ ಓಡಿಸುವಲ್ಲಿಯಂತೂ ಅವರು ರಾಕ್ಷಸಗಣದವರೇ ಆಗಿದ್ದರು. ಅವರ ಎಲ್ಲ ಕೆಲಸಗಳಲ್ಲಿ ಈ ಶಿಸ್ತು ಕಾಣುತ್ತವೆ. ಅವರ ಪುಸ್ತಕಗಳು ಅಚ್ಚಾಗಿರುವ ರೀತಿ, ದಾಖಲೆಗಳನ್ನು ಅನುಗೊಳಿಸಿರುವ ಕ್ರಮ, ದಿನಚರಿಯನ್ನು ಬರೆದಿಟ್ಟ ರೀತಿ ಎಲ್ಲೆಲ್ಲೂ ಈ ಅಚ್ಚುಕಟ್ಟು ಮೆರೆದಾಡಿವೆ. ತೊಟ್ಟುಕೊಳ್ಳುವ ಸೀರೆ-ರವಿಕೆ ಇರಲಿ, ಶ್ಲೋಕ ಪಠನವೇ ಇರಲಿ, ರಾಮಾಯಣದ ವಾಚನವೇ ಇರಲಿ, ತಮಗೆ ಬಂದ ಪತ್ರಗಳೇ ಇರಲಿ, ಎಲ್ಲದರ ಮೇಲೆ ಅದು ತಲುಪಿದ, ಓದಿದ ತಾರೀಖು ಅಲ್ಲಿರಬೇಕು. ತಿಂಡಿ ಹಂಚುವಾಗಲೂ ಅದೇ ಶಿಸ್ತು, ಔಷಧಿ ಕೊಡುವಾಗಲೂ ಅದೇ ಶಿಸ್ತು. ಶಿಸ್ತು ತಪ್ಪಿದರೆ ಈ ಸಿಪಾಯಿಗೆ ಬರುತ್ತಿದ್ದ ಕಡುಕೋಪದ ರುಚಿಯನ್ನು ಅವರ ಬಂಧುಗಳು ಕಂಡಿದ್ದಾರೆ. ಮೇಲುನೋಟಕ್ಕೆ ತಿರುಮಲಾಂಬ ಗಡಸು, ಶಿಸ್ತು, ಸ್ಥೈರ್ಯ, ಕಡ್ಡಿ ತುಂಡಾದಂತೆ ಮಾತು. ಆದರೆ ಈ ಗಡಸಿನ ರಕ್ಷಾ ಕವಚದೊಳಗೆ ಬತ್ತದ ಅಂತಃಕರಣದ ಒರತೆ ಇರುವುದನ್ನು ಪ್ರತಿಯೊಬ್ಬರೂ ಅರಿತಿದ್ದರು. ತಬ್ಬಲಿಗಳಿಗೆ ತಾಯಾಗಿ, ಆಪತ್ತಿನಲ್ಲಿದ್ದವರಿಗೆ ಆಪದ್ಬಂಧುವಾಗಿದ್ದವರು ತಿರುಮಲಾಂಬ.

ತಿರುಮಲಾಂಬ ಅವರು ಸಾರಸ್ವತ ಲೋಕಕ್ಕೆ ನೀಡಿದ ಕೊಡುಗೆಗಾಗಿ ಅಷ್ಟಿಷ್ಟು ಪುರಸ್ಕಾರ, ಪ್ರೋತ್ಸಾಹಗಳೂ ಲಭಿಸಿವೆ. ಕರ್ನಾಟಕ ವಿದ್ಯಾವರ್ಧಕ ಸಂಘ, ಮದರಾಸಿನ ಸಾಹಿತ್ಯ ಸಂಘ, ಮದ್ರಾಸ್, ಮುಂಬೈ, ಮೈಸೂರು ಶಿಕ್ಷಣ ಇಲಾಖೆ, ಮೈಸೂರು ಮಹಾರಾಜರ ಪ್ರೋತ್ಸಾಹಗಳ ಬಗ್ಗೆ ತಿರುಮಲಾಂಬ ತಮ್ಮ ಕೃತಜ್ಞತೆ ಸೂಚಿಸಿದ್ದಾರೆ. ೧೯೭೯ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಅವರನ್ನು ಗೌರವಿಸಿತು. ೧೯೮೦ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪುರಸ್ಕಾರಕ್ಕೆ ಅವರು ಭಾಜನರಾದರು. ಹದಿಮೂರರ ಮುಗ್ಧ ಮುತ್ತೈದೆಯಾಗಿ, ಹದಿನಾಲ್ಕರ ಬಾಲ ವಿಧವೆಯಾಗಿ ತಪಸ್ಸಿನಂತೆ ಬರಹ, ಪ್ರಕಾಶನ, ಪತ್ರಿಕಾ ಸಂಪಾದನೆಯನ್ನು ಹಚ್ಚಿಕೊಂಡ ಯುವತಿಯಾಗಿ, ಪ್ರಕಾಶನ, ಸಂಪಾದನೆಯಿಂದ ಎದುರಾದ ಆರ್ಥಿಕ ಮುಗ್ಗಟ್ಟಿನಲ್ಲಿ ಹಾಗೂ ಸಮಾಜ ಮತ್ತು ಸಾಹಿತ್ಯ ಕ್ಷೇತ್ರದ ವಿಮರ್ಶೆ, ಟೀಕೆಗಳ ನಡುವೆ ದೃಢವಾಗಿ ಹೋರಾಡಿದ ಸ್ಥಿರಚಿತ್ತೆಯಾಗಿ, ನಿಷ್ಠಾವಂತೆಯಾಗಿ, ಅನಿಕೇತನೆ ಸ್ನೇಹಮಯಿಯಾಗಿ ಬದುಕಿನ ಕಹಿ-ಸಿಹಿಗಳನ್ನು

ಉಂಡು, ಏರು-ತಗ್ಗುಗಳನ್ನು ಕಂಡು ಹಣ್ಣಾದ ತಿರುಮಲಾಂಬರ ಜೀವ ಇಹದ ತೊಟ್ಟಿನಿಂದ ೧ನೇ ಸೆಪ್ಟೆಂಬರ್ ೧೯೮೨ರಂದು ಕಳಚಿಬಿದ್ದಿತು. ತಿರುಮಲಾಂಬ ಅವರ ಜನ್ಮ ಶತಮಾನೋತ್ಸವವನ್ನು ಲೇಖಕಿಯ ಹುಟ್ಟೂರಾದ ನಂಜನಗೂಡಿನಿಂದ ಪ್ರಾರಂಭಿಸಿ ಭಾರತದ ಬೇರೆ ಬೇರೆ ಸ್ಥಳಗಳಲ್ಲಿ ಆಚರಿಸಲಾಯಿತು. ಬೆಂಗಳೂರಿನ *'ಎನ್.ಎಂ.ಕೆ.ಆರ್.ವಿ. ಶಿಕ್ಷಣ ಸಂಸ್ಥೆ'*ಯು ರಾಷ್ಟ್ರ ಮಟ್ಟದಲ್ಲಿ *'ನಂಜನಗೂಡು ತಿರುಮಲಾಂಬ'* ಪ್ರಶಸ್ತಿಯನ್ನು ಲೇಖಕಿಯರಿಗೆ ನೀಡಿ ಗೌರವಿಸುತ್ತಿದೆ.

❖ ❖ ❖ ❖

ಲೇಖಕರ ಪರಿಚಯ : ಆಧುನಿಕ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸೃಜನಶೀಲ ಲೇಖಕಿಯಾಗಿ, ಸಂಶೋಧಕಿಯಾಗಿ, ಸಂಪಾದಕಿಯಾಗಿ, ಸ್ತ್ರೀವಾದಿ ಚಿಂತಕಿಯಾಗಿ, ಮಹಿಳಾ ಚಳುವಳಿಯ ಸಕ್ರಿಯ ಹೋರಾಟಗಾರ್ತಿಯಾಗಿ, ಪ್ರಗತಿಪರ ಚಿಂತನೆಯ ವ್ಯಕ್ತಿಯಾಗಿ ಡಾ. ವಿಜಯಾ ದಬ್ಬೆಯವರು ವಹಿಸಿದ ಪಾತ್ರ, ನಿರ್ವಹಿಸಿದ ಸಾಧನೆ ಬಹು ದೊಡ್ಡದು. ಬೇಲೂರು ಸಮೀಪದ 'ದಬ್ಬೆ' ಎಂಬಲ್ಲಿ ಜನಿಸಿ, ಮೈಸೂರು ವಿ.ವಿ. ಕನ್ನಡ ವಿಭಾಗದ ಪ್ರಾಧ್ಯಾಪಕಿಯಾಗಿದ್ದ ಇವರು ಅಪಘಾತಕ್ಕೀಡಾಗಿ ನೆನಪಿನ ಶಕ್ತಿ ಕಳೆದುಕೊಂಡು ತೆರೆಮರೆಗೆ ಸರಿದಿದ್ದಾರೆ.

ಅವರು *'ಇರುತ್ತುವೆ', 'ನೀರು ಲೋಹದ ಚಿಂತೆ', 'ತಿರುಗಿ ನಿಂತ ಪ್ರಶ್ನೆ', 'ಇತಿಗೀತಿಕೆ'* ಎಂಬ ಕವಿತಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಜೊತೆಗೆ *'ನಯಸೇನ', 'ಸಂಪ್ರತಿ', 'ಮಹಿಳೆ, ಸಾಹಿತ್ಯ ಸಮಾಜ', 'ನಾರಿ ದಾರಿ ದಿಗಂತ', 'ಅನುಪಮಾ ನಿರಂಜನ', 'ಮಹಿಳೆ ಮತ್ತು ಮಾನವತೆ' (ಮರ್ಶಾ ಸಂಕಲನಗಳು) ; 'ನಾಗಚಂದ್ರ ಒಂದು ಅಧ್ಯಯನ', 'ಹಿತೈಷಿಣಿಯ ಹೆಜ್ಜೆಗಳು', 'ಸಾರಸರಸ್ವತಿ' (ಸಂಶೋಧನೆಗಳು); 'ನಾಗಚಂದ್ರ', 'ಶ್ಯಾಮಲಾ ಸಂಚಯ', 'ಸಾನಂದ ಗಣೇಶ ಸಾಂಗತ್ಯ' (ಸಂಪಾದಿತ); 'ಮೇರಿ ಮೆಕ್‌ಲಿಯಾಡ್ ಬೆಥೂನೆ' (ವ್ಯಕ್ತಿಚಿತ್ರ); 'ಉರಿಯ ಚಿಗುರ ಉತ್ಕಲೆ' (ಪ್ರವಾಸ ಕಥನ); 'ಗುರುಜಾಡ', 'ವಿಮೋಚನೆಯೆಡೆಗೆ' (ಅನುವಾದ);* ಮುಂತಾದ ಕೃತಿಗಳನ್ನುಹೊರತಂದಿದ್ದಾರೆ. ಇವರ ಸಾಹಿತ್ಯ ಸೇವೆಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ, ಅನುಪಮಾ ಪ್ರಶಸ್ತಿ, ವರ್ಧಮಾನ ಸಾಹಿತ್ಯ ಪ್ರಶಸ್ತಿ, ಸದೋದಿತಾ ಪ್ರಶಸ್ತಿ ಹಾಗೂ ಕರ್ನಾಟಕ ಸರ್ಕಾರದ *'ದಾನ ಚಿಂತಾಮಣಿ ಅತ್ತಿಮಬ್ಬೆ'* ಪ್ರತಿಷ್ಠಿತ ಪ್ರಶಸ್ತಿಗಳು ಇವರಿಗೆ ಸಂದಿವೆ.

ಶಬ್ದಾರ್ಥ : ಧೃತಿ–ತಾಳುವಿಕೆ, ಧೈರ್ಯ ; ಪೊರೆ–ರಕ್ಷಿಸು ; ಪರಿತಾಪ–ಕಡುಬೇಗೆ ; ಶಮನ–ಕಡಿಮೆ ; ಭಾಜಿನರಾಗು–ಪಾತ್ರರಾಗು ; ಮುಗ್ಗಟ್ಟು–ಕಷ್ಟದ ಸ್ಥಿತಿ ; ಸರ್ಗ–ಅಧ್ಯಾಯ ; ಕ್ಲೋರೋಫಾರಂ–ಅರಿವಳಿಕೆ

ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ :

೧) 'ತಾಯಿಯಿಲ್ಲದ ತಬ್ಬಲಿಯಾಗಬೇಕಾಯಿತು.'

೨) 'ಅರುಣೋದಯವನ್ನು ಕತ್ತಲೆ ನುಂಗಿತು.'

೩) 'ಹಿತೈಷಿಣಿ ಮೌನಿಯಾದಳು.'

೪) 'ಕ್ಲೋರೋಫಾರಂ ಕೊಡದೆ ಶಸ್ತ್ರ ಚಿಕಿತ್ಸೆ ಮಾಡಿ.'

೫) 'ತಿಂಡಿ ಹಂಚುವಾಲೂ ಅದೇ ಶಿಸ್ತು.'

ಒಂದು ವಾಕ್ಯದಲ್ಲಿ ಉತ್ತರಿಸಿ :

೧) ತಿರುಮಲಾಂಬ ಅವರ ತಂದೆ–ತಾಯಿಗಳಾರು?

೨) ತಿರುಮಲಾಂಬ ಅವರಿಗೆ ವೈಧವ್ಯ ಪ್ರಾಪ್ತವಾದುದು ಎಷ್ಟನೇ ವಯಸ್ಸಿನಲ್ಲಿ?

೩) ತಿರುಮಲಾಂಬ ಅವರ ಮೊದಲ ಪ್ರಕಟಿತ ಪ್ರಬಂಧ ಯಾವುದು?

೪) ತಿರುಮಲಾಂಬ ಅವರು ನಡೆಸುತ್ತಿದ್ದ ಪ್ರಕಟಣ ಮಾಲೆಗಳಾವುವು?

೫) 'ನಂಜನಗೂಡು ತಿರುಮಲಾಂಬ' ಪ್ರಶಸ್ತಿಯನ್ನು ಯಾವ ಸಂಸ್ಥೆ ಸ್ಥಾಪಿಸಿದೆ?

ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ :

೧) ತಿರುಮಲಾಂಬ ಎಲ್ಲಿ, ಯಾವಾಗ ಜನಿಸಿದರು?

೨) ತಿರುಮಲಾಂಬ ಅವರ ತಂದೆ ಮಗಳಿಗೆ ಹೇಗೆ ಧೈರ್ಯ ತುಂಬಿದರು?

೩) ಯಾವ ಯಾವ ಕ್ಷೇತ್ರಗಳಲ್ಲಿ ತಿರುಮಲಾಂಬ ಅವರು ಸಾಧನೆಗೈದಿದ್ದಾರೆ?

೪) ತಿರುಮಲಾಂಬ ಅವರಿಗೆ ಮೊದಲ ಗೀತ ರಚನೆಯಲ್ಲಿ ಸ್ಫೂರ್ತಿ ನೀಡಿದ ಸನ್ನಿವೇಶ ಯಾವುದು?

೫) ತಿರುಮಲಾಂಬ ಅವರು ರಚಿಸಿದ ಕೃತಿಗಳಾವುವು?

೬) ಮಹಾರಾಜರಿಂದ ತಿರುಮಲಾಂಬ ಅವರಿಗೆ ದೊರೆತ ಸಹಾಯವೇನು? ಅದನ್ನು ಅವರು ತೀರಿಸಿದ ಬಗೆ ಹೇಗೆ?

೭) ತಿರುಮಲಾಂಬ ಅವರು ಸಂಪಾದಿಸುತ್ತಿದ್ದ ಪತ್ರಿಕೆಗಳು ಯಾವುವು?

೮) ತಿರುಮಲಾಂಬ ಯಾವ ಯಾವ ಭಾಷೆಗಳನ್ನು ಬಲ್ಲವರಾಗಿದ್ದರು?

ವಿವರವಾಗಿ ಉತ್ತರಿಸಿ :

೧) ತಿರುಮಲಾಂಬ ಅವರ ಬಾಲ್ಯ ಜೀವನವನ್ನು ಚಿತ್ರಿಸಿ.

೨) ತಿರುಮಲಾಂಬ ಅವರ ಸಾಧನೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

೩) ತಿರುಮಲಾಂಬ ಅವರ ವ್ಯಕ್ತಿತ್ವ ಮತ್ತು ಮನೋಸ್ಥೈರ್ಯಗಳನ್ನು ಸಂಗ್ರಹಿಸಿ ಬರೆಯಿರಿ.

೪) ಕುಟುಂಬದ ಹಿರಿಯಕ್ಕನಾಗಿ ತಿರುಮಲಾಂಬ ಅವರು ನಿರ್ವಹಿಸಿದ ಪಾತ್ರವೇನು? ವಿಶ್ಲೇಷಿಸಿ.

ಭಾಷಾಭ್ಯಾಸ :

೧) ಇವುಗಳಿಗೆ ವಿರುದ್ಧ ಪದಗಳನ್ನು ಬರೆಯಿರಿ :
ವೃತ್ತಿ, ವ್ಯಯ, ಅಮೃತ, ದುರ್ಬಲ, ನಿರ್ಮಮತೆ.

೨) ಇವುಗಳನ್ನು ಬಿಡಿಸಿ ಬರೆಯಿರಿ :
ಅರುಣೋದಯ, ಮುಖ್ಯೋಪಾಧ್ಯಾಯ, ವಿನಿಯೋಗವಾಗು.

೩) ಇವುಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿರಿ :
ಅಗ್ನಿಕುಂಡ, ಬಾಳುತಳ್ಳು, ಕೊನೆಯುಸಿರೆಳೆ, ಕತ್ತಲೆ ನುಂಗು, ಕಣ್ಮುಚ್ಚು.

ಚಟುವಟಿಕೆ :

೧) ನಂಜನಗೂಡು ತಿರುಮಲಾಂಬ, ಅನುಪಮಾ ನಿರಂಜನ, ತಿರುಮಲೆ ರಾಜಮ್ಮ, ಆರ್. ಕಲ್ಯಾಣಮ್ಮ ಮುಂತಾದವರ ಜೀವನ ವಿವರಗಳನ್ನು ಸಂಗ್ರಹಿಸಿ.

೨) ಕಡು ಕಷ್ಟದಲ್ಲೂ ಅರಳಿ ನಿಂತ ಸಾಧಕರ ವಿವರಗಳನ್ನು ಸಂಗ್ರಹಿಸಿ.

ಆಕರ :

'ಹಿತೈಷಿಣಿಯ ಹೆಜ್ಜೆಗಳು'–ನಂಜನಗೂಡು ತಿರುಮಲಾಂಬ ಅವರ ಬದುಕು ಬರಹ ಕೃತಿಯಿಂದ ಸಂಗ್ರಹಿತ – ಲೇಖಕರು : ಡಾ. ವಿಜಯಾ ದಬ್ಬೆ
ಸಂಗ್ರಹ ರೂಪ : ಎಚ್.ಎಸ್.ಸತ್ಯನಾರಾಯಣ, ಬಾಲಕಿಯರ ಸರ್ಕಾರಿ ಪದವಿ ಪೂರ್ವಕಾಲೇಜು, ಬಸವನಗುಡಿ, ಬೆಂಗಳೂರು.
ಪ್ರಕಾಶಕರು : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ಹೆಚ್ಚಿನ ಓದು :

೧) ಕನ್ನಡ ಲೇಖಕಿಯರು ಯಾರು? ಯಾರು? – ಲೇಖಕರು : ಚಿ.ನಾ. ಮಂಗಳ.

೨) ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ – ಸಂಪಾದಕರು : ಎಚ್.ಎಸ್. ಶ್ರೀಮತಿ, ಪ್ರಸಾರಾಂಗ, ಹಂಪಿ ಕನ್ನಡ ವಿಶ್ವವಿದ್ಯಾಲಯ.

ದೋಸೆ ರಾಜಕೀಯ

– ವೈದೇಹಿ

ಲಲಿತ ಪ್ರಬಂಧ ಗದ್ಯ ಸಾಹಿತ್ಯದಲ್ಲಿ ಅತ್ಯಂತ ಲವಲವಿಕೆಯ ಹಾಗೂ ರಂಜನೀಯವಾದ ಪ್ರಕಾರ. ಲೇಖಕನ ಮನಸ್ಸಿನ ಭಾವನೆಗಳು, ಅನಿಸಿಕೆಗಳು ಇಲ್ಲಿ ತಿಳಿಹಾಸ್ಯದೊಂದಿಗೆ ಲಲಿತವಾಗಿ ಮೂಡಿರುತ್ತವೆ. ದಿನದಿನದ ಬದುಕಿನ ಆಪ್ತ ಸಂಗತಿಗಳೂ ಸೇರಿದಂತೆ ಸಾಂಸ್ಕೃತಿಕ ವಿಚಾರಗಳ ಕಾಳಜಿಯೂ ಸೇರಿ ಇದು ಓದುಗರ ಮನಸ್ಸನ್ನು ಸೆಳೆಯುವ ಜನಪ್ರಿಯ ಸಾಹಿತ್ಯ ಎನಿಸಿಕೊಂಡಿದೆ. ಒಂದು ಸಾಮಾನ್ಯ ವಿಷಯುವನ್ನು ಅದೆಷ್ಟು ಸ್ವಾರಸ್ಯಕರವಾಗಿ, ಜೀವನಾನುಭವದೊಟ್ಟಿಗೆ ಕಟ್ಟಿಕೊಡಬಹುದೆಂಬುದಕ್ಕೆ ಈ ಲೇಖನ ಸಾಕ್ಷಿಯಾಗಿದೆ.

ಅವತ್ತು ಒಂದು ಸೆಮಿನಾರಿನಲ್ಲಿ, ಸೆಮಿನಾರುಗಳನ್ನು ದೋಸೆ ಮಗುಚುವುದಕ್ಕೆ ಸಮೀಕರಿಸಿದ್ದು ಕೇಳಿದೆ. ಒಂದು, ಆ ಸಮೀಕರಣವೇ ನನಗೆ ಆಶ್ಚರ್ಯ ತಂದಿತು. ಎರಡು, ಹೇಳಿದ ದಾಟಿಯಲ್ಲಿ ದೋಸೆ, ಅದನ್ನು ಮಗುಚುವಿಕೆ ಇತ್ಯಾದಿಗಳನ್ನು ಹಗುರವಾಗಿ ಕಂಡಂತೆ ಅನಿಸಿ ತಳಮಳಗೊಂಡೆ. ದೋಸೆಯನ್ನು ಚಿಂಸಿದೆ. ಅಲ್ಲ, ಎಲ್ಲ ಬಿಟ್ಟು ದೋಸೆ ಸಮಾಚಾರ ಯಾಕೆ ಎನ್ನಬೇಡಿ ...... ಮನೆಯೊಳಗಿರುವ ನಮ್ಮಂಥ ಕೆಲವರ ಇಡೀ ಕಾಯಕವನ್ನೇ, ಸಮಯದ ಬಹುಭಾಗವನ್ನು ಅಡುವ, ಬಡಿಸುವ, ನಾಳೆಗೇನೆಂದು ನೋಡಿ ತೆಗೆದಿಡಲು ಮುಡಿಪಿಡುವ ಶ್ರದ್ಧೆಯನ್ನೇ–ಹ್ದೆ ಅಂತ ಬಿಸುಟ ಹಾಗಾಗಿ, ಬೇಸರವಾಗುತ್ತದೆ. ಅದೂ ಅಲ್ಲದೆ ಯಾವುದೇ ಆಗಲಿ, ತಿನ್ನಲು ಬೇಕು, ಚರ್ಚೆಗೆ ಬೇಡ ಎಂದರೆ ಹೇಗೆ? ನೋಡಿದರೆ ಜಗತ್ತಿನ ದೊಡ್ಡ ದೊಡ್ಡ ವಾದಗಳ ಮೂಲದಲ್ಲಿ ಮುಖ್ಯವಾಗಿ ಇರುವುದೇ ಇಂತಹ ಪ್ರಶ್ನೆ. ಅವುಗಳ ತೊಡುಗೆ ತುಸು ಭಿನ್ನವಿದ್ದೀತು, ಅಷ್ಟೆ.

ದೋಸೆ ಸುತ್ತ ಎಷ್ಟಿದೆ ನಿಜಕ್ಕೂ. ಒಮ್ಮೆ ಒಬ್ಬ ಹರಿಕಥೆದಾಸರು ಹೇಳುತ್ತಿದ್ದರು: ರಾತ್ರಿ ಮಗುಚಿ ಹಗಲು, ಹಗಲು ಮಗುಚಿ ರಾತ್ರಿ. ಈ ಮಗುಚುವಿಕೆಯ ಮಧ್ಯದೇಶವೇ ನಾವು ಕಾಣುವ ನಿಗಿನಿಗಿ ಪ್ರಪಂಚ ಅಂತ. ಯಾರೋ ಆಗ 'ಹಗಲು ಕರಟಿದರೆ ರಾತ್ರಿ' ಅಂತ ಪಿಸುಗುಟ್ಟಿ ನಕ್ಕಿದ್ದರು. ಉರುಟು ಇರುವುದೆಲ್ಲ ದೋಸೆಯಲ್ಲ ಮುಂತಾದ ಗಾದೆ ಹುಟ್ಟುಹಾಕಿದವರೂ ಆ ದಾಸರೇ. ಯಾಕೋ ಆ ದಾಸರಿಗೆ ಬರೀ ದೋಸೆಯೇ ಎಲ್ಲದಕ್ಕೂ ಮುಖ್ಯ ಉಪಮೆಯಾಗಿ ಸಿಗುವುದು. ಹಾಗಾಗಿ, ಜನ ಬಿಡುವರೇ, ಅವರಿಗೆ 'ದೋಶಾದಾಸಃ' ಎಂದು ಅಡ್ಡ ಹೆಸರಿಟ್ಟಿದ್ದರು. ('ದೋಸೆಗೆ ಸಂಸ್ಕೃತದಲ್ಲಿ ಏನು ಗುರುಗಳೆ?' 'ದೋಶಾ' 'ಯಾವ ಷ ಗುರುಗಳೆ?' 'ಪಟ್ಟೆ ಷ ಅಲ್ಲ. ಮುರುಟಲು ಶ')

ಈಗ ಅವರಿದ್ದಿದ್ದರೆ ದಾಸರೇ, ದೋಸೆಯ ಟೆಕ್ನಾಲಜಿಯಲ್ಲಿ ಬಹಳ ಬದಲಾವಣೆಯಾಗಿದೆ. ಮಗುಚಿಹಾಕುವ ಕಾಲ ಹೋಗಿ ಗರಿಗರಿಯಾಗಿ ಹಾಗೆಯೇ ಎತ್ತಿ ಬಡಿಸುವ ಕಾಲ ಬಂದಿದೆ. ತಸ್ಮಾತ್, ಈಗ ರಾತ್ರಿ ಎಂಬುದೇ ಇಲ್ಲ. ಎಲ್ಲ ಹಗಲೇ. ಏನೆನ್ನುತ್ತೀರಿ? ಅಂತ ಒಂದು ಪ್ರಶ್ನೆ ಹಾಕಬಹುದಿತ್ತು ಎಂದು ಜನ ಅವರನ್ನು ಈಗಲೂ ನೆನೆಸಿಕೊಳ್ಳುತ್ತಾರೆ. ಹೀಗೆ ಆ ದೋಶಾದಾಸರು ಊರ್ಧ್ವದೇಶಾಂತರ ಹೋಗಿಯೂ ಕಾಲಮೀರಿ ಅಮರರಾಗಿದ್ದಾರೆ.

ದೋಸೆಯ ಬಗ್ಗೆ ನೆನೆಯ ಹೋದರೆ ಹೊಳೆಯುತ್ತಲೇ ಹೋಗುತ್ತದೆ. ನನ್ನ ಚಿಕ್ಕಂದಿನಲ್ಲಿ ತಾಯಿ ಮನೆಯಲ್ಲಿ ಅಡುಗೆ ಮಾಡುತ್ತಿದ್ದ ಮಾಚಮ್ಮ ಎಂಬುವರು ಕುಚ್ಚಿಗೆ ಅಕ್ಕಿಗೆ ತೆಂಗಿನಕಾಯಿ ಹಾಕಿ ಅರೆದು ಒಂದು ವಿಧದ ದೋಸೆ ಮಾಡುತ್ತಿದ್ದರು. ರೊಟ್ಟಿಯೂ ಅಲ್ಲದ ಮಾಮೂಲಿ ದೋಸೆಯೂ ಅಲ್ಲದ ವಿಶೇಷ ದೋಸೆಯಾದ ಅದನ್ನು ಬೆರಳಿನಲ್ಲಿಯೇ ಹರಡಬೇಕು. ಸೌದೆ ತುಸು ಹಿಂದೆಳೆದು, ಬೆಂಕಿ ಕಿರಿ ಮಾಡಿಕೊಂಡು, ಅಂಗೈಯಲ್ಲಿ ಹಿಟ್ಟನೆತ್ತಿ ಕಾದ ಕಾವಲಿಯ ಮೇಲೆ ಹಾಕಿ ಐದೂ ಬೆರಳನ್ನು ಅಗಲಿಸಿ ಹಿಡಿದು ಹಿಟ್ಟನ್ನು ಎಳೆಯುತ್ತ ದೋಸೆ ಉರುಟಿಗೆ ಹಿಗ್ಗಿಸಿ ಎಡಗೈಯಿಂದ ಬೆಂಕಿ ಮುಂದೂಡುತ್ತಿದ್ದರು. ಬೆರಳುಗಳು ಓಡಿದ ಓಣಿ ಗುರುತಿನ ಮೇಲೆ ಎಣ್ಣೆ ಬಿಟ್ಟಂತೆ ಮಾಡಿ ಮುಚ್ಚುತ್ತಿದ್ದರು. ನಿಮಿಷ ಕಳೆದು ಮುಚ್ಚಳ ತೆಗೆದು ಗಾಳಿಗೆ ಬಿಟ್ಟು, ಮತ್ತೊಂದು ಕ್ಷಣ ತಡೆದು ಮಗುಚಿ ಹಾಕದೆಯೇ ಬರಿಗೈಯಿಂದ ಎತ್ತಿಬಿಡುತ್ತಿದ್ದರು. ಅದೊಂದು ದೋಸೆಗೆ ಸಟ್ಟುಗ ಯಾಕೆ ಬೇಡ? ಸಟ್ಟುಗದಲ್ಲಿ ಎಬ್ಬಿಸಿದರೆ ಏನಾಗುತ್ತದೆ? ಮಗಚುವುದಿಲ್ಲ ಯಾಕೆ? – ಪ್ರಶ್ನೆಗಳೇ ಏಳುತ್ತಿರಲಿಲ್ಲ. ಆ ದೋಸೆ ಹುಟ್ಟಿದ್ದೇ ಹಾಗೆ, ಇರುವುದೇ ಹಾಗೆ ಎಂಬಂತಿತ್ತು. ಮಾಚಮ್ಮನ ಕೋಮಲತೆ ಕಳೆದ ಗಿಡ್ಡ ದಪ್ಪ ಉಂಡುಂಡೆ ಬೆರಳುಗಳು ನೆನಪಾಗುತ್ತವೆ. ಅವರು ಎದ್ದು ಹೋದ ಗಳಿಗೆ ನೋಡಿ ಅವರಂತೆಯೇ ದೋಸೆ ಮಾಡಲು ಹೋಗಿ ಸುಟ್ಟುಕೊಂಡ ಪುಟ್ಟ ಎಳೆಯ ಬೆರಳುಗಳೂ...............

ಹೀಗೆ ಎಲ್ಲ ಹೇಳ ಹೊರಟರೆ ಮೂರು ಹಗಲು ಮೂರು ರಾತ್ರಿ ಬೇಕು. ಒಂದು ಬಿಸಿಬಿಸಿ ದೋಸೆ ತಿನ್ನುವ ಆಸೆಯನ್ನೂ ತಣಿಸಿಕೊಳ್ಳಲಾರದೆ ಮಣ್ಣಾದ ನಾ ಕಂಡ ಕೆಲ ವಿಧವೆಯರು, ಮಕ್ಕಳು ಶಾಲೆಯಿಂದ ಬರುವಾಗ ತಾಯಿ ಮಾಡಿಟ್ಟ ದೋಸೆ ರಾಶಿ ನೋಡಿಯೇ, ತನ್ನ ಮಾವನಿಗೆ ಅಷ್ಟಪ್ಪ ಸಾಲವಿರುವುದು ಯಾಕೆಂತ ಈಗ ತಿಳಿಯಿತು ಎಂದು ಜಗಳ ತೆಗೆದ ಸೊಸೆ, ಸೊಸೆಗೆ ದೋಸೆ ಎಂದರೆ ಪಂಚಪ್ರಾಣವೆಂದು ಆಕೆ ಸಂಜೆ ಆಫೀಸಿನಿಂದ ಬರುವುದರೊಳಗೆ ಹೊಯ್ದು ಹಿಟ್ಟನ್ನೂ, ದೋಸೆಯನ್ನೂ ಖಾಲಿ ಮಾಡಿಡುತ್ತಿದ್ದ ಒಬ್ಬ ಅತ್ತೆ...... ಮುಂತಾಗಿ, ಮುಂಚೆ ಮುಂಚೆ 'ಹೋಟೆಲು

ದೋಸೆಗೀಸೆ ತಿನ್ನಲು ನಾವೇನು ಗಂಡಸರೆ, ಹೋಟೆಲುಗಳಲ್ಲಿ ದೋಸೆ ಹಂಚಿಗೆ ಹಿಟಿಕಟ್ಟಲ್ಲಿ ಎಣ್ಣೆ ಸವರುತ್ತಾರಂತಲ್ಲ ಅಸಹ್ಯ' ಎಂಬಿತ್ಯಾದಿ ಚರ್ಚಿಸುತ್ತಿದ್ದ ಸ್ತ್ರೀಲೋಕ ನಿಧಾನವಾಗಿ ಅದರ ರುಚಿಗೆ ಬಲಿಯಾಗಿ 'ನಾವು ಹೇಗೇ ಮಾಡಿದರೂ ಹೋಟೆಲಿನ ದೋಸೆ ರುಚಿ ಬರುವುದಿಲ್ಲವಲ್ಲ' ಅಂತಲೂ ಚರ್ಚಿಸತೊಡಗಿದ್ದು, 'ಯಾವ ಜಾತಿಯವ್ರೋ, ಕೇಳಲಿಕ್ಕೇ ಹೋಗಬೇಡ. ಬೇರೆ ಕಸುಬಿಲ್ಲವೆ. ಕಣ್ಣುಮುಚ್ಚಿ ತಿನ್ನು' ಎಂದು ಪರಸ್ಪರ ಸುಧಾರಿಸುತ್ತಿದ್ದುದ್ದು – ಮುಂತಾಗಿ ಎಷ್ಟೊ ಇರುವಾಗ, ಸಧ್ಯ ಒಂದನ್ನು ಮಾತ್ರ ಹೇಳಿ ವಿರಮಿಸುತ್ತೇನೆ.

ಅವತ್ತು ಆ ಸೆಮಿನಾರಿನಲ್ಲಿ ಹಾಗೆ ದೋಸೆ ಶಬ್ದ ಕೇಳಿದ್ದೇ, ಕುಳಿತವಳು ಕುಳಿತಲ್ಲೇ ಇದ್ದೆ ; ಮನಸ್ಸು ಮಾತ್ರ ಸೀದ ವಿಮಲಕ್ಕನ ಬಳಿ ಹಾರಿತು. ಆ ಸಂಜೆ ಹಲಸಿನ ಮರದ ಬುಡದಲ್ಲಿ ಕಟ್ಟೆಯ ಮೇಲೆ ಕುಳಿತು ವಿಮಲಕ್ಕ ಗಂಡನ ಮನೆ ಸುಖ–ದುಃಖ ಬಿಚ್ಚಿಕೊಂಡಿದ್ದಳು. ಅವರ ಸುಖ–ದುಃಖ ಎಂದರೆ ಗಂಡನ ಮನೆ ಕಥೆಯೇ. ಅದರಲ್ಲಿಯೂ 'ದೇವರ ತಲೆ ಮೇಲಿನ ಹೂ ತಪ್ಪಿದರೂ ನನ್ನ ಮನೆಯಲ್ಲಿ ಬೆಳಗಿನ ತಿಂಡಿಯಾಗಿ ಬರಿಯಕ್ಕಿ ದೋಸೆ ತಪ್ಪದು' ಎಂಬ ವಿಚಾರ. (ಬರಿಯಕ್ಕಿ ದೋಸೆ=ತೆಳ್ಳನ್ನೆ ದೋಸೆ, ನೀರುದೋಸೆ ಇತ್ಯಾದಿ....) ಇನ್ನೆಲ್ಲಿಯೂ ಕಾಣದ ಮನೆ ತನ್ನದು ಎಂದು ನಗೆಯಾಡುವಳೊಮ್ಮೆ, ಕಣ್ಣಲ್ಲಿ ನೀರು ಹಾಕುವಳೊಮ್ಮೆ, ಪ್ರಪಂಚದಲ್ಲಿ ಎಷ್ಟೆಲ್ಲ ಬಗೆಯ ದೋಸೆಗಳಿವೆ. ಈಗ, ಈ ಹಲಸಿನ ಮರವನ್ನೇ ನೋಡು, ಹಸಿಸೊಳೆ ಅಥವಾ ಉಪ್ಪಿಗೆ ಹಾಕಿದ ಸೊಳೆಗೆ ತೆಂಗಿನಕಾಯಿ, ನಾಕು ಮೆಣಸು ಅಕ್ಕಿ ಹಾಕಿ ಅರೆದು ದೋಸೆ ಮಾಡಿದರೂ ಎಷ್ಟು ರುಚಿ ಹೌದ. 'ದೇವರು ನೆಡೆಸಿ' 'ಅವು' ಕಂಡದ್ದು ಬರಿಯಕ್ಕಿ ದೋಸೆ ಮಾ . . . . ತ್ರ, ಥೊ. ಎನ್ನುವಳು. ಅರೆವಕಲ್ಲಿನ ಬುಡದಲ್ಲಿ ಕುಳಿತೂ ಕುಳಿತೂ ಕಾಲುಗಂಟು ಜಡ್ಡು ಕಟ್ಟಿರುವುದನ್ನು ನೋಡಿಲ್ಲಿ ಅಂತ ತೋರಿಸದೆ ಇರಲಾರದವಳು. ಅದೇನು ತಾನು ಮದುವೆಯಾಗಿ ಹೋದ ಮೇಲೆ ಸುರುವಾದ ಹೊಸವೇಷವಲ್ಲ. ಮುಂಚಿನಿಂದಲೂ ಇದ್ದದ್ದೇ. ತಾನು ಬರುವವರೆಗೆ ಯಾರೆಲ್ಲ ಅರೆಯುತ್ತಿದ್ದರು. ತಾನು ಬಂದ ಮೇಲೆ ಮಾತ್ರ ತಾನೊಬ್ಬಳೇ. 'ಅಪ್ಪಯ್ಯ ಅರೆಯಲಿಕ್ಕೆ ಒಂದು ಜನವನ್ನು ಆ ಮನೆಗೆ ಕೊಟ್ಟ ಹಾಗಾಯಿತು. ಮದುವೆಯಾಗಿ ಹೋದ ಹೊಸತು, ಉಮೇದು. ಬಿಡಿಬಿಡಿ, ನಾನು ಅರೆಯುತ್ತೇನೆ. ನಾನು ಹೊಯ್ಯುತ್ತೇನೆ ಎಂದೆ. ಸೈ, ಆಯಿತು, ಆ ಕೆಲಸ ನನಗೆ ಖಾ . . . . ಯಂ! ಸಿಂದಬಾದ ನಾವಿಕ ಮತ್ತು ಮುದುಕನ ಕತೆಯಂತೆ. ಎಲ್ಲ ತಪ್ಪಿಸಿಕೊಂಡರು. ಅಕ್ಕಿ ಅರೆದು ಅರೆದೇ ನನ್ನ ಬೆನ್ನು ಬಾಗಿ ಹೋಯಿತು. ನಾ ಹೇಳುವುದು ಕೇಳಿ ಗಂಡನ ಮನೆಯಲ್ಲಿ ಅತೀ ಉಮೇದು ತೋರಲು ಹೋಗಬೇಡಿ. ಏನಾದರೂ ಬರುತ್ತದೆಯೆ ಎಂದು ಕೇಳಿದರೆ ಬರುವುದಿಲ್ಲ ಎನ್ನಿ. ನಾಕು ದಿನ ನೋಡಿ ಮೆಲ್ಲ ಆಖಾಡಕ್ಕಿಳಿಯಿರಿ' ಅಂತೆಲ್ಲ ಪತಿ

ಗೃಹದ ರಾಜಕೀಯ ಎದುರಿಸುವ ತಂತ್ರವನ್ನು ಸಣ್ಣಮಟ್ಟಿಗೆ ಬೋಧಿಸುವಳು. ಅವಳ ಬೆನ್ನು ಬಾಗಿದೆಯೇನೋ ಹೌದು, ಸುಳ್ಳಲ್ಲ.

ಬರಿಯಕ್ಕಿ ದೋಸೆಗೆ ಅರೆಯುವುದೆಂದರೆ ಏನು, ಝುನ್ ಅದು, ಝುನ್ನೇ. (ಒಮ್ಮೊಮ್ಮೆ ಉತ್ತರ ಗೊತ್ತಿಲ್ಲದ ಪ್ರಶ್ನೆಯನ್ನು ಯಾರಾದರೂ ಕೇಳಿದರೆ ನಾವು 'ಹೋಗು ಬರಿಯಕ್ಕಿ ದೋಸೆಗೆ ಅರೆ' ಎನ್ನುವುದಿದೆ. ಈ ರೀತಿಯ "ಝುನ್' ಶೈಲಿಯ ಉತ್ತರ ಆದಿಕಾಲದಿಂದಲೂ ಇತ್ತು ಗೊತ್ತೆ? 'ಊಟ ಆಯಿತೆ? ಎಂದು ಕೇಳಿದರೆ 'ಮುಂಡಾಸು ಮೂವತ್ತು ಮೊಳ' ಎಂದು ಜವಾಬು ನೀಡಿ ನಗುವುದು?) ಸಧ್ಯ ಧರ್ಮ, ಅರ್ಥ, ಕಾಮ, ಮೋಕ್ಷ ಎಲ್ಲವೂ ಇದೇ ಇದೊಂದೇ ಎಂಬಂತೆ ಇದು ಬಿಟ್ಟು ಬೇರೆ ಪ್ರಪಂಚವೇ ಇಲ್ಲವೆಂಬಂತೆ ಕಾಲವನ್ನು ಮರೆತೇ ಬಿಟ್ಟಂತೆ ಅರೆಯುತ್ತಲೇ ಇರಬೇಕು. ಹಿಟ್ಟು ನುಣ್ಣಗೆ ಗಂಧದಂತೆ ಆಗಬೇಕು. ನಡುನಡುವೆ ಹದವಾಗಿ ನೀರು ಬಿಟ್ಟುಕೊಳ್ಳಬೇಕು. ಜಾಸ್ತಿ ನೀರು ಬಿಟ್ಟುಕೊಂಡಿರೋ ಖಳಕ್ ಫಳಕ್ ಅಂತ ಮೈ-ಮುಖ, ಉಡುಗೆ, ಗೋಡೆ ಊರು ತುಂಬಾ ಅಕ್ಷರಶಃ ಚಿತ್ರ ವಿ-ಚಿತ್ರ ಪ್ರಿಂಟು ಹೊಡೆಯುತ್ತದೆ. ಬೇಗ ಸಣ್ಣ ಮಾಡುತ್ತೇನೆ ಅಂತ ಹೊರಟರೂ ಊಹೂಂ, ಅದು ಅದರದೇ ಕಾಲಾವಕಾಶ ತೆಗೆದುಕೊಳ್ಳುತ್ತ ತಾಳ್ಮೆಯನ್ನು ಕಡ್ಡಾಯವಾಗಿ ಕಲಿಸುತ್ತದೆ. ಆಗಾಗ ಬಂದು ಹಿಟ್ಟು ಮುಟ್ಟಿ ನೋಡಿ ಸಣ್ಣ ಸಾಲದು, ಇನ್ನೂ ಅರೆ ಇನ್ನೂ ಅರೆ ಎಂದು ಸಹನೆ ಪರೀಕ್ಷಿಸುವ ಝುನ್ ಗುರುಗಳು. ಅರೆವವರಿದ್ದರೆ ಇನ್ನೂ ಅರೆ ಎನ್ನುವವರಿಗೇನು ಎಂದು ವಿಮಲಕ್ಕ ಸ್ವಗತವಾಡುತ್ತಿದ್ದರೂ ಯಾರೂ ಹೇಳದೆಯೂ ಗಂಧದಷ್ಟು ನುಣ್ಣಗಾಗದೆ ಕಲ್ಲು ಬುಡದಿಂದ ಏಳದ ಆಕೆ ಝುನ್ ಗುರುವಿನಂತೆಯೇ ಕಾಣುವಳು.

ಮರುದಿನ ದೋಸೆ ಹೊಯ್ಯುವ ರಾಮಾಯಣ. ಎಲ್ಲ ದೋಸೆ ಹೊಯ್ಯುವ ಹಾಗಲ್ಲ ಇದು. ಹಿಟ್ಟನ್ನು ನೀರೆಂದರೆ ನೀರು ಮಾಡಿಕೊಂಡು ಕಾವಲಿಗೆ ಎಣ್ಣೆ ಸವರಿ ಸೌಟಿನಿಂದಲೋ ನುಣ್ಣಗೆ ಕೀಸಿದ ಕರಟದಿಂದಲೋ ಎತ್ತಿ ಸರಕ್ ಸರಕ್ ಅಂತ ಚೆಲ್ಲ ಬೇಕು. ಚೊಗೆಯಬೇಕು. ನಿಮಿಷ ಕಳೆದು ಮುಚ್ಚಳ ತೆಗೆದು ಮಗುಚಿ ಹಾಕದೆ ಸ್ವಲ್ಪ ಹೊತ್ತು ಗಾಳಿಗೆ ಬಿಟ್ಟು ಮಡಚಿ ಮೇಲೆತ್ತಬೇಕು. ಸರಿಯಾಗಿ ಬಂತೆಂದರೆ ನಿಮ್ಮ ರೇಶ್ಮೆ ಮಗುಟ ನಾಚಿ ತಲೆ ತಗ್ಗಿಸೀತು. ಇಷ್ಟೆಲ್ಲ ಭರಮಿನ ಮಾತು ಎಲ್ಲ ಸಲೀಸಾಗಿ ಸಾಗಿದರೆ ಮಾತ್ರ ದೈವ ಆಳಿದರೆ? (ತಿಂಡಿಗಳಿಗೂ ದೈವ ಆಳುವುದಿದೆ. ಮರ್ಯಾದೆ ತೆಗೆಯುವಂತೆ, ಹೆಚ್ಚಾಗಿ ನೆಂಟರು ಬಂದಾಗಲೇ, ಮರ್ಯಾದೆ ಎಂಬುದು ಹೇಗೆಲ್ಲ. ಎಷ್ಟೆಲ್ಲ ಎಲ್ಲೆಲ್ಲಿ!) ದೈವ ಆಳಿತೂ ಅಂದರೆ ಏನೆಂದರೂ ದೋಸೆ ಕಾವಲಿ ಬಿಟ್ಟು ಏಳದು. ಅದೇ ಅಕ್ಕಿ ಅದೇ ಕಾವಲಿ, ಅವರೇ ಹೊಯ್ಯುವವರು, ಅರೆವಾಗ ಕಾಯಿಯನ್ನೂ

ಹಾಕಿದೆ, ಆದರೂ ಏಳುತ್ತಿಲ್ಲ! ಯಾಕೆ? ಕೇಳುವುದು ಯಾರ ಬಳಿ? ಉತ್ತರವೇ ಸಿಗದ ಎಷ್ಟು ಯಾಕೆಗಳು ಬೇಕು ಹೇಳ ಜಗತ್ತಿನಲ್ಲಿ!

'ಕಿವಿಮಾತು' ಇತ್ಯಾದಿಗಳನ್ನು ಬಿಟ್ಟು ಮುಂದೆ ಹೋಗುತ್ತೇನೆ. ಮುಂದಿನದು ಚೊಕ್ಕ ರಾಮಾಯಣ. ಎಂದರೆ, ದೋಸೆ ಹೊಯ್ದು ಮುಗಿದ ಮೇಲೆ ಸುತ್ತಣ ಒಲೆದಂಡೆ ಗೋಡೆಯ ಮೇಲೆಲ್ಲ ಮೂಡಿದ ನಾನಾ ಚಿತ್ರ-ಕಲೆಗಳು. ಎಂದೂ ಕಲೆಯಾಗದೆ ಕೇವಲ ಕಲೆಯಾಗಿಯೇ ಕಾಣುವ ದುರಂತಗಳು. ಒರೆಸಿ ತೆಗೆಯಲು ತಗಲುವ ಸಮಯಾಸಮಯಗಳು.

ಇಷ್ಟಕ್ಕೂ ಅಭ್ಯಾಸವಾದ ಮೇಲೆ ಯಾವುದೂ ಕಷ್ಟವೆಂದೇ ಕಾಣದು, ಬಿಡಿ. ಅಂತೂ ಹೀಗೆ ಆ ಹಿಟ್ಟು, ಆ ಬೆಂಕಿ, ಆ ಹದ, ಆ ವಿಮಲಕ್ಕನ ಮನೆ, ಆ ಒಲೆ..... ಅದರ ಮುಂದೆ – 'ತಿನ್ನ, ಇನ್ನೊಂದೇ ಒಂದು, ನನ್ನ ಲೆಕ್ಕದ್ದು' ಅಂತ ಒತ್ತಾಯದಲ್ಲಿ ದೋಸೆ ಹಾಕುವ, ಕೊಬ್ಬರಿ ಎಣ್ಣೆ, ಮಿಡಿ ಉಪ್ಪಿನಕಾಯಿ ರಸ, ಚಟ್ನಿ, ಕಾಯಿಬೆಲ್ಲ, ಜೋನಿಬೆಲ್ಲ ಅಥವಾ ಜೇನುತುಪ್ಪ, ಮಾವಿನ ಶ್ರಾಯವಾದರೆ ರಸಾಯನ ಬಡಿಸುವ ವಿಮಲಕ್ಕ. ಮನೆಯವರು ಯಾರೂ ಸುತ್ತ ಇಲ್ಲದ ವೇಳೆ ಪಿಸುವಾಗಿ "ನೋಡಿದೆಯಲ್ಲ, ಒಬ್ಬರಾದರೂ ಈಚೆ ಮುಖ ಹಾಕಿದರ? 'ಏಳು, ನಾನು ಮಾಡುತ್ತೇನೆ, ನೀನು ತಿನ್ನು' ಎಂಬವರು ಯಾರಿದ್ದಾರೆ? ಬಂದರನ, ತಿಂದರನ, ಎದ್ದು ಅಲ್ಲಾಡಿಕೊಂಡು ನಡೆದರನ. ನೋಡಿದೆಯಲ್ಲ ಕಣ್ಣಾರೆ?" ಎಂಬಳು. ಎಡದ ಎತ್ತಿಗೆ ಹೊಡೆದರೆ ಬಲದ ಎತ್ತಿಗೂ ತಾಕುತ್ತದೆಯಂತೆ. ಗಾದೆಯಿದೆ. ಹಾಗೆ ಮೆಲ್ಲ ಕೆನ್ನೆ ಮುಟ್ಟಿಕೊಂಡು "ಏಳು ವಿಮಲಕ್ಕ, ನಾನು ಹೊಯ್ಯುತ್ತೇನೆ, ನೀನು ತಿನ್ನು" ಎಂದರೆ "ಹ್ಞಾಂ ಹ್ಞಾಂ, ಅದೇನು ಹುಡುಗಾಟಿಕೆಯ? ಯಾರು ಯಾರು ಹೊಯ್ದರೆ ಏಳುವುದಿಲ್ಲ ಅದು, ನಾನೇ ಸೈ. ಅದೂ (ಪಿಸು) ನೀನು ಯಾಕೆ ದೋಸೆ ಹೊಯ್ಯಬೇಕು? ಇಷ್ಟು ಮಂದಿ ಮನೆಯವರೇ ಇರುವಾಗ, ಮರ್ಯಾದೆಯಲ್ಲ" ಎಂದು ಒಳಸೂಕ್ಷ್ಮ ಬೋಧಿಸುವಳು. ಅಲ್ಲಿಂದೆದ್ದು ಆಚೆಗೆ ಹೋದರೆ – ಮನೆಯವರು! ಯಾರಾದರೊಬ್ಬರು "ಏನ! ತಾನೊಬ್ಬಳೇ ಹೊಯ್ಯಬೇಕು, ಯಾರೂ ಬರುವುದಿಲ್ಲ ಎಂದಳೇ ಆ ದೋಸೆ ಯಜಮಾಂತಿ? ನೀನು ಒಮ್ಮೆ ಎಬ್ಬಿಸಿ ನೋಡು ಅವಳನ್ನು, ಸಾವಿರ ವರಹ ಕೊಡುತ್ತೇನೆ. ಆ ಪಟ್ಟವನ್ನ ಅವಳು ಸಾಯುವವರೆಗೆ ಬಿಡುವವಳಲ್ಲಪ್ಪ, ನಮಗೂ ಇನ್ನೂ ಸಣ್ಣ ಮಕ್ಕಳಂತೆ ತಾಪೇದಾರಿ ಕೆಲಸಕ್ಕೆ ಓಡಾಡೀ ಓಡಾಡೀ ಕಾಲು ಬಿದ್ದು ಹೋಗಿದೆ. ಒಂದು ಕಡೆ ಕೂತು ಕೆಲಸ ಮಾಡುವ ಅಂದರೆ ದಗಡಿ ದೋಸೆ ಹೊಯ್ಯಲೂ ಬಿಡುವುದಿಲ್ಲ. ಅರೆಯಲೂ ಬಿಡುವುದಿಲ್ಲ. ಈಚೆ ಪ್ರಪಂಚ ನಡೆಸಲು ಯಾರಾದರೂ ಅಪ್ಪ ಸತ್ತವರು ಇದ್ದರೆ ಯಾವ ಚಿಂತೆಯಿಲ್ಲದೆ ವ್ಹ್ಞಾಂ ಅಂತ ರಾಗಮಾಲಿಕೆ ಬಿಚ್ಚಿಕೊಂಡು ಅರೆಯಲಿಕ್ಕೇನಾಗಬೇಕು? ಒಟ್ಟಾರೆ, ಸುಖಪುರುಷಿ" ಎಂಬರು. ನಡುವೆ ಸಿಕ್ಕಿದ ನಾವು

ವಿಮಲಕ್ಕನಿಗೂ ಹೂಂ, ಇತರರಿಗೂ ಹೂಂ, ಪಾರಾಗುವ ದಾರಿ ಅದೊಂದೆ. ಸಂದರ್ಭಕ್ಕೆ ತಕ್ಕಂತೆ ಜೋಡಿಸಿದರೆ ವಿಮಲಕ್ಕನೂ ಸರಿ, ಇತರರೂ. (ಏಳು ಅಂದರೆ ಏಳಲಿಲ್ಲವಲ್ಲ ಅವಳು, ಸ್ವತಃ ನಾವೇ ನೋಡಿದೆವಲ್ಲ) ಜೋಡಿಸುವಾಗ ಎಷ್ಟು ಎಚ್ಚರಿರಬೇಕಾಯ್ತು!

ತೀವ್ರ ರೋಷವಂತೂ ಕಾಣದ ಆ ಎಲ್ಲರ ಪಿಸು ಹಸಕು ಉರಿದನಿಗಳು, ಯಾವಾಗ ಥಗ್ಗನೆ ಜ್ವಾಲೆಯಾಗುತ್ತವೆ, ಹರಡುತ್ತವೆ, ಏನೆಲ್ಲವನ್ನು ಸುಡುತ್ತವೆ ಎಂದೇ ಬಿಟ್ಟುಕೊಡದ ಪುಟ್ಟ ಪುಟ್ಟ ರಾಜಕೀಯಗಳು, ಹೊರಪ್ರಪಂಚದಲ್ಲಿ ಕಾಣುವುದು ಮೂಲತಃ ಇಂತಹ ರಾಜಕೀಯಗಳದೇ ಮುಂದರಿಕೆ, ಅಥವಾ ಇದರದೇ ವಿವಿಧ, ವಿರಾಟ್, ಕೆಲವೆಡೆ ವಿಕೃತ, ಅತಿಕ್ರೂರ ರೂಪಾಂತರಗಳಷ್ಟೆ? ಹೇಗೆ ಭಿನ್ನ?

'ನಾನೇ ಸೈ' ಎಂದು ವಿಮಲಕ್ಕ ಎಂದಾಗ ನಮಗೂ ಏನು ಈಕೆ ದೋಸೆ ಯಜಮಾನಿಕೆ ಸಾಧಿಸುತ್ತಿದ್ದಾಳೆಯೇ ಅಂತ ಗುಮಾನಿ ಬಂದಿತ್ತಲ್ಲ. ಈಗ ನೆನೆದರೆ ಪಾಪ, ಇನ್ನೆಲ್ಲಿಯೂ ಯಜಮಾನಿಕೆ ಸಾಧ್ಯವಿಲ್ಲದ ವಿಮಲಕ್ಕ ಸಾಧಿಸಿದ್ದು ಅದೊಂದೇ ಅಂತಲೂ ಅನಿಸುತ್ತದೆ. ಈಗಲೂ ಬರಿಯಕ್ಕಿ ದೋಸೆ ಬಡಿಸಿದರೆ ತಿನ್ನುವವರಿಗೆ ಮೊದಲು ನೆನಪಾಗುವುದು ವಿಮಲಕ್ಕ, ಅವಳು ಮಾಡುತ್ತಿದ್ದ ರೇಶಿಮೆಯಂಥ ದೋಸೆ, ಆ ಕಾಲ ಕಳೆಯಿತು ಬಿಡು ಎನ್ನುತ್ತ ಎದುರಿರುವ ವರ್ತಮಾನದ ದೋಸೆಗೆ ಕೈ ಕೊಡುತ್ತಾರೆ. ಆ ಕಾಲ ಹಾಗೆ ಕಳೆಯಲು ಪಾಪ, ವಿಮಲಕ್ಕ ಒಂದು ಬೆಳಗ್ಗೆ ಎದ್ದವಳೇ ನಾಳೆಗೆ ಅಕ್ಕಿ ತೊಳೆದು ನೆನೆಹಾಕಿ ಇವತ್ತಿನ ತಿಂಡಿ ಆರಂಭಿಸುತ್ತಿದ್ದಳು. ಹತ್ತು ಹತ್ತೂವರೆವರೆಗೆ ಎಲ್ಲ ಮುಗಿಸಿ ಆಚೀಚೆ ನೋಡುವುದರೊಳಗೆ – ಊಟದ ಹೊತ್ತಾಯಿತು. ಮಧ್ಯಾಹ್ನ ಕೊಂಚ ಅಡ್ಡಾಗಿ ಆಚೀಚೆ ನೋಡುವುದರೊಳಗೆ – ಬೈಸರಿಯಾಯಿತು. ಆಗ, ಅವಳೇ ತಮಾಷೆಗೆ ಹೇಳಿಕೊಳ್ಳುವ ಹಾಗೆ, 'ಕೃಷ್ಣನಾ ಕೊಳಲಿನಾ ಕರೇ' ಕರೆದಂತೆ ಸೀದ ಕೆಳಕೋಣೆಯಲ್ಲಿನ ಅರೆವ ಮೂಲೆಗೆ ಹೊರಡುವುದಾಯಿತು. ಅಕ್ಕಿ ಜಾಲಿಸಿ ಕಲ್ಲಿನೆದುರು ಕುಳಿತು ಒಂದು ಕಾಲು ಮಡಚಿ ಒಂದು ಕಾಲು ನೀಡಿಕೊಂಡು ಅರೆಯುತ್ತ 'ರಾಗಮಾಲಿಕೆ' ಬಿಡಿಸುವುದಾಯಿತು. ಏಳುವಾಗ ಸೂರ್ಯ ಪಾಪ ಕಾದು ಕಾದು ಸಾಕಾದವನಂತೆ ಶರಧಿಶಯನನಾಗಿರುತ್ತಾನೆ. ದೇವರ ಭಜನೆ ತಾಳ ತಟ್ಟುತ್ತಿರುತ್ತದೆ. ಭಜನೆ ಮುಗಿಯಿತು. ಊಟ, ಊಟವೂ ಮುಗಿಯಿತು. ಆ ದಿನವೇ ಮುಗಿಯಿತು ಎಂದಂತೆ. ವಿಮಲಕ್ಕನ ಆಯುಷ್ಯ, ಆಯುಷ್ಯವೆಂದರೆ, 'ಕ್ರಿಯಾಶೀಲ' ಎನ್ನುತ್ತಾರಲ್ಲ ಅದು, ಈ ಮಾದರಿಯಲ್ಲಿ ಕಳೆಯಿತು. 'ಕ್ರಿಯಾಶೀಲ'ವೆಂದರೇನು ಹಾಗಾದರೆ? ಯೋಚಿಸುತ್ತೇನೆ. ಕಳೆದ ಆ ಕಾಲವು ಕಳೆಯ ಬೇಕಿತ್ತೆ ಬೇಡವೆ?

'ವಿಮಲಕ್ಕ ಈಗ ಸೀತಾನದಿ ಹೋಟೆಲಿನಲ್ಲಿ ನೀರುದೋಸೆ ಸಿಗುತ್ತದೆ. ಏನು ಜನ ಗೊತ್ತ'.

'ಮುಂಬೈ ಹೋಟೆಲುಗಳಲ್ಲಿಯೂ ಅದೀಗ ಭಾರೀ ಜನಪ್ರಿಯವಂತೆ.....' ಎಂದೆವು.

ಕೇಳುತ್ತ 'ಹೋಗುವನ ಒಮ್ಮೆ, ಹೇಗೆ ಮಾಡುತ್ತವೆ ನೋಡುವ.... ನಾನು ಈಗ ಹುಟ್ಟಬೇಕಿತ್ತು, ನಾಕು ಗ್ರೈಂಡರ್ ಇಟ್ಟುಕೊಂಡು ಒಂದು 'ಬರಿಯಕ್ಕಿ ದೋಸೆ ಹೋಟೆಲ್' ಅಂತ ಸ್ಟಾರ್ಟ್ ಮಾಡಿ ದುಡ್ಡು ಗೋಚಬಹುದಿತ್ತು. ಸುಮ್ಮನೆ ಅಷ್ಟು ಬೇಗ ಹುಟ್ಟಿ ಒಂದು ಜನ್ಮ ದಂಡ ಮಾಡಿಕೊಂಡೆ. ಮಾಡುವ ಕೆಲಸವೂ ತಪ್ಪಲಿಲ್ಲ, ಕೈಯಲ್ಲಿ ಮೂರು ಕಾಸೂ ಇಲ್ಲ.' ನಕ್ಕಳು. ಬಹುಶಃ ಕುಶಾಲಿಗೆ . . . . . ಅಥವಾ, ಏನೋ ಯಾತಕ್ಕೋ ಕಡೆಗೂ.

ನಗೆಯಷ್ಟು ನಿಗೂಢ ಅಳುವಲ್ಲವಷ್ಟೆ?

❖ ❖ ❖ ❖

ಲೇಖಕರ ಪರಿಚಯ : 'ವೈದೇಹಿ' ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಶ್ರೀಮತಿ ಜಾನಕಿ ಶ್ರೀನಿವಾಸಮೂರ್ತಿಯವರು ಜನಿಸಿದ್ದು ೧೨ನೇ ಫೆಬ್ರವರಿ ೧೯೪೫ರಂದು. ಉಡುಪಿಯಲ್ಲಿ ನೆಲೆಸಿದ್ದಾರೆ. ಬಿ.ಕಾಂ. ಪದವಿಯ ನಂತರ ಹವ್ಯಾಸಿ ಪತ್ರಕರ್ತೆಯಾಗಿದ್ದ ವೈದೇಹಿಯವರು ತಮ್ಮ ಕಥನ ಕೌಶಲದಿಂದಾಗಿ ಸಮಕಾಲೀನ ಮಹತ್ವದ ಬರಹಗಾರರಲ್ಲಿ ಒಬ್ಬರೆನಿಸಿದ್ದಾರೆ. ಸುಖ-ದುಃಖಗಳ ವಿಚಿತ್ರ ಮಿಶ್ರಣವಾದ ಈ ಬದುಕಿನಲ್ಲಿರುವ ಹದವನ್ನು ವೈದೇಹಿಯವರ ಕಥೆಗಳು ಶೋಧಿಸುತ್ತವೆ.

'ಮರಗಿಡಬಳ್ಳಿ', 'ಅಂತರಂಗದ ಪುಟಗಳು', 'ಗೋಲ', 'ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ', 'ಅಮ್ಮಚ್ಚಿ ಎಂಬ ನೆನಪು', 'ಕ್ರೌಂಚ ಪಕ್ಷಿಗಳು' ಮುಂತಾದ ಕಥಾ ಸಂಕಲನಗಳು. *'ಬಿಂದು ಬಿಂದಿಗೆ', 'ಪಾರಿಜಾತ'* ಎಂಬ ಕವಿತಾ ಸಂಕಲನಗಳು, *'ಅಸ್ಪೃಶ್ಯರು'* ಎಂಬ ಕಾದಂಬರಿ, *'ಮಲ್ಲಿನಾಥನ ಧ್ಯಾನ', 'ಜಾತ್ರೆ', 'ಮೇಜು ಮತ್ತು ಬಡಗಿ'* ಎಂಬ ಪ್ರಬಂಧ ಸಂಕಲನಗಳು. *'ಗೊಂಬೆ ಮ್ಯಾಕ್ಬೆತ್', 'ಸೋಮಾರಿ ಓಲ್ಯಾ',* ಮುಂತಾದ ಹನ್ನೊಂದು ಮಕ್ಕಳ ನಾಟಕಗಳು, *'ಭಾರತೀಯ ಮಹಿಳೆಯರ ಸ್ವಾತಂತ್ರ್ಯ ಹೋರಾಟ', 'ಬೆಳ್ಳಿಯ ಸಂಕೋಲೆಗಳು'* ಮುಂತಾದ ನಾಲ್ಕು ಅನುವಾದಿತ ಕೃತಿಗಳು.

ಕೋ.ಲ. ಕಾರಂತ, ಸೇಡಿಯಾಪು, ಬಿ.ವಿ. ಕಾರಂತ, ಸರಸ್ವತೀ ಬಾಯಿ ರಾಜವಾಡೆಯವರ ನೆನಪುಗಳ ಸಂಗ್ರಹ – ಇವುಗಳು ವೈದೇಹಿಯವರ ಸಾಹಿತ್ಯ ಕೃಷಿಯ ಫಲಗಳು. ಆಳ್ವಾಸ್ ನುಡಿಸಿರಿಯ ಅಧ್ಯಕ್ಷತೆಯ ಗೌರವ ಪಡೆದಿರುವ ವೈದೇಹಿಯವರ *'ಕ್ರೌಂಚಪಕ್ಷಿಗಳು'* ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ಲಭಿಸಿದೆ. ನಾಲ್ಕು ಬಾರಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುಸ್ತಕ ಬಹುಮಾನ ಗಳಿಸಿದ್ದಾರೆ. ಇವರು ರಚಿಸಿರುವ *'ಗುಲಾಬಿ ಟಾಕೀಸು ಮತ್ತು ಹೊಸ ಅಲೆಗಳು'* ಎಂಬ ಕಥೆಯು ಗಿರೀಶ್ ಕಾಸರವಳ್ಳಿ ನಿರ್ದೇಶನದಲ್ಲಿ ಚಲನಚಿತ್ರವಾಗಿ ರಾಷ್ಟ್ರಪತಿಗಳ ಸ್ವರ್ಣಕಮಲ ಪ್ರಶಸ್ತಿ ಗಳಿಸಿದೆ.

ಶಬ್ದಾರ್ಥ : ಅಡುವ–ಅಡುಗೆ ಮಾಡುವ ; ಕುಚ್ಚಿಗೆ ಅಕ್ಕಿ–ಕುಸುಬಲಕ್ಕಿ, ಬೇಯಿಸಿದ ಅಕ್ಕಿ ; ಸಟ್ಟುಗ–ಸವಟು ; ಸಮೀಕರಣ–ಹೊಂದಿಸು ; ಊರ್ಧ್ವ–ಮೇಲಿನ ; ಹಿಡಿಕಟ್ಟು–ಕಡ್ಡಿ ಪೊರಕೆ ; ಸೊಳೆ–ತೊಳೆ ; ಉಮೇದು–ಉತ್ಸಾಹ ; ಮುಂಡಾಸು–ರುಮಾಲು ; ಕೀಸು–ನಯಗೊಳಿಸು ; ಭರಮಿನ ಮಾತು–ಗರ್ವದ ಮಾತು ; ಕಾವಲಿ–ದೋಸೆ ಹಂಚು ; ಜೋನಿಬೆಲ್ಲ–ಬೆಲ್ಲದ ಪಾಕ ; ತಾಪದಾರಿಕೆ–ಚಾಕರಿ, ಸೇವೆ ; ಬೈಸರಿ–ಸಂಜೆ ; ಗೋಚು–ಬಾಚಿಕೋ ; ಅಖಾಡ–ಕಣ ; ಶ್ರಾಯ–ಕಾಲ.

ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿವರಿಸಿ :

೧) 'ತಿನ್ನಲು ಬೇಕು, ಚರ್ಚೆಗೆ ಬೇಡ ಎಂದರೆ ಹೇಗೆ?'

೨) 'ಹೋಟೇಲು ದೋಸೆ ತಿನ್ನಲು ನಾವೇನು ಗಂಡಸರೇ?'

೩) 'ಒಬ್ಬರಾದರೂ ಈಚೆ ಮುಖ ಹಾಕಿದರ?'

೪) 'ಒಟ್ಟಾರೆ ಸುಖಪುರುಷ.'

೫) 'ನೀನು ಒಮ್ಮೆ ಎಬ್ಬಿಸಿ ನೋಡು.'

ಒಂದು ವಾಕ್ಯದಲ್ಲಿ ಉತ್ತರಿಸಿ :

೧) ಲೇಖಕಿಯ ತವರಿನಲ್ಲಿ ದೋಸೆ ಮಾಡುತ್ತಿದ್ದವರು ಯಾರು?

೨) ಹೋಟೇಲಿನ ದೋಸೆಯ ಬಗ್ಗೆ ಸ್ತ್ರೀಲೋಕ ಅಸಹ್ಯ ಪಡುವುದೇಕೆ?

೩) ವಿಮಲಕ್ಕನಿಗೆ ಗಂಡನ ಮನೆಯಲ್ಲಿನ ಖಾಯಂ ಕೆಲಸ ಯಾವುದು?

೪) 'ದೋಸೆ ಯಜಮಾಂತಿ' ಎಂದು ಯಾರನ್ನು ಕರೆಯುತ್ತಿದ್ದರು?

೫) ನಗೆಯಷ್ಟು ನಿಗೂಢ ಯಾವುದು ಅಲ್ಲ ?

ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿ :

೧) ಲೇಖಕಿಯು ದೋಸೆ ಬಗ್ಗೆ ಚಿಂತಿಸಲು ಕಾರಣವೇನು?

೨) ಹರಿಕಥೆ ದಾಸರನ್ನು ದೋಶಾದಾಸರೆನ್ನುತ್ತಿದ್ದುದೇಕೆ?

೩) ಪತಿಗೃಹದ ರಾಜಕೀಯ ಎದುರಿಸಲು ವಿಮಲಕ್ಕ ಬೋಧಿಸಿದ ತಂತ್ರ ಯಾವುದು?

೪) ವಿಮಲಕ್ಕನನ್ನು ಝೆನ್ ಗುರುವಿಗೆ ಹೋಲಿಸಲು ಕಾರಣವೇನು?

೫) ನೀರುದೋಸೆ ಮಾಡುವ ವಿಧಾನ ಹೇಗೆ?

೬) ಮುಂಬೈ ಹೋಟೇಲಿನ ದೋಸೆ ಜನಪ್ರಿಯತೆ ಕೇಳಿದ ವಿಮಲಕ್ಕನ ಅನಿಸಿಕೆಗಳಾವುವು?

ವಿವರವಾಗಿ ಉತ್ತರಿಸಿ :

೧) ಮಾಚಮ್ಮನ ದೋಸೆ ಕೌಶಲವನ್ನು ಲೇಖಕಿ ಹೇಗೆ ವಿವರಿಸಿದ್ದಾರೆ.

೨) ಬರಿಅಕ್ಕಿ ದೋಸೆ ಹಿಟ್ಟಿನ ಹದದ ಬಗೆಗೆ ಲೇಖಕಿಯ ಅಭಿಪ್ರಾಯಗಳಾವುವು?

೩) ವಿಮಲಕ್ಕನ ದೋಸೆ ಕಾಯಕದ ದಿನಚರಿಯನ್ನು ವಿವರಿಸಿ.

೪) ವಿಮಲಕ್ಕನ ದೋಸೆ ಕಾರುಬಾರಿನ ಬಗ್ಗೆ ಮನೆಯವರ ಪ್ರತಿಕ್ರಿಯೆಗಳೇನು?

ಭಾಷಾಭ್ಯಾಸ :

೧) ಪಠ್ಯದಲ್ಲಿ ಬಂದಿರುವ ಅನ್ಯದೇಶ್ಯ ಪದಗಳನ್ನು ಪಟ್ಟಿ ಮಾಡಿರಿ :
ಸೆಮಿನಾರು, ಅಖಾಡ, ಟೆಕ್ನಾಲಜಿ.

೨) ಇವುಗಳನ್ನು ಬಿಡಿಸಿ ಬರೆಯಿರಿ :
ದೇಶಾಂತರ, ರೂಪಾಂತರ, ಸಮಯಾಸಮಯ, ಜ್ವಾಲೆಯಾಗು.

೩) ಬಿಡಿಬಿಡಿ, ಅರೆದುಅರೆದು – ಮುಂತಾದ ದ್ವಿರುಕ್ತಿಗಳನ್ನು ಪಟ್ಟಿ ಮಾಡಿ, ಸ್ವಂತ ವಾಕ್ಯದಲ್ಲಿ ಬಳಸಿರಿ.

೪) **ಪಂಚಪ್ರಾಣ, ಕಿವಿಮಾತು, ಉರಿದನಿ – ಇತ್ಯಾದಿ ನುಡಿಗಟ್ಟುಗಳನ್ನು ಅರ್ಥಪೂರ್ಣ ವಾಕ್ಯಗಳಲ್ಲಿ ಬಳಸಿ ಬರೆಯಿರಿ.**

ಚಟುವಟಿಕೆ :

೧) ನಿಮ್ಮ ಪ್ರದೇಶದ ಅಡುಗೆಯ ವೈಶಿಷ್ಟ್ಯಗಳನ್ನು ಕುರಿತು ಲಲಿತ ಪ್ರಬಂಧ ರಚಿಸಿ.

೨) ಎ.ಎನ್. ಮೂರ್ತಿರಾವ್, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಅ.ರಾ.ಮಿತ್ರ, ಸುನಂದಾ ಬೆಳಗಾಂವ್‌ಕರ್ ಮುಂತಾದವರ ಪ್ರಬಂಧಗಳನ್ನು ಅಭ್ಯಾಸ ಮಾಡಿ.

ಆಕರ :

'ಮೇಜು ಮತ್ತು ಬಡಗಿ' ಪ್ರಬಂಧ ಸಂಕಲನ – ವೈದೇಹಿ
ಪ್ರಕಾಶನ : ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕನ್ನಡ ಭಾಷೆ, ಸಾಹಿತ್ಯದ ಅರ್ಥ, ವಿವರಣೆ, ಸ್ವರೂಪ, ವ್ಯಾಪ್ತಿ ಮತ್ತು ಪ್ರಯೋಜನ

ಭಾಷೆ :

ಭಾಷೆ ಮಾನವನಿಗೆ ಅವನ ಉಸಿರಿನಷ್ಟೇ ಅನಿವಾರ್ಯ. 'ಮಾತೆಂಬ ಜ್ಯೋತಿ ಬೆಳಗದಿದ್ದರೆ ಲೋಕವೆಲ್ಲ ಕತ್ತಲೆಯಿಂದ ತುಂಬಿರುತ್ತಿತ್ತು. ಅಂಧಕಾರದಲ್ಲಿಯೇ ತೊಳಲುತ್ತಿತ್ತು' ಎಂದಿದ್ದಾನೆ ಮಹಾಕವಿ ದಂಡಿ. ಭಾಷೆಯಲ್ಲಿ ಧ್ವನಿ, ಸಂಕೇತ, ಶಬ್ದ, ಅರ್ಥ, ವಾಕ್ಯ ಮುಂತಾದವು ವ್ಯವಸ್ಥಿತ ರೂಪದಲ್ಲಿ ಬಳಕೆಗೊಂಡಿರುತ್ತದೆ.

ಪ್ರತಿಯೊಂದು ಭಾಷೆಗೆ ತನ್ನದೇ ಆದ ವ್ಯವಸ್ಥೆ ಇರುತ್ತದೆ. ಈ ಭಾಷೆಯಲ್ಲಿ ಧ್ವನಿ, ಸಂಕೇತಗಳು ಮೌಖಿಕವಾಗಿದ್ದು ನಂತರ ಲಿಪಿರೂಪ ಪಡೆದು ಸಾಮಾಜಿಕ ಸಂಪರ್ಕಕ್ಕಾಗಿ ಬಳಕೆಯಾಗುತ್ತವೆ. ಹೀಗೆ ವ್ಯಕ್ತಿ, ವ್ಯಕ್ತಿಗಳಲ್ಲಿ ಸಾಮಾಜಿಕ ಸಹಕಾರವನ್ನುಂಟು ಮಾಡುವುದೇ ಭಾಷೆಯ ಲಕ್ಷಣ.

ಪ್ರಪಂಚದಾದ್ಯಂತ ಸುಮಾರು ೬೦೦೦ ಭಾಷೆಗಳಿವೆಯೆಂದು ಅಂದಾಜು ಮಾಡಲಾಗಿದೆ. ಭಾರತದಲ್ಲೇ ೩೦೦೦ ಭಾಷೆಗಳಿವೆ ಎಂದು ಭಾಷಾ ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಕನ್ನಡ ಭಾಷೆಯು ಮೂಲತಃ ದ್ರಾವಿಡ ಭಾಷಾವರ್ಗದಲ್ಲಿ – ದಕ್ಷಿಣಭಾರತ ತಮಿಳು, ತೆಲುಗು, ಮಲೆಯಾಳಂ ಮತ್ತು ತುಳು ಭಾಷೆಗಳೊಂದಿಗೆ ಸೇರಿ ಪಂಚದ್ರಾವಿಡ ಭಾಷೆಗಳಲ್ಲಿ – ಒಂದಾಗಿದ್ದುದು, ಕಾಲ ಕ್ರಮೇಣ ಒಂದು ಸ್ವತಂತ್ರ ಭಾಷೆಯಾಗಿ ರೂಪುಗೊಂಡಿದ್ದನ್ನು ಗುರುತಿಸಲಾಗಿದೆ. ಅಂತೆಯೇ ಈ ಐದೂ ಭಾಷೆಗಳ ಮೂಲ ಪ್ರಾಚೀನ ದ್ರಾವಿಡ ಭಾಷೆಯೆಂದೂ ಗುರುತಿಸಲಾಗಿದೆ.

ಕನ್ನಡ ಭಾಷೆಯ ಪ್ರಾಚೀನತೆಯನ್ನು ನೋಡುವಾಗ ದೊರಕಿರುವ ಆಧಾರಗಳಿಂದ ಅದು ಕ್ರಿಸ್ತಶಕ ೧ ಮತ್ತು ೨ನೆಯ ಶತಮಾನಕ್ಕೆ ಹೋಗುತ್ತದೆ. ಕನ್ನಡ ಭಾಷೆ ಗ್ರಂಥಸ್ಥವಾದಂದಿನಿಂದ, ಶಾಸನ ಮತ್ತು ಶಾಸನೇತರ ಆಧಾರಗಳಿಂದ ಮಾತ್ರ ಕನ್ನಡ ಪ್ರಾಚೀನತೆಯನ್ನು ತಿಳಿಯಬೇಕಾಗಿದೆಯೇ ಹೊರತು ಕನ್ನಡದ ಪ್ರಾಥಮಿಕ ಅವಸ್ಥಾರೂಪವನ್ನಂತೂ ತಿಳಿಯಲಾಗಿಲ್ಲ. ಕ್ರಿ.ಶ. ೨ನೇ ಶತಮಾನದ ತಮಿಳು ಕಾವ್ಯ 'ಶಿಲಪ್ಪದಿಗಾರಮ್'ನಲ್ಲಿ ಕನ್ನಡಿಗರನ್ನು 'ಕರುನಾಡರ್' ಎಂದು ಸಂಬೋಧಿಸಲಾಗಿದೆ. ಕ್ರಿ.ಪೂ.ದ ಅಶೋಕನ ಶಾಸನಗಳಲ್ಲಿ 'ಇಸಿಲ' ಪದ, ಮಹಾಭಾರತದ ಸಭಾಪರ್ವ

ಮತ್ತು ಭೀಷ್ಮಾ ಪರ್ವಗಳಲ್ಲಿ 'ಕರ್ಣಾಟಾ' ಮತ್ತು 'ಕರ್ಣಾಟಕಾ' ಶಬ್ದಗಳು ಕಂಡುಬರುತ್ತವೆ. ಕ್ರಿ.ಪೂ. ೧ನೆಯ ಶತಮಾನದ್ದೆಂದು ಹೇಳಲಾದ 'ಮಾರ್ಕಂಡೇಯ ಪುರಾಣ'ದಲ್ಲಿ ಕರ್ಣಾಟ ದೇಶದ ಪ್ರಸ್ತಾಪವೂ ಬರುತ್ತದೆ. ಹೀಗೆ ಕ್ರಿ.ಶ. ೪೫೦ರ ಹಲ್ಮಿಡಿ ಶಾಸನಕ್ಕೆ (ನಮಗೆ ದೊರೆತಿರುವ ಕನ್ನಡದ ಮೊಟ್ಟ ಮೊದಲ ಶಾಸನ) ಎರಡು-ಮೂರು ಶತಮಾನಗಳಷ್ಟು ಹಿಂದೆಯೇ ಕನ್ನಡ ಗ್ರಂಥಸ್ಥ ಭಾಷೆಯಾಗಿರಬಹುದೆಂದು ಊಹಿಸಲಾಗಿದೆ. ಕನ್ನಡದಲ್ಲಿ ನಮಗೆ ಸಿಕ್ಕುವ ಮೊದಲ ಕೃತಿಯೆಂದರೆ 'ಕವಿರಾಜ ಮಾರ್ಗ'ವೆಂಬ ಲಕ್ಷಣ ಗ್ರಂಥ. ವ್ಯಾಕರಣಾಂಶಗಳನ್ನು ಒಳಗೊಂಡ ಕೃತಿಗಳಲ್ಲಿಯೂ ಇದೇ ಮೊದಲನೆಯದಾಗಿದೆ. ಇದಕ್ಕಿಂತ ಹಿಂದೆ ಸಾಹಿತ್ಯ ಕೃತಿಗಳು ಮತ್ತು ವ್ಯಾಕರಣ ಕೃತಿಗಳು ಇದ್ದವೆಂಬುದರ ಬಗ್ಗೆ 'ಕವಿರಾಜಮಾರ್ಗ'ದಲ್ಲಿಯೇ ಪುರಾವೆಗಳು ಸಿಕ್ಕುತ್ತವೆಯಾದರೂ ಅವು ಯಾವುವೂ ಉಪಲಬ್ಧವಿಲ್ಲ.

ಕನ್ನಡ ಭಾಷೆ ಕಾಲಕಾಲಕ್ಕೆ ಮಾರ್ಪಾಡು ಹೊಂದಿ ಅನೇಕ ಅವಸ್ಥೆಗಳನ್ನು ಹೊಂದಿದೆ. ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ, ಹೊಸಗನ್ನಡ ಎಂದು ಭಾಷಾ ದೃಷ್ಟಿಯಿಂದ ವಿಭಾಗಿಸಲಾಗಿದೆ. ಭಾಷೆ ನಿಂತ ನೀರಲ್ಲ, ಸದಾ ಚಲಿಸುವ ಗುಣವುಳ್ಳದ್ದಾಗಿರುವುದರಿಂದ ಈ ಬದಲಾವಣೆ ಸಹಜವೂ ಆಗಿದೆ.

ಸಾಹಿತ್ಯ :

'ಸಾಹಿತ್ಯ'ದ ಭಾಷೆ ವ್ಯವಹಾರದ ಭಾಷೆಗಿಂತ ಬೇರೆಯಾಗಿರುತ್ತದೆ. ಇಲ್ಲಿ ಎರಡು ವಸ್ತುಗಳು ಸೇರಿರುತ್ತವೆ. 'ಭಾವ', 'ಭಾಷೆ' ಎರಡರ ಸಮ್ಮಿಲನವೇ ಈ ರೂಪವನ್ನು ತಾಳುವುದು. ಮಾನವ ತನ್ನ ರಾಗ, ದ್ವೇಷ, ನೋವು-ನಲಿವುಗಳನ್ನು ಇತರರೊಡನೆ ಹಂಚಿಕೊಳ್ಳುವ ಪ್ರಕ್ರಿಯೆ ಇಲ್ಲಿ ನಡೆದಿರುತ್ತದೆ. ಅಂದರೆ ಸಾಹಿತ್ಯವೆಂಬುದು ಮನೋವ್ಯಾಪಾರವನ್ನು ಅಭಿವ್ಯಕ್ತಗೊಳಿಸುವುದು, ಭಾವದ ವಸ್ತುವನ್ನು ಭಾಷೆಯಲ್ಲಿ ಮೂಡಿಸುವುದು ಎಂದರ್ಥ. ಕ್ಷಣ ಕಾಲದ ವಸ್ತುವನ್ನು ಚಿರಂತನ ಕಾಲದ್ದನ್ನಾಗಿ ಮಾಡುವುದು ಎಂಬುದು ಕವಿ ರವೀಂದ್ರರ ವಿಚಾರ. ಇಲ್ಲಿ ಅವರು ಸಾಹಿತ್ಯದ ಅಮೂರ್ತತೆಯನ್ನು ಅದರ ಅನಂತತೆಯನ್ನು ಅರಿವಿಗೆ ತರುತ್ತಾರೆ.

ಪ್ರೇರಣೆ, ಸ್ವರೂಪ :

ಸಾಹಿತ್ಯ ಎನ್ನುವುದು ಕಾವ್ಯ, ಕಾದಂಬರಿ, ಕಥೆ, ನಾಟಕ ಎಲ್ಲವನ್ನೂ ಒಳಗೊಂಡಿರುತ್ತದೆ. ಇಂತಹ ಸಾಹಿತ್ಯ ರಚನೆಗೆ ಕೆಲವು ಪೂರ್ವ ಸಿದ್ಧತೆಗಳನ್ನು

ಮಾಡಿಕೊಳ್ಳಬೇಕಾಗುತ್ತದೆ. ಈ ಸಾಹಿತ್ಯ ರಚನೆಗೆ ಪ್ರೇರಣೆಯನ್ನು ತಿಳಿಯುವಾಗ, ಅದು ಅಂತರಂಗದ ಒತ್ತಡ ಹಾಗೂ ಅದರಿಂದ ಬಿಡುಗಡೆಯನ್ನು ಪಡೆಯುವ ಆಶಯವೇ ಕಾರಣವೆಂದು ಹೇಳಲಾಗುತ್ತದೆ. ಬದುಕಿನಲ್ಲಿ ಪಡೆಯುವ ಅಸಂಖ್ಯಾತ ಅನುಭವಗಳು, ಅವುಗಳಲ್ಲಿನ ಯಾವುದೋ ಒಂದು ಸನ್ನಿವೇಶ, ವಸ್ತು ಪ್ರಚೋದನೆ ನೀಡಿ ಸಾಹಿತ್ಯ ರಚನೆಗೆ ಕಾರಣವಾಗುತ್ತದೆ.

ಇಂತಹ ಸಾಹಿತ್ಯ ರಚನೆಗೆ ಮೂರು ಅಂಶಗಳು ಮುಖ್ಯವಾಗುತ್ತವೆ. ವಸ್ತು, ತಲ್ಲೀನತೆ, ಅನುಭವ. ತನ್ನ ಸುತ್ತ ತೆರೆದು ನಿಂತಿರುವ ವಾಸ್ತವ ಲೋಕವನ್ನು ಕಾಣುವ, ಕಂಡು ತಲ್ಲೀನತೆಯನ್ನು ಪಡೆಯುವ ಗುಣ ಸಾಹಿತಿಯಾದವನಿಗೆ ಇರಬೇಕಾಗುತ್ತದೆ. ಈ ತಲ್ಲೀನತೆಯಿಂದ ಪಡೆಯುವ ದಿವ್ಯಾನುಭೂತಿಯೇ ಅನುಭವ ವಿಶೇಷವೆನಿಸಿ ಕೊಳ್ಳುತ್ತದೆ. ಈ ಮೂರೂ ಯಾವುದೋ ಶುಭ ಮುಹೂರ್ತದಲ್ಲಿ ಒಂದಾಗಿ ಕೃತಿಯ ನಿರ್ಮಾಣವಾಗುತ್ತದೆ. ಕನ್ನಡ ಭಾಷೆಯಲ್ಲಿ ಸಾಹಿತ್ಯ ನಿರ್ಮಾಣ ಕಾರ್ಯವನ್ನು ಅವಲೋಕಿಸಿದಾಗ, ಸಹಜವಾಗಿಯೇ ಭಾಷೆಯಲ್ಲಿನ ಕಾಲಕಾಲದ ಬದಲಾವಣೆಗೆ ಸರಿಯಾಗಿ ಸಾಹಿತ್ಯ ರಚನೆಯಲ್ಲಿ ಕೂಡ ಬದಲಾವಣೆಯನ್ನು ಕಾಣುತ್ತೇವೆ. ಹೀಗಾಗಿ ಕನ್ನಡ ಭಾಷೆಯ ಬೆಳವಣಿಗೆಯ ಚರಿತ್ರೆಯನ್ನು ಸಾಹಿತ್ಯದ ದೃಷ್ಟಿಯಿಂದ ಬೇರೆಯದೇ ರೀತಿಯಲ್ಲಿ ವರ್ಗೀಕರಣ ಮಾಡಲಾಗಿದೆ.

ಹತ್ತನೇ ಶತಮಾನ ಕನ್ನಡ ಸಾಹಿತ್ಯ ಪರಂಪರೆಯ ಸುವರ್ಣ ಯುಗವೆಂದು ಖ್ಯಾತವಾಗಿದೆ. ಕನ್ನಡ ಸಾಹಿತ್ಯದ ದಿಗ್ಗಜರು, ರತ್ನತ್ರಯರು ಎಂಬ ಖ್ಯಾತಿಗೆ ಪಾತ್ರರಾದ ಪಂಪ, ಪೊನ್ನ, ರನ್ನ ಈ ಶ್ರೇಷ್ಠ ಕವಿಗಳು ಅತ್ಯುತ್ತಮ ಮೌಲಿಕ ಕೃತಿಗಳನ್ನು ಕನ್ನಡಕ್ಕೆ ನೀಡಿದ್ದಾರೆ. ೯ನೇ ಶತಮಾನದ 'ಕವಿರಾಜಮಾರ್ಗ', ಕನ್ನಡದಲ್ಲಿ ದೊರೆತ ಮೊಟ್ಟಮೊದಲ ಲಕ್ಷಣಗ್ರಂಥವಾದರೆ, ೧೦ನೇ ಶತಮಾನದ ಪಂಪನ ಕೃತಿಗಳು ಕನ್ನಡ ಸಾಹಿತ್ಯದ ಉಪಲಬ್ಧ ಆದ್ಯ ಕಾವ್ಯ ಕೃತಿಗಳಾಗಿವೆ. ಈ ಯುಗದ ಸಾಹಿತ್ಯದ ಪ್ರಾತಿನಿಧಿಕ ವ್ಯಕ್ತಿಯಾಗಿ ಪಂಪನಿದ್ದು, ಇಡೀ ಶತಮಾನವನ್ನು 'ಪಂಪಯುಗ'ವೆಂದೇ ಗುರುತಿಸಲಾಗಿದೆ. ಈ ಕಾಲದಲ್ಲಿ ಪ್ರಾಬಲ್ಯದಲ್ಲಿದ್ದ ಮತ–ಜೈನಮತ. ಮಾರ್ಗ ಪರಂಪರೆಯ ಚಂಪೂ ಛಂದಸ್ಸಿನ ಕಾವ್ಯ ರಚನೆಗಳ, ಶಾಸ್ತ್ರ ಗ್ರಂಥಗಳ ರಚನೆ ಈ ಅವಧಿಯಲ್ಲಿ ಕಂಡುಬರುತ್ತವೆ. ಕವಿಗಳಿಗೆ ರಾಜಾಶ್ರಯವಿದ್ದು, ಈ ಶತಮಾನದಲ್ಲಿ ಲೌಕಿಕ, ಆಗಮಿಕ ಎಂಬ ವಿಭಾಗಗಳಲ್ಲಿ ಕಾವ್ಯಧರ್ಮ ಮತ್ತು ಧರ್ಮಗಳ ಸಂಯೋಜನೆಯನ್ನು ಕಾಯ್ದುಕೊಳ್ಳಲಾಗಿದೆ. ಕಾವ್ಯದ ಭಾಷೆ ಹಳಗನ್ನಡ. ಸಮಕಾಲೀನ ರಾಜಕೀಯ ಚರಿತ್ರೆ. ಜನಜೀವನವನ್ನು ಈ ಯುಗದ ಕವಿಗಳು ತಮ್ಮ

ಕಾವ್ಯಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಪಂಪನ ದಾರಿಯನ್ನು ಅನುಸರಿಸಿದ ಈ ಕಾಲದ ಇತರ ಕವಿಗಳಲ್ಲಿ ಪ್ರಮುಖರೆನಿಸಿದವರು ರನ್ನ, ಪೊನ್ನ, ನಾಗವರ್ಮ, ಚಾವುಂಡರಾಯ, ಕೇಶಿರಾಜ, ಜನ್ನ, ನಯನಸೇನ ಮುಂತಾದವರು. ಉಪಲಬ್ಧವಿರುವ ಕನ್ನಡದ ಮೊದಲ ಗದ್ಯಗ್ರಂಥದ ಕರ್ತೃ ಶಿವಕೋಟ್ಯಾಚಾರ್ಯರ 'ವಡ್ಡಾರಾಧನೆ' ಆ ಕಾಲದ ಗದ್ಯ ಸಾಹಿತ್ಯದ ಪರಿಚಯ ನೀಡುತ್ತದೆ.

ಕನ್ನಡ ಸಾಹಿತ್ಯದ ಮುಂದಿನ ಕಾಲಘಟ್ಟವನ್ನು ಹನ್ನೆರಡನೇ ಶತಮಾನವೆಂದು ಗುರುತಿಸಲಾಗಿದೆ. ಇದು ನಡುಗನ್ನಡ ಕಾಲ. ಹಳಗನ್ನಡ, ಹೊಸಗನ್ನಡ, ಸಂಧಿಕಾಲ, ಕನ್ನಡ ಸಾಹಿತ್ಯ ಮಾರ್ಗದಿಂದ ದೇಸಿಗೆ ಸಂಕ್ರಮಣ ಹೊಂದಿದ ಯುಗ. ಈ ಕಾಲದ ಸಾಹಿತ್ಯದ ವೈಶಿಷ್ಟ್ಯವಿರುವುದೇ 'ವಚನ ಸಾಹಿತ್ಯ' ರೂಪದ ಉದಯದಲ್ಲಿ. ಇದು ಮನುಕುಲದ ಉದ್ಧಾರಕ್ಕಾಗಿ ಸರಳವೂ ಸುಲಲಿತವೂ ಆದ ರೀತಿಯಲ್ಲಿ ಅಭಿವ್ಯಕ್ತಿಗೊಂಡ ಪ್ರಕಾರ. ಹಳಗನ್ನಡದ ಕ್ಲಿಷ್ಟತೆ, ಸಂಕೀರ್ಣತೆಗಳಿಂದ ಮುಕ್ತವಾದ ಭಾಷೆ ಇಲ್ಲಿದೆ.

ಜೈನ ಧರ್ಮವು ಹಿಂದೆ ಸರಿದು, ಲಿಂಗಾಯತ ಧರ್ಮವು ತನ್ನ ಪ್ರಾಬಲ್ಯವನ್ನು ಹೊಂದಿದ್ದು ಶಿವಶರಣರ ಆತ್ಮ ನಿರೀಕ್ಷಣೆ, ಅನುಭಾವ, ನೀತಿ, ಮತ, ತತ್ತ್ವಬೋಧೆಗಳು ವಚನಗಳ ಮೂಲಕ ಹೊರಹೊಮ್ಮಿವೆ. ವಚನ ಸಾಹಿತ್ಯ ವಿಶ್ವ ಸಾಹಿತ್ಯಕ್ಕೆ ಕನ್ನಡದ ವಿಶಿಷ್ಟ ಕೊಡುಗೆಯೆನಿಸಿದೆ. ಕ್ಲಿಷ್ಟವಾದ ಚಂಪೂ ಛಂದಸ್ಸಿನಿಂದ ಸರಳ ರೂಪಗಳಾದ ವಚನ, ರಗಳೆ, ತ್ರಿಪದಿ, ಷಟ್ಪದಿಗಳೆಂಬ ಅಚ್ಚಗನ್ನಡದ ದೇಶಿ ಛಂದೋರೂಪಗಳು ಈ ಕಾಲದಲ್ಲಿ ಮೈದಳೆದುವು. ಶರಣರು ತಮ್ಮ ಪರಿಸರದೊಂದಿಗೆ ಸ್ಪಂದಿಸಿದ ಕ್ರಿಯೆಯ ಫಲವೇ ಈ ಸಾಹಿತ್ಯ ರೂಪಗಳಾದುವು. ಜನಪರ ಸಾಹಿತ್ಯ ಸೃಷ್ಟಿಯ ಪ್ರಾತಿನಿಧಿಕ ವ್ಯಕ್ತಿಯಾಗಿ ಬಸವಣ್ಣನವರನ್ನು ಗುರುತಿಸುವುದರಿಂದ ಈ ಯುಗವನ್ನು 'ಬಸವಯುಗ' ಎಂದೇ ಕರೆಯುತ್ತಾರೆ. ಈ ಶತಮಾನದ ಇತರ ಪ್ರಮುಖ ಕವಿಗಳು ಅಲ್ಲಮಪ್ರಭು, ದೇವರದಾಸಿಮಯ್ಯ, ಅಕ್ಕಮಹಾದೇವಿ, ಹರಿಹರ, ರಾಘವಾಂಕ, ಚೆನ್ನಬಸವಣ್ಣ ಮುಂತಾದವರು. ಸಮಾಜದ ಹಲವು ವರ್ಗಗಳಿಂದ ಬಂದವರು ಅನಕ್ಷರಸ್ಥರೂ, ಸ್ತ್ರೀಯರೂ ಸೇರಿದಂತೆ ವಚನ ಸಾಹಿತ್ಯಕ್ಕೆ ನೀಡಿದ ಕೊಡುಗೆ ಈ ಕಾಲದ ಮತ್ತೊಂದು ಪ್ರಮುಖ ಅಂಶವೆನಿಸಿತು.

'ಷಟ್ಪದಿ' ಎಂಬ ಅಚ್ಚ ಕನ್ನಡದ ಛಂದೋರೂಪದಿಂದ ಅದ್ಭುತವಾದ ಕಾವ್ಯಗಳ ಸೃಷ್ಟಿಯಾಗಿ ರಾಘವಾಂಕ, ಭೀಮಕವಿ, ವಿರೂಪಾಕ್ಷ ಪಂಡಿತ ಮುಂತಾದವರು ಕಾವ್ಯ

ರಚನೆ ಮಾಡಿದರು. ರಾಘವಾಂಕನನ್ನು 'ಷಟ್ಪದೀ ಬ್ರಹ್ಮ'ನೆಂದೇ ಗುರುತಿಸಲಾಗಿದೆ. ಈ ಪರಂಪರೆಯ ಅತ್ಯದ್ಭುತ ಕವಿಯೆನಿಸಿದ ಕುಮಾರವ್ಯಾಸನ ಕೃತಿ 'ಕಲಿಯದವರಿಗೆ ಕಾಮಧೇನು' ವೆನಿಸಿಕೊಂಡಿದೆ. ಕುಮಾರವ್ಯಾಸ ಬದುಕಿದ್ದ ೧೫ನೇ ಶತಮಾನದ ಉತ್ತರಾರ್ಧವನ್ನು 'ಕುಮಾರವ್ಯಾಸ ಯುಗ'ವೆಂದೇ ಗುರುತಿಸಲಾಗಿದೆ.

ಕನ್ನಡ ಸಾಹಿತ್ಯದ ಮುಂದಿನ ಪ್ರಮುಖ ಘಟ್ಟವೆಂದರೆ ದಾಸಸಾಹಿತ್ಯ ಅಥವಾ ಕೀರ್ತನಸಾಹಿತ್ಯ. ಭಕ್ತಿ ಪ್ರಧಾನವಾಗಿರುವ ಈ ಪ್ರಕಾರವನ್ನು 'ಭಕ್ತಿಸಾಹಿತ್ಯ'ವೆಂದೂ ವೈದಿಕ ಧರ್ಮವನ್ನೊಳಗೊಂಡಿರುವುದರಿಂದ 'ವೈದಿಕಸಾಹಿತ್ಯ'ವೆಂದೂ ಇದನ್ನು ಕರೆಯಲಾಗಿದೆ. ಆತ್ಮನಿವೇದನೆ, ಸ್ತೋತ್ರ, ಉಪದೇಶ, ತತ್ತ್ವಚಿಂತನ ಇತ್ಯಾದಿ ವಿಷಯ ವೈವಿಧ್ಯವು ಸಂಗೀತ ಮಾಧ್ಯಮದ ಮೂಲಕ ವ್ಯಕ್ತಗೊಂಡಿದ್ದು ಹರಿಭಕ್ತಿ ಮತ್ತು ಮಾಧ್ವತತ್ತ್ವದ ಪ್ರತಿಪಾದನೆಯನ್ನು ಇಲ್ಲಿ ಕಾಣುತ್ತೇವೆ. ಈ ಹರಿದಾಸರ ಕೀರ್ತನ ಸಾಹಿತ್ಯಕ್ಕೆ ಮಧ್ವಾಚಾರ್ಯರು ಪ್ರತಿಪಾದಿಸಿದ ದ್ವೈತ ಸಿದ್ಧಾಂತವೇ ಪ್ರೇರಣೆಯಾಗಿದೆ. ವೇದ, ಉಪನಿಷತ್ತುಗಳನ್ನು ತಿರುಳುಗನ್ನಡದಲ್ಲಿ ಜನಸಾಮಾನ್ಯರಿಗೆ ಅನಾವರಣಗೊಳಿಸಿದವರು ಈ ಹರಿದಾಸರು ; ಹಾಗಾಗಿ ಇದು ಹರಿದಾಸ ಸಾಹಿತ್ಯ. ನವ ವಸಾಹತುಶಾಹಿ ಆಕ್ರಮಣದ ಸಂದರ್ಭದಲ್ಲಿ ನಮ್ಮ ಸಾಂಸ್ಕೃತಿಕ ನೆಲೆಗಳನ್ನು ಉಳಿಸಿಕೊಳ್ಳುವ ಮಹತ್ವದ ಕಾರ್ಯದಲ್ಲಿ ಪಾಲ್ಗೊಳ್ಳುತ್ತ ಜನರಲ್ಲಿ ಆತ್ಮವಿಶ್ವಾಸವನ್ನು ಬೆಳೆಸುವಲ್ಲಿ ಕೂಡ ಇದು ಸಮರ್ಥವಾಗಿ ಕಾರ್ಯ ನಿರ್ವಹಿಸಿದ್ದು ಕಂಡುಬರುತ್ತದೆ. ಈ ಪ್ರಕಾರದಲ್ಲಿನ ಪ್ರಮುಖರೆಂದರೆ ನರಹರಿತೀರ್ಥರು, ಪುರಂದರದಾಸರು, ಕನಕದಾಸರು, ವಿಜಯದಾಸರು ಮುಂತಾದವರು.

೧೯ನೇ ಶತಮಾನ ದೇಶದ ಚರಿತ್ರೆಯಲ್ಲಿ ಒಂದು ಪರ್ವಕಾಲ. ನಮ್ಮ ಸ್ವಾತಂತ್ರ್ಯ ಈ ಅವಧಿಯಲ್ಲಿ ಪೂರ್ಣಹರಣವಾದದ್ದು ಮತ್ತು ಅದನ್ನು ಮತ್ತೆ ಪಡೆಯ ಬೇಕೆಂಬ ಛಲ ಮೂಡಿ ಬಂದಿದ್ದು ಈ ಕಾಲದಲ್ಲಿಯೇ. ಅನೇಕ ಕ್ರಾಂತಿಕಾರಕ ವಿಚಾರಗಳು ತಲೆ ಎತ್ತಿದ್ದು ಈ ಅವಧಿಯಲ್ಲಿಯೇ. ಹಳತು, ಹೊಸತರ ಘರ್ಷಣೆಯಿಂದ ಹೊಸ ಹೊಸ ವಿಚಾರಗಳು ಮೂಡಿ ಅವು ಭಾರತೀಯ ಸಾಹಿತ್ಯದಲ್ಲಿಯೂ ಬದಲಾವಣೆಗಳನ್ನು ತಂದವು. ಹೊಸ ಹೊಸ ಸಾಹಿತ್ಯ ಪ್ರಕಾರಗಳು ಕಾಣಿಸಿಕೊಂಡು ಸಾಹಿತ್ಯದ ವಸ್ತು ದೇವರು, ಧರ್ಮ, ಪುರಾಣ, ಇತಿಹಾಸಗಳ ಸಂಬಂಧವನ್ನು ತೊರೆದು ವರ್ತಮಾನದ ಜೀವನಕ್ಕೆ ಹತ್ತಿರವಾಯಿತು. ಸಾಹಿತ್ಯ ರಾಜಾಶ್ರಯವನ್ನು ಸಂಪೂರ್ಣವಾಗಿ ಬಿಟ್ಟು ಜನರಿಂದ, ಜನರಿಗಾಗಿ ಎನ್ನುವಂತಾಯಿತು. ಕನ್ನಡ ಸಾಹಿತ್ಯವೂ ತನ್ನನ್ನು ಈ ಬದಲಾವಣೆಗೆ ತೆರೆದುಕೊಂಡಿತ್ತು. ಹೊಸ ಬಗೆಯ ಸಾಹಿತ್ಯ

ರಚನೆಯಲ್ಲಿ ಅನುವಾದ ಸೇರಿಕೊಂಡಿತು. ಸಂಸ್ಕೃತ, ಆಂಗ್ಲ ಸಾಹಿತ್ಯಗಳ ಶ್ರೇಷ್ಠ ಕೃತಿಗಳು ಕನ್ನಡ ಭಾಷೆಗೆ ಅನುವಾದಗೊಂಡು, ರೂಪಾಂತರಗೊಂಡು ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿದವು. ಕಾವ್ಯ, ಕಾದಂಬರಿ, ನಾಟಕ, ಕಥೆ, ಪ್ರಬಂಧ, ವಿಮರ್ಶೆ ಎಂದು ಹತ್ತು ಹಲವು ಬಗೆಗಳಲ್ಲಿ ಸಾಹಿತ್ಯ ತನ್ನ ಆಯಾಮವನ್ನು ವಿಸ್ತರಿಸಿಕೊಂಡಿತು. ಕಾವ್ಯಕ್ಕಿಂತ ಗದ್ಯ ಪ್ರಕಾರ ಹೆಚ್ಚು ಜನಪ್ರಿಯತೆಯನ್ನು ಗಳಿಸಿತು.

ವ್ಯಾಪ್ತಿ :

ಸಾಹಿತ್ಯ ನಿರ್ಮಾಣದ ಕಾರ್ಯಕ್ಕೆ ಪ್ರೇರಣೆ ನೀಡುವ ವಸ್ತು ಈ ಲೋಕದಿಂದ ಲಭಿಸಿದ್ದು, ಅದನ್ನು ವ್ಯಕ್ತಗೊಳಿಸುವ ಭಾಷೆಯೂ ಈ ಸಮಾಜದ ಕೊಡುಗೆಯೇ ನಿಜ. ಆದರೂ ವಸ್ತುವಿಗೆ ತಕ್ಕ ಭಾಷೆ, ಆಲೋಚನೆ, ಕಲ್ಪನಾಂಶ ಹಾಗೂ ಸಾಹಿತ್ಯ ಪ್ರಕಾರದ ತಿಳಿವಳಿಕೆ ಅಂದರೆ ಶೈಲಿ, ಛಂದಸ್ಸು ಮುಂತಾದುವು ಅಗತ್ಯವಾಗುತ್ತದೆ. ಏಕೆಂದರೆ ಸಾಹಿತ್ಯ ಎಂಬ ಪದದ ವ್ಯಾಪ್ತಿ ವಿಶಾಲವಾದುದು. ಬರವಣಿಗೆಗೆ ಇಳಿದ ರೂಪ ಮಾತ್ರವಲ್ಲದೆ ಬಾಯಿಂದ ಬಾಯಿಗೆ ಪ್ರಸಾರವಾಗುವ ಜನಪದ ಸಾಹಿತ್ಯಕ್ಕೂ ಈ ಹೆಸರು ಅನ್ವಯವಾಗುತ್ತದೆ.

ಸಾಹಿತ್ಯವೆಂದರೆ ಅದು ಕೇವಲ ಪುಸ್ತಕವಲ್ಲ. ಲಲಿತ ಕಲೆಗಳಲ್ಲಿ ಸಾಹಿತ್ಯವೂ ಒಂದು. ರೂಪ ಮತ್ತು ಶಿಲ್ಪಗಳಲ್ಲಿ ಕಲೆಗಳೊಂದಿಗೆ ಸೇರಿಸಿದರೂ ಸಾಹಿತ್ಯ ಮಿಕ್ಕ ಕಲೆಗಳಿಗಿಂತ ವಿಶಿಷ್ಟವಾದುದು. ಏಕೆಂದರೆ ಮಿಕ್ಕ ಕಲೆಗಳಿಗೆ ಇರುವಂತೆ ಇದಕ್ಕೆ ತನ್ನದೇ ಆದ ನಿರ್ದಿಷ್ಟ ಮಾಧ್ಯಮ ಭಾಷೆಯಾಗಿದೆ; ರಸರೂಪದಲ್ಲಿ ಕವಿಯ ಮನಸ್ಸಿನಲ್ಲಿ ಮೊಳೆತು ಸಾಹಿತ್ಯ ರೂಪದಲ್ಲಿ ಸಹೃದಯರ ಮನಸ್ಸನ್ನು ಪ್ರವೇಶಿಸಿ ಅದ್ಭುತವಾದ ಪರಿಣಾಮವನ್ನು ಉಂಟು ಮಾಡುತ್ತದೆ. ಹಾಗಾಗಿ ಸಾಹಿತ್ಯವೆಂಬುದು ಬದುಕಿನ ಎಲ್ಲ ಅಂಶಗಳನ್ನು ಒಳಗೊಂಡಿರುತ್ತದೆ.

ಪ್ರಯೋಜನ :

ಸಾಹಿತ್ಯದ ಪ್ರಯೋಜನದ ಕುರಿತು ಹಲವರು ತಮ್ಮ ಅಭಿಪ್ರಾಯಗಳನ್ನು ಹೇಳಿದ್ದಾರೆ. ಸಾಹಿತ್ಯದಿಂದ ದೊರೆಯುವ ಆನಂದ, ಆ ಮೂಲಕ ನೀಡುವ ಸತ್ಪ್ರೇರಣೆ ಸಮಾಜವನ್ನು ತಿದ್ದುವ, ಶುದ್ಧಗೊಳಿಸುವ ಸಾಮರ್ಥ್ಯ ಸಾಹಿತ್ಯಕ್ಕಿದೆ ಎಂಬ ನಂಬಿಕೆಯಿಂದ ಬದುಕಿನ ಬಗ್ಗೆ ನಿರ್ದಿಷ್ಟ ದೃಷ್ಟಿಕೋನ ಬೆಳೆಸಿಕೊಳ್ಳುವಂತೆ ಮಾಡುತ್ತದೆ.

'ಸಾಹಿತ್ಯ ಬದುಕಿನ ವಿಮರ್ಶೆಯಲ್ಲ, ಅದರ ಪರಿವರ್ತನೆ' ಎಂದು ಡಾ. ರಾಧಾಕೃಷ್ಣನ್ ಹೇಳಿದ್ದಾರೆ. ಸಾಹಿತ್ಯ 'ವಾಚಕರ ಹೃದಯವನ್ನು ಪರಿಪಾಕಗೊಳಿಸುತ್ತದೆ' ಎನ್ನುತ್ತಾರೆ ಮಾಸ್ತಿಯವರು. 'ಪುಸ್ತಕಗಳು ಮೃಗೀಯತೆಯಿಂದ ಮಾನವೀಯತೆಯತ್ತ ಮುನ್ನಡೆಸುತ್ತವೆ' ಎನ್ನುವ ಮಾತು ಮ್ಯಾಕ್ಸಿಂ ಗಾರ್ಕಿಯವರದು. ಈ ಎಲ್ಲರ ಮಾತುಗಳು ಸಾಹಿತ್ಯದ ಪ್ರಯೋಜನವನ್ನೇ ಎತ್ತಿ ಹೇಳುತ್ತವೆ. ಕವಿಗೆ ಯಶಸ್ಸನ್ನು ಹಾಗೂ ಸಹೃದಯರಿಗೆ ವ್ಯವಹಾರ ಜ್ಞಾನವನ್ನು, ಲೋಕಾನುಭವವನ್ನು ಈ ಈರ್ವರಿಗೂ ಅವರ್ಣನೀಯ ಆನಂದವನ್ನು ಸಾಹಿತ್ಯ ನೀಡುತ್ತದೆ. ದೇಶದ ಇತಿಹಾಸವನ್ನೇ ಸಾಹಿತ್ಯ ಕೃತಿಗಳು ಬದಲಾಯಿಸಿದ ಉದಾಹರಣೆಗಳಿವೆ. *'ಒಂದು ಹನಿ ಮಸಿ ಕೋಟಿ ಜನರಿಗೆ ಬಿಸಿ'* ಎಂಬ ಮಾತು ಈ ಹಿನ್ನೆಲೆಯಲ್ಲಿಯೇ ಮೂಡಿಬಂದಿದೆ.

ಸಾಹಿತ್ಯ ಮತ್ತು ಇತರ ವಿಷಯಗಳೊಂದಿಗೆ ಇರುವ ಸಂಬಂಧ :

ಸಾಹಿತ್ಯ ಕೃತಿಗಳು ತಮ್ಮ ಕಾಲದ ಬದುಕಿನ ಪ್ರತಿಬಿಂಬಗಳಾಗಿರುವುವು. ಅಂದಂದಿನ ಸಮಾಜ, ವ್ಯಕ್ತಿಯ ಬದುಕು, ಅಂದಂದಿನ ಮೌಲ್ಯಗಳು, ರಾಜಕೀಯ ಜೀವನ ಹೀಗೆ ಹತ್ತಾರು ಅಂಶಗಳನ್ನೊಳಗೊಂಡಿರುವ ಸಾಹಿತ್ಯ, ಜೀವನದ ಗತಿಯಲ್ಲಿಯ ಮಾರ್ಪಾಡುಗಳನ್ನು ಎತ್ತಿ ತೋರಿಸುತ್ತದೆ. ಮಾನವ ಸಮಾಜದ ಸಂಸ್ಕೃತಿಯ ಬೆಳವಣಿಗೆಗಳನ್ನು ಇಲ್ಲಿ ಕಾಣಬಹುದಾಗಿದೆ. ಸಾಹಿತ್ಯವನ್ನು ಜೀವನದ ಗತಿಬಿಂಬವೆಂದೂ ಗುರುತಿಸುತ್ತಾರೆ. ಬರಹಗಾರನ ದೃಷ್ಟಿಯನ್ನು, ಅಭಿವ್ಯಕ್ತಿಯನ್ನು ರೂಪಿಸುವಲ್ಲಿ ಅಂದಿನ ಬದುಕು ಕಾರಣವಾಗಿರುತ್ತದೆ. ಅಲ್ಲದೆ ಅಂದಿನ ಕಾಲದ ಪ್ರಬಲ ಸತ್ಯಾಂಶಗಳನ್ನು ಒಳಗೊಂಡ ಕವಿಯ ಕೃತಿ ಅಂದಿನ ಯುಗದ ಕಾಣಿಕೆಯೂ ಆಗಿರುತ್ತದೆ. ಅಲ್ಲದೆ ಅಂದಿನ ಬದುಕಿನ ಸರಿ-ತಪ್ಪುಗಳ, ಸಾಧಕ-ಬಾಧಕಗಳ ವಿವೇಚನೆಯೂ ನಡೆದು ಆ ಯುಗದ ಜೀವನ ಪರಿವರ್ತನೆಗೂ ಕಾರಣವಾಗುತ್ತದೆ. ಕವಿ ಕಾಲದ ಕರ್ತನೂ ಹೌದು ; ಪ್ರವರ್ತಕನೂ ಹೌದು. ಮಹಾಕವಿಯನ್ನು ಈ ಕಾರಣಕ್ಕಾಗಿಯೇ "ಯುಗದ ವಾಣಿ" ಎಂದು ಕರೆಯಲಾಗುತ್ತದೆ. ಕವಿ ಈ ಸಮಾಜದ ನಡೆವಳಿಕೆಗೆ ಪ್ರತಿ ಕ್ಷಣ ಸ್ಪಂದಿಸುತ್ತಾನೆ.

ಸಾಹಿತ್ಯ ಅಧ್ಯಯನದ ಮೂಲಕ ಸಮಾಜದಲ್ಲಿ ನಡೆದ ಹೋರಾಟಗಳು, ಏರುಪೇರುಗಳು ಅವುಗಳು ಬದಲಾದ ರೀತಿಯನ್ನು ಕಾಣಲು ಸಾಧ್ಯ. ಇಂತಹ ಕೃತಿಗಳ ಕ್ರಮವಾದ ಅಧ್ಯಯನ ಅಂದಿನ ಸಮಾಜದ ನಡೆವಳಿಕೆಯನ್ನು ಗುರುತಿಸಲು ಸಹಾಯವಾಗಿರುತ್ತದೆ. ಅಲ್ಲದೆ ಅದು ಬದಲಾಗುವುದನ್ನು, ಬದಲಾಗುತ್ತಿರುವುದನ್ನು

ಗುರುತಿಸುತ್ತಾ ಹೋಗುತ್ತದೆ. ಸಾಮಾಜಿಕ ನೆಲೆಯಲ್ಲಿ ಕಂಡ ಹೋರಾಟ, ಆದ ಅಡೆತಡೆ, ಬದಲಾವಣೆಗಳನ್ನು ಈ ಸಾಹಿತ್ಯ ಒಳಗೊಳ್ಳುತ್ತದೆ. ವೀರಯುಗ, ಭಕ್ತಿಯುಗ, ರಾಷ್ಟ್ರ ಪ್ರೇಮ, ಸ್ವಾತಂತ್ರ್ಯ ಹೋರಾಟದ ನೆಲೆಗಳು ಇವು ಅಂದಿನ ಸಾಮಾಜಿಕ ಸ್ತರಗಳನ್ನು ಹೇಳುತ್ತವೆ. ಹಳಗನ್ನಡ, ನಡುಗನ್ನಡ, ಹೊಸಗನ್ನಡ, ನವೋದಯ, ನವ್ಯ, ದಲಿತ, ಬಂಡಾಯ ಸಾಹಿತ್ಯದ ಅಧ್ಯಯನ ಈ ದೃಷ್ಟಿಯಿಂದ ಬಹುಮುಖ್ಯವಾಗಿರುತ್ತದೆ.

ಜೀವನದ ಪ್ರತಿಬಿಂಬವಾದ ಸಾಹಿತ್ಯದಲ್ಲಿ ಸಾಮಾಜಿಕ ನೆಲೆಗಳನ್ನು ಗುರುತಿಸುವುದು ಸಹಜ. ಉತ್ತಮ ಬದುಕು, ಉತ್ತಮ ಕೃತಿಗೆ ಕಾರಣ, ಹೋರಾಟ, ಸಂಘರ್ಷಗಳು, ಬದಲಾದ ಬದುಕಿನ ನೆಲೆಗಳು ಸಾಹಿತ್ಯದಲ್ಲಿಯೂ ಬದಲಾವಣೆ, ತಿರುವು, ತರುವಂಥದ್ದು. ಏಕೆಂದರೆ ಸಮಾಜ ಹಾಗೂ ಸಾಹಿತ್ಯ ಒಂದರೊಡನೊಂದು ಹೊಕ್ಕು ಬಳಕೆಯಾಗಿರುವುದೇ ಕಾರಣ. ಇಂದಿನ ಸಾಹಿತ್ಯ ವಿಮರ್ಶೆಯಲ್ಲಿ ಹೆಚ್ಚಾಗಿ ಕೇಳಿ ಬರುವ ಸಾಮಾಜಿಕ ಪ್ರಜ್ಞೆ, ಸಾಹಿತ್ಯ ಮತ್ತು ಸಮಾಜದ ಸಂಬಂಧವನ್ನು ಹೇಳುವ ಮಾತೇ ಆಗಿದೆ. ಪ್ರತಿಯೊಂದು ದೇಶದ ಜನರ ಜೀವನ, ಸಂಸ್ಕೃತಿಗಳು ಅವರ ಸಾಹಿತ್ಯದಲ್ಲಿ ದಟ್ಟವಾಗಿ ಕಂಡುಬರುತ್ತವೆ.

ಹಾಗಾಗಿ ಸಾಹಿತ್ಯದ ಪ್ರಯೋಜನವನ್ನು ಹಲವು ಕ್ಷೇತ್ರಗಳ ಮೂಲಕ ಪಡೆಯಲು ಸಾಧ್ಯವಾಗುತ್ತದೆ. ಅಂದರೆ, ಸಾಹಿತ್ಯವು ಧರ್ಮ, ವಿಜ್ಞಾನ, ಮನೋವಿಜ್ಞಾನ, ಭಾಷಾ ವಿಜ್ಞಾನ ಜೊತೆಗೆ ರಾಜಕೀಯ ಎಂಬ ಕ್ಷೇತ್ರಗಳೊಂದಿಗೆ ಸಂಪರ್ಕವನ್ನು ಬೆಳೆಸಿಕೊಳ್ಳುವುದರ ಮೂಲಕ ಸಮಾಜಕ್ಕೆ ತನ್ನ ಕೊಡುಗೆಯನ್ನು ನೀಡುತ್ತದೆ.

ಕನ್ನಡ ಸಾಹಿತ್ಯದ ಆರಂಭಿಕ ಕಾಲದಲ್ಲಿ ಸಾಹಿತ್ಯ ರಚನೆಯ ಹಿನ್ನೆಲೆಯಲ್ಲಿ ಪ್ರಧಾನ ಪ್ರೇರಣೆಯಾಗಿ ನಿಂತಿರುವುದೇ ಧರ್ಮ. ಹೀಗೆ ಆದಿಕವಿಯ ಕಾವ್ಯದಿಂದ ಹಿಡಿದು ವಚನ, ದಾಸ ಸಾಹಿತ್ಯ, ಕುಮಾರವ್ಯಾಸ, ಲಕ್ಷ್ಮೀಶರ ಕೃತಿಗಳು ಆಧುನಿಕ ಸಾಹಿತ್ಯ ರಚನೆಯಾಗುವವರೆಗೂ ಧರ್ಮ ಪ್ರಚೋದಕ ಶಕ್ತಿಯಾಗಿ ಕೆಲಸ ಮಾಡಿರುವುದು ಕಂಡುಬರುತ್ತದೆ.

ಸಾಹಿತ್ಯ ಮತ್ತು ವಿಜ್ಞಾನ ಮೇಲ್ನೋಟಕ್ಕೆ ಸಂಬಂಧವಿಲ್ಲದಂತೆ ಕಂಡು ಬಂದರೂ ಸೂಕ್ಷ್ಮವಾಗಿ ವಿವೇಚಿಸಿದರೆ ಅವುಗಳ ಸಂಬಂಧದ ನೆಲೆಯನ್ನು ಗುರುತಿಸ ಬಹುದಾಗಿದೆ. ಇವು ಚಿಂತನಶೀಲವಾದ ಮನಸ್ಸಿನ ಪ್ರತಿಕ್ರಿಯೆಯ ಎರಡು

ಮುಖಗಳಾಗಿದ್ದು, ಜೀವನವನ್ನು ಬೇರೆ ಬೇರೆ ನೆಲೆಯಲ್ಲಿ ನಿಂತು ವಿವೇಚಿಸುತ್ತವೆಯೆಂದು ಹೇಳಬಹುದು. ಒಂದು ಬಾಹ್ಯ ಪ್ರಪಂಚಕ್ಕೆ ಸಂಬಂಧಿಸಿದ್ದಾದರೆ, ಇನ್ನೊಂದು ಅಂತರಂಗದ ಜಗತ್ತಿಗೆ ಸಂಬಂಧಿಸಿದ್ದು, ಒಂದು ಬುದ್ಧಿಗೆ, ಇನ್ನೊಂದು ಭಾವಕ್ಕೆ ಸಂಬಂಧಿಸಿದ್ದೆನ್ನಬಹುದು. ಸಾಹಿತ್ಯಕ್ಕೆ ವಸ್ತುವಾಗದ ವಿಷಯ ಈ ಜಗತ್ತಿನಲ್ಲಿ ಇಲ್ಲವೆಂಬುದು ಗಮನಕ್ಕೆ ಬಂದಿರುವ ಅಂಶವೇ. ಹಾಗಾಗಿ ವಿಜ್ಞಾನವೂ ಸಾಹಿತ್ಯಕ್ಕೆ ವಸ್ತುವನ್ನೊದಗಿಸಿದೆ.

ಮನೋವಿಜ್ಞಾನ ಮನಸ್ಸಿನ ಚಟುವಟಿಕೆಗಳಲ್ಲಿ ಆಸಕ್ತಿ ಇಟ್ಟುಕೊಂಡಿರು-ವಂತಹುದು. ಮನುಷ್ಯನ ಮನೋಜೀವನದ ನಿಗೂಢತೆಗಳನ್ನೆಲ್ಲಾ ಮನೋವಿಜ್ಞಾನವು ಖಚಿತವಾಗಿ ತಿಳಿಸಬಲ್ಲುದು. ಮನೋವೈಜ್ಞಾನಿಕ ಅಧ್ಯಯನದಿಂದ ಸಾಹಿತ್ಯ ಕೃತಿಗಳಲ್ಲಿ ಕಂಡುಬರುವ ಮನೋವೈಜ್ಞಾನಿಕ ಸಿದ್ಧಾಂತ ಮತ್ತು ಮಾದರಿಗಳ ಅಧ್ಯಯನ ಮತ್ತು ಓದುಗರ ಮೇಲೆ ಸಾಹಿತ್ಯದ ಪರಿಣಾಮಗಳ ಅಧ್ಯಯನ ಮುಂತಾದ ದೃಷ್ಟಿಗಳಿಂದ ಸಾಹಿತ್ಯ ಮತ್ತು ಮನೋವಿಜ್ಞಾನದ ಸಂಬಂಧಗಳನ್ನು ಕುರಿತು ಅಧ್ಯಯನ ಮಾಡಬಹುದು.

ಸಾಹಿತ್ಯ ಮತ್ತು ಭಾಷೆಗೆ ಅವಿನಾಭಾವ ಸಂಬಂಧ ಇದೆ. ಭಾಷೆಯಿಲ್ಲದೆ ಸಾಹಿತ್ಯವಿಲ್ಲ. ಸಾಹಿತ್ಯ ಹುಟ್ಟುವುದೇ ಭಾಷೆಯಿಂದ. ಗ್ರಂಥಸ್ಥ ಸಾಹಿತ್ಯ, ಜನಪದ ಸಾಹಿತ್ಯ ಎರಡು ರೂಪಗಳಲ್ಲಿ ಇದರ ಹರಹನ್ನು ಕಾಣುತ್ತೇವೆ. ಸಾಹಿತ್ಯದ ಮೇಲೆ ಭಾಷಾಪ್ರಭಾವ ಹೆಜ್ಜೆ ಹೆಜ್ಜೆಗೂ ದಟ್ಟವಾಗಿದ್ದು ಸಾಹಿತ್ಯದ ರೀತಿ ಶೈಲಿಗಳನ್ನು ಅದು ನಿರೂಪಿಸುತ್ತದೆ.

ಸಾಹಿತ್ಯಕ್ಕೂ, ರಾಜಕೀಯಕ್ಕೂ ಮೊದಲಿನಿಂದಲೂ ಸಂಪರ್ಕವಿದೆ. ನಮ್ಮ ಪ್ರಾಚೀನ ಕವಿಗಳು ರಾಜಾಶ್ರಯದಲ್ಲಿದ್ದುಕೊಂಡೇ ಸಾಹಿತ್ಯ ರಚನೆ ಮಾಡಿರುವುದು ತಿಳಿದದ್ದೇ. ಅವರು ತಮ್ಮ ಬದುಕನ್ನು ರೂಪಿಸಿಕೊಳ್ಳುವುದರ ಜೊತೆಗೆ ರಾಜರ ಕೀರ್ತಿ, ವ್ಯಕ್ತಿತ್ವಗಳನ್ನು ಅಜರಾಮರಗೊಳಿಸಿದ್ದೂ ಉಂಟು. ಸಾಹಿತ್ಯ ದೇಶದ ರಾಜಕೀಯ ವ್ಯವಸ್ಥೆಯನ್ನೇ ಬದಲಿಸುವ ಶಕ್ತಿಯನ್ನು ಹೊಂದಿರುತ್ತದೆ. ಪ್ರಾಚೀನ ಗ್ರೀಕ್ ನಾಟಕಗಳು, ಹೋಮರನ ಈಲಿಯಡ್, ಒಡೆಸ್ಸಿ ಮಹಾಕಾವ್ಯಗಳು, ರಾಮಾಯಣ, ಮಹಾಭಾರತ ಮಹಾಕಾವ್ಯಗಳು, ಶೇಕ್ಸ್‌ಪಿಯರ್‌ನ ನಾಟಕಗಳು, ಆ ಕಾಲದ ರಾಜಕೀಯ ವ್ಯವಸ್ಥೆಯನ್ನು ಚಿತ್ರಿಸಿವೆ. ರಾಜಕೀಯದಲ್ಲಾಗಬೇಕಾದ, ಆಗಬಹುದಾದ ಬದಲಾವಣೆಗಳನ್ನು ಸಾಹಿತ್ಯ ಸೂಚಿಸುತ್ತದೆ. ದೇಶದ ಎಲ್ಲಾ ಭಾಷೆಯ ಸಾಹಿತಿಗಳೂ ರಾಜಕೀಯದ ವ್ಯವಸ್ಥೆ ಬಗೆಗೆ ಚಿಂತನೆ ನಡೆಸಿದವರೇ.

ಆತ್ಮ ಕಲ್ಯಾಣದ ಜೊತೆಗೆ ಲೋಕಹಿತವನ್ನೂ ಸಾಧಿಸಲೆಳೆಸುವ ಸಾಹಿತ್ಯ ನಮ್ಮ ಬುದ್ಧಿ ಭಾವಗಳಿಗೆ ಸಂಸ್ಕಾರ ನೀಡುತ್ತದೆ. *'ಸಾಹಿತ್ಯದ ಸ್ಪರ್ಶವಿಲ್ಲದ ಮನುಷ್ಯ ಬಾಲ ಕೋಡುಗಳಿಲ್ಲದ ಪಶುವಿದ್ದಂತೆ'* ಎಂಬ ಸುಭಾಷಿತ ಎಷ್ಟು ಅರ್ಥಪೂರ್ಣವಲ್ಲವೇ?

❖ ❖ ❖ ❖ ❖

ಶಬ್ದಾರ್ಥ : ಜಾಯಮಾನ–ಮೂಲಗುಣ ; ಉಪಲಬ್ಧ–ದೊರಕಿರುವ ; ಅನುಭೂತಿ–ಅನುಭವ ; ಸಂಕ್ರಮಣ–ಬದಲಾವಣೆಯ ಕಾಲ ; ಅನಾವರಣ–ತೆರೆದಿಡುವುದು ; ಪರ್ವಕಾಲ–ಪ್ರಮುಖ ಕಾಲ.

ಒಂದು ವಾಕ್ಯದಲ್ಲಿ ಉತ್ತರಿಸಿ :

೧) 'ಭಾಷೆ'ಯನ್ನು ಕುರಿತು ಮಹಾಕವಿ 'ದಂಡಿ' ಏನು ಹೇಳುತ್ತಾನೆ?

೨) ಪ್ರಪಂಚದಾದ್ಯಂತ ಸುಮಾರು ಎಷ್ಟು ಭಾಷೆಗಳಿವೆಯೆಂದು ಅಂದಾಜು ಮಾಡಲಾಗಿದೆ?

೩) ಪಂಚ ದ್ರಾವಿಡ ಭಾಷೆಗಳು ಯಾವುವು?

೪) ಕನ್ನಡದಲ್ಲಿ ಸಿಕ್ಕಿರುವ ಮೊದಲ ಗ್ರಂಥ ಯಾವುದು?

೫) ಹತ್ತನೇ ಶತಮಾನವನ್ನು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಏನೆಂದು ಕರೆಯುತ್ತಾರೆ?

ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ :

೧) ಸಾಹಿತ್ಯ ರಚನೆಗೆ ಪ್ರೇರಣೆ ಯಾವುದು?

೨) ಸಾಹಿತ್ಯ ರಚನೆಗೆ ಅಗತ್ಯವಾದ ಮೂರು ಅಂಶಗಳನ್ನು ಬರೆಯಿರಿ.

೩) ಹತ್ತನೇ ಶತಮಾನವನ್ನು 'ಪಂಪಯುಗ'ವೆಂದು ಕರೆಯಲು ಕಾರಣವೇನು?

೪) 'ವಚನ ಸಾಹಿತ್ಯ'ದ ವಿಶೇಷತೆ ಏನು?

೫) 'ದಾಸ ಸಾಹಿತ್ಯ'ಕ್ಕಿರುವ ಇತರ ಹೆಸರುಗಳಾವುವು?

ವಿವರವಾಗಿ ಉತ್ತರಿಸಿ :

೧) ಕನ್ನಡ ಭಾಷೆಯ ಪ್ರಾಚೀನತೆಯನ್ನು ಕುರಿತು ಬರೆಯಿರಿ.

೨) ಹತ್ತನೇ ಶತಮಾನದ ಕನ್ನಡ ಸಾಹಿತ್ಯದ ವಿಶೇಷತೆಯನ್ನು ಬರೆಯಿರಿ.

೩) ಸಾಹಿತ್ಯದ ಪ್ರಯೋಜನವನ್ನು ವಿವರಿಸಿ.

ಆಕರ :

ಡಾ. ಚಿ.ಸಿ. ನಿಂಗಣ್ಣ ಅವರು ಸಂಪಾದಿಸಿದ ಕನ್ನಡ ಸಾಹಿತ್ಯ ಸಂಸ್ಕೃತಿಕ ಕೋಶದಿಂದ ಸಂಗ್ರಹಿಸಲಾಗಿದೆ. ಪ್ರ : ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ.

ಹೆಚ್ಚಿನ ಓದು :

೧) ಕನ್ನಡ ಸಾಹಿತ್ಯ ಚರಿತ್ರೆ – ರಂ.ಶ್ರೀ. ಮುಗಳಿ.

೨) ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ – ತ.ಸು. ಶಾಮರಾವ್

೩) ದ್ರಾವಿಡ ಭಾಷಾ ವಿಜ್ಞಾನ – ಸಂ : ಡಾ. ಕೆಂಪೇಗೌಡ, ಡಾ. ಸುಂದರಂ

೪) ದ್ರಾವಿಡ ಭಾಷಾ ವಿಜ್ಞಾನ – ಲೇ : ಡಾ. ಸಂಗಮೇಶ ಸವದತ್ತಿಮಠ

೫) ಕನ್ನಡ ಕೈಪಿಡಿ – ಬಿ.ಎಂ.ಶ್ರೀ.

೬) ಸಾಹಿತ್ಯ ಚರಿತ್ರೆ ಸಂಪುಟಗಳು – ಮೈಸೂರು ವಿಶ್ವವಿದ್ಯಾನಿಲಯ

ಅನುಬಂಧ – ೧ (ಅ)

(i) ಅಂಕ ನೀಲನಕ್ಷೆ

ಪಠ್ಯ	೧ ಅಂಕ	೨ ಅಂಕ	೩ ಅಂಕ	೪ ಅಂಕ		ಒಟ್ಟು ಅಂಕಗಳು
				ಪ್ರಶ್ನೆಗಳು	ಭಾವಾರ್ಥ	
ಪದ್ಯಭಾಗ						
೧) ವಚನ	೧	೧	೧	೧		
೨) ಕೀರ್ತನೆ	೧	೧	೧	೧	೧	೪೫
೩) ಜನಪದ, ತತ್ತ್ವಪದ	೧	೧	೧	೧		
೪) ಹೊಸಗನ್ನಡ ಪದ್ಯ	೩	೪	೨	೩	೧	
ಗದ್ಯ ಭಾಗ	೩	೫	೩	೫		೨೯
ಭಾಷೆ, ಸಾಹಿತ್ಯ ಸ್ವರೂಪ	೧	೪	–	೨		೧೧
ರಚನೆ / ಭಾಷಾಭ್ಯಾಸ	೫	೭	–	–		೧೫
ಒಟ್ಟು ಪ್ರಶ್ನೆಗಳು	೧೫	೨೩	೮	೧೫		೧೦೦
ಉತ್ತರಿಸಬೇಕಾದ ಪ್ರಶ್ನೆಗಳು	೧೫	೧೭	೫	೯		
ಒಟ್ಟು ಅಂಕಗಳು	೧೫	೩೪	೧೫	೩೬		
ಹೆಚ್ಚುವರಿ ಪ್ರಶ್ನೆಗಳು	–	೬	೩	೬		

* ಅವಧಿ : ೩–೦೦ ಗಂಟೆ ೧೫ ನಿಮಿಷ
* ಅಂಕಗಳು : ೧೦೦
* ಒಟ್ಟು ಪ್ರಶ್ನೆಗಳು : ೬೧
* ಉತ್ತರಿಸಬೇಕಾದದ್ದು : ೪೬
* ಹೆಚ್ಚುವರಿ ಪ್ರಶ್ನೆಗಳು : ೧೫

ಅನುಬಂಧ – ೧ (ಆ)

(ii) ಶೇಕಡಾವಾರು ಪ್ರಶ್ನೆಗಳ ಮಟ್ಟ ಮತ್ತು ಪ್ರಮಾಣ

i)	ಪದ್ಯ	४೫
	ಗದ್ಯ	೨೮
	ಭಾಷೆ / ಸಾಹಿತ್ಯ೧೧	
	ಭಾಷಾಭ್ಯಾಸ / ರಚನೆ	೧೫
	ಒಟ್ಟು ಅಂಕಗಳು	**೧೦೦**
ii)	ಜ್ಞಾನ	೧೫
	ಗ್ರಹಿಕೆ	೨೪
	ಅಭಿವ್ಯಕ್ತಿ	೨೬
	ಪ್ರಶಂಸೆ	೧೫
	ಒಟ್ಟು ಪ್ರಮಾಣ೧೦೦	
iii)	ಸುಲಭ	೨೨%
	ಸಾಧಾರಣ	೬೦%
	ಕಠಿಣ	೧೮%
	ಪ್ರಶ್ನೆಗಳ ಮಟ್ಟ	**೧೦೦**
iv)	ಮಾದರಿ ಪ್ರಶ್ನೆಗಳು	೧೪
	ಸಣ್ಣ ಪ್ರಶ್ನೆಗಳು	೧೭
	ಅತಿ ಸಣ್ಣ ಪ್ರಶ್ನೆಗಳು	೧೫
	ಒಟ್ಟು ಉತ್ತರಿಸಬೇಕಾದ ಪ್ರಶ್ನೆಗಳು	**४೬**

ಅನುಬಂಧ – ೨

ಪಠ್ಯ	೧ ಅಂಕ	೨ ಅಂಕ	೩ ಅಂಕ	೪ ಅಂಕ		ಒಟ್ಟು ಅಂಕಗಳು
				ಪ್ರಶ್ನೆಗಳು	ಭಾವಾರ್ಥ	
ಪದ್ಯಭಾಗ						
೧) ವಚನ	೧	೧	೧	೧		
೨) ಕೀರ್ತನೆ	೧	೧	೧	೧	೧	
೩) ಜನಪದ, ತತ್ತ್ವಪದ	೧	೧	೧	೧		
೪) ಹೊಸಗನ್ನಡ ಪದ್ಯ	೩	೪	೨	೩	೧	
ಒಟ್ಟು ಪ್ರಶ್ನೆಗಳು	೬	೭	೫	೮		
ಉತ್ತರಿಸಬೇಕಾದದ್ದು	೬	೫	೩	೫		
ಹೆಚ್ಚುವರಿ ಪ್ರಶ್ನೆಗಳು	–	೨	೨	೩		
ಒಟ್ಟು ಅಂಕಗಳು	೬	೧೦	೦೯	೨೦		೪೫
ಗದ್ಯಭಾಗ						
ಒಟ್ಟು ಪ್ರಶ್ನೆಗಳು	೩	೫	೩	೫		
ಉತ್ತರಿಸಬೇಕಾದದ್ದು	೩	೪	೨	೩		
ಹೆಚ್ಚುವರಿ ಪ್ರಶ್ನೆಗಳು	–	೧	೧	೨		
ಒಟ್ಟು ಅಂಕಗಳು	೩	೮	೬	೧೨		೨೯
ಭಾಷೆ, ಸಾಹಿತ್ಯ ಸ್ವರೂಪ						
ಒಟ್ಟು ಪ್ರಶ್ನೆಗಳು	೧	೪	–	೨		
ಉತ್ತರಿಸಬೇಕಾದದ್ದು	೧	೩	–	೧		
ಹೆಚ್ಚುವರಿ ಪ್ರಶ್ನೆಗಳು	–	೧	–	೧		
ಒಟ್ಟು ಅಂಕಗಳು	೧	೬	–	೪		೧೧
ರಚನೆ / ಭಾಷಾಭ್ಯಾಸ						
ಒಟ್ಟು ಪ್ರಶ್ನೆಗಳು	೫	೭	–	–		
ಉತ್ತರಿಸಬೇಕಾದದ್ದು	೫	೫	–	–		
ಹೆಚ್ಚುವರಿ ಪ್ರಶ್ನೆಗಳು	–	೨	–	–		
ಒಟ್ಟು ಅಂಕಗಳು	೫	೧೦	–	–		೧೫
				ಒಟ್ಟು ಅಂಕಗಳು		೧೦೦

ಅನುಬಂಧ – ೩

ಪ್ರಶ್ನೆ ಪತ್ರಿಕೆ ರಚನೆ ಮತ್ತು ಉತ್ತರ ಪತ್ರಿಕೆಯ ಮೌಲ್ಯಮಾಪನಕ್ಕೆ ಸೂಚನೆಗಳು

೧) ಒಂದು ಅಂಕದ ಪ್ರಶ್ನೆಗಳು. ಉತ್ತರ ನೇರವಾಗಿದ್ದು, ಒಂದು ಪೂರ್ಣ ವಾಕ್ಯದಲ್ಲಿ ಇರಬೇಕು.

೨) ಎರಡು ಅಂಕದ ಪ್ರಶ್ನೆಗಳು. ಎರಡು-ಮೂರು ವಾಕ್ಯಗಳಲ್ಲಿರುವ ಅಥವಾ ಮೂರು-ನಾಲ್ಕು ಮುಖ್ಯಾಂಶಗಳನ್ನು ಒಳಗೊಂಡ ಉತ್ತರ ಬರೆಯುವಂತೆ ಇರಬೇಕು.

೩) ಮೂರು ಅಂಕದ ಸಂದರ್ಭ ಸೂಚಿ ವಿವರಣೆ. ಕವಿ, ಕಾವ್ಯ, ಸಂದರ್ಭ, ಸ್ವಾರಸ್ಯ ಹಾಗೂ ಭಾವವನ್ನು ಸೂಚಿಸುವ ಉತ್ತರ ಬರೆಯುವಂತೆ ಇರಬೇಕು.

೪) ನಾಲ್ಕು ಅಂಕದ ಪ್ರಶ್ನೆಗಳು. ಉತ್ತರ ಸುಲಭವಾಗಿ ವಿವರವಾದ ಅರ್ಥ ಗ್ರಾಹ್ಯವಾಗುವಂತೆ ಇರಬೇಕು. ಉತ್ತರವು ವಿವರಣಾತ್ಮಕವೂ, ವಿಶ್ಲೇಷಣೆಯುಳ್ಳದ್ದೂ ಆಗಿರಬೇಕು.

೫) ನಾಲ್ಕು ಅಂಕದ ಭಾವಾರ್ಥದ ಪ್ರಶ್ನೆಗಳು. ಪದ್ಯದ ಸಂದರ್ಭ, ಸಾರಾಂಶ, ಲೇಖಕನ ಆಶಯವನ್ನು ವಿವರಿಸುವಂತಿರಬೇಕು. ಕವಿ ಹಾಗೂ ಕೃತಿಯ ಬಗ್ಗೆ ಎರಡು ಮೂರು ವಾಕ್ಯಗಳ ಪರಿಚಯವನ್ನು ಒಳಗೊಂಡಿರಬೇಕು.

೬) ಅ) ಭಾಷಾಭ್ಯಾಸದಲ್ಲಿ ಕೆಳಗಿನ ಏಳು ಘಟಕಗಳಲ್ಲಿ ಐದನ್ನು ಸೂಚನೆಗೆ ಅನುಗುಣವಾಗಿ ಉತ್ತರಿಸುವುದು.

೧) ಪದಗಳ ಅರ್ಥ ಬರೆಯುವುದು.
೨) ಸಮಾನಾರ್ಥ ಪದಗಳನ್ನು ಬರೆಯುವುದು.
೩) ಪದಗಳ ನಾನಾರ್ಥ ಬರೆಯುವುದು.
೪) ಗ್ರಾಂಥಿಕ ರೂಪಗಳನ್ನು ಬರೆಯುವುದು.
೫) ಪದಗಳ ತತ್ಸಮ-ತದ್ಭವ ಬರೆಯುವುದು.
೬) ಶಬ್ದಗಳನ್ನು ಬಿಡಿಸಿ ಬರೆಯುವುದು.
೭) ನುಡಿಗಟ್ಟುಗಳ ಅರ್ಥ ಬರೆದು ವಾಕ್ಯಗಳನ್ನಾಗಿ ರೂಪಿಸುವುದು.

ಆ) ರಚನೆ : ಪಠ್ಯೇತರ ಗದ್ಯ ಭಾಗದಿಂದ ಆಯ್ದು ಮೌಲಿಕ ಗದ್ಯ ಭಾಗವನ್ನು ಅಳವಡಿಸಿ ಪ್ರಶ್ನೆಗಳನ್ನು ರೂಪಿಸಬೇಕು.

ಅನುಬಂಧ – ೪

ಪ್ರಥಮ ಪಿ.ಯು.ಸಿ. ಐಚ್ಛಿಕ ಕನ್ನಡ ಪ್ರಶ್ನೆ ಪತ್ರಿಕೆಯ ಸ್ವರೂಪ

ವಿಷಯದ ಸಂಕೇತ ಸಂಖ್ಯೆ : ೧೬ ಒಟ್ಟು ಪ್ರಶ್ನೆಗಳ ಸಂಖ್ಯೆ : ೬೧

ಅವಧಿ : ೩ ಗಂಟೆ ೧೫ ನಿಮಿಷ ಒಟ್ಟು ಅಂಕಗಳು : ೧೦೦

'ಅ' ವಿಭಾಗ

೧) ಒಂದು ಅಂಕದ ಹತ್ತು ಪ್ರಶ್ನೆಗಳು. (ಹತ್ತಕ್ಕೂ ಉತ್ತರಿಸಬೇಕು)
ಪದ್ಯ : ವಚನ–೧ ; ಕೀರ್ತನೆ–೧ ; ಜನಪದ/ತತ್ತ್ವಪದ–೧ ; ಹೊಸಗನ್ನಡ ಪದ್ಯ–೩ ; ಗದ್ಯ–೩
ಭಾಷೆ, ಸಾಹಿತ್ಯ ಸ್ವರೂಪ–೧

'ಆ' ವಿಭಾಗ

೨) ಎರಡು ಅಂಕದ ಏಳು ಪ್ರಶ್ನೆಗಳು :

ವಚನ–೧ ; ಕೀರ್ತನೆ–೧ ; ಜನಪದ–೧ ; ಹೊಸಗನ್ನಡ ಪದ್ಯ–೪

ಒಟ್ಟು ಪ್ರಶ್ನೆಗಳು–೭. ಉತ್ತರಿಸಬೇಕಾದದ್ದು–೫

ಮೂರು ಅಂಕದ ಐದು ಸಂದರ್ಭ ಸೂಚಿ ಪ್ರಶ್ನೆಗಳು :

ವಚನ–೧ ; ಕೀರ್ತನೆ–೧ ; ಜನಪದ–೧ ; ಹೊಸಗನ್ನಡ ಪದ್ಯ–೨

ಒಟ್ಟು ಪ್ರಶ್ನೆಗಳು–೫. ಉತ್ತರಿಸಬೇಕಾದದ್ದು–೩

ನಾಲ್ಕು ಅಂಕದ ವಿವರಣೆ ಸೂಚಿ ಆರು ಪ್ರಶ್ನೆಗಳು :

ವಚನ–೧ ; ಕೀರ್ತನೆ–೧ ; ಜನಪದ–೧ ; ಹೊಸಗನ್ನಡ ಪದ್ಯ–೩

ಒಟ್ಟು ಪ್ರಶ್ನೆಗಳು–೬. ಉತ್ತರಿಸಬೇಕಾದದ್ದು–೪

ನಾಲ್ಕು ಅಂಕದ ಭಾವಾರ್ಥ ವಿವರಣೆಯ ಎರಡು ಪ್ರಶ್ನೆಗಳು :

ವಚನ, ಕೀರ್ತನ, ಜನಪದ, ತತ್ತ್ವಪದ–೧ ; ಹೊಸಗನ್ನಡ ಪದ್ಯ–೧

ಒಟ್ಟು ಪ್ರಶ್ನೆಗಳು–೨. ಉತ್ತರಿಸಬೇಕಾದದ್ದು–೧

‘ಇ’ ವಿಭಾಗ

೩) ಎರಡು ಅಂಕದ ಐದು ಪ್ರಶ್ನೆಗಳು. ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಬೇಕು.

ಮೂರು ಅಂಕದ ೩ ಸಂದರ್ಭ ಸ್ವಾರಸ್ಯ ಸೂಚಿ ಪ್ರಶ್ನೆಗಳು.
೨ ಪ್ರಶ್ನೆಗಳಿಗೆ ಉತ್ತರಿಸಬೇಕು.

ನಾಲ್ಕು ಅಂಕದ ವಿವರಣೆ ಸೂಚಿ ಐದು ಪ್ರಶ್ನೆಗಳು. ಮೂರು ಪ್ರಶ್ನೆಗಳಿಗೆ ಉತ್ತರಿಸಬೇಕು.

‘ಈ’ ವಿಭಾಗ

೪) ಎರಡು ಅಂಕದ ನಾಲ್ಕು ಪ್ರಶ್ನೆಗಳು. ಮೂರು ಪ್ರಶ್ನೆಗಳಿಗೆ ಉತ್ತರಿಸಬೇಕು.

ನಾಲ್ಕು ಅಂಕದ ವಿವರಣೆ ಸೂಚಿ ಎರಡು ಪ್ರಶ್ನೆಗಳು. ಒಂದು ಪ್ರಶ್ನೆಗೆ ಉತ್ತರಿಸಬೇಕು.

‘ಉ’ ವಿಭಾಗ

೫) ೧) ಭಾಷಾಭ್ಯಾಸ : ಎರಡು ಅಂಕದ ಏಳು ಪ್ರಶ್ನೆಗಳು. ಐದನ್ನು ಉತ್ತರಿಸಬೇಕು.

ಅ) ಪದಗಳ ಅರ್ಥ – ಮೂರು ಕೊಟ್ಟು ಎರಡನ್ನು ಬರೆಯುವುದು.

ಆ) ಸಮಾನಾರ್ಥ – ಮೂರು ಕೊಟ್ಟು ಎರಡನ್ನು ಬರೆಯುವುದು.

ಇ) ಪದಗಳ ನಾನಾರ್ಥ – ಮೂರು ಕೊಟ್ಟು ಎರಡನ್ನು ಬರೆಯುವುದು.

ಈ) ಗ್ರಾಂಥಿಕ ರೂಪಗಳು – ಮೂರು ಕೊಟ್ಟು ಎರಡನ್ನು ಬರೆಯುವುದು.

ಉ) ತತ್ಸಮ–ತದ್ಭವ ಪದಗಳು – ಮೂರು ಕೊಟ್ಟು ಎರಡನ್ನು ಬರೆಯುವುದು.

ಊ) ಪದಗಳನ್ನು ಬಿಡಿಸುವುದು : ಮೂರು ಕೊಟ್ಟು ಎರಡನ್ನು ಬರೆಯುವುದು.

ಋ) ಪದಗಳು/ನುಡಿಗಟ್ಟುಗಳು – ಮೂರನ್ನು ಕೊಟ್ಟು ಎರಡನ್ನು ವಾಕ್ಯಗಳಲ್ಲಿ ಬಳಸುವುದು.

೨) ರಚನೆ :

ಪಠ್ಯೇತರ ಗದ್ಯಭಾಗದಿಂದ ಆಯ್ದ ಪ್ರಶ್ನೆಗಳನ್ನು ಉತ್ತರಿಸಿ.
ಒಂದು ಅಂಕದ ಐದು ಪ್ರಶ್ನೆಗಳು. ಐದಕ್ಕೂ ಉತ್ತರಿಸಬೇಕು.

ಅನುಬಂಧ – ೫

ಪ್ರಥಮ ಪಿ.ಯು.ಸಿ. ಐಚ್ಛಿಕ ಕನ್ನಡ

ಮಾದರಿ ಪ್ರಶ್ನೆಪತ್ರಿಕೆ

ವಿಷಯದ ಸಂಕೇತ ಸಂಖ್ಯೆ : ೧೬ ಒಟ್ಟು ಪ್ರಶ್ನೆಗಳ ಸಂಖ್ಯೆ : ೬೧

ಅವಧಿ : ೩ ಗಂಟೆ ೧೫ ನಿಮಿಷ ಒಟ್ಟು ಅಂಕಗಳು : ೧೦೦

'ಅ' ವಿಭಾಗ

I. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ : ೧X೧೦=೧೦

೧) ಭಕ್ತಿಪ್ರಿಯ ಯಾರು?

೨) ಸಿರಿ ಬಂದ ಕಾಲಕ್ಕೆ ಹೇಗಿರಬೇಕು?

೩) ಭಿಕ್ಷೆಗೆ ಹೋದವರು ಯಾರು?

೪) ಒಂದೇ ದೇಟಿನ ಕಾಯಿಗಳು ಯಾವುವು?

೫) ಶ್ರಾವಣ ಏನನ್ನು ಹಿಡಿದು ತಂದಿತು?

೬) ಯಾವುದು ನಾಡನ್ನು ಕಟ್ಟುವುದಿಲ್ಲ?

೭) ವಿಮಲಕ್ಕನಿಗೆ ಗಂಡನ ಮನೆಯಲ್ಲಿ ಖಾಯಂ ಕೆಲಸ ಯಾವುದು?

೮) 'ನಂಜನಗೂಡು ತಿರುಮಲಾಂಬ ಪ್ರಶಸ್ತಿ'ಯನ್ನು ಯಾವ ಸಂಸ್ಥೆ ಸ್ಥಾಪಿಸಿದೆ?

೯) ಪುಣೆಯ ಪ್ರಸಿದ್ಧ ಕಾಲೇಜಿನ ಹೆಸರೇನು?

೧೦) ಮಾತಿನ ಬಗ್ಗೆ ದಂಡಿ ನೀಡಿದ ವ್ಯಾಖ್ಯಾನವೇನು?

'ಆ' ವಿಭಾಗ

II. ಕೆಳಗಿನ ಪ್ರಶ್ನೆಗಳಲ್ಲಿ ಐದಕ್ಕೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ : ೨X೫=೧೦

೧೧) ಮಾದಾರ ಚೆನ್ನಯ್ಯ ಪ್ರಶ್ನಿಸಿರುವ ಮುಕ್ತಿಯ ಮಾರ್ಗಗಳಾವುವು?

೧೨) ಅಶನ ಮತ್ತು ಪಾಲ್ಬೆಣ್ಣೆಯನ್ನು ಯಾರಿಗೆ ನೀಡಬೇಕು?

೧೩) ಸಣ್ಣ ಮಕ್ಕಳು ಕಣ್ಣು ಮುಚ್ಚಲು ಕಾರಣವೇನು?

೧೪) ರೈತನು ಯಾರಿಗೆ ಮರುಳಾಗೆನೆಂದಿದ್ದಾನೆ?

೧೫) ಬಂಡಿಯ ಮೈ ನಡುಗಲು ಕಾರಣವೇನು?

೧೬) ಅನ್ನ ಹಾಗೂ ಚಿನ್ನ ಯಾವುದು?

೧೭) ಗರಡಿಯ ಪ್ರಯೋಜನಗಳೇನು?

III. ಕೆಳಗಿನ ಮೂರು ಪ್ರಶ್ನೆಗಳಿಗೆ ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ : ೩X೩=೯

೧೮) 'ಒಂದರ ಬಾಹು ಇನ್ನೊಂದರ ಹೆಗಲ ಮೇಲೆ.'

೧೯) 'ಏನು ಓದಲೇನು ಫಲ ಏನು ಕೇಳಲೇನು ಫಲ.'

೨೦) 'ಬಳಸದಿರದ್ವೈತವನು ಬಾಹ್ಯದಲಿ.'

೨೧) 'ಉಗ್ರರೆ, ಚದುರರೇ ಮೈಮನ ಒಡ್ಡಿರಿ ಹೊಸ ಆಹ್ವಾನಕೆ.'

೨೨) 'ಸಿಂಹಾಸನದ ಮೇಲೆ ಕೂತ ಕೂಸುಗಳೇ.'

IV. ಕೆಳಗಿನ ನಾಲ್ಕು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿರಿ : ೪X೪=೧೬

೨೩) ಭಕ್ತಿಮಾರ್ಗವೇ ಮೋಕ್ಷಕ್ಕೆ ಶ್ರೇಷ್ಠ ಎಂಬುದನ್ನು ಬಸವಣ್ಣನವರ ವಚನಗಳ ಹಿನ್ನೆಲೆಯಲ್ಲಿ ವಿವರಿಸಿ.

೨೪) ಕನಕದಾಸರು ಅನಿತ್ಯವಾದ ಬದುಕನ್ನು ಹೇಗೆ ಸಾರ್ಥಕಪಡಿಸಿ ಕೊಳ್ಳಬೇಕೆನ್ನುತ್ತಾರೆ ? ವಿವರಿಸಿ.

೨೫) 'ಬಣ್ಣದ ಗುಬ್ಬ್ಯಾರು ಮಳೆರಾಜಾ' ಹಾಡಿನಲ್ಲಿ ಬರಗಾಲದ ಭೀಕರತೆಯ ವಿವಿಧ ಮುಖಗಳು ಹೇಗೆ ಮೂಡಿಬಂದಿವೆ?

೨೬) ರೈತನನ್ನು ಸಾಮ್ರಾಜ್ಯ ಕಾಳಗೆ ಕೊಡುವ ಬಲಿ ಎಂದು ಏಕೆ ಹೇಳಲಾಗಿದೆ?

೨೭) ತಾಯಿ-ಮಗಳ ಅಂತಃಕರಣ 'ರೈಲ್ವೆ ನಿಲ್ದಾಣ' ಕವನದಲ್ಲಿ ಹೇಗೆ ಅನಾವರಣಗೊಂಡಿದೆ?

೨೮) ಮಹಿಳೆಯ ಮೇಲಿನ ಪುರುಷನ ಯಜಮಾನಿಕೆ ಪ್ರವೃತ್ತಿಯನ್ನು ಕವಯಿತ್ರಿ ಹೇಗೆ ನಿರೂಪಿಸಿದ್ದಾರೆ?

V. ಕೆಳಗಿನ ಒಂದು ಪದ್ಯದ ಭಾವಾರ್ಥವನ್ನು ವಿವರಿಸಿ : ೪X೧=೪

೨೯) ಕಂದನ ಕಿರಿಕಿರಿ ಇಂದೇನು ಹೇಳಲಿ
ಬಿಂದೀಗಿ ಹಾಲು ಸುರುವಂದ। ಛೆಂಜೀಯ
ಚಂದ್ರಮನ ತಂದು ನಿಲಿಸೆಂದಾ॥

೩೦) ಹೊರ ಬಿಟ್ಟು ನಿಮ್ಮನ್ನು
ನೂರು ಕಾರುಬಾರು ಮಾಡಿದಾಗ
ಯಾಕೆಂದು, ಏನೆಂದು, ಎಂದೂ ಕೇಳದೆ
ಮತ್ತೆ ಹೊತ್ತು ನಡೆವ ನಿಮ್ಮ
ಹೆಗಲುಗಳಿಗೆ ಜನುಮ ಜನುಮದ ನಮನಗಳು.

'ಇ' ವಿಭಾಗ

VI. ಕೆಳಗಿನ ನಾಲ್ಕು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ : **೨X೪=೮**

೩೧) ಊರಿನ ಹಿರಿಯರು ಲೇಖಕರ ತಂದೆಯೊಡನೆ ಏನೆಂದು ಹೇಳಿದರು?

೩೨) ರೋಮಿನಲ್ಲಿ ನೋಡಬೇಕಾದ ಪ್ರಸಿದ್ಧ ಚರ್ಚುಗಳು ಯಾವುವು?

೩೩) ಅಯ್ಯಾಳಪ್ಪ ನವದಂಪತಿಗಳಿಗೆ ಏನೆಂದು ಆಶೀರ್ವದಿಸಿದನು?

೩೪) ತಿರುಮಲಾಂಬರವರು ರಚಿಸಿದ ಕೃತಿಗಳಾವುವು?

೩೫) ಹರಿಕಥೆ ದಾಸರನ್ನು 'ದೋಶಾದಾಸ'ರೆನ್ನುತ್ತಿದ್ದುದೇಕೆ?

VII. ಕೆಳಗಿನ ಎರಡಕ್ಕೆ ಸಂದರ್ಭ ಸೂಚಿಸಿ, ಸ್ವಾರಸ್ಯ ವಿವರಿಸಿ : **೩X೨=೬**

೩೬) 'ಹೂಂ ಏನು ಬೇಕು ಅಂತ ಹೇಳಲಿ.'

೩೭) 'ಮೊಮ್ಮಕ್ಕಳ ನೋಡೋ ಆಸೆ ಇಲ್ಲೇನಬೆ.'

೩೮) 'ನಾಯಲ್ಲದು ಭೂಭುವನ ಪ್ರಸಿದ್ಧಮಜಂ.'

VIII. ಕೆಳಗಿನ ಮೂರು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : **೪X೩=೧೨**

೩೯) ದೂರ್ತರು ವಂಚನೆಗೆ ಬಳಸಿದ ಉಪಾಯ ಮತ್ತು ಅದರ ಪರಿಣಾಮವನ್ನು ಕುರಿತು ವಿವರಿಸಿ.

೪೦) ತಿರುಮಲಾಂಬ ಅವರ ಸಾಧನೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿ.

೪೧) ನಗರ ಜೀವನ ನೆಟಕಲ್ಲುವಿನ ಮೇಲೆ ಬೀರಿದ ಪ್ರಭಾವಗಳನ್ನು ವಿವರಿಸಿ.

೪೨) ಉನ್ಮಾದ ಮನಃಸ್ಥಿತಿ ಎಂದರೇನು ? ವಿವರಿಸಿ.

೪೩) ಎಸ್.ಎಸ್.ಎಲ್.ಸಿ. ಪರೀಕ್ಷೆಯ ನಂತರ ಲೇಖಕರು ಮುಂದಿನ ಶಿಕ್ಷಣಕ್ಕೆ ಯಾವ ರೀತಿ ತಯಾರಿ ನಡೆಸಿದರು ?

'ಈ' ವಿಭಾಗ

(ಭಾಷೆ, ಸಾಹಿತ್ಯ ಸ್ವರೂಪ)

IX. ಕೆಳಗಿನ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ : **೨X೩=೬**

೪೪) ಸಾಹಿತ್ಯವನ್ನು ರವೀಂದ್ರರು ಹೇಗೆ ವಿವರಿಸಿದ್ದಾರೆ?

೪೫) ಸಾಹಿತ್ಯ ರಚನೆಗೆ ಕಾರಣಗಳಾವುವು?

೪೬) ಸಾಹಿತ್ಯ ನಿರ್ಮಾಣಕ್ಕೆ ಬೇಕಾದ ಅಂಶಗಳಾವುವು?

೪೭) ದಾಸ ಸಾಹಿತ್ಯಕ್ಕಿರುವ ಇತರ ಹೆಸರುಗಳಾವುವು?

X. ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ವಿವರವಾಗಿ ಉತ್ತರಿಸಿ : **೧X೪=೪**

೪೮) ಸಾಹಿತ್ಯದ ಪ್ರಯೋಜನಗಳನ್ನು ಬರೆಯಿರಿ.

೪೯) 'ಸಾಹಿತ್ಯ ಜೀವನದ ಪ್ರತಿಬಿಂಬ' – ಈ ಮಾತನ್ನು ವಿವರಿಸಿ.

'ಉ' ವಿಭಾಗ

(ಭಾಷಾಭ್ಯಾಸ ಹಾಗೂ ರಚನೆ)

XI. ಅ) ಕೆಳಗಿನವುಗಳಿಗೆ ಸೂಚನೆಗೆ ಅನುಗುಣವಾಗಿ ಐದಕ್ಕೆ ಉತ್ತರಿಸಿ : **೫X೨=೧೦**

೫೦) ಕೆಳಗಿನ ಎರಡು ಪದಗಳಿಗೆ ಅರ್ಥವನ್ನು ಬರೆಯಿರಿ :

ಬಾನ, ಗ್ಲಾನಿ, ನಿಧಾನ.

೫೧) ಕೆಳಗಿನ ಎರಡು ಪದಗಳಿಗೆ ಸಮಾನಾರ್ಥಗಳನ್ನು ಬರೆಯಿರಿ :

ನೇತ್ರರು, ತಾರೆ, ಭೂಮಿ.

೫೨) ಕೆಳಗಿನ ಎರಡು ಪದಗಳಿಗೆ ನಾನಾರ್ಥಗಳನ್ನು ಬರೆಯಿರಿ :

ಹೊತ್ತು, ಸಾಕು, ಅಜ.

೫೩) ಕೆಳಗಿನ ಎರಡು ಪದಗಳಿಗೆ ತತ್ಸಮ–ತದ್ಭವಗಳನ್ನು ಬರೆಯಿರಿ :

ಜನುಮ, ಭಿಕ್ಷೆ, ಸಾವಿರ.

೫೪) ಕೆಳಗಿನ ಎರಡು ಪದಗಳಿಗೆ ಗ್ರಾಂಥಿಕ ರೂಪಗಳನ್ನು ಬರೆಯಿರಿ :

ಮುಚ್ಚ್ಯಾವ, ಮಾರ್‍ಯ್ಯಾರ, ಮನಿಯಾಗ.

೫೫) ಕೆಳಗಿನ ಎರಡು ಪದಗಳನ್ನು ಬಿಡಿಸಿ ಬರೆಯಿರಿ :

ಬೇರೂರು, ಏನುಂಟು, ಪಾಲ್ಬೆಣ್ಣೆ.

೫೬) ಕೆಳಗಿನ ಎರಡು ನುಡಿಗಟ್ಟುಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿರಿ :

ಸೊಪ್ಪು ಹಾಕು, ತಲೆದೂಗು, ಕಣ್ಣುಮುಚ್ಚು.

ಆ) ಗ್ರಹಿಕೆ :

ಪಠ್ಯೇತರ ಗದ್ಯಭಾಗದಿಂದ ಆಯ್ದ ಪ್ರಶ್ನೆಗಳನ್ನು ಉತ್ತರಿಸಿ :

೧X೫=೫

ಸತಿ ಸಹಗಮನವನ್ನು ಹೇಳುವ ಈ ಸಂಸ್ಕೃತಿ ಪತಿ ಸಹಗಮನವನ್ನು ಎಲ್ಲಿಯೂ ಹೇಳಿಲ್ಲ. ಮಹಿಳೆಯರಿಗೆ ಗರತಿಯ ಪಟ್ಟ ಕಟ್ಟಿ ಪಾತಿವ್ರತ್ಯದ ಪಾಠ ಕಲಿಸುವ ಸಂಸ್ಕೃತಿ, ಪುರುಷರಿಗೆ ಏಕಪತ್ನಿ ವ್ರತವನ್ನು ಕಡ್ಡಾಯಗೊಳಿಸಿಲ್ಲ. ಎಲ್ಲಿ ಅಸಮಾನತೆ, ಅನ್ಯಾಯ–ಅವಹೇಳನ, ದಬ್ಬಾಳಿಕೆ, ಸ್ವಾರ್ಥ– ಇರುತ್ತವೆಯೋ ಅಲ್ಲಿ ಸೇಡು, ರೋಷ, ಪ್ರತಿಭಟನೆ ಹುಟ್ಟಿಕೊಳ್ಳುತ್ತವೆ. ಶೋಷಿತ ಜನ ಒಂದಲ್ಲ ಒಂದು ದಿಸನ ಜಾಗೃತರಾಗಿ ಎದ್ದು ನಿಂತಾ ಶೋಷಿತ ಶಕ್ತಿಗಳು ಪುಡಿ ಪುಡಿಯಾಗುತ್ತವೆ. ಹೀಗೆ ಅಸಮಾನತೆಯ ತಳಹದಿಯ ಮೇಲೆ ಕಟ್ಟಲ್ಪಟ್ಟ ಸಂಸ್ಕೃತಿಯಲ್ಲಿ ಮಾತ್ರ ಹೆಚ್ಚು ವೈರುಧ್ಯಗಳು ಕಂಡುಬರುತ್ತವೆ. ಇಂತಹ ವೈರುಧ್ಯಗಳು ಒಂದೇ ಸಂಸ್ಕೃತಿಯ ಒಳಗಡೆಯೂ ಸಿಗುತ್ತವೆ. ಸಂಸ್ಕೃತಿ–ಸಂಸ್ಕೃತಿಗಳ ನಡುವೆಯೂ ಕಾಣುತ್ತವೆ.

ಪ್ರಶ್ನೆಗಳು :

೫೭) ಸತಿ ಸಹಗಮನವನ್ನು ಹೇಳುವ ಸಂಸ್ಕೃತಿಯು ಯಾವುದನ್ನು ಹೇಳುವುದಿಲ್ಲ?

೫೮) ನಮ್ಮ ಸಂಸ್ಕೃತಿ ಮಹಿಳೆಯರಿಗೆ ಯಾವ ಪಟ್ಟ ಕಟ್ಟಿದೆ?

೫೯) ಪುರುಷರಿಗೆ ಯಾವುದನ್ನು ಕಡ್ಡಾಯಗೊಳಿಸಿಲ್ಲ?

೬೦) ಸೇಡು, ರೋಷ, ಪ್ರತಿಭಟನೆ ಎಲ್ಲಿ ಹುಟ್ಟಿಕೊಳ್ಳುತ್ತವೆ?

೬೧) ವೈರುಧ್ಯಗಳು ಎಲ್ಲಿ ಕಂಡುಬರುತ್ತವೆ?

❖ ❖ ❖ ❖

ಅನುಬಂಧ – ೬

ಜ್ಞಾನಪೀಠ ಪ್ರಶಸ್ತಿ ಪಡೆದ ಕನ್ನಡ ಸಾಹಿತಿಗಳು

೧)	ಕುವೆಂಪು	ಶ್ರೀ ರಾಮಾಯಣ ದರ್ಶನಂ	೧೯೬೮
೨)	ದ.ರಾ. ಬೇಂದ್ರೆ	ನಾಕುತಂತಿ	೧೯೭೩
೩)	ಕೆ. ಶಿವರಾಮ ಕಾರಂತ	ಮೂಕಜ್ಜಿಯ ಕನಸುಗಳು	೧೯೭೭
೪)	ಮಾಸ್ತಿ ವೆಂಕಟೇಶ ಅಯ್ಯಂಗಾರ್	ಚಿಕವೀರ ರಾಜೇಂದ್ರ	೧೯೮೩
೫)	ವಿ.ಕೃ. ಗೋಕಾಕ್	ಭಾರತ ಸಿಂಧೂರಶ್ಮಿ	೧೯೯೦
೬)	ಯು.ಆರ್. ಅನಂತಮೂರ್ತಿ	ಸಮಗ್ರ ಸಾಹಿತ್ಯ	೧೯೯೪
೭)	ಗಿರೀಶ ಕಾರ್ನಾಡ	ಸಮಗ್ರ ಸಾಹಿತ್ಯ	೧೯೯೭
೮)	ಚಂದ್ರಶೇಖರ ಕಂಬಾರ	ಸಮಗ್ರ ಸಾಹಿತ್ಯ	೨೦೧೨

ಕರ್ನಾಟಕರತ್ನ ಪ್ರಶಸ್ತಿ ಪುರಸ್ಕೃತರು

೧)	ಕುವೆಂಪು	೧೯೯೨
೨)	ರಾಜಕುಮಾರ್	೧೯೯೩
೩)	ಎಸ್. ನಿಜಲಿಂಗಪ್ಪ	೧೯೯೯
೪)	ಸಿ.ಎನ್.ಆರ್. ರಾವ್	೧೯೯೯
೫)	ಪಂಡಿತ ಭೀಮಸೇನ ಜೋಷಿ	೨೦೦೫
೬)	ಶ್ರೀ ಶಿವಕುಮಾರಸ್ವಾಮಿ	೨೦೦೭
೭)	ದೇ. ಜವರೇಗೌಡ	೨೦೦೮
೮)	ಶ್ರೀ ವೀರೇಂದ್ರ ಹೆಗ್ಗಡೆ	೨೦೦೯

ಪಂಪ ಪ್ರಶಸ್ತಿ ಪುರಸ್ಕೃತರು

೧)	ಕೆ.ವಿ. ಪುಟ್ಟಪ್ಪ	ಶ್ರೀ ರಾಮಾಯಣ ದರ್ಶನಂ	೧೯೮೭
೨)	ತೀ.ನಂ. ಶ್ರೀಕಂಠಯ್ಯ	ಭಾರತೀಯ ಕಾವ್ಯ ಮೀಮಾಂಸೆ (ಮರಣೋತ್ತರ)	೧೯೮೮
೩)	ಕೆ. ಶಿವರಾಮ ಕಾರಂತ	ಮೈಮನಗಳ ಸುಳಿಯಲ್ಲಿ	೧೯೮೯
೪)	ಎಸ್.ಎಸ್. ಭೂಸನೂರಮಠ	ಶೂನ್ಯ ಸಂಪಾದನೆಯ ಪರಾಮರ್ಶೆ	೧೯೯೦
೫)	ಪು.ತಿ. ನರಸಿಂಹಚಾರ್	ಶ್ರೀ ಹರಿಚರಿತ	೧೯೯೧
೬)	ಎ.ಎನ್. ಮೂರ್ತಿರಾವ್	ದೇವರು	೧೯೯೨
೭)	ಎಂ. ಗೋಪಾಲಕೃಷ್ಣ ಅಡಿಗ	ಸುವರ್ಣ ಪುತ್ಥಳಿ	೧೯೯೩
೮)	ಸೇಡಿಯಾಪು ಕೃಷ್ಣಭಟ್	ವಿಚಾರ ಪ್ರಪಂಚ	೧೯೯೪
೯)	ಕೆ.ಎಸ್. ನರಸಿಂಹಸ್ವಾಮಿ	ದುಂಡು ಮಲ್ಲಿಗೆ	೧೯೯೫
೧೦)	ಎಂ.ಎಂ. ಕಲಬುರ್ಗಿ	ಸಂಶೋಧನಾ ಕಾರ್ಯಕ್ಕಾಗಿ	೧೯೯೬
೧೧)	ಜಿ.ಎಸ್. ಶಿವರುದ್ರಪ್ಪ	ಸಂಶೋಧನೆ ಮತ್ತು ಸಾಹಿತ್ಯ	೧೯೯೭
೧೨)	ದೇ. ಜವರೇಗೌಡ	ಸಮಗ್ರ ಸಾಹಿತ್ಯ	೧೯೯೮
೧೩)	ಚೆನ್ನವೀರ ಕಣವಿ	ಸಮಗ್ರ ಸಾಹಿತ್ಯ	೧೯೯೯
೧೪)	ಎಲ್. ಬಸವರಾಜು	ಸಮಗ್ರ ಸಾಹಿತ್ಯ	೨೦೦೦
೧೫)	ಕೆ.ಪಿ. ಪೂರ್ಣಚಂದ್ರ ತೇಜಸ್ವಿ	ಸಮಗ್ರ ಸಾಹಿತ್ಯ	೨೦೦೧
೧೬)	ಎಂ. ಚಿದಾನಂದಮೂರ್ತಿ	ಸಮಗ್ರ ಸಾಹಿತ್ಯ	೨೦೦೨
೧೭)	ಚಂದ್ರಶೇಖರ ಕಂಬಾರ	ಸಮಗ್ರ ಸಾಹಿತ್ಯ	೨೦೦೩
೧೮)	ಎಚ್.ಎಲ್. ನಾಗೇಗೌಡ	ಸಮಗ್ರ ಸಾಹಿತ್ಯ	೨೦೦೪
೧೯)	ಎಸ್.ಎಲ್. ಭೈರಪ್ಪ	ಸಮಗ್ರ ಸಾಹಿತ್ಯ	೨೦೦೫
೨೦)	ಜಿ.ಎಸ್. ಆಮೂರ್	ಸಮಗ್ರ ಸಾಹಿತ್ಯ	೨೦೦೬
೨೧)	ಯಶವಂತ ಚಿತ್ತಾಲ	ಸಮಗ್ರ ಸಾಹಿತ್ಯ	೨೦೦೭
೨೨)	ಟಿ.ವಿ. ವೆಂಕಟಾಚಲಶಾಸ್ತ್ರಿ	ಸಮಗ್ರ ಸಾಹಿತ್ಯ	೨೦೦೮
೨೩)	ಚಂದ್ರಶೇಖರ ಪಾಟೀಲ	ಸಮಗ್ರ ಸಾಹಿತ್ಯ	೨೦೦೯
೨೪)	ಜಿ.ಎಚ್. ನಾಯಕ್	ಸಮಗ್ರ ಸಾಹಿತ್ಯ	೨೦೧೦
೨೫)	ಬರಗೂರು ರಾಮಚಂದ್ರಪ್ಪ	ಸಮಗ್ರ ಸಾಹಿತ್ಯ	೨೦೧೧
೨೬)	ಡಿ.ಎನ್.ಶಂಕರಭಟ್ಟ	ಸಮಗ್ರ ಸಾಹಿತ್ಯ	೨೦೧೨